ಶುಕ್ರವಾರ, ಅಕ್ಟೋಬರ್ 25, 2024 | ₹ 7.00

www.prajavani.net

prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಬ್ಯಾಂಡ್ ಪ್ರದರ್ಶನ

ನವದೆಹಲಿಯಲ್ಲಿ ಗುರುವಾರ ನಡೆದ ಅಖಿಲ ಭಾರತ ಪೊಲೀಸ್ ಸಂಸ್ಮರಣಾ ದಿನದಲ್ಲಿ ದೆಹಲಿಯ ಮಹಿಳಾ ಪೊಲೀಸರು ಬ್ಯಾಂಡ್ ಪ್ರದರ್ಶನ ನೀಡಿ ಗಮನ ಸೆಳೆದರು



155 ವರ್ಷಗಳು

ಸಿಕೆಸಿ ಗ್ರೂಪ್

ಐತಿಹಾಸಿಕ ವೈಭವ
1869 ರಿಂದ



ಸಿ. ಕೃಷ್ಣಯ್ಯ ಚೆಟ್ಟಿ™
ಗ್ರೂಪ್ ಆಫ್ ಜ್ಯುವೆಲರ್ಸ್

ಸೋಮವಾರ 28 ರಿಂದ ಬುಧವಾರ 30 ಅಕ್ಟೋಬರ್ 2024. ಬೆಳಗ್ಗೆ 9 ರಿಂದ ರಾತ್ರಿ 9 ರವರೆಗೆ ತೆರೆದಿರುತ್ತದೆ.

ಕಮರ್ಷಿಯಲ್ ಸ್ಟ್ರೀಟ್ • ಮೇನ್ ಗಾರ್ಡ್ ಕ್ರಾಸ್ ರಸ್ತೆ (ಕೆಂಪು ಬಣ್ಣದ ಮುಂಭಾಗ) • ಜಯನಗರ, 5 ನೇ ಬ್ಲಾಕ್ • ಮಲ್ಲೇಶ್ವರಂ, ಮಾರ್ಗೋಸಾ ರಸ್ತೆ • ಫೀನಿಕ್ಸ್ ಮಾರ್ಕೆಟ್ ಸಿಟಿ, ವೈಟ್ ಫೀಲ್ಡ್.

Tel: 080-4000 1869 / 4100 1869 | www.ckcjewellers.com | blogs.ckcjewellers.com

ಗುರುತುಗಳು, ಲೋಗೋಗಳು, ಹೆಸರುಗಳು ಮತ್ತು ನೋಂದಾಯಿತ ಟ್ರೇಡ್‌ಮಾರ್ಕ್‌ಗಳ ಅನಧಿಕೃತ ಬಳಕೆಯನ್ನು ನಿಷೇಧಿಸಲಾಗಿದೆ.

ಸಿಕೆಸಿ ಸಮೂಹ ಕಂಪನಿಗಳು C. KRISHNIAH CHETTY & SONS™ C. KRISHNIAH CHETTY JEWELLERS® THE 1869 GUILD C. Krishniah Chetty & Sons Manufacturers | C. Krishniah Chetty & Sons C. KRISHNIAH CHETTY CHARITABLE TRUST C. Krishniah Chetty Foundation

*ಎಚ್ಚರಿಕೆ ಸೂಚನೆ – ಸಾರ್ವಜನಿಕ ಹಿತಾಸಕ್ತಿಯಲ್ಲಿ: * ಪ್ರಸ್ತುತ ನಮ್ಮ ಕಂಪನಿಯ ನಿರ್ದೇಶಕರು ಆಗಿರುವ ಶ್ರೀ ಸಿ. ಗಣೇಶ್ ನಾರಾಯಣ್ ಮತ್ತು ಅವರ ಪತ್ನಿಯೊಂದಿಗೆ ನಡೆಸುತ್ತಿರುವ ದೀಪಾಲಿ ಕಂ. ಪ್ರೈ. ಲಿ., ಎಂಬ ಕಂಪನಿಯ ಹೆಸರನ್ನು ಮೋಸತನದಿಂದ ನಮ್ಮ ಹೆಸರಿನಂತೆಯೇ ಬದಲಾಯಿಸಿ ನಮಗೆ ಸಂಬಂಧವಿಲ್ಲದ ಒಂದು ವ್ಯಾಪಾರ ಸಂಸ್ಥೆಯನ್ನು ಆರಂಭ ಮಾಡಿರುತ್ತಾರೆ. ಈ ನೂತನ ಅನಧಿಕೃತ ಮಳಿಗೆಯು ಟಚ್‌ಸ್ಟೋನ್ (ನಮ್ಮ ಪ್ರಮುಖ ಶೋರೂಮ್‌ನ ಪಕ್ಕ) ಎಡಭಾಗದಲ್ಲಿ ತೆರೆಯಲಾಗಿದೆ. ಈ ಸಂಸ್ಥೆಯು, ನ್ಯಾಯಾಲಯದ ಆದೇಶಗಳ ಉಲ್ಲಂಘನೆಯ ಅಡಿಯಲ್ಲಿ ನಿರ್ಬಂಧಗಳಿಗೆ ಒಳಪಟ್ಟಿರುತ್ತದೆ. ಆದ್ದರಿಂದ, ನಮ್ಮ ಎಲ್ಲಾ ಗ್ರಾಹಕರಿಗೆ/ಸಾರ್ವಜನಿಕರಿಗೆ ತಿಳಿಸುವ ಎಚ್ಚರಿಕೆ ಸೂಚನೆ ಏನೆಂದರೆ, ದಯವಿಟ್ಟು ಮತ್ತೊಂದು ಅಧಿಕೃತ ಸಿ. ಕೃಷ್ಣಯ್ಯ ಚೆಟ್ಟಿ ಶೋರೂಮ್ ಇದೆಯೆಂಬ ತಪ್ಪು ಕಲ್ಪನೆಗೆ ಒಳಾಗಗದಿರಿ. ವಾಸ್ತವವಾಗಿ ಅದು ಸಿಕೆಸಿ ಹೆಸರು ಅಥವಾ ಸಿಕೆಸಿ ಗ್ರೂಪ್ ಲೋಗೊ ಬಳಸಿಕೊಳ್ಳಲು ಅಧಿಕೃತ ಸಂಸ್ಥೆಯಲ್ಲ. ವಿಷಯಗಳು ನ್ಯಾಯಾಲಯಗಳಲ್ಲಿ ತೀವ್ರ ಆದ್ಯತೆಯ ಮೇರೆಗಿನ ವಿಚಾರಣೆಗೆ ಬಾಕಿ ಇರುತ್ತವೆ. ಗಮನಿಸಿ: *ಒಂದು ವೇಳೆ, ಕಾನೂನಿನ ಪ್ರಕಾರ ಅವರ ವ್ಯವಹಾರ ಸ್ಥಗಿತವಾದಲ್ಲಿ, ಅವರಿಂದ ಮಾರಾಟ ಮಾಡಲಾಗಿರುವ ಉತ್ಪನ್ನಗಳನ್ನು (ಅವರ ಸಂಘರ್ಷಮಯ ವ್ಯಾಪಾರ ಆರಂಭವಾದ ದಿನಾಂಕ 15.03.2023 ರಿಂದ), ನಮ್ಮ ಸಿಕೆಸಿ ನಿಯಮಗಳ ಅಡಿಯಲ್ಲಿ ಮರು–ಖರೀದಿಗೆ/ವಿನಿಮಯ ಯೋಜನೆಯಲ್ಲಿ ಪರಿಗಣಿಸಲಾಗುವುದಿಲ್ಲ. ಇದಲ್ಲದೆ, ಅನಧಿಕೃತ ವ್ಯವಹಾರದೊಂದಿಗೆ ವ್ಯವಹರಿಸುವಾಗ ನೀವು ಆರ್ಥಿಕ ನಷ್ಟವನ್ನು ಅನುಭವಿಸಬಹುದು.*

ಶುಕ್ರವಾರ, ಅಕ್ಟೋಬರ್ 25, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 296 | ಪುಟ 20
www.prajavani.net
prajavani.net prajavani prajavani prajavani
ಪ್ರಜಾ ವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
'ಯಲಾಕುನ್ನಿ..' ಎನ್ನುತ್ತಾ ಸಿನಿಪಯಣದಲ್ಲಿ ತಮ್ಮ ಎರಡನೇ ಇನಿಂಗ್ಸ್ ಆರಂಭಿಸಿದ್ದಾರೆ ನಟ ಕೋಮಲ್



ಆಳ-ಅಗಲ ಜನಸಂಖ್ಯೆ ಕುಸಿತ ದಕ್ಷಿಣಕ್ಕೆ ಹೊಡೆತ?

ಉಗ್ರರ ದಾಳಿ; ಇಬ್ಬರು ಯೋಧರು ಹುತಾತ್ಮ, ಕಾರ್ಮಿಕರ ಸಾವು 11

98 ಜನರಿಗೆ ಜೀವಾವಧಿ ಶಿಕ್ಷೆ 3D

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
80,065	24,399	₹81,880 (ಬೆಂಗಳೂರು)	₹1.03 ಲಕ್ಷ (ಬೆಂಗಳೂರು)	84.07

ಪ್ರಜಾ ಮತ ಕೊನೆಗೂ ನಿಖಿಲ್‌ಗೆ ಮಣೆ ● ಎಚ್‌ಡಿಕೆ, ಬೊಮ್ಮಾಯಿ, ಡಿಕೆಶಿಗೆ 'ಮತ' ಪ್ರತಿಷ್ಠೆ

ಅಭ್ಯರ್ಥಿ ಆಖೈರು: ಯಾರಿಗೆ ಪೈರು?

ಪ್ರಜಾವಾಣಿ ವಾರ್ತೆ

ಎಲ್ಲಿ ಯಾರು ಮುಖಾಮುಖಿ	ಶಿಗ್ಗಾವಿ	ಚನ್ನಪಟ್ಟಣ	ಸಂಡೂರು
	ಭರತ್ ಬೊಮ್ಮಾಯಿ (ಬಿಜೆಪಿ)	ನಿಖಿಲ್ ಕುಮಾರಸ್ವಾಮಿ (ಜೆಡಿಎಸ್)	ಅನ್ನಪೂರ್ಣ ತುಕಾರಾಂ (ಕಾಂಗ್ರೆಸ್)
	ಯಾಸೀರ್ ಅಹ್ಮದ್ ಖಾನ್ ಪಠಾಣ (ಕಾಂಗ್ರೆಸ್)	ಸಿ.ಪಿ. ಯೋಗೇಶ್ವರ್ (ಕಾಂಗ್ರೆಸ್)	ಬಂಗಾರು ಹನುಮಂತು (ಬಿಜೆಪಿ)

ಬೆಂಗಳೂರು: ಶಿಗ್ಗಾವಿ, ಸಂಡೂರು ಮತ್ತು ಚನ್ನಪಟ್ಟಣ ವಿಧಾನಸಭಾ ಕ್ಷೇತ್ರಗಳಿಗೆ ನ.13ರಂದು ನಡೆಯಲಿರುವ ಉಪ ಚುನಾವಣೆಗೆ ಕಾಂಗ್ರೆಸ್ ಮತ್ತು ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ಅಭ್ಯರ್ಥಿಗಳ ಹೆಸರು ಅಂತಿಮಗೊಂಡಿದೆ. ಮುಖ್ಯಮಂತ್ರಿ, ಉಪಮುಖ್ಯಮಂತ್ರಿ ಹಾಗೂ ಇಬ್ಬರು ಮಾಜಿ ಮುಖ್ಯಮಂತ್ರಿಗಳಿಗೆ ಚುನಾವಣೆ ಗೆಲುವು ಪ್ರತಿಷ್ಠೆಯಾಗಿದೆ.

ಕಗ್ಗಂಟಾಗಿ ಉಳಿದಿದ್ದ ಚನ್ನಪಟ್ಟಣದಿಂದ ಎನ್‌ಡಿಎ ಅಭ್ಯರ್ಥಿಯಾಗಿ ಜೆಡಿಎಸ್‌ನ ನಿಖಿಲ್ ಕುಮಾರಸ್ವಾಮಿ ಕಣಕ್ಕಿಳಿಯಲಿದ್ದಾರೆ. 'ನಿಖಿಲ್ ಸ್ಪರ್ಧೆಯಿಲ್ಲ; ಕಾರ್ಯಕರ್ತರನ್ನೇ ಕಣಕ್ಕೆ ಇಳಿಸುತ್ತೇವೆ' ಎಂದು ಹೇಳಿದ್ದ ಜೆಡಿಎಸ್ ವರಿಷ್ಠರು ಕೊನೆಗೂ ಕುಟುಂಬ ರಾಜಕಾರಣದ ಮೊರೆಹೋಗಿದ್ದಾರೆ. ಶಿಗ್ಗಾವಿಯಿಂದ ಯಾಸೀರ್ ಅಹ್ಮದ್ ಖಾನ್ ಪಠಾಣ ಅವರಿಗೆ ಕಾಂಗ್ರೆಸ್ ಟಿಕೆಟ್ ನೀಡಿದೆ.

6ನೇ ಪುಟ ನೋಡಿ

ನಿಖಿಲ್ ಹೆಸರು ಘೋಷಿಸಿದ ಯಡಿಯೂರಪ್ಪ

ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷ ಎಚ್.ಡಿ. ದೇವೇಗೌಡ ಅವರ ಮೊಮ್ಮಗ ನಿಖಿಲ್ ಕುಮಾರಸ್ವಾಮಿ ಅವರನ್ನೇ ಚನ್ನಪಟ್ಟಣ ಕ್ಷೇತ್ರಕ್ಕೆ ಎನ್‌ಡಿಎ ಅಭ್ಯರ್ಥಿಯಾಗಿ ಮೈತ್ರಿ ಪಕ್ಷಗಳು ಕಣಕ್ಕೆ ಇಳಿಸಿವೆ.

ಬೆಂಗಳೂರಿನಲ್ಲಿ ಸಭೆ ನಡೆಸಿದ ಜೆಡಿಎಸ್ ನಾಯಕರು ಚನ್ನಪಟ್ಟಣದ ಮುಖಂಡರು ಹಾಗೂ ಕಾರ್ಯಕರ್ತರ ಜತೆ ಸುದೀರ್ಘ ಸಮಾಲೋಚನೆ ನಡೆಸಿ ನಿಖಿಲ್ ಹೆಸರನ್ನೇ ಅಂತಿಮಗೊಳಿಸಿದರು. ಸಭೆಯ ನಂತರ ಬಿಜೆಪಿ ಕೇಂದ್ರ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅವರ ಡಾಲರ್ಸ್ ಕಾಲೊನಿಯ ಮನೆಯಲ್ಲಿ ಎರಡೂ ಪಕ್ಷಗಳ ಪ್ರಮುಖ ನಾಯಕರ ಸಭೆ ನಡೆಯಿತು. ಎಚ್.ಡಿ. ಕುಮಾರಸ್ವಾಮಿ, ಆರ್. ಅಶೋಕ, ಛಲವಾದಿ ನಾರಾಯಣಸ್ವಾಮಿ, ಸಿ.ಎನ್. ಅಶ್ವತ್ಥನಾರಾಯಣ, ಸಾ.ರಾ. ಮಹೇಶ್, ಸುರೇಶ್ ಬಾಬು ಭಾಗವಹಿಸಿದ್ದರು.

6ನೇ ಪುಟ ನೋಡಿ

ಶಿಗ್ಗಾವಿ: ಕಾಂಗ್ರೆಸ್‌ನಲ್ಲಿ ಬಂಡಾಯದ ಬಿಸಿ

ಶಿಗ್ಗಾವಿಯಲ್ಲಿ ಯಾಸೀರ್‌ಅಹ್ಮದ್ ಖಾನ್ ಪಠಾಣ ಅವರಿಗೆ ಟಿಕೆಟ್ ಘೋಷಣೆಯಾಗುತ್ತಿದ್ದಂತೆ ಕಾಂಗ್ರೆಸ್‌ಗೆ ಬಂಡಾಯದ ಬಿಸಿ ತಟ್ಟಿದೆ.

ಟಿಕೆಟ್ ಆಕಾಂಕ್ಷಿಯಾಗಿದ್ದ ಮಾಜಿ ಶಾಸಕ ಸೈಯದ್ ಅಜ್ಜಂಪೀರ್ ಖಾದ್ರಿ ಅಸಮಾಧಾನ ವ್ಯಕ್ತಪಡಿಸಿದ್ದು, ಶಿಗ್ಗಾವಿಯಲ್ಲಿ ಕಾರ್ಯಕರ್ತರ ಸಭೆ ಕರೆದಿದ್ದಾರೆ. 'ನನಗೆ ಟಿಕೆಟ್ ಕೈ ತಪ್ಪಿದೆ. ನನಗಾದ ಅನ್ಯಾಯವನ್ನು ಕಾರ್ಯಕರ್ತರ ಬಳಿ ಹೇಳುವೆ. ಅವರು ಏನು ತೀರ್ಮಾನಿಸುತ್ತಾರೋ, ಅದೇ ರೀತಿ ಮುಂದುವರಿಯುವೆ. ಪಕ್ಷೇತರರಾಗಿ ಸ್ಪರ್ಧಿಸಬೇಕೇ ಅಥವಾ ಬೇರೆಯವರನ್ನು ಬೆಂಬಲಿಸಬೇಕೇ ಎಂಬುದನ್ನು ನಿರ್ಧರಿಸುವೆ' ಎಂದು ಸೈಯದ್ ಅಜ್ಜಂಪೀರ್ ಖಾದ್ರಿ ಹೇಳಿದರು.

6ನೇ ಪುಟ ನೋಡಿ

ಪರಿಷತ್ ಉಪಚುನಾವಣೆ ಬಿಜೆಪಿ ಗೆಲುವು

ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳ ಸ್ಥಳೀಯ ಸಂಸ್ಥೆಗಳಿಂದ ವಿಧಾನಪರಿಷತ್ತಿಗೆ ನಡೆದ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಕಿಶೋರ್ ಕುಮಾರ್ ಪುತ್ತೂರು ಅವರು ಗೆಲುವು ಸಾಧಿಸಿದ್ದಾರೆ.

ಕಾಂಗ್ರೆಸ್ ಅಭ್ಯರ್ಥಿ ರಾಜು ಪೂಜಾರಿ ಅವರನ್ನು 1697 ಮತಗಳ ಅಂತರದಿಂದ ಸೋಲಿಸಿದ್ದಾರೆ. ಸಂಸದ ಕೋಟ ಶ್ರೀನಿವಾಸ ಪೂಜಾರಿ ಅವರ ರಾಜೀನಾಮೆಯಿಂದ ಉಪಚುನಾವಣೆ ಎದುರಾಗಿತ್ತು. ಕ್ಷೇತ್ರವನ್ನು ಉಳಿಸಿಕೊಳ್ಳುವಲ್ಲಿ ಬಿಜೆಪಿ ಯಶಸ್ವಿಯಾಗಿದೆ.

'ಫಲಿತಾಂಶವು ಕಾಂಗ್ರೆಸ್ ಸರ್ಕಾರದ ಆಡಳಿತ ವೈಫಲ್ಯಕ್ಕೆ ಮತದಾರರು ಕೊಟ್ಟ ಉತ್ತರ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆ ಬಿಜೆಪಿ ಭದ್ರಕೋಟೆಗಳು ಎಂಬುದು ಮತ್ತೆ ಸಾಬೀತಾಗಿದೆ' ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಪ್ರತಿಕ್ರಿಯಿಸಿದ್ದಾರೆ.

ಚಿನಕುರುಳಿ
ಪ್ರಕಾಶ್ ಶೆಟ್ಟಿ




ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ಜೈಲಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೂಕ್ತ ದಾಖಲೆಗಳಿಲ್ಲದೆ ಅಕ್ರಮವಾಗಿ ಅದಿರು ಸಾಗಣೆ ಮಾಡಿ ರಾಜ್ಯದ ಬೊಕ್ಕಸಕ್ಕೆ ₹200 ಕೋಟಿಗೂ ಹೆಚ್ಚಿನ ಮೊತ್ತದ ನಷ್ಟ ಉಂಟು ಮಾಡಿದ ಆರೋಪಕ್ಕೆ ಸಂಬಂಧಿಸಿದ ಆರು ಕ್ರಿಮಿನಲ್ ಪ್ರಕರಣಗಳಲ್ಲಿ ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ಸೇರಿದಂತೆ ಒಟ್ಟು ಏಳು ಜನ ಆರೋಪಿಗಳನ್ನು ಜನಪ್ರತಿನಿಧಿಗಳ ವಿಶೇಷ ನ್ಯಾಯಾಲಯ ದೋಷಿಗಳು ಎಂದು ತೀರ್ಮಾನಿಸಿದೆ.

ಈ ಪ್ರಕರಣದ ವಿಚಾರಣೆ ನಡೆಸಿ ಕಾಯ್ದಿರಿಸಿದ್ದ ತೀರ್ಪನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಸಂತೋಷ ಗಜಾನನ


ಸತೀಶ್ ಸೈಲ್

ಭಟ್ ಗುರುವಾರ ಪ್ರಕಟಿಸಿದರು. ಸಂಜೆ ತೀರ್ಪು ಹೊರಬೀಳುತ್ತಿದ್ದಂತೆಯೇ, ಅಪರಾಧಿಗಳನ್ನು ನ್ಯಾಯಾಲಯದಲ್ಲಿದ್ದ ಪೊಲೀಸರು ವಶಕ್ಕೆ ಪಡೆದು ಜೈಲಿಗೆ ಕರೆದೊಯ್ದರು.

ಪ್ರಕರಣದ ಮೊದಲ ಆರೋಪಿ ಮಹೇಶ್ ಜೆ.ಬಿಳಿಯೆ, ಕಾರವಾರ–ಅಂಕೋಲಾ ಕ್ಷೇತ್ರದ ಕಾಂಗ್ರೆಸ್ ಪಕ್ಷದ ಶಾಸಕರೂ ಆದ ಮಲ್ಲಿಕಾರ್ಜುನ ಶಿಪ್ಪಿಂಗ್ ಪ್ರೈ. ಲಿ. ಕಂಪನಿ ವ್ಯವಸ್ಥಾಪಕ ನಿರ್ದೇಶಕ ಸತೀಶ್ ಸೈಲ್, ಲಕ್ಷ್ಮಿ ವೆಂಕಟೇಶ್ವರ ಟ್ರೇಡರ್ಸ್ ಮಾಲೀಕ ಖಾರದಪುಡಿ ಮಹೇಶ್ ಅವರನ್ನು ದೋಷಿಗಳು ಎಂದು ನ್ಯಾಯಾಲಯ ತೀರ್ಮಾನಿಸಿದೆ.

6ನೇ ಪುಟ ನೋಡಿ

ಮುಡಾ: ಮೇಲ್ಮನವಿ ಸಲ್ಲಿಸಿದ ಮುಖ್ಯಮಂತ್ರಿ

ಪ್ರಜಾವಾಣಿ ವಾರ್ತೆ


ಸಿದ್ದರಾಮಯ್ಯ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆ ಪ್ರಕರಣದಲ್ಲಿ ತಮ್ಮ ವಿರುದ್ಧ ತನಿಖೆ ನಡೆಸಲು ರಾಜ್ಯಪಾಲರು ನೀಡಿರುವ ಅನುಮತಿಗೆ ಅಸ್ತು ಎಂದಿದ್ದ ಹೈಕೋರ್ಟ್‌ನ ಏಕ ಸದಸ್ಯ ಪೀಠದ ತೀರ್ಪು ಪ್ರಶ್ನಿಸಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಂದು ತಿಂಗಳ ಬಳಿಕ ಮೇಲ್ಮನವಿ ಸಲ್ಲಿಸಿದ್ದಾರೆ.

ಹೈಕೋರ್ಟ್‌ನ ವಿಭಾಗೀಯ ಪೀಠದಲ್ಲಿ ಸಿದ್ದರಾಮಯ್ಯ ಈ ರಿಟ್ ಮೇಲ್ಮನವಿ ಸಲ್ಲಿಸಿದ್ದು, ಇದು ಇನ್ನಷ್ಟೇ ವಿಚಾರಣೆಗೆ ನಿಗದಿಯಾಗಬೇಕಿದೆ. ಸಿದ್ದರಾಮಯ್ಯ ವಿರುದ್ಧದ ಪ್ರಕರಣದ ತನಿಖೆಗೆ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಾಲಯದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಕಳೆದ ತಿಂಗಳ 24ರಂದು ಅಸ್ತು ಎಂದು ತೀರ್ಪು ನೀಡಿದ್ದರು.

ಹಲ್ಲೆ: ಆರೋಪಿ ಬಂಧನ

ಬೆಂಗಳೂರು: ಬಿಎಂಟಿಸಿ ಬಸ್ ನಿರ್ವಾಹಕರೊಬ್ಬರ ಮೇಲೆ ಹಲ್ಲೆ ನಡೆಸಿದ್ದ ಆರೋಪಿಯನ್ನು ಮಹದೇವಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಸ್ ನಿರ್ವಾಹಕ ಸಂಗಪ್ಪ ಚಿತ್ತಲಗಿ ಎಂಬುವವರ ಮೇಲೆ ಕಲ್ಲಿನಿಂದ ಹಲ್ಲೆ ನಡೆಸಿ ಪರಾರಿಯಾಗಲು ಯತ್ನಿಸಿದ್ದ ಆರೋಪಿ ಹೇಮಂತ್‌ನನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಇಂದು ಜಲಮಂಡಳಿ ಫೋನ್-ಇನ್ ಕಾರ್ಯಕ್ರಮ

ಬೆಂಗಳೂರು: ಬೆಂಗಳೂರು ಜಲ ಮಂಡಳಿ ವತಿಯಿಂದ ಜಲಮಂಡಳಿ ಅಧ್ಯಕ್ಷ ವಿ.ರಾಮ್ ಪ್ರಸಾತ್ ಮನೋಹರ್ ಅವರೊಂದಿಗೆ ಫೋನ್-ಇನ್ ಕಾರ್ಯಕ್ರಮವನ್ನು ಅ.25ರಂದು ಬೆಳಿಗ್ಗೆ 9.30ರಿಂದ 10.30ರವರೆಗೆ ಆಯೋಜಿಸಲಾಗಿದೆ.

ಸಾರ್ವಜನಿಕರು ಕುಡಿಯುವ ನೀರಿನ ಸಮಸ್ಯೆ ಮತ್ತು ಒಳಚರಂಡಿ ಕೊಳವೆ, ಜಲಮಾಪನ ಹಾಗೂ ನೀರಿನ ಬಿಲ್ಲಿನ ಸಮಸ್ಯೆಯ ಬಗ್ಗೆ ನೇರವಾಗಿ ಮಾತನಾಡಿ ಕುಂದು-ಕೊರತೆಗಳನ್ನು ಬಗೆಹರಿಸಿಕೊಳ್ಳಬಹುದು. ದೂರವಾಣಿ ಸಂಖ್ಯೆ: 080-22945119 ಮತ್ತು 080-22229639 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಕೋಲಾರದಿಂದ ಆರಂಭ, ಎರಡು ತಿಂಗಳ ಬಳಿಕ ಇತರೆ ಜಿಲ್ಲೆಗಳಿಗೆ ವಿಸ್ತರಣೆ

ಗ್ರಾಮೀಣರ ಆರೋಗ್ಯ ರಕ್ಷಣೆಗೆ ‘ಗೃಹ ಆರೋಗ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮೀಣ ಜನರ ಆರೋಗ್ಯ ಸುರಕ್ಷತೆ ಹಾಗೂ ಮರಣ ಪ್ರಮಾಣ ತಡೆಯುವಲ್ಲಿ ‘ಗೃಹ ಆರೋಗ್ಯ’ ಯೋಜನೆ ಸಂಜೀವಿನಿಯಾಗಲಿದೆ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ವಿಧಾನಸೌಧದಲ್ಲಿ ಗುರುವಾರ ಹಮ್ಮಿಕೊಂಡಿದ್ದ ‘ಗೃಹ ಆರೋಗ್ಯ’ ಯೋಜನೆ ಉದ್ಘಾಟನಾ ಸಮಾರಂಭದಲ್ಲಿ ಅವರು ಮಾತನಾಡಿದರು.

ಗ್ರಾಮೀಣ ಪ್ರದೇಶದ ಶೇ 29.9 ರಷ್ಟು ಜನರು ರಕ್ತದೊತ್ತಡ ಸಮಸ್ಯೆ, ಶೇ 15.6 ರಷ್ಟು ಮಧುಮೇಹ, 11.5ರಷ್ಟು ಬಾಯಿ ಕ್ಯಾನ್ಸರ್, ಶೇ 26ರಷ್ಟು ಮಹಿಳೆಯರು ಸ್ತನ ಕ್ಯಾನ್ಸರ್ ಹಾಗೂ ಶೇ 18.3ರಷ್ಟು ಗರ್ಭಕಂಠದ ಕ್ಯಾನ್ಸರ್‌ನಿಂದ ಬಳಲುತ್ತಿದ್ದಾರೆ. ಅಂಥವರಿಗೆ ನಿರಂತರ ಆರೋಗ್ಯ ತಪಾಸಣೆ, ಔಷಧ ಪೂರೈಕೆ ಮಾಡಲಾಗುವುದು ಎಂದರು.

ಈ ಕಾಯಿಲೆಗೆ ತುತ್ತಾದವರು ದೀರ್ಘಾವಧಿಯಲ್ಲಿ ಕಿಡ್ನಿ ವೈಫಲ್ಯ, ಹೃದಯಾಘಾತಕ್ಕೆ ಒಳಗಾಗುತ್ತಾರೆ. ನಿಯಮಿತವಾಗಿ ಚಿಕಿತ್ಸೆ ಪಡೆದರೆ ಜೀವಾಪಾಯ ತಡೆಯಬಹುದು ಎಂದರು.

ಕೋಲಾರ ಜಿಲ್ಲೆಯಿಂದ ಯೋಜನೆಯನ್ನು ಪ್ರಾರಂಭಿಸಲಾಗುತ್ತಿದ್ದು, ಎರಡು ತಿಂಗಳ ಬಳಿಕ ರಾಜ್ಯದ ಎಲ್ಲ ಜಿಲ್ಲೆಗಳಿಗೂ ಯೋಜನೆ ವಿಸ್ತರಿಸಲಾಗುವುದು ಎಂದು ಮಾಹಿತಿ ನೀಡಿದರು.

> **ಆರೋಗ್ಯ ಇಲಾಖೆಯ ಸಿಬ್ಬಂದಿ ಮನೆಗಳಿಗೆ ತೆರಳಿ ನಿರಂತರವಾಗಿ ಜನರ ಆರೋಗ್ಯ ತಪಾಸಣೆ ನಡೆಸುವರು. ಉಚಿತವಾಗಿ ಔಷಧ ನೀಡುವರು**
> **ಸಿದ್ದರಾಮಯ್ಯ,** ಮುಖ್ಯಮಂತ್ರಿ

ಮುಖ್ಯಮಂತ್ರಿ ಸಿದ್ದರಾಮಯ್ಯ ಕೋಲಾರ ಜಿಲ್ಲೆಯ ರೋಗಿಗಳಿಗೆ ಔಷಧ ವಿತರಿಸುವ ಮೂಲಕ ಯೋಜನೆಗೆ ಚಾಲನೆ ನೀಡಿದರು. ಸಾರಿಗೆ ಸಚಿವ ರಾಮಲಿಂಗಾರೆಡ್ಡಿ, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿ ನಸೀರ್ ಅಹ್ಮದ್, ಅರೋಗ್ಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಹರ್ಷ ಗುಪ್ತ, ಉಪಸ್ಥಿತರಿದ್ದರು.



ಆರೋಗ್ಯ ಇಲಾಖೆಯು ಗುರುವಾರ ಆಯೋಜಿಸಿದ್ದ ‘ಗೃಹ ಆರೋಗ್ಯ’ ಯೋಜನೆ ಉದ್ಘಾಟನಾ ಸಮಾರಂಭದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಾತನಾಡಿದರು. ಹರ್ಷ ಗುಪ್ತ, ನಸೀರ್ ಅಹ್ಮದ್, ದಿನೇಶ್ ಗುಂಡೂರಾವ್, ರಾಮಲಿಂಗಾರೆಡ್ಡಿ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

ಮನೆ ಬಾಗಿಲಿನಲ್ಲೇ ಆರೋಗ್ಯ ತಪಾಸಣೆ

- ರಕ್ತದೊತ್ತಡ ಸಮಸ್ಯೆ, ಮಧುಮೇಹ, ಬಾಯಿ, ಗರ್ಭಕಂಠ ಮತ್ತು ಸ್ತನ ಕ್ಯಾನ್ಸರ್, ನಿದ್ದೆಯಲ್ಲಿ ಉಸಿರುಗಟ್ಟುವಿಕೆ, ಮಾನಸಿಕ ಆರೋಗ್ಯದ ತಪಾಸಣೆ
- ಆರೋಗ್ಯ ಕಾರ್ಯಕರ್ತರ ಒಂದು ತಂಡ ದಿನಕ್ಕೆ 15 ಮನೆಗಳ ತಪಾಸಣೆ ನಡೆಸಲಿದೆ. ಪ್ರತಿ ಮಂಗಳವಾರ, ಬುಧವಾರ, ಶುಕ್ರವಾರ ಮತ್ತು ಶನಿವಾರ ಭೇಟಿ ಕಡ್ಡಾಯ
- ದೃಢಪಟ್ಟ ಪ್ರಕರಣಗಳಿಗೆ ಅಗತ್ಯ ಔಷಧ ವಿತರಣೆ. ಕೆಲವರಿಗೆ ಜೀವನಶೈಲಿ ಮಾರ್ಪಾಡಿಗೆ ಸಲಹೆ
- ಆರೈಕೆಯಲ್ಲಿರುವ ರೋಗಿಗಳಿಗೆ, ಅಂಗವಿಕಲರಿಗೆ, ಹಿರಿಯ ನಾಗರಿಕರಿಗೆ ಔಷಧೋಪಚಾರ. ಉಚಿತವಾಗಿ ಮಾತ್ರೆಗಳ ವಿತರಣೆ
- 4ರಿಂದ 6 ತಿಂಗಳಲ್ಲಿ ಸ್ಕ್ರೀನಿಂಗ್ ಕಾರ್ಯ ಪೂರ್ಣ. ನಂತರ ಹೆಚ್ಚಿನ ಆರೈಕೆಗಾಗಿ ಒಂದು ತಿಂಗಳ ನಂತರ ವಿಶೇಷ ಆರೋಗ್ಯ ಶಿಬಿರಗಳ ಆಯೋಜನೆ
- ಎರಡನೇ ಹಂತದಲ್ಲಿ ಫಾಲೋಅಪ್ ಮತ್ತು ನಿಯಂತ್ರಣಕ್ಕೆ ಗಮನ. ಆರೈಕೆಯನ್ನು ಖಚಿತಪಡಿಸಿಕೊಳ್ಳಲು ಆರೋಗ್ಯ ಮತ್ತು ಕ್ಷೇಮ ಕೇಂದ್ರಗಳು, ಇತರ ಸಾರ್ವಜನಿಕ ಸ್ಥಳಗಳಲ್ಲಿ ಮಾಸಿಕ ಆರೋಗ್ಯ ಶಿಬಿರಗಳ ಆಯೋಜನೆ
- ಅಕಾಲಿಕ ಮರಣಗಳನ್ನು ತಡೆಗಟ್ಟಲು, ಸಾಂಕ್ರಾಮಿಕವಲ್ಲದ ರೋಗಗಳ ಚಿಕಿತ್ಸೆಯ ಆರ್ಥಿಕ ಹೊರೆಯನ್ನು ಕಡಿಮೆ ಮಾಡಲು ಪ್ರಯೋಜನ

ಅರಣ್ಯ ದಾಖಲೀಕರಣಕ್ಕೆ ಶೀಘ್ರ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಅಧಿಸೂಚಿತ, ದಾಖಲಿತ ಅರಣ್ಯ ಮತ್ತು ಪರಿಭಾವಿತ ಅರಣ್ಯ ಭೂಮಿಗಳ ಸಮಗ್ರ ದಾಖಲೀಕರಣಕ್ಕೆ 15 ದಿನಗಳಲ್ಲಿ ತಜ್ಞರ ಸಮಿತಿ ರಚಿಸಲು ನಿರ್ಧರಿಸಲಾಗಿದೆ.

ಅರಣ್ಯ ಸಚಿವ ಈಶ್ವರ ಖಂಡ್ರೆ ಮತ್ತು ಕಂದಾಯ ಸಚಿವ ಕೃಷ್ಣ ಬೈರೇಗೌಡ ಅವರ ಜಂಟಿ ಅಧ್ಯಕ್ಷತೆಯಲ್ಲಿ ಗುರುವಾರ ನಡೆದ ಎರಡೂ ಇಲಾಖೆಯ ಅಧಿಕಾರಿಗಳ ಸಭೆಯಲ್ಲಿ ಈ ತೀರ್ಮಾನ ತೆಗೆದುಕೊಳ್ಳಲಾಗಿದೆ.

ವನ ಸಂರಕ್ಷಣೆ ಮತ್ತು ವನ ಸಂವರ್ಧನೆ ಕಾಯ್ದೆ 1980ರ ನಿಯಮ 16ರಡಿ ಹೊಸದಾಗಿ ತಜ್ಞರ ಸಮಿತಿ ರಚಿಸಲು ಅವಕಾಶವಿದೆ.

ಈ ಸಮಿತಿ ರಾಜ್ಯದ ಅಧಿಸೂಚಿತ ಮತ್ತು ದಾಖಲಿತ ಅರಣ್ಯದ ಸಮಗ್ರ ದಾಖಲೀಕರಣದ ಜೊತೆಗೆ ಪ್ರಸ್ತುತ ಪರಿಭಾವಿತ ಅರಣ್ಯ ಪ್ರದೇಶದ ನ್ಯೂನತೆಗಳನ್ನು ಪರಿಶೀಲನೆ ಮಾಡಿ, ಅವುಗಳನ್ನು ಸರಿಪಡಿಸಿ ಆರು ತಿಂಗಳ ಒಳಗೆ ಕ್ರೋಡೀಕೃತ ವರದಿ ಸಲ್ಲಿಸಲಿದೆ.

‘ಈ ಸಮಿತಿಯು ಸುಪ್ರೀಂ ಕೋರ್ಟ್‌ಗೆ ಈಗಾಗಲೇ ಪ್ರಮಾಣಪತ್ರದಲ್ಲಿ ತಿಳಿಸಿರುವ 3.30 ಲಕ್ಷ ಹೆಕ್ಟೇರ್ ಪರಿಭಾವಿತ ಅರಣ್ಯ ಪ್ರದೇಶದಲ್ಲಿ ಸರ್ಕಾರಿ ಕಚೇರಿ, ಶಾಲೆ, ಪಟ್ಟಾಭೂಮಿ ಇತ್ಯಾದಿ ಇದ್ದರೆ ಅದಕ್ಕೆ ಪರ್ಯಾಯವಾಗಿ ಮರಗಿಡಗಳಿಂದ ಸಮೃದ್ಧವಾದ ಇತರ ಪ್ರದೇಶವನ್ನು ಗುರುತಿಸುವ ಕಾರ್ಯವನ್ನು ಮಾಡಬೇಕು’ ಎಂದು ಈಶ್ವರ ಖಂಡ್ರೆ ಸಲಹೆ ನೀಡಿದರು.

ಕೃಷ್ಣ ಬೈರೇಗೌಡ ಮಾತನಾಡಿ, ‘ರಾಜ್ಯದ 20 ಜಿಲ್ಲೆಗಳಲ್ಲಿ ಇಲಾಖೆಯಿಂದ ಸರ್ವೆ ಕಾರ್ಯ ಪ್ರಗತಿಯಲ್ಲಿದೆ. ಅರಣ್ಯ ಮತ್ತು ಕಂದಾಯ ಇಲಾಖೆ ಜಂಟಿಯಾಗಿ ಒಂದೆರೆಡು ಜಿಲ್ಲೆ ಆಯ್ಕೆ ಮಾಡಿಕೊಂಡು ಜಂಟಿ ಸರ್ವೆ ನಡೆಸಿದರೆ ಸಮಸ್ಯೆಗಳು, ಗೊಂದಲಗಳ ಬಗ್ಗೆ ತಿಳಿಯುತ್ತದೆ. ಇದು ತಜ್ಞ ಸಮಿತಿ ವರದಿ ಸಲ್ಲಿಸಲು ನೆರವಾಗಲಿದೆ’ ಎಂದು ಹೇಳಿದರು.


Preethi
LIFELONG FREE SERVICE
ASIA BOOK OF RECORDS PREETHI ZODIAC
Mega Festive Offer
Preethi ಕಿಚನ್ ಉಪಕರಣಗಳೊಂದಿಗೆ ಆಚರಿಸಿ ಮತ್ತು
ಭರವಸೆಯ ಉಡುಗೊರೆಗಳನ್ನು ಪಡೆಯಿರಿ
Milton 3pcs ಕ್ಯಾಸರೋಲ್
ಮೌಲ್ಯ ₹1,525
www.shop.preethi.in/ | @PreethiKitchenAppliances | @preethikitchenappliances | One Call Assitance : +91-99400 00005


ಸಂಭ್ರಮಾಚರಣೆಯ
ಆನಂದದ ಚಾಲನೆ.
ಈ ದೀಪಾವಳಿ ಹಬ್ಬವನ್ನು Hero Motocorpನ VIDA V1 ಎಲೆಕ್ಟ್ರಿಕ್
ಸ್ಕೂಟರ್ ಜೊತೆಗೆ ₹40,000* ಮೌಲ್ಯದ ಕೊಡುಗೆಗಳನ್ನು ಸಂಭ್ರಮಿಸಿ.
2 ಕಳಚಬಹುದಾದ ಬ್ಯಾಟರಿಗಳು
165 ಕಿಮೀ** ಪ್ರಮಾಣಿತ ರೇಂಜ್
2500+ ಫಾಸ್ಟ್ ಚಾರ್ಜರ್‌ಗಳು
ವಿಸ್ತೃತ ಸರ್ವಿಸ್ ನೆಟ್‌ವರ್ಕ್
Avail exciting festive offers* on amazon | Flipkart
#MAKEWAY
*T&C Apply.
VIDA Powered by Hero
*Limited period offer. Call your nearest Hero dealership now.
Visit us in BANGALORE: Vittal Mallya Road — VIDA EXPERIENCE CENTRE, 7428411021 | Bommanahalli — VIDA HUB RT KRISHNA AUTO, 7428411021 | Banashankari — SAI MOTORS, 7428412219 | J P Nagar — SAI MOTORS, 9035024284 | Kanakapura Main Road — SAI MOTORS, 8904677394 | Yeshwanthpur — SAI BIKES, 7428411869 | Nagarabhavi — SAI BIKES PREMIA, 7428412128 | Banaswadi Ring Road — BHAGATH MOTORS, 7428408355 | K R Puram — BHAGATH MOTORS, 9900349199 | Electronic City — RT KRISHNA AUTOS, 7428411368 | Rajajinagar — MAX MOTORS, 7428409766 | Magadi Main Road — POORNA MOTORS, 7428409953 | Lal Bagh Main Road — PRAKASH MOTORS, 7428410886 | Magadi Road — RT KRISHNA AUTOS, 7428411021 | Bellary Road — BIMAL MOTORS, 7428408801 | Singsandra — RT KRISHNA AUTOS PREMIA, 7428411368 | BTM Layout — V3S MOTORS, 08048247240 | VAAYURATHA MOTORS, 08048247239 | TUMKUR: Sira Gate — SAI WHEELZ, 7428481172 | BH Road — SAI WHEELZ, 7676016623 | Kunigal — SAI WHEELZ, 9164972652 | Tiptur — SAI WHEELZ, 9164840456. **Certified range by Govt. certified agency. Real-world range of 110 km. Certified and Real-world range may vary depending on riding style, road/vehicle conditions, and vehicle models.


LG
India ka Celebration
LG OLED DAYS
Enjoy exclusive limited period offers*
on LG OLED TVs.
LG OLED evo AI
WORLD'S No.1 OLED TV FOR 11 YEARS
webOS Re:New Program
5-YEAR GUARANTEED
New Smart Platform Experience*
Widest Range of LG AI TVs
LG OLED evo AI | G4/C4 Series
246cm (97) / 195cm (77) / 164cm (65) / 139cm (55) / 121cm (48) / 106cm (42)
Offer Price ₹129990* onwards MRP ₹267990* onwards EMI ₹2999* onwards
LG OLED AI | B4 Series
164cm (65) / 139cm (55)
Offer Price ₹119990* onwards MRP ₹193990* onwards EMI ₹2999* onwards
LG QNED AI | 88T/83 Series
189cm (75) / 164cm (65) / 139cm (55)
Offer Price ₹79990* onwards MRP ₹159990* onwards EMI ₹1999* onwards
LG NanoCell AI | 77/80T Series
164cm (65) / 139cm (55) / 108cm (43)
Offer Price ₹45990* onwards MRP ₹61990* onwards EMI ₹999* onwards
Life's Good Offers*
3 YEAR* WARRANTY (With Select LG TVs)
Win Dream Home Package* EVERY DAY
Grab Assured Gifts* Up to 51 CRORES
Up to 26% CASHBACK Max ₹26000* ON SELECT CREDIT / DEBIT CARDS
1 EMI FREE* (On Select Paper Finance)
FIXED EMI Starting from ₹999*
UP TO 30% OFF ON LG SOUNDBAR* (With Select 4K TVs)
OLED CIRCLE Get benefits up to ₹50000*
LG BEST Care 24 x 7 CUSTOMER CARE 08069379999 www.lg.com/in/support
LG WhatsApp No. 9711709999
LG Service India Mobile App Available at Google Play
www.facebook.com/lgindiapage/
www.twitter.com/LGIndia
To know more about LG, visit www.lg.com/in
For Corporate/Institutional enquiries, please write to corp.enquiries@lge.com
Now shop at LG Brand Store https://qrco.de/bfS3os
Life's Good.
Regd. Office: LG Electronics India Pvt. Ltd., A-24/6, Mohan Cooperative Industrial Estate, Mathura Road, New Delhi-110044
CIN No. U32107DL1997PTC220109
*T&C Apply. Unless mentioned otherwise offers are valid from 13th Sep 2024 to 7th Nov 2024 or till the stock lasts, whichever is earlier. All prices mentioned are in Indian Rupee and are inclusive of taxes. Offers are available on selected products only, kindly check with store manager for offers before purchase. LG shall also not assume any legal and/or financial responsibility for any unclaimed benefits beyond the applicable period of the promotional offer. Dream Home Package: Customers purchasing TV & Audio products within offer period will be eligible to participate in the daily Lucky draw where they get the chance to win select LG products, i.e. OLEDTV, SBS Refrigerator, AC, FL Washing Machine, Microwave Oven & Water Purifier. The total perceived value of all Freebies & Gifts is worth up to ₹51 Crores. Gift Tax to be borne by the customer. This offer is valid across India, except the State of Tamil Nadu. Discount of up to 30% on MRP on select models of Soundbars purchased along with of selected 4KTVs. 3 Year Warranty is applicable on select TV models only. This includes 1 Year standard warranty and next 2 Year free of Cost promotional warranty. Labour cost is chargeable for 2nd & 3rd year. Cashback up to 26% or max ₹26000 (whichever is lower) is applicable on select TVs and will be posted to the consumer account after 90 days from end of offer period, unless instant cash back is active in the store. Cash Back on Credit and Debit card, EMI / Non EMI transactions depends on bank to bank. 1 EMI Free & FIXED EMI (starting from ₹999) is applicable on select TV models. Cash back & EMIs are at the sole discretion of Bank/Finance Company and is governed by their TnC. LG expressly disclaims any liability in any manner whatsoever. LG OLED Circle offer on purchase & Installation of OLED TVs, issuance to customers is on the basis of installation date within the mentioned scheme period. Benefits vary from Model to model. In webOS Re:New Program TVs will receive 4 webOS upgrades for five years for 2022 (only OLEDTVs), 2023 & 2024 all 4K models. Features are subject to change and may vary from model to model. Product images shown are for representative purpose only. Actual products may differ. Products are available without these offers as well. All disputes arising are to be settled under the jurisdiction of the Delhi courts and shall be governed by the laws applicable in India. Benefits given under this offer are not transferable and no cash payment will be made in lieu of the same. LG reserves the right to modify, alter or withdraw all these offers at any point of time without any prior notice or justification to any person or third party. Offer is only valid on the products purchased through authorised retail channel and official website of LG. By participating in these offers, customer agrees to all terms and conditions. For more information, please visit http://www.lg.com/in.
AMERICAN EXPRESS | AXIS BANK | BOBCARD | DBS | FEDERAL BANK | HDFC BANK | ICICI Bank | IDFC FIRST Bank | IndusInd Bank | J&K Bank | kotak | RBL BANK | SBI card
Contact your nearest LG Authorised Dealer.



ಸಾಯಿ ಬಡಾವಣೆ, ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್‌ನಲ್ಲಿ ನಿಲ್ಲದ ನಾಗರಿಕರ ಪರದಾಟ

ಮಳೆ ನಿಂತರೂ 'ಜಲಯಾನ' ನಿಂತಿಲ್ಲ!



ದೋಣಿಯಾದ ಬಾಗಿಲು... ವಡ್ಡರಪಾಳ್ಯ ಮುಖ್ಯರಸ್ತೆಯ ಸಾಯಿ ಬಡಾವಣೆಯಲ್ಲಿ ನಿಂತ ಮಳೆ ನೀರನ್ನು ದಾಟಲು ಜನರು ಬಾಗಿಲನ್ನೇ ದೋಣಿಯಂತೆ ಬಳಸಿದರು ಪ್ರಜಾವಾಣಿ ಚಿತ್ರ: ಎಂ.ಎಸ್.ಮಂಜುನಾಥ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಒಂದು ವಾರದಿಂದ ಸುರಿಯುತ್ತಿದ್ದ ಮಳೆ ಗುರುವಾರ ಬಿಡುವು ನೀಡಿತ್ತು. ಆದರೆ, ಸಾಯಿ ಬಡಾವಣೆ ಹಾಗೂ ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್‌ನಲ್ಲಿ ನೀರು ಹೊರಹೋಗಿಲ್ಲ.

ಹೊರಮಾವು ಸಮೀಪದ ಸಾಯಿ ಬಡಾವಣೆಯಲ್ಲಿ ಗುರುವಾರವೂ ಮೊಣಕಾಲುದ್ದ ನೀರು ನಿಂತಿದ್ದು, ನೂರಾರು ಮನೆಗಳಲ್ಲಿ ನೀರಿತ್ತು. ಮಕ್ಕಳನ್ನು ಶಾಲೆಗಳಿಗೆ ಕಳುಹಿಸಲು ಹಾಗೂ ವಾಹನಗಳನ್ನು ಕೊಂಡೊಯ್ಯಲು ನಿವಾಸಿಗಳು ತಾತ್ಕಾಲಿಕ ಬೋಟ್‌ಗಳ ವ್ಯವಸ್ಥೆ ಮಾಡಿಕೊಂಡಿದ್ದರು.

'ನಾಲ್ಕು ದಿನಗಳಿಂದ ನಾವು ಹೊರಗೆ ಹೋಗಲು ಸಾಧ್ಯವಾಗುತ್ತಿಲ್ಲ. ಮಕ್ಕಳಿಗೆ ಶಾಲೆ ಆರಂಭವಾಗಿದ್ದು, ಅವರನ್ನು ಕಳುಹಿಸಲು ಥರ್ಮಾಕೋಲ್ ಬಳಸಿ ಬೋಟ್ ಮಾಡಿಕೊಂಡಿದ್ದೇವೆ. ಇದು ಎಷ್ಟು ದಿನ ಹೀಗೇ ಇರುತ್ತೋ ಗೊತ್ತಿಲ್ಲ' ಎಂದು ಸ್ಥಳೀಯರಾದ ರಮೇಶ್ ಅಳಲು ತೋಡಿಕೊಂಡರು.

'ಮನೆಗಳಲ್ಲಿ ನೀರು ತುಂಬಿರುವುದರಿಂದ ಯಾವ ಕೆಲಸವನ್ನೂ ಮಾಡಲು ಆಗುತ್ತಿಲ್ಲ. ಪಾಲಿಕೆಯವರು ಊಟ ತಿಂಡಿ ನೀಡುತ್ತಿದ್ದರೂ, ಕೆಲಸಕ್ಕೆ ಹೋಗಲೇಬೇಕಲ್ಲ. ಹೀಗಾಗಿ ಸಾಕಷ್ಟು ಸರ್ಕಸ್ ಮಾಡುತ್ತಿದ್ದೇವೆ' ಎಂದು ಮಲ್ಲೇಶ್ ಹೇಳಿದರು.

ಸಾಯಿ ಬಡಾವಣೆಗೆ ರಾಜಕಾಲುವೆಯಿಂದ ಹಿಮ್ಮುಖವಾಗಿ ನೀರು ಹರಿಯುತ್ತಿದೆ. ರಾಜಕಾಲುವೆಯಲ್ಲಿ ನೀರು ಕಡಿಮೆಯಾಗದ ಹೊರತು ಇಲ್ಲಿ ನೀರು ಕಡಿಮೆಯಾಗುವುದಿಲ್ಲ. ಬಿಬಿಎಂಪಿ ಹಾಗೂ ಅಗ್ನಿಶಾಮಕ ದಳದ ಸಿಬ್ಬಂದಿ ಪಂಪ್ ಮೂಲಕ ನೀರು ಹೊರಹಾಕಲು ಪ್ರಯತ್ನ ಮಾಡುತ್ತಲೇ ಇದ್ದಾರೆ ಎಂದು ಬಿಬಿಎಂಪಿ ಅಧಿಕಾರಿಗಳು ತಿಳಿಸಿದರು.



ಸಾಯಿ ಬಡಾವಣೆಯ ಮನೆಯಲ್ಲಿ ತುಂಬಿಕೊಂಡಿರುವ ಮಳೆನೀರು



ಆರ್‌ಎಂವಿ 2ನೇ ಹಂತದಲ್ಲಿರುವ ರೈಲ್ವೆ ಕೆಳಸೇತುವೆಯಲ್ಲಿ ಮಳೆ ನೀರು ತುಂಬಿಕೊಂಡಿದ್ದು ವಾಹನ ಸವಾರರು ಪರದಾಡಿದರು ಪ್ರಜಾವಾಣಿ ಚಿತ್ರ: ಬಿ.ಕೆ. ಜನಾರ್ದನ್



ಸಾಯಿ ಬಡಾವಣೆಯಲ್ಲಿ ನಿಂತ ಮಳೆ ನೀರಿನಿಂದ ದ್ವಿಚಕ್ರವಾಹನವನ್ನು ಹೊರತರಲು ಬಾಗಿಲನ್ನು ದೋಣಿಯಂತೆ ನಿವಾಸಿಗಳು ಬಳಸಿದರು

ಸೋಂಪುರದಲ್ಲಿ ಧಾರಾಕಾರ ಮಳೆ



ಸಂತೋಷ್ ಅವರ ಬಾಳೆ ಗಿಡದ ಕಂದಕಗಳು ನೀರಿನಿಂದ ತುಂಬಿರುವುದು

ದಾಬಸ್ ಪೇಟೆ: ಸೋಂಪುರ ಹೋಬಳಿಯಾದ್ಯಂತ ಗುರುವಾರ ಬೆಳಗಿನ ಜಾವ ಧಾರಾಕಾರ ಮಳೆಯಾಗಿದೆ.

ಮಳೆಯಿಂದಾಗಿ ನಿತ್ಯದ ಕೆಲಸಗಳಿಗೆ ತೊಂದರೆ ಉಂಟಾಯಿತು. ಹೊಲಗಳಲ್ಲಿ ನೀರು ನಿಂತ ಪರಿಣಾಮ ರಾಗಿ ಪೈರು ಕೊಳೆಯಲು ಆರಂಭಿಸಿದೆ.

ಕುರುವೆಲ್ ತಿಮ್ಮನಹಳ್ಳಿ ಗ್ರಾಮದ ರೈತ ಸಂತೋಷ್ ಅವರ ಬಾಳೆ ಗಿಡದ ಕಂದಕ (ಟ್ರಂಚ್) ಗಳಲ್ಲಿ ನೀರು ತುಂಬಿಕೊಂಡಿತ್ತು. 'ತಿಂಗಳ ಹಿಂದೆ 2 ಸಾವಿರ ಬಾಳೆ ಗಿಡಗಳನ್ನು ನಾಟಿ ಮಾಡಿದ್ದೆ. ನಿರಂತರ ಮಳೆಯಿಂದಾಗಿ ಕಂದಕದಲ್ಲಿ ನೀರು ನಿಂತು ಸುಮಾರು ಸಾವಿರ ಸಸಿಗಳು ಕೊಳೆತು ಹೋಗಿವೆ. ಇದೇ ರೀತಿ ಮಳೆ ಸುರಿದರೆ ಮತ್ತಷ್ಟು ಸಸಿಗಳು ಕೊಳೆಯುತ್ತವೆ' ಎಂದು ರೈತ ಸಂತೋಷ್ ಬೇಸರ ವ್ಯಕ್ತಪಡಿಸಿದರು.

ಅಪಾಯಕಾರಿ, ಅನಧಿಕೃತ ಕಟ್ಟಡಗಳ ಸಮೀಕ್ಷೆ, ತೆರವು: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್

ರಾಜಕಾಲುವೆ ಅಕ್ಕಪಕ್ಕದ 50 ಅಡಿ ಕಟ್ಟಡಕ್ಕೆ ನಿಷೇಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೆರೆಗಳ ನಡುವೆ ಸಂಪರ್ಕ ಕಲ್ಪಿಸುವ ರಾಜಕಾಲುವೆಯ ಅಕ್ಕಪಕ್ಕ 50 ಅಡಿ ಅಂತರದಲ್ಲಿ ಕಟ್ಟಡ ನಿರ್ಮಾಣ ನಿಷೇಧಿಸುವುದು ಹಾಗೂ ಅಪಾಯಕಾರಿ, ಅನಧಿಕೃತ ಕಟ್ಟಡಗಳ ತೆರವು ಮಾಡಲು ಕಾನೂನಿಗೆ ತಿದ್ದುಪಡಿ ತರಲಾಗುತ್ತದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ಮಳೆ ಸಮಸ್ಯೆಯ ಅವಲೋಕನ ಹಾಗೂ ಶಾಶ್ವತ ಪರಿಹಾರ ಕುರಿತು ಅಧಿಕಾರಿಗಳೊಂದಿಗೆ ಗುರುವಾರ ಸಭೆ ನಡೆಸಿದ ನಂತರ ಸುದ್ದಿಗಾರರ ಜೊತೆ ಮಾತನಾಡಿದ ಅವರು, ಸಭೆಯಲ್ಲಿ ಕೈಗೊಂಡ ನಿರ್ಣಯಗಳ ಬಗ್ಗೆ ಮಾಹಿತಿ ನೀಡಿದರು.

'ರಾಜಕಾಲುವೆ ಅಕ್ಕಪಕ್ಕದಲ್ಲಿ 50 ಅಡಿಗಳಲ್ಲಿ ಜಾಗವನ್ನು ಗುರುತಿಸಲಾಗಿದ್ದು, ಇಲ್ಲಿ 300 ಕಿ.ಮೀ. ಉದ್ದದ ರಸ್ತೆ ನಿರ್ಮಾಣ ಮಾಡಲಾಗುವುದು. ಇದರಿಂದ ಒತ್ತುವರಿ ನಿಲ್ಲುತ್ತದೆ, ಮಳೆನೀರು ಹರಿಯಲು ನೆರವಾಗುತ್ತದೆ. ಯೋಜನೆಯ ಆರಂಭಿಕ ಹಂತಕ್ಕೆ ಹಣ ಮೀಸಲಿಡಲಾಗಿದೆ' ಎಂದರು.

ಡ್ರೋನ್ ಮೂಲಕ ಕಟ್ಟಡಗಳ ಸಮೀಕ್ಷೆ

ನಗರದಲ್ಲಿ ನಿರ್ಮಾಣ ಹಂತದಲ್ಲಿರುವ ಕಟ್ಟಡಗಳ ಬಗ್ಗೆ ಖಾಸಗಿ ಹಾಗೂ ಪಾಲಿಕೆಯಿಂದ ಸೋಮವಾರದಿಂದ ಸಮೀಕ್ಷೆ ನಡೆಸಲಾಗುವುದು. ಕಾನೂನುಬಾಹಿರ ನಿರ್ಮಾಣಗಳನ್ನು ಪತ್ತೆ ಹಚ್ಚಿ, ಪ್ರತಿ ಕಟ್ಟಡದ ಚಿತ್ರ ಹಾಗೂ ವಿಡಿಯೊಗಳನ್ನು ಸಂಗ್ರಹಿಸಲಾಗುವುದು. ಜಂಟಿ ಆಯುಕ್ತರ ನೇತೃತ್ವದಲ್ಲಿ ಡ್ರೋನ್ ಕ್ಯಾಮೆರಾಗಳಿಂದ ಮೇಲ್ವಿಚಾರಣೆ ಮಾಡಲಾಗುವುದು ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಬಿಎಂಆರ್‌ಡಿಎ ಹಾಗೂ ಬಿಎಂಟಿಎಫ್ ವ್ಯಾಪ್ತಿಯಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ರಾಮನಗರ ಜಿಲ್ಲೆ ಸೇರಲಿದ್ದು, ಈ ಪ್ರದೇಶಗಳಲ್ಲಿ ಅಕ್ರಮ ಕಟ್ಟಡ ನಿರ್ಮಾಣ ನಿಲ್ಲಿಸಲು ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದರು.

ತೆರವಿಗೆ ಸೂಚನೆ: ಅನಧಿಕೃತವಾಗಿ ನಿರ್ಮಾಣವಾಗುತ್ತಿರುವ ಅನೇಕ ಕಟ್ಟಡಗಳನ್ನು ಒಡೆದು ಹಾಕಲು ಆದೇಶ ನೀಡಲಾಗಿದೆ. ಪ್ರತಿ ವಲಯದಲ್ಲಿ ಅಕ್ರಮ, ಕಳಪೆ ಗುಣಮಟ್ಟದ ಕಾಮಗಾರಿ ಹಾಗೂ ಜೀವಕ್ಕೆ ಅಪಾಯ ತರಬಹುದಾದ ಕಟ್ಟಡಗಳ ತೆರವಿಗೆ ಕ್ರಮ ಕೈಗೊಳ್ಳಲಾಗುತ್ತದೆ ಎಂದು ತಿಳಿಸಿದರು.

ವಿಪತ್ತು ನಿರ್ವಹಣಾ ಕಾಯ್ದೆ ಅಡಿ ಸರ್ಕಾರಕ್ಕೆ ಯಾವುದೇ ಆಸ್ತಿಯನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಳ್ಳುವ ಅಧಿಕಾರವಿದೆ. ಬಿಎಂಟಿಎಫ್, ಬಿಡಿಎ, ಬಿಬಿಎಂಪಿ, ಬಿಎಂಆರ್‌ಡಿಎ ಕಾಯ್ದೆಗೆ ಕೆಲವು ತಿದ್ದುಪಡಿ ತಂದು ಹೆಚ್ಚಿನ ಅಧಿಕಾರ ನೀಡಲಾಗುವುದು. ಕಂದಾಯ ಬಡಾವಣೆಯಾಗಿರಲಿ, ಬೇರೆ ಬಡಾವಣೆಯಾಗಿರಲಿ ಅಕ್ರಮ ಕಟ್ಟಡ ನಿರ್ಮಾಣ ಹಾಗೂ ಒತ್ತುವರಿ ನಿಲ್ಲಿಸಲು ಸುಗ್ರೀವಾಜ್ಞೆ ತರಲು ಗೃಹ ಇಲಾಖೆ ಕಾರ್ಯದರ್ಶಿಯವರಿಗೆ ಸೂಚಿಸಲಾಗಿದೆ. ಈ ವಿಚಾರವಾಗಿ ಮುಂದಿನ ಸಚಿವ ಸಂಪುಟ ಸಭೆಯಲ್ಲಿ ಪ್ರಸ್ತಾಪಿಸಿ, ಅಧಿಕಾರಿಗಳಿಗೆ ಸಂಪೂರ್ಣ ಅಧಿಕಾರ ನೀಡಲಾಗುವುದು ಎಂದು ಮಾಹಿತಿ ನೀಡಿದರು.

ಒಂದು ವಾರದಲ್ಲಿ ವರದಿ ನೀಡಲು ಸೂಚನೆ

'ಮಳೆ ನೀರು ವಸತಿ ಪ್ರದೇಶಗಳಿಗೆ ನುಗ್ಗಿ ಸಮಸ್ಯೆ ಎದುರಾಗುತ್ತಿರುವ ಎಲ್ಲ ಪ್ರದೇಶಗಳಲ್ಲಿ ಪರಿಹಾರಕ್ಕೆ ಯೋಜನೆ ರೂಪಿಸಿ, ಅಗತ್ಯವಿರುವ ಹಣಕಾಸಿನ ಅಂದಾಜು ನೀಡಲು ವಲಯವಾರು ಆಯುಕ್ತರು, ಮುಖ್ಯ ಎಂಜಿನಿಯರ್‌ಗಳು ಹಾಗೂ ಮಳೆ ನೀರುಗಾಲುವೆ ನಿರ್ವಹಣೆ ಅಧಿಕಾರಿಗಳನ್ನು ಒಳಗೊಂಡ ಪ್ರತ್ಯೇಕ ಸಮಿತಿ ರಚಿಸಲಾಗಿದೆ. ಒಂದು ವಾರದ ಒಳಗಾಗಿ ವರದಿ ನೀಡುವಂತೆ ಸೂಚಿಸಲಾಗಿದೆ' ಎಂದು ಡಿ.ಕೆ. ಶಿವಕುಮಾರ್ ತಿಳಿಸಿದರು.

'ಕೆರೆಗಳ ನಡುವೆ ಸಂಪರ್ಕ ಏರ್ಪಡಿಸಿ ಮಳೆನೀರು ಸರಾಗವಾಗಿ ಹರಿಯುವಂತೆ ಮಾಡಲು 'ಮಾಸ್ಟರ್ ಪ್ಲಾನ್' ಸಿದ್ಧಪಡಿಸಲು ಸೂಚಿಸಲಾಗಿದೆ. ಕೆರೆಯಿಂದ ಕೋಡಿ ಬೀಳುವ ನೀರು ಸರಾಗವಾಗಿ ಹೋಗಲು ಅನುವಾಗುವಂತೆ ಗೇಟ್ ಅಳವಡಿಸಲಾಗುತ್ತದೆ. ಕೆರೆಗಳಿಗೆ ಕೇವಲ ಮಳೆ ನೀರು ಹೋಗುವಂತೆ ನೋಡಿಕೊಳ್ಳಬೇಕು. ಈ ಕಾಮಗಾರಿಗೆ ಖಾಸಗಿ ಜಮೀನು ಅಗತ್ಯವಿದ್ದರೆ ಟಿಡಿಆರ್ ನೀಡುವ ಮೂಲಕ ಜಮೀನು ಸ್ವಾಧೀನಪಡಿಸಿಕೊಳ್ಳಲು ಮುಂದಾಗಿದ್ದೇವೆ' ಎಂದು ಹೇಳಿದರು.

ವಾಡಿಕೆಗಿಂತ ಹೆಚ್ಚು ಮಳೆ: 'ಮಳೆ ನಮ್ಮ ನಿಮ್ಮ ಕೈಯಲ್ಲಿ ಇಲ್ಲ. 100 ವರ್ಷಗಳಲ್ಲೇ ದಾಖಲೆಯ ಮಳೆ ಬಂದಿದೆ. ಕೇಂದ್ರೀಯ ವಿಹಾರ ಸೇರಿದಂತೆ ಕೆಲವು ಪ್ರದೇಶಗಳಲ್ಲಿ ನಿವಾಸಿಗಳನ್ನು ಸ್ಥಳಾಂತರ ಮಾಡಿದ್ದೇವೆ. ನೀರನ್ನು ಹೊರತೆಗೆಯಲಾಗುತ್ತಿದೆ. ಕೆಲವು ಕುಟುಂಬಗಳು ಸ್ಥಳಾಂತರಗೊಳ್ಳಲು ಒಪ್ಪದ ಕಾರಣ ಅವರ ಜವಾಬ್ದಾರಿ ವಹಿಸಿಕೊಳ್ಳುವಂತೆ ಪಾಲಿಕೆ ಅಧಿಕಾರಿಗಳಿಗೆ ಸೂಚಿಸಿದ್ದೇನೆ' ಎಂದು ತಿಳಿಸಿದರು.

ಗೋಡೆ ನಿರ್ಮಿಸಿಕೊಳ್ಳಲು ಕೇಂದ್ರೀಯ ವಿಹಾರ್‌ಗೆ ಸೂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರಿ ಮಳೆಯಿಂದ ಜಲಾವೃತಗೊಂಡಿರುವ ಯಲಹಂಕ ಕೋಗಿಲು ಕ್ರಾಸ್ ಬಳಿಯಿರುವ ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್ ನವರು ಎಂಟು ಅಡಿ ಎತ್ತರದ ತಡೆಗೋಡೆ ನಿರ್ಮಿಸಿಕೊಳ್ಳಬೇಕು ಎಂದು ಬಿಬಿಎಂಪಿಯ ವಲಯ ಜಂಟಿ ಆಯುಕ್ತರು ಸೂಚಿಸಿದ್ದಾರೆ.

ಕೇಂದ್ರೀಯ ವಿಹಾರ್ ಅಪಾರ್ಟ್‌ಮೆಂಟ್‌ನ ನಿವಾಸಿಗಳ ಸಂಘಕ್ಕೆ ಅಕ್ಟೋಬರ್ 18ರಂದೇ 'ತಿಳಿವಳಿಕೆ ಪತ್ರ' ಬರೆದಿರುವ ಮೊಹ್ಮದ್ ನಯೀಮ್ ಮೊಮಿನ್, 'ಯಲಹಂಕ ಕೆರೆಯ ದಕ್ಷಿಣ ಭಾಗದ ಕೋಡಿ ನೀರು ಹರಿಯುವ ಮಟ್ಟದಿಂದ ಅಪಾರ್ಟ್‌ಮೆಂಟ್ ಆರು ಅಡಿಗಳಷ್ಟು ಕೆಳಭಾಗದಲ್ಲಿದೆ. ಉತ್ತರ ಭಾಗದ ಕೋಡಿಯಿಂದ ಹೆಚ್ಚುವರಿ ನೀರು ಅಪಾರ್ಟ್‌ಮೆಂಟ್ ಮುಂಭಾಗದಲ್ಲಿರುವ ರಾಜಕಾಲುವೆ ಮೂಲಕ ಹರಿಯುತ್ತಿದೆ. ಅಪಾರ್ಟ್‌ಮೆಂಟ್‌ನ ಕಲ್ಲು ಗೋಡೆ ಕುಸಿದಿರುವುದರಿಂದ ಮಳೆ ನೀರು ಒಳಗೆ ಹರಿದು, ಜಲಾವೃತವಾಗುತ್ತಿದೆ' ಎಂದಿದ್ದಾರೆ.

ಅಪಾರ್ಟ್‌ಮೆಂಟ್ ಸುತ್ತಲೂ ನಿರ್ಮಿಸಿರುವ ಕಲ್ಲು ಕಾಂಪೌಂಡ್ ಶಿಥಿಲಾವಸ್ಥೆಯಲ್ಲಿದ್ದು, ಅದನ್ನು ತೆರವು ಮಾಡಿ ಸುಮಾರು ಎಂಟು ಅಡಿ ಎತ್ತರದ ಆರ್‌ಸಿಸಿ ತಡೆಗೋಡೆಯನ್ನು ನಿರ್ಮಿಸಿಕೊಂಡು, ಮಳೆ ನೀರು ಒಳಭಾಗಕ್ಕೆ ಹರಿಯದಂತೆ ತಡೆಯಬೇಕು ಎಂದು ಸೂಚಿಸಿದ್ದಾರೆ.

ಅಪಾರ್ಟ್‌ಮೆಂಟ್ ಒಳಭಾಗದಲ್ಲಿ ಶೇಖರಣೆಯಾಗುವ ಮಳೆ ನೀರನ್ನು ಪೂರ್ವ ದಿಕ್ಕಿನಲ್ಲಿರುವ ರಾಜಕಾಲುವೆಗೆ ನೇರವಾಗಿ ಸಂಪರ್ಕ ಕಲ್ಪಿಸಲಾಗಿದೆ. ರಾಜಕಾಲುವೆಯಲ್ಲಿ ನೀರಿನ ಮಟ್ಟ ಹೆಚ್ಚಾದಾಗ ನೀರು ಒಳಭಾಗದಲ್ಲೇ ನಿಲ್ಲುತ್ತದೆ. ಆದ್ದರಿಂದ ರಾಜಕಾಲುವೆಗೆ ನೀರು ಹರಿಸುವ ಕಾಲುವೆ ಮುಚ್ಚಬೇಕು. ಒಳಭಾಗದಲ್ಲಿ ಸಂಪ್ ಮಾಡಿಕೊಂಡು, ಅದರಿಂದ ಪಂಪ್ ಮೂಲಕ ನೀರನ್ನು ರಾಜಕಾಲುವೆಗೆ ಬಿಡಬೇಕು ಎಂದು ಸೂಚಿಸಲಾಗಿದೆ.

ತ್ಯಾಜ್ಯ ವಿಲೇವಾರಿಗೆ ಮಳೆ ಅಡ್ಡಿ

ಇನ್ನೆರಡು ದಿನಗಳಲ್ಲಿ ಕಸ ಸಾಗಣೆ ವಿಲೇವಾರಿ ಸಹಜ ಸ್ಥಿತಿಗೆ: ಬಿಎಸ್‌ಡಬ್ಲ್ಯುಎಂಎಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹೊರವಲಯದ ಮುಖ್ಯ ರಸ್ತೆಗಳು ಮಳೆ ನೀರಿನಿಂದ ಆವೃತವಾಗಿರುವುದರಿಂದ ಕಸ ವಿಲೇವಾರಿಗೆ ಸಮಸ್ಯೆ ಉಂಟಾಗಿದೆ.

ಆಯುಧಪೂಜೆ ಹಬ್ಬದ ನಂತರ ನಗರದಲ್ಲಿ ಆಗಾಗ್ಗೆ ಭಾರಿ ಮಳೆಯಾಗುತ್ತಿದ್ದು, ಹೊರವಲಯದಲ್ಲಿ ರಸ್ತೆಗಳು ಜಲಾವೃತವಾಗುತ್ತಿವೆ. ಹೀಗಾಗಿ, ಪೂರ್ಣ ಪ್ರಮಾಣದಲ್ಲಿ ತ್ಯಾಜ್ಯ ಸಂಸ್ಕರಣೆ ಘಟಕಗಳಿಗೆ ಕಸ ಸಾಗಿಸಲು ಸಾಧ್ಯವಾಗುತ್ತಿಲ್ಲ. ಹೀಗಾಗಿ ನಗರದ ಕೆಲವು ಪ್ರದೇಶಗಳಲ್ಲಿ ತ್ಯಾಜ್ಯ ಉಳಿದುಕೊಂಡಿದೆ.

'ಮಳೆಯಿಂದಾಗಿ ಸಂಸ್ಕರಣಾ ಘಟಕಗಳಲ್ಲಿ ಕಾಂಪ್ಯಾಕ್ಟರ್‌ಗಳಲ್ಲಿರುವ ತ್ಯಾಜ್ಯವನ್ನು ವಿಲೇವಾರಿ ಮಾಡಲು ಸಾಧ್ಯವಾಗಿರಲಿಲ್ಲ. ಗುರುವಾರ ಮಳೆ ಇಲ್ಲದ್ದರಿಂದ ವಿಲೇವಾರಿ ಪ್ರಾರಂಭವಾಗಿದೆ' ಎಂದು ಬೆಂಗಳೂರು ಘನತ್ಯಾಜ್ಯ ನಿರ್ವಹಣೆ ಲಿಮಿಟೆಡ್‌ನ (ಬಿಎಸ್‌ಡಬ್ಲ್ಯುಎಂಎಲ್) ಮುಖ್ಯ ಪ್ರಧಾನ ವ್ಯವಸ್ಥಾಪಕ ಬಸವರಾಜ ಕಬಾಡೆ ತಿಳಿಸಿದರು.



ಮಿಟಗಾನಹಳ್ಳಿ ಭೂಭರ್ತಿ ಪ್ರದೇಶದಲ್ಲಿ ಕಾಂಪ್ಯಾಕ್ಟರ್‌ಗಳಿಂದ ತ್ಯಾಜ್ಯ ವಿಲೇವಾರಿ ಗುರುವಾರದಿಂದ ಆರಂಭವಾಗಿದೆ

'230 ಕಾಂಪ್ಯಾಕ್ಟರ್‌ಗಳಲ್ಲಿದ್ದ ತ್ಯಾಜ್ಯವನ್ನು ಈವರೆಗೆ ಘಟಕಗಳಲ್ಲಿ ವಿಲೇವಾರಿ ಮಾಡಲಾಗಿದೆ. ಇನ್ನೂ 150ಕ್ಕೂ ಹೆಚ್ಚು ಕಾಂಪ್ಯಾಕ್ಟರ್‌ಗಳಲ್ಲಿ ತ್ಯಾಜ್ಯ ಉಳಿದಿದೆ ಎಂದು ಭೂಭರ್ತಿ ಪ್ರದೇಶದಲ್ಲಿರುವ ಮಾರ್ಷಲ್‌ಗಳು ಮಾಹಿತಿ ನೀಡಿದ್ದಾರೆ. ಮತ್ತೆ ಮಳೆಯ ಸಮಸ್ಯೆ ಆಗದಿದ್ದರೆ ಒಂದೆರಡು ದಿನಗಳಲ್ಲಿ ಎಲ್ಲ ವಿಲೇವಾರಿಯಾಗಿ, ಸಹಜ ಸ್ಥಿತಿಗೆ ಮರಳುತ್ತದೆ' ಎಂದು ಮಾಹಿತಿ ನೀಡಿದರು.

'ಮಳೆಯಿಂದ ಕಾಂಪ್ಯಾಕ್ಟರ್‌ಗಳು ಘಟಕಗಳಿಗೆ ಹೋಗಲು ಸಾಧ್ಯವಾಗುತ್ತಿರಲಿಲ್ಲ. ನೀರು ತುಂಬಿದ ರಸ್ತೆಯಲ್ಲಿ ದೊಡ್ಡ ವಾಹನಗಳು ಸಂಚರಿಸುವುದಕ್ಕೆ ಅಡ್ಡಿಯಾಗಿತ್ತು. ಅಲ್ಲದೆ, ಘಟಕಗಳ ಸಮೀಪ ಮಣ್ಣು ತುಂಬಿದ ರಸ್ತೆಗಳಿದ್ದು, ಅಲ್ಲಿ ಕಾಂಪ್ಯಾಕ್ಟರ್‌ಗಳು ಚಲಿಸಲು ಸಾಧ್ಯವಿಲ್ಲದಂತಹ ಪರಿಸ್ಥಿತಿ ಉಂಟಾಗಿತ್ತು.

ಇದೀಗ ಮಳೆ ಬಿಡುವು ನೀಡಿದ್ದು, ವಾಹನಗಳು ಸಂಚರಿಸುತ್ತಿವೆ' ಎಂದು ಬೆಂಗಳೂರು ಮಹಾನಗರ ಸ್ವಚ್ಛತೆ ಮತ್ತು ಲಾರಿ ಮಾಲೀಕರು, ಗುತ್ತಿಗೆದಾರರ ಸಂಘದ ಪ್ರಧಾನ ಕಾರ್ಯದರ್ಶಿ ಎಸ್.ಎನ್. ಬಾಲಸುಬ್ರಮಣಿಯಂ ತಿಳಿಸಿದರು.

'ನಗರದಲ್ಲಿ ಕಸ ವಿಲೇವಾರಿಗೆ ಒಂದು ದಿನ ಸಮಸ್ಯೆಯಾದರೆ ಅದು ಸಹಜ ಸ್ಥಿತಿಗೆ ಬರಲು ಮೂರ್ನಾಲ್ಕು ದಿನ ಬೇಕಾಗುತ್ತದೆ. ಇನ್ನೆರಡು ದಿನಗಳಲ್ಲಿ ಸಾಗಣೆ– ವಿಲೇವಾರಿ ಸಹಜ ಸ್ಥಿತಿಗೆ ಬರುತ್ತದೆ' ಎಂದರು.

ರಾಜ್ಯೋತ್ಸವ ಪ್ರಶಸ್ತಿಗೆ 2,087 ಅರ್ಜಿ ಸಲ್ಲಿಕೆ

ಬೆಂಗಳೂರು: ಪ್ರಸಕ್ತ ಸಾಲಿನ (2024-25) ರಾಜ್ಯೋತ್ಸವ ಪ್ರಶಸ್ತಿಗೆ ಅರ್ಹರನ್ನು ಆಯ್ಕೆ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ಉನ್ನತ ಮಟ್ಟದ ಸಭೆ ಗುರುವಾರ ನಡೆಯಿತು.

ಪ್ರಶಸ್ತಿಗೆ ಒಟ್ಟು 2,087 ಅರ್ಜಿಗಳು ಬಂದಿದ್ದು, 12 ಕ್ಷೇತ್ರ ಗಳಲ್ಲಿ ಒಟ್ಟು 69 ಮಂದಿಯನ್ನು ಪ್ರಶಸ್ತಿಗೆ ಆಯ್ಕೆ ಮಾಡಬೇಕಿದೆ. ಅರ್ಜಿಗಳನ್ನು ಪರಿಶೀಲಿಸಿ, 1:3 ಅನುಪಾತದಲ್ಲಿ ಸಂಕ್ಷಿಪ್ತ ಪಟ್ಟಿಯನ್ನು ಸಿದ್ಧಪಡಿಸಲಾಗಿದೆ ಎಂದು ಉನ್ನತ ಮೂಲಗಳು ತಿಳಿಸಿವೆ.

ಪ್ರಶಸ್ತಿಗೆ ಅರ್ಹರನ್ನು ಆಯ್ಕೆ ಮಾಡುವ ವಿಷಯದಲ್ಲಿ ಇಲಾಖೆಯ ಸಚಿವರಾದ ಶಿವರಾಜ ತಂಗಡಗಿ ಮತ್ತು ಆಯ್ಕೆ ಸಮಿತಿಯ ತೀರ್ಮಾನವೇ ಅಂತಿಮ. ಈ ವಿಷಯದಲ್ಲಿ ಯಾರಿಗೂ ಹಸ್ತಕ್ಷೇಪಕ್ಕೆ ಅವಕಾಶ ಇಲ್ಲ ಎಂದು ಸಭೆಯಲ್ಲಿ ಮುಖ್ಯಮಂತ್ರಿ ಹೇಳಿದ್ದಾಗಿ ಮೂಲಗಳು ತಿಳಿಸಿವೆ.

ಕಾನ್‌ಸ್ಟೆಬಲ್ ಮೇಲೆ ಕಾರು ಹಾಯಿಸಲು ಮುಂದಾದ ಚಾಲಕ

ಬಾನೆಟ್ ಮೇಲೆ ಬಿದ್ದರೂ ಎಳೆದೊಯ್ದ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಇಲ್ಲಿನ ಸಹ್ಯಾದ್ರಿ ಕಾಲೇಜು ಮುಂಭಾಗ ಗುರುವಾರ ಸಂಚಾರ ನಿಯಮ ಉಲ್ಲಂಘನೆ ಕಾರಣ ಕಾರು ನಿಲ್ಲಿಸುವಂತೆ ಸೂಚಿಸಿದ ಟ್ರಾಫಿಕ್ ಪೊಲೀಸ್ ಮೇಲೇ ಚಾಲಕ ಕಾರು ಹರಿಸಲು ಯತ್ನಿಸಿದ್ದಾನೆ. ಮೈಮೇಲೆ ಬಂದ ಕಾರ್‌ನ ಬಾನೆಟ್ ಹಿಡಿದು, ಮೇಲೆ ಬಿದ್ದ ಅವರನ್ನು 100 ಮೀಟರ್‌ನಷ್ಟು ದೂರ ಎಳೆದೊಯ್ದಿದ್ದಾನೆ.

ಶಿವಮೊಗ್ಗದ ಪೂರ್ವ ಸಂಚಾರ ವಿಭಾಗದ ಕಾನ್‌ಸ್ಟೆಬಲ್ ಪ್ರಭುರಾಜ್ ಅವರು ಸಹ್ಯಾದ್ರಿ ಕಾಲೇಜು ಬಳಿ ಕರ್ತವ್ಯ ನಿರತರಾಗಿದ್ದರು. ಈ ವೇಳೆ ಎಂಆರ್‌ಎಸ್ ಸರ್ಕಲ್ ಕಡೆಯಿಂದ ಹೊಳೆ ಬಸ್ ನಿಲ್ದಾಣದತ್ತ ಹೊರಟಿದ್ದ ಕಿಯಾ ಸಾನೆಟ್ ಕಾರಿನ ಚಾಲಕ ಸಂಚಾರ ನಿಯಮ ಉಲ್ಲಂಘನೆ ಮಾಡಿರುವುದು ಕಂಡುಬಂದಿದೆ. ಆಗ ಕಾರಿಗೆ ಅಡ್ಡ ನಿಂತ ಅವರು, ಪಕ್ಕಕ್ಕೆ ನಿಲ್ಲಿಸುವಂತೆ ಚಾಲಕನಿಗೆ ಹೇಳಿದ್ದಾರೆ.

ಕಾರು ನಿಲ್ಲಿಸದೇ ಪ್ರಭುರಾಜ್ ಅವರೊಂದಿಗೆ ವಾದ ಮಾಡುತ್ತಲೇ ಮುಂದೆ ಚಲಾಯಿಸುತ್ತಾ ಅವರನ್ನು ದಬ್ಬಿಕೊಂಡು ಹೋಗಿದ್ದಾನೆ. ಹಿಂದಕ್ಕೆ ಸರಿಯುತ್ತಾ ಹೋದ ಕಾನ್‌ಸ್ಟೆಬಲ್, ಕಾರಿನ ವೇಗ ಹೆಚ್ಚುತ್ತಲೇ ಅದರ ಬಾನೆಟ್ ಮೇಲೆ ಬಿದ್ದಿದ್ದಾರೆ. ಸ್ವಲ್ಪ ದೂರ ತೆರಳಿದ ನಂತರ ಕಾರು ನಿಲ್ಲಿಸಿದ್ದಾನೆ. ಕಾನ್‌ಸ್ಟೆಬಲ್ ಕೆಳಗೆ ಇಳಿದು ಪಕ್ಕಕ್ಕೆ ಬರುತ್ತಿದ್ದಂತೆಯೇ ವೇಗವಾಗಿ ಕಾರು ಚಲಾಯಿಸಿಕೊಂಡು ಹೋಗಿದ್ದಾನೆ.

ಕಾರು ಚಾಲಕ ಭದ್ರಾವತಿಯ ಕೇಬಲ್ ಆಪರೇಟರ್ ಮಿಥುನ್ ಜಗದಾಳೆ ಎಂದು ಗೊತ್ತಾಗಿದೆ.



ಕಾರಿನ ಬಾನೆಟ್ ಮೇಲೆ ಬಿದ್ದರೂ ನಿಲ್ಲಿಸದೇ ಟ್ರಾಫಿಕ್ ಕಾನ್‌ಸ್ಟೆಬಲ್ ಅವರನ್ನು ಚಾಲಕ ಎಳೆದೊಯ್ದ ದೃಶ್ಯ


75 Years of Prestige
ಪ್ರೆಸ್ಟೀಜ್
ಶುಭ ಉತ್ಸವ
ಈ ಹಬ್ಬದ ಋತುವಿನಲ್ಲಿ
ಪ್ರೆಸ್ಟೀಜ್‌ನ
ವಿನೂತನ ಪ್ರಾಡಕ್ಟ್‌ಗಳೊಂದಿಗೆ
ಅಡುಗೆ ಮನೆಯಲ್ಲಿ
ಸಂಭ್ರಮಾಚರಣೆ
ಆರಂಭಗೊಳ್ಳುತ್ತದೆ!
16 ಸೆಪ್ಟೆಂಬರ್ - 15 ನವೆಂಬರ್, 2024
ಖರೀದಿಸಿ
ಸ್ವಚ್ಛ್ ಟ್ರೈ-ಪ್ಲೈ ಪ್ರೆಶರ್ ಕುಕ್ಕರ್ (3L),
ಮೌಲ್ಯ ₹3 870.00 1 ಯೂನಿಟ್
+
ಉಚಿತವಾಗಿ ಪಡೆಯಿರಿ*
ಡ್ಯುರಾಸ್ಟೋನ್ ಓಮ್ನಿ ತವಾ (27 ಸೆಂ.ಮೀ),
ಮೌಲ್ಯ ₹1 550.00
1 ಯೂನಿಟ್
2ಲೀ ಮತ್ತು ಅದಕ್ಕಿಂತ ಹೆಚ್ಚಿನ ಎಲ್ಲಾ ಟ್ರೈ-ಪ್ಲೈ ಪ್ರೆಶರ್ ಕುಕ್ಕರ್‌ಗಳ ಮೇಲೂ ಅನ್ವಯವಾಗುತ್ತದೆ
ಖರೀದಿಸಿ
ಕಿರಿಕಿರಿಯಿಲ್ಲದ ಕ್ಲೀನಿಂಗ್‌ಗಾಗಿ
ಲಿಫ್ಟ್ ಮಾಡಬಹುದಾದ ಬರ್ನರ್‌ಗಳಿರುವ
ಸ್ವಚ್ಛ್ ನಿಯೊ 3-ಬರ್ನರ್ ಗ್ಯಾಸ್ ಸ್ಟವ್
ಮೌಲ್ಯ ₹11 295.00 1 ಯೂನಿಟ್
+
ಉಚಿತವಾಗಿ ಪಡೆಯಿರಿ*
ಸ್ವಚ್ಛ್ ಗ್ರಾನೈಟ್ ನಾನ್-ಸ್ಟಿಕ್ ಕುಕ್‌ವೇರ್
3-ಪೀಸ್ ಸೆಟ್, ಮೌಲ್ಯ ₹4 395.00
ಮತ್ತು ಸ್ವಚ್ಛ್ ಪಾಪ್ಯುಲರ್ SS ಪ್ರೆಶರ್ ಕುಕ್ಕರ್ (3L),
ಮೌಲ್ಯ ₹2 420.00 1 ಯೂನಿಟ್
ಖರೀದಿಸಿ
ಸ್ಟೈಯಿನ್ಲೆಸ್ ಸ್ಟೀಲ್ ಪ್ಲಾಟಿನಾ
ಪಾಪ್ಯುಲರ್ ಕುಕ್‌ವೇರ್ 3-ಪೀಸ್ ಸೆಟ್,
ಮೌಲ್ಯ ₹3 825.00 1 ಸೆಟ್
+
ಉಚಿತವಾಗಿ ಪಡೆಯಿರಿ*
ಪಾಪ್ಯುಲರ್
ಸ್ವಚ್ಛ್ SS
ಪ್ರೆಶರ್ ಕುಕ್ಕರ್ (3L),
ಮೌಲ್ಯ ₹2 420.00
1 ಯೂನಿಟ್
ಖರೀದಿಸಿ
ಆಸ್ಕರ್ ಸೇಫ್‌ಸೆನ್ಸ್™ ಚಿಮ್ನಿ 900ಎಂಎಂ,
ಮೌಲ್ಯ ₹33 645.00 1 ಯೂನಿಟ್
@ 25% ರಿಯಾಯಿತಿ*
SafeSense™ technology
ಪ್ರೆಸ್ಟೀಜ್ ಚಿಮ್ನಿಗಳೊಂದಿಗೆ** ₹2 249.00 ಮೌಲ್ಯದ ಕಿಟ್ ಮತ್ತು ಇನ್‌ಸ್ಟಾಲೇಶನ್ ಉಚಿತ
+
ಉಚಿತವಾಗಿ ಪಡೆಯಿರಿ*
ಸ್ವಚ್ಛ್ ಎಫಿಶಿಯಾ ಹಾಬ್ 3-ಬರ್ನರ್,
ಮೌಲ್ಯ ₹17 495.00 1 ಯೂನಿಟ್
**ಆಯ್ದ ಚಿಮ್ನಿ ಮಾಡೆಲ್‌ಗಳಿಗೆ ಆಫರ್ ಅನ್ವಯವಾಗುತ್ತದೆ.
ಆಸ್ಕರ್ ಸೇಫ್‌ಸೆನ್ಸ್™ 600 ಎಂಎಂ ಮತ್ತು
ಆಸ್ಕರ್ ಬ್ಲ್ಯಾಕ್ (600 ಎಂಎಂ ಮತ್ತು 900 ಎಂಎಂ) ಮೇಲೂ ಅನ್ವಯವಾಗುತ್ತದೆ.
ಖರೀದಿಸಿ
ಪ್ರೆಸ್ಟೀಜ್ ರಾಯಲ್ ಪ್ಲಸ್ 3-ಬರ್ನರ್
ಗ್ಯಾಸ್ ಸ್ಟವ್, ಮೌಲ್ಯ ₹9 995.00 1 ಯೂನಿಟ್
10 YEAR WARRANTY ON GLASS
+
ಉಚಿತವಾಗಿ ಪಡೆಯಿರಿ*
ಪ್ರೆಸ್ಟೀಜ್ ಅವರ ಜಜ್ 24-ಪೀಸ್
SS ಡಿನ್ನರ್ ಸೆಟ್, ಮೌಲ್ಯ ₹3 195.00
ಮತ್ತು ಪಾಪ್ಯುಲರ್ ಪ್ಲಸ್
ಸ್ವಚ್ಛ್ ಪ್ರೆಶರ್ ಕುಕ್ಕರ್ (3L),
ಮೌಲ್ಯ ₹1 780.00
1 ಯೂನಿಟ್
JUDGE® By Prestige®
ಖರೀದಿಸಿ
ಎಂಡ್ಯೂರಾ ಪ್ರೊ 1000W
ಮಿಕ್ಸರ್ ಗ್ರೈಂಡರ್,
ಮೌಲ್ಯ ₹13 995.00 1 ಯೂನಿಟ್
@ 25% ರಿಯಾಯಿತಿ*
+
ಉಚಿತವಾಗಿ ಪಡೆಯಿರಿ*
PGMFB ಸ್ಯಾಂಡ್‌ವಿಚ್ ಮೇಕರ್
ಮೌಲ್ಯ ₹1 795.00 1 ಯೂನಿಟ್
3, 4, 6 ಜಾರ್ಸ್ ಎಂಡ್ಯೂರಾ 1000W ಮಿಕ್ಸರ್ ಗ್ರೈಂಡರ್ ಮೇಲೂ ಅನ್ವಯವಾಗುತ್ತದೆ
ಖರೀದಿಸಿ
ಆಸ್ಕರ್ ಸೇಫ್‌ಸೆನ್ಸ್
₹1 265.00 ಮೌಲ್ಯದ ಜಜ್ SS
ಇಲೆಕ್ಟ್ರಿಕ್ ಕೆಟಲ್ 1 ಯೂನಿಟ್ ₹599.00ಕ್ಕೆ
JUDGE® By Prestige®
ಖರೀದಿಸಿ
PIC 3.1 V3 ಇಂಡಕ್ಷನ್ ಕುಕ್‌ಟಾಪ್,
ಮೌಲ್ಯ ₹6 070.00 1 ಯೂನಿಟ್
AUTOMATIC WHISTLE COUNTER
Prestige
+
ಉಚಿತವಾಗಿ ಪಡೆಯಿರಿ*
ಗ್ರಾನೈಟ್ ಅಲ್ಫಾ ನಾನ್-ಸ್ಟಿಕ್
ಕುಕ್‌ವೇರ್ 3-pc ಸೆಟ್,
ಮೌಲ್ಯ ₹3 995.00
1 ಸೆಟ್
ಸ್ಲಿಕ್ V4 | PIC 6.1 V3 ಮತ್ತು PIC 2.0 V2 ಮೇಲೂ ಅನ್ವಯವಾಗುತ್ತದೆ
*ಷರತ್ತುಗಳು ಅನ್ವಯಿಸುತ್ತವೆ. ಮೇಲೆ ಸೂಚಿಸಿದ ಬೆಲೆಗಳು ಉತ್ಪನ್ನದ ಎಂ ಆರ್ ಪಿ (ಎಲ್ಲಾ ತೆರಿಗೆಗಳನ್ನು ಒಳಗೊಂಡಂತೆ). ಎಂ ಆರ್ ಪಿ ಮೇಲೆ ಮಾತ್ರ ರಿಯಾಯಿತಿಗಳನ್ನು ನೀಡಲಾಗುತ್ತದೆ. ಯಾವುದೇ ಎರಡು ಕೊಡುಗೆಗಳನ್ನು ಸೇರಿಸಲಾಗದು. 3 ಯುನಿಟ್‌ಗಳ ಸ್ಟೈನ್‌ಲೆಸ್ ಸ್ಟೀಲ್ ಕುಕ್‌ವೇರ್‌ನಲ್ಲಿ ಫ್ರೈ ಪ್ಯಾನ್ –22 ಸೆ.ಮೀ., ಗ್ಲಾಸ್ ಮುಚ್ಚಳದೊಂದಿಗೆ ಕಡಾಯಿ–22ಸೆ.ಮೀ, ಗ್ಲಾಸ್ ಮುಚ್ಚಳದೊಂದಿಗೆ ಸಾಸ್ ಪ್ಯಾನ್ – 16 ಸೆ.ಮೀ ಒಳಗೊಂಡಿರುತ್ತದೆ. ಕೊಡುಗೆಗಳು ಆಯ್ದ ಮಾದರಿಗಳ ಮೇಲೆ ದಾಸ್ತಾನು ಇರುವವರೆಗೆ ಮಾತ್ರ. ಕೊಡುಗೆಗಳು ಆಯ್ದ ಸ್ಟೋರ್‌ಗಳಲ್ಲಿ ಮಾತ್ರ ಲಭ್ಯವಿರುತ್ತದೆ. ಕೊಡುಗೆಗಳು ತಮಿಳುನಾಡು, ಕರ್ನಾಟಕ, ಗೋವಾ, ಗುಜರಾತ್ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಅನ್ವಯಿಸುತ್ತದೆ. ಪ್ರೆಸ್ಟೀಜ್® ಲೋಗೋ ಭಾರತದಲ್ಲಿ ಟಿಟಿಕೆ ಪ್ರೆಸ್ಟೀಜ್ ಲಿಮಿಟೆಡ್‌ಗೆ ನೋಂದಾಯಿತ ಟ್ರೇಡ್ ಮಾರ್ಕ್ ಆಗಿದೆ. ಜಜ್® ಲೋಗೋ ಭಾರತದಲ್ಲಿ ಹಾರ್ವುಡ್ ಹೋಮ್‌ವೇರ್ಸ್ ಲಿಮಿಟೆಡ್‌ನ ನೋಂದಾಯಿತ ಟ್ರೇಡ್‌ಮಾರ್ಕ್ ಆಗಿದೆ. ಎಂ ಆರ್ ಪಿ ಮತ್ತು ವಿವರವಾದ ನಿಯಮ ಮತ್ತು ನಿಬಂಧನೆಗಳಿಗೆ ಹತ್ತಿರದ ನಿಮ್ಮ ಪ್ರೆಸ್ಟೀಜ್ ಎಕ್ಸ್‌ಕ್ಲೂಸಿವ್/ಡೀಲರ್ ಔಟ್‌ಲೆಟ್‌ಗೆ ಭೇಟಿ ನೀಡಿ.
MADE WITH PRIDE IN INDIA
CUSTOMER CARE NO 080-6000 4411
Store Locator
Scan to Connect
Shop Online on shop.ttkprestige.com
ttk
Prestige®
ತಮ್ಮವರನ್ನು ಪ್ರೀತಿಸುವವರು ಪ್ರೆಸ್ಟೀಜನ್ನು ಹೇಗೆ ನಿರಾಕರಿಸುತ್ತಾರೆ?



ವಿಧಾನಸಭೆ ಪ್ರತಿಪಕ್ಷ ನಾಯಕ ಆರ್. ಅಶೋಕ ಅವರು ಬಾಬು ಸಾ ಪಾಳ್ಯದಲ್ಲಿ ಕಟ್ಟಡ ಕುಸಿದಿರುವ ಸ್ಥಳಕ್ಕೆ ಗುರುವಾರ ಭೇಟಿ ನೀಡಿ, ಪರಿಶೀಲಿಸಿದರು. ವಿಧಾನ ಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಶಾಸಕರಾದ ಭೈರತಿ ಬಸವರಾಜು, ಡಾ.ಸಿ.ಎನ್ ಅಶ್ವತ್ಥನಾರಾಯಣ ಉಪಸ್ಥಿತರಿದ್ದರು

‘ಸುರಕ್ಷಿತ ಬೆಂಗಳೂರು ಬೇಕು’

ಬ್ರ್ಯಾಂಡ್ ಬೆಂಗಳೂರು ಬೇಡ: ಆರ್. ಅಶೋಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಂಗ್ರೆಸ್ ಸರ್ಕಾರ ಬೆಂಗಳೂರನ್ನು ಸಂಪೂರ್ಣವಾಗಿ ಕಡೆಗಣಿಸಿದೆ. ಅವರು ನಮಗೆ ‘ಬ್ರ್ಯಾಂಡ್ ಬೆಂಗಳೂರು’ ನೀಡುವುದು ಬೇಡ. ಸುರಕ್ಷಿತವಾದ ಬೆಂಗಳೂರು ನೀಡಿದರೆ ಸಾಕು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ ಆಗ್ರಹಿಸಿದರು.

ಬಾಬು ಸಾ ಪಾಳ್ಯದಲ್ಲಿ ಕಟ್ಟಡ ಕುಸಿದಿರುವ ಸ್ಥಳಕ್ಕೆ ಗುರುವಾರ ಭೇಟಿ ನೀಡಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು. ‘ಬಾಬು ಸಾ ಪಾಳ್ಯದಲ್ಲಿ ಕಟ್ಟಡ ಕುಸಿತವಾಗಿದ್ದು, ಏಳು ಅಮಾಯಕರು ಮೃತರಾಗಿದ್ದಾರೆ. ಇಲ್ಲಿನ 20 ಅಡಿ ರಸ್ತೆಗೆ ಹೆಚ್ಚೆಂದರೆ ಮೂರು ಮಹಡಿ ನಿರ್ಮಿಸಬಹುದು. ಆದರೆ ಏಳು ಮಹಡಿ ನಿರ್ಮಿಸಲು ಹೊರಟಿದ್ದರಿಂದ ಅಪಘಾತ ನಡೆದಿದೆ. ಸರ್ಕಾರ ಗಾಢ ನಿದ್ದೆಯಲ್ಲಿದ್ದು, ಮೃತಪಟ್ಟವರ ಕುಟುಂಬಗಳ ಶಾಪ ತಟ್ಟಲಿದೆ’ ಎಂದು ಅಶೋಕ ವ್ಯಕ್ತಪಡಿಸಿದರು.

‘ರಾಜಕೀಯ ಒತ್ತಡದಿಂದ ದುರಂತ’

‘ನಗರದಲ್ಲಿ ಅಕ್ರಮ ಕಟ್ಟಡಗಳ ನಿರ್ಮಾಣಕ್ಕೆ ಅಂಕೆಯೇ ಇಲ್ಲ. ಭ್ರಷ್ಟಾಚಾರ, ರಾಜಕೀಯ ಒತ್ತಡ ಇಂಥ ಘೋರ ದುರಂತಗಳಿಗೆ ಕಾರಣ’ ಎಂದು ಕೇಂದ್ರ ಸಚಿವ ಎಚ್‌.ಡಿ. ಕುಮಾರಸ್ವಾಮಿ ಅಭಿಪ್ರಾಯಪಟ್ಟಿದ್ದಾರೆ.

‘ಬೆಂಗಳೂರಿನ ಬಾಬು ಸಾ ಪಾಳ್ಯದ ಕಟ್ಟಡ ಕುಸಿದ ದುರಂತ ಆಘಾತಕಾರಿ. ಈ ದುರ್ಘಟನೆಯಲ್ಲಿ ಬಡ ಕೂಲಿಕಾರ್ಮಿಕರು ಜೀವ ತೆತ್ತಿರುವುದು ಬಿಬಿಎಂಪಿಯ ನಿರ್ಲಕ್ಷ್ಯ, ಅದಕ್ಷತೆಗೆ ಹಿಡಿದ ಕನ್ನಡಿ. ಸಿಎಂ, ಡಿಸಿಎಂ ಸ್ಥಳಕ್ಕೆ ಭೇಟಿ ನೀಡಿ, ಮೃತರ ಕುಟುಂಬಕ್ಕೆ ಪರಿಹಾರ ಘೋಷಿಸಿರುವುದೇನೋ ಸರಿ. ಆದರೆ, ಇಂಥ ದುರ್ಘಟನೆಗಳು ಭವಿಷ್ಯದಲ್ಲಿ ಮರುಕಳಿಸದಂತೆ ಸರ್ಕಾರ ದಿಟ್ಟ ಕ್ರಮ ಕೈಗೊಳ್ಳಬೇಕು’ ಎಂದು ಸಾಮಾಜಿಕ ಜಾಲತಾಣ ‘ಎಕ್ಸ್’ನಲ್ಲಿ ಆಗ್ರಹಿಸಿದ್ದಾರೆ.

ಪೊಲೀಸರ ಮೇಲೆ ಹಲ್ಲೆ: ಲೇಖಕಿ ವಿರುದ್ಧ ಎಫ್‌ಐಆರ್

ಬೆಂಗಳೂರು: ಪೊಲೀಸರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಕರ್ತವ್ಯಕ್ಕೆ ಅಡ್ಡಿ ಪಡಿಸಿದ್ದ ಆರೋಪದ ಅಡಿ ಲೇಖಕಿ ಹಾಗೂ ಅವರ ಪುತ್ರ ವಿರುದ್ಧ ಜ್ಞಾನಭಾರತಿ ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಪಿಎಸ್‌ಐಯೊಬ್ಬರು ನೀಡಿದ ದೂರಿನ ಮೇರೆಗೆ ಉಲ್ಲಾಳ ಮುಖ್ಯರಸ್ತೆಯ ನಂದನ ತೋಟದ ನಿವಾಸಿ ಲಕ್ಷ್ಮಿ ಜಿ. ಪ್ರಸಾದ್ ಹಾಗೂ ಅವರ ಪುತ್ರ ಆದಿಯಿಂದ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ತಿಳಿಸಿದರು.

ಜ್ಞಾನಭಾರತಿ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣವೊಂದರಲ್ಲಿ ಆರೋಪಿಯಾಗಿರುವ ಲಕ್ಷ್ಮಿ ಜಿ.ಪ್ರಸಾದ್ ವಿರುದ್ಧ ನ್ಯಾಯಾಲಯವು ಬಂಧನ ವಾರಂಟ್ ಜಾರಿಗೊಳಿಸಿತ್ತು. ಕೋರ್ಟ್ ಸೂಚನೆ ಮೇರೆಗೆ ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸುವಂತೆ ಹಿರಿಯ ಅಧಿಕಾರಿಗಳು, ಪಿಎಸ್‌ಐಗೆ ಸೂಚನೆ ನೀಡಿದ್ದರು. ಅ.23ರಂದು ಲಕ್ಷ್ಮಿ ಜಿ.ಪ್ರಸಾದ್ ಅವರನ್ನು ಪಿಎಸ್‌ಐ ವಶಕ್ಕೆ ಪಡೆದು ಠಾಣೆಗೆ ಕರೆತಂದಿದ್ದರು. ಆಗ ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ನಡೆಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಬಿಬಿಎಂಪಿ ಎಂಜಿನಿಯರ್‌ಗಳಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ

ಅನಧಿಕೃತ ಕಟ್ಟಡ: ಅಧಿಕಾರಿಗಳೇ ಹೊಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಯಾವುದೇ ರೀತಿಯ ಅನಧಿಕೃತ ಕಟ್ಟಡ ನಿರ್ಮಾಣವಾದರೆ ಅದಕ್ಕೆ ಸಂಬಂಧಪಟ್ಟ ಅಧಿಕಾರಿ ಅಥವಾ ಎಂಜಿನಿಯರ್‌ಗಳನ್ನೇ ಹೊಣೆ ಮಾಡಲಾಗುತ್ತದೆ. ಅಂತವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಎಚ್ಚರಿಕೆ ನೀಡಿದರು.

ಬಾಬು ಸಾ ಪಾಳ್ಯದಲ್ಲಿ ಕಟ್ಟಡ ಕುಸಿತ ಸಂಭವಿಸಿದ ಸ್ಥಳಕ್ಕೆ ಗುರುವಾರ ಭೇಟಿ ನೀಡಿ ಪರಿಶೀಲಿಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಜನರು ಕಾನೂನಿನ ಪ್ರಕಾರ ಮನೆಗಳನ್ನು ನಿರ್ಮಿಸಬೇಕೇ ಹೊರತು ಕಾನೂನು ಬಾಹಿರವಾಗಿ ಮನೆಗಳನ್ನು ಕಟ್ಟಬಾರದು. ಕಟ್ಟಡ ನಿರ್ಮಾಣಕ್ಕೆ ಮುಂಚಿತವಾಗಿ ಅನುಮತಿ ಪಡೆಯಬೇಕು. ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ನಿಂದ (ಎಇಇ) ಪರಿಶೀಲನೆ ಆಗಬೇಕು. ಕಳಪೆ ಕಾಮಗಾರಿ ಮಾಡದೇ ಕಟ್ಟಡದ ಗುಣಮಟ್ಟವನ್ನು ಕಾಯ್ದುಕೊಳ್ಳಬೇಕು ಎಂದು ಹೇಳಿದರು.

ಇನ್ನು ಮುಂದೆ ಯಾವುದೇ ಕಾರಣಕ್ಕೂ ಅನಧಿಕೃತ ಕಟ್ಟಡಗಳ ನಿರ್ಮಾಣವಾಗಬಾರದು. ಒಂದು ವೇಳೆ ನಿರ್ಮಿಸಿದರೆ, ಅದಕ್ಕೆ ಸಂಬಂಧಪಟ್ಟ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಮತ್ತು ವಲಯ ಆಯುಕ್ತರನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು. ಇಂತಹ ಘಟನೆಗಳು ಮರುಕಳಿಸಿದರೆ ಕಟ್ಟುನಿಟ್ಟಿನ ಕ್ರಮವನ್ನು ಕೈಗೊಳ್ಳುವಂತೆ ಬಿಬಿಎಂಪಿ ಮುಖ್ಯ ಆಯುಕ್ತರಿಗೂ ಸ್ಪಷ್ಟ ಸೂಚನೆ ನೀಡಲಾಗಿದೆ ಎಂದರು.

ಬಾಬು ಸಾ ಪಾಳ್ಯದ ಕಟ್ಟಡ ಮಳೆಯಿಂದಲ್ಲ, ಕಳಪೆ ಕಾಮಗಾರಿಯಿಂದ ಕುಸಿದಿದೆ. ಅನಧಿಕೃತ ಕಂದಾಯ ನಿವೇಶನವಾಗಿದೆ. ನೋಟಿಸ್ ನೀಡಿದ ನಂತರವೂ ಕಟ್ಟಡ ಮಾಲೀಕರು ಹಾಗೂ ಗುತ್ತಿಗೆದಾರರು ಕಾಮಗಾರಿಯನ್ನು ನಿಲ್ಲಿಸಿಲ್ಲ. ಹೀಗಾಗಿ ಈ ದುರದೃಷ್ಟಕರ ಘಟನೆ ನಡೆದಿದೆ ಎಂದು ತಿಳಿಸಿದರು.

‘ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅವರೊಬ್ಬರನ್ನು ಅಮಾನತು ಮಾಡಿದರೆ ಸಾಲದು. ಅನಧಿಕೃತವಾಗಿ ಕಟ್ಟಡ ನಿರ್ಮಾಣ ಮಾಡಲು ಅವಕಾಶ ಕೊಟ್ಟ ವಲಯ ಆಯುಕ್ತ (ಐಎಎಸ್ ಅಧಿಕಾರಿ), ಕಾರ್ಯಪಾಲಕ ಎಂಜಿನಿಯರ್ ಅವರಿಗೂ ನೋಟಿಸ್ ನೀಡಬೇಕು. ಮಾಲೀಕರು, ಗುತ್ತಿಗೆದಾರ ಸೇರಿದಂತೆ ಎಲ್ಲರ ವಿರುದ್ಧವೂ ಕಾನೂನು ಕ್ರಮವಾಗಬೇಕು’ ಎಂದು ಸ್ಥಳದಲ್ಲಿದ್ದ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರಿಗೆ ಸಿದ್ದರಾಮಯ್ಯ ಸೂಚಿಸಿದರು.



ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಬಾಬು ಸಾ ಪಾಳ್ಯದಲ್ಲಿ ಕಟ್ಟಡ ಕುಸಿತದಿಂದ ಮೃತಪಟ್ಟವರು ಮತ್ತು ಗಾಯಾಳು ಕಾರ್ಮಿಕರ ಕುಟುಂಬದವರಿಗೆ ಸಾಂತ್ವನ ಹೇಳಿದರು ಪ್ರಜಾವಾಣಿ ಚಿತ್ರ

‘ಮಳೆ ನಿಭಾಯಿಸುವ ಶಕ್ತಿ ಸರ್ಕಾರಕ್ಕಿರಬೇಕು’

‘ನಗರದಲ್ಲಿ 150 ಮಿಲಿ ಮೀಟರ್ ಮಳೆಯಾಗಿದೆ, 170 ಮಿಲಿ ಮೀಟರ್ ಮಳೆಯಾಗಿದೆ ಎಂದು ಹೇಳಿ ನಾವು ಜವಾಬ್ದಾರಿಯಿಂದ ತಪ್ಪಿಸಿಕೊಳ್ಳುವುದಿಲ್ಲ. ಎಷ್ಟೇ ಮಳೆಯಾದರೂ ಅದನ್ನು ನಿಭಾಯಿಸುವ ಶಕ್ತಿ ಸರ್ಕಾರಕ್ಕೆ ಇರಬೇಕು’ ಎಂದು ಸಿಎಂ ಸಿದ್ದರಾಮಯ್ಯ ಪ್ರತಿಕ್ರಿಯಿಸಿದರು.

‘125 ವರ್ಷದಲ್ಲಿ ಅತಿಹೆಚ್ಚು ಮಳೆ ಸುರಿಯಿತು ಎಂದು ಸುಮ್ಮನಾಗಲು ಸಾಧ್ಯವಿಲ್ಲ. ಎಲ್ಲ ರೀತಿಯ ಕ್ರಮಗಳನ್ನು ನಾವು ಕೈಗೊಂಡಿದ್ದೇವೆ’ ಎಂದರು.

‘ಪ್ರತಿಪಕ್ಷದ ನಾಯಕನಾಗಿದ್ದಾಗ ನಾನೂ ದೋಣಿಯಲ್ಲಿ ಕುಳಿತು ಜಲಾವೃತ ಪ್ರದೇಶಗಳನ್ನು ವೀಕ್ಷಿಸಿದ್ದೇನೆ. ಹಿಂದಿನ ಸರ್ಕಾರದಲ್ಲೂ ಮಳೆಯಿಂದ ಮನೆಗಳಿಗೆ ನೀರು ನುಗ್ಗಿ ಸಮಸ್ಯೆಯಾಗಿತ್ತು. ಸರ್ಕಾರಕ್ಕೆ ಎಲ್ಲ ಪರಿಸ್ಥಿತಿಯನ್ನು ನಿಭಾಯಿಸುವ ಶಕ್ತಿ ಇರಬೇಕಾಗುತ್ತದೆ’ ಎಂದು ಪ್ರತಿಪಕ್ಷಗಳ ಟೀಕೆ ಬಗ್ಗೆ ಸುದ್ದಿಗಾರರು ಕೇಳಿದ ಪ್ರಶ್ನೆಗೆ ಉತ್ತರಿಸಿದರು.

‘ಮಳೆ ನಿರ್ವಹಣೆಗೆ ಮೂಲಸೌಕರ್ಯಗಳ ಕೊರತೆ ಇದ್ದು, ಯಾವುದೇ ಸರ್ಕಾರದಿಂದ ಇವುಗಳ ಅಭಿವೃದ್ಧಿ ಕೆಲಸ ಆಗಿಲ್ಲ. ರಾಜಕಾಲುವೆಗಳ ಒತ್ತುವರಿಯನ್ನು ತೆರವುಗೊಳಿಸಲು ಅಧಿಕಾರಿಗಳಿಗೆ ಸೂಚನೆ ನೀಡಿದ್ದೆ. ಈಗಲೂ ತೆರವು ಮಾಡಲು ಆದೇಶಿಸಿದ್ದೇನೆ. ವಿಪತ್ತು ನಿರ್ವಹಣೆಗೆ ₹3 ಸಾವಿರ ಕೋಟಿ ಸಾಲ ಪಡೆದು ಅಗತ್ಯ ಕ್ರಮ ಕೈಗೊಳ್ಳಲಾಗುತ್ತದೆ’ ಎಂದು ಸಿದ್ದರಾಮಯ್ಯ ಮಾಹಿತಿ ನೀಡಿದರು.

ಕೊರಳುದಾರ: ನೌಕರರ ಮೇಲೆ ಕ್ರಮಕ್ಕೆ ಆಗ್ರಹ

ಬೆಂಗಳೂರು: ‘ರಾಜ್ಯ ಸರ್ಕಾರ ನಿಗದಿಪಡಿಸಿರುವ ನಿರ್ದಿಷ್ಟ ವಿನ್ಯಾಸದ ಕೊರಳುದಾರಗಳನ್ನು (ಟ್ಯಾಗ್) ಧರಿಸದ ಸರ್ಕಾರಿ ನೌಕರರ ವಿರುದ್ಧ ಕ್ರಮಗೈಗೊಳ್ಳಬೇಕು’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಆಗ್ರಹಿಸಿದೆ.

ಈ ಬಗ್ಗೆ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅವರು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಕಾರ್ಯದರ್ಶಿಗೆ ಪತ್ರ ಬರೆದಿದ್ದಾರೆ.

ಎರಡು ಕಟ್ಟಡ ತೆರವಿಗೆ ಕಾರ್ಯಾಚರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಅನಧಿಕೃತ ಕಟ್ಟಡ ಹಾಗೂ ಶಿಥಿಲಾವಸ್ಥೆಯ ಕಟ್ಟಡ ತೆರವು ಕಾರ್ಯಾಚರಣೆಯನ್ನು ಬಿಬಿಎಂಪಿ ಆರಂಭಿಸಿದೆ.

ಹೊರಮಾವು ವ್ಯಾಪ್ತಿಯ ನಂಜಪ್ಪ ಗಾರ್ಡನ್ 4ನೇ ಅಡ್ಡರಸ್ತೆಯಲ್ಲಿ ಸರ್ವೆ ನಂಬರ್ 54/1ರಲ್ಲಿ ಪುಟ್ಟಪ್ಪ ಎಂಬ ಮಾಲೀಕರು 10x25 ಅಡಿ ವಿಸ್ತೀರ್ಣದಲ್ಲಿ ನಿರ್ಮಿಸುತ್ತಿರುವ ನೆಲಮಹಡಿ ಹಾಗೂ ಐದು ಅಂತಸ್ತಿನ ಕಟ್ಟಡ ಬಿರುಕು ಬಿಟ್ಟಿದೆ.

ಈ ಕಟ್ಟಡವನ್ನು ತೆರವು ಮಾಡಲು ಆದೇಶಿಸಲಾಗಿದೆ. ಮಾಲೀಕರು ಒಪ್ಪಿ, ತೆರವು ಮಾಡುತ್ತಿದ್ದಾರೆ. ಇದಕ್ಕೆ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿದೆ ಎಂದು ಬಿಬಿಎಂಪಿ ಪ್ರಕಟಣೆ ತಿಳಿಸಿದೆ.

ಶಿಥಿಲ ಕಟ್ಟಡ: ಎಚ್‌ಎಎಲ್ ವಾರ್ಡ್ ಇಸ್ಲಾಂಪುರದಲ್ಲಿ ಶ್ರೀರಾಂ ಎಂಬ ಮಾಲೀಕರ ಎರಡು ಅಂತಸ್ತಿನ ಹಳೆಯ ಕಟ್ಟಡ ಶಿಥಿಲಾವಸ್ಥೆಯಲ್ಲಿದ್ದು, ಅದನ್ನು ತೆರವುಗೊಳಿಸುವ ಕಾರ್ಯ ನಡೆಯುತ್ತಿದೆ ಎಂದು ತಿಳಿಸಲಾಗಿದೆ.



ಎಚ್‌ಎಎಲ್ ವಾರ್ಡ್ ಇಸ್ಲಾಂಪುರದಲ್ಲಿ ಕಟ್ಟಡ ತೆರವು ಮಾಡಲಾಯಿತು

ಸಹಾಯಕ ಎಂಜಿನಿಯರ್ ಅಮಾನತು

ಬಾಬು ಸಾ ಪಾಳ್ಯದಲ್ಲಿ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಾಣವಾಗುತ್ತಿದ್ದರೂ ಕ್ರಮ ಕೈಗೊಳ್ಳದ ಆರೋಪ ದಡಿ ಹೊರಮಾವು ಉಪ ವಿಭಾಗದ ಸಹಾಯಕ ಎಂಜಿನಿಯರ್ ರಮೇಶ್ ಅವರನ್ನು ಅಮಾನತುಗೊಳಿಸಲಾಗಿದೆ.

ಹೊರಮಾವು ಉಪ ವಿಭಾಗ ವ್ಯಾಪ್ತಿಯ ಬಾಬು ಸಾ ಪಾಳ್ಯದ ಅಂಜನಾದ್ರಿ ಎನ್‌ಕ್ಲೇವ್‌ನ 7ನೇ ಬಿ ಅಡ್ಡರಸ್ತೆಯಲ್ಲಿ ನಿವೇಶನ ಸಂಖ್ಯೆ 24ರಲ್ಲಿ ನಕ್ಷೆಗೆ ವ್ಯತಿರಿಕ್ತವಾಗಿ ಕಟ್ಟಡ ನಿರ್ಮಾಣ ಮಾಡಲಾಗುತ್ತಿತ್ತು. ಬಿಬಿಎಂಪಿ –2020 ಕಾಯ್ದೆ ಪ್ರಕಾರ ಉಪವಿಧಿಗಳನ್ನು ಉಲ್ಲಂಘಿಸಿ ನಿರ್ಮಾಣ ಮಾಡಿರುವ ಕಟ್ಟಡದ ಭಾಗಗಳನ್ನು ತೆರವುಗೊಳಿಸಲು ಸ್ಥಿರೀಕರಣದ ಆದೇಶವನ್ನು ಸೆಪ್ಟೆಂಬರ್ 21ರಂದು ಹೊರಡಿಸಲಾಗಿತ್ತು. ಈ ಆದೇಶದ ನಂತರ ಯಾವುದೇ ಕ್ರಮ ಕೈಗೊಂಡಿಲ್ಲ. ಆದ್ದರಿಂದ, ಕರ್ತವ್ಯ ಲೋಪ ಎಸಗಿದ ಆರೋಪದಡಿ ರಮೇಶ್ ಅವರನ್ನು ಅಮಾನತುಗೊಳಿಸಲಾಗಿದೆ ಎಂದು ಬಿಬಿಎಂಪಿ ಆಡಳಿತ ವಿಭಾಗದ ಉಪ ಆಯುಕ್ತರು ಗುರುವಾರ ಆದೇಶ ಹೊರಡಿಸಿದ್ದಾರೆ.



ಕಮಲಾನಗರದಲ್ಲಿ ಕಟ್ಟಡವನ್ನು ಬಿಬಿಎಂಪಿ ಅಧಿಕಾರಿಗಳು ಪರಿಶೀಲಿಸಿದರು

ಕಮಲಾನಗರ: 3 ಅಂತಸ್ತಿನ ಕಟ್ಟಡ ಕುಸಿಯುವ ಭೀತಿ

ಬೆಂಗಳೂರು: ಕಮಲಾನಗರ 3ನೇ ಮುಖ್ಯರಸ್ತೆಯ ಬಳಿ ನೀರುಗಾಲುವೆಗೆ ಹೊಂದಿಕೊಂಡಂತಿರುವ 3 ಅಂತಸ್ತಿನ ಕಟ್ಟಡ ಉರುಳುವ ಸಾಧ್ಯತೆ ಇದ್ದು, ನಿವಾಸಿಗಳನ್ನು ಸ್ಥಳಾಂತ ರಿಸಲಾಗಿದೆ.

ಪಶ್ಚಿಮ ವಲಯದ ಮಹಾಲಕ್ಷ್ಮೀಪುರ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಕಮಲಾನಗರದಲ್ಲಿ ತಳಪಾಯದ ಗೋಡೆ ಶೇ 20 ರಷ್ಟು ಕುಸಿದಿದ್ದು, ಶುಕ್ರವಾರ ತೆರವು ಕಾರ್ಯವನ್ನು ಪ್ರಾರಂಭಿಸಲಾಗುವುದು ಎಂದು ವಲಯ ಆಯುಕ್ತೆ ಅರ್ಚನಾ ತಿಳಿಸಿದ್ದಾರೆ.

ಮೂರು ಅಂತಸ್ತಿನ ಮನೆಯನ್ನು, ಸುಮಾರು 25 ವರ್ಷಗಳ ಹಿಂದೆ ನಿರ್ಮಿಸಲಾಗಿದೆ. ತಳಭಾಗದಲ್ಲಿ ದ್ವಿತೀಯ ನೀರು ಗಾಲುವೆಯ ಮೂಲಕ ಬರುವ ನೀರು ಮನೆಯ ತಳಪಾಯಕ್ಕೆ ಹೋಗಿದೆ. ಇದರಿಂದ, ತಳಪಾಯದ ನೀರಿನ ಸಂಪ್ ಹಾಗೂ ತಳಪಾಯದ ಗೋಡೆ ಕುಸಿದಿರುತ್ತದೆ ಎಂದು ಅವರು ತಿಳಿಸಿದ್ದಾರೆ.

ಮೂರು ಅಂತಸ್ತಿನ ಕಟ್ಟಡದಲ್ಲಿ 5 ಮನೆಗಳಿದ್ದು, ಎಲ್ಲಾ ಮನೆಗಳನ್ನು ಬಾಡಿಗೆಗೆ ನೀಡಲಾಗಿರುತ್ತದೆ. ಮನೆಗಳಲ್ಲಿದ್ದ ಎಲ್ಲರನ್ನು ಸ್ಥಳಾಂತರಿಸಲಾಗಿದ್ದು, ಸಾಮಗ್ರಿಗಳನ್ನು ಹೊರ ತೆಗೆಯಲಾಗಿದೆ. 5 ಕುಟುಂಬಗಳ ಪೈಕಿ, 3 ಕುಟುಂಬಗಳು ಸಂಬಂಧಿಕರ ಮನೆಗೆ ತೆರಳಿದ್ದು, ಒಂದು ಕುಟುಂಬ ಅಂಬೇಡ್ಕರ್ ಭವನ, ಇನ್ನೊಂದು ಕುಟುಂಬ ದೇವಸ್ಥಾನದಲ್ಲಿ ತಂಗಿದ್ದು, ಅವರಿಗೆ ಕುಡಿಯುವ ನೀರು ಹಾಗೂ ಊಟದ ವ್ಯವಸ್ಥೆ ಮಾಡಲಾಗಿದೆ ಎಂದು ಮಾಹಿತಿ ನೀಡಿದ್ದಾರೆ.

ಇಬ್ಬರ ವಿರುದ್ಧ ಎಫ್‌ಐಆರ್

ಗುಂಡಿಗೆ ಬಿದ್ದು ಮಗು ಸಾವು

ಬೆಂಗಳೂರು: ಕಾಡುಗೋಡಿ ಪೊಲೀಸ್ ಠಾಣಾ ವ್ಯಾಪ್ತಿಯ ಕನ್ನಮಂಗಲದಲ್ಲಿ ಹಾಲು ಉತ್ಪಾದಕರ ಸಹಕಾರ ಸಂಘದ ನಿರ್ಮಾಣ ಹಂತದ ಕಟ್ಟಡಕ್ಕೆ ಲಿಫ್ಟ್ ಅಳವಡಿಸಲು ತೆಗೆದಿದ್ದ ಗುಂಡಿಗೆ ಬಿದ್ದು ಮಗು ಮೃತಪಟ್ಟಿದೆ.

ಸುಹಾಸ್ ಗೌಡ(5) ಮೃತಪಟ್ಟ ಮಗು. ಮಗುವಿನ ತಾಯಿ ನೀಡಿರುವ ದೂರು ಆಧರಿಸಿ, ಹಾಲಿನ ಉತ್ಪಾದಕರ ಸಹಕಾರ ಸಂಘದ ಅಧ್ಯಕ್ಷ ಸೊಣ್ಣಪ್ಪ ಹಾಗೂ ಕಾರ್ಯದರ್ಶಿ ಸುನಿಲ್ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

‘ಕನ್ನಮಂಗಲದ ನಿವಾಸಿಗಳಾದ ಶ್ರೀಕನ್ಯಾ–ಮುನಿರಾಜು ದಂಪತಿ ಪುತ್ರ ಸುಹಾಸ್. ಕನ್ನಮಂಗಲ ಅಪಾರ್ಟ್‌ಮೆಂಟ್‌ಗೆ ತಾಯಿ ಕೆಲಸಕ್ಕೆ ತೆರಳಿದ್ದ ವೇಳೆ ಮಗು ಮನೆಯ ಎದುರು ಆಟವಾಡುತ್ತಿತ್ತು. ಮಳೆ ಬರುತ್ತಿದ್ದ ಕಾರಣಕ್ಕೆ ಮನೆ ಎದುರೇ ನಿರ್ಮಾಣ ಹಂತದಲ್ಲಿದ್ದ ಕಟ್ಟಡದ ಒಳಕ್ಕೆ ಸ್ನೇಹಿತರ ಜತೆಗೆ ಸುಹಾಸ್ ತೆರಳಿದ್ದ. ಆ ಸಂದರ್ಭದಲ್ಲಿ ಮಗು ಆಯತಪ್ಪಿ ಗುಂಡಿಗೆ ಬಿದ್ದು ಮಗು ಮೃತಪಟ್ಟಿದೆ’ ಎಂದು ಮೂಲಗಳು ತಿಳಿಸಿವೆ.

‘ಲಿಫ್ಟ್ ಅಳವಡಿಕೆಗೆ 5 ಅಡಿ ಉದ್ದ ಹಾಗೂ ಅಷ್ಟೇ ಅಗಲದ ಗುಂಡಿ ತೆಗೆಯಲಾಗಿತ್ತು. ಮಳೆಯಿಂದ ಗುಂಡಿಯಲ್ಲಿ ನೀರು ತುಂಬಿತ್ತು. ಸುತ್ತಲೂ ಯಾವುದೇ ಸುರಕ್ಷತಾ ಕ್ರಮ ಅಳವಡಿಕೆ ಮಾಡಿರಲಿಲ್ಲ’ ಎಂದು ಪೊಲೀಸರು ತಿಳಿಸಿದರು.

ಸ್ಥಳೀಯರ ಪ್ರತಿಭಟನೆ: ಗುಂಡಿ ತೆಗೆದು ಹಾಗೆಯೇ ಬಿಟ್ಟಿದ್ದರಿಂದ ದುರಂತ ಸಂಭವಿಸಿದೆ.

ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳಬೇಕು ಎಂದು ಸ್ಥಳೀಯರು ಆಗ್ರಹಿಸಿ ಪ್ರತಿಭಟನೆ ನಡೆಸಿದರು.

ಬೈಕ್ ಸವಾರ ಸಾವು

ಬೆಂಗಳೂರು: ಕೆಂಗೇರಿ ಸಂಚಾರ ಠಾಣಾ ವ್ಯಾಪ್ತಿಯಲ್ಲಿ ಬುಧವಾರ ರಾತ್ರಿ ಬಿಎಂಟಿಸಿ ಬಸ್ ಹಾಗೂ ಬೈಕ್ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ಬೈಕ್ ಸವಾರ ಮೃತಪಟ್ಟಿದ್ದಾರೆ.

ಕೆಂಗೇರಿ ಸಮೀಪದ ಕನಕಶ್ರೀ ಲೇಔಟ್‌ನ ಡಿ.ಕೆ. ಆನಂದ್(36) ಮೃತಪಟ್ಟವರು. ಬುಧವಾರ ರಾತ್ರಿ 8 ಗಂಟೆಯ ಸುಮಾರಿಗೆ ಬಿಎಂಟಿಸಿ ಬಸ್‌ವೊಂದು ಶಿರ್ಕೆಯಿಂದ ಜಯನಗರದ ಕಡೆಗೆ ಚಲಿಸುತ್ತಿತ್ತು. ಮಡಿವಾಳಕ್ಕೆ ತೆರಳಿದ್ದ ಆನಂದ್ ಎಲೆಕ್ಟ್ರಿಕ್ ಸ್ಕೂಟರ್‌ನಲ್ಲಿ ಅದೇ ಮಾರ್ಗವಾಗಿ ಮನೆಗೆ ಬರುತ್ತಿದ್ದರು. ಆ ವೇಳೆ ಅಪಘಾತ ಸಂಭವಿಸಿ ಗಾಯಗೊಂಡಿದ್ದರು. ಸ್ಥಳೀಯರು ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದರು. ಅಲ್ಲಿ ಮೃತಪಟ್ಟಿದ್ದಾರೆ’ ಎಂದು ಸಂಚಾರ ಪೊಲೀಸರು ಹೇಳಿದರು. ಬಸ್ ಚಾಲಕ ಮಾದೇಶ್ ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ. ಕೆಂಗೇರಿ ಸಂಚಾರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೆಳ್ಳಂದೂರು ಕೆರೆಗೆ ಉರುಳಿದ ಕಾರು: ಪ್ರಯಾಣಿಕರು ಪಾರು

ಬೆಂಗಳೂರು: ಬೆಳ್ಳಂದೂರು ಕೆರೆಗೆ ಗುರುವಾರ ಮುಂಜಾನೆ ಚಾಲಕನ ನಿಯಂತ್ರಣ ತಪ್ಪಿ ಕಾರೊಂದು ಉರುಳಿದ್ದು, ಇಬ್ಬರು ಅಪಾಯದಿಂದ ಪಾರಾಗಿದ್ದಾರೆ.

ಯುವಕರಿಬ್ಬರು ಯಮಲೂರಿನಿಂದ ಮಾರತ್‌ಹಳ್ಳಿ ಕಡೆಗೆ ಕಾರಿನಲ್ಲಿ ಪ್ರಯಾಣಿಸುತ್ತಿದ್ದರು. ಬೆಳ್ಳಂದೂರು ಸಮೀಪ ಕಾರು ನಿಯಂತ್ರಣ ತಪ್ಪಿ ತಡೆಗೋಡೆಗೆ ಡಿಕ್ಕಿ ಹೊಡೆದು ಕೆರೆಗೆ ಉರುಳಿದೆ. ಕಾರಿನಲ್ಲಿದ್ದ ಯುವಕರು ಬಾಗಿಲು ತೆರೆದು ಹೊರಗೆ ಬಂದಿದ್ದಾರೆ. ಸಂಚಾರ ಪೊಲೀಸರು ಹಾಗೂ ಬಿಬಿಎಂಪಿ ಮಾರ್ಷಲ್‌ಗಳು ಕ್ರೇನ್ ಸಹಾಯದಿಂದ ಕಾರನ್ನು ಕೆರೆಯಿಂದ ಹೊರಕ್ಕೆ ತಂದರು.

ಸರಣಿ ಅಪಘಾತ: ಯಲಹಂಕದ ಮೇಲ್ಸೇತುವೆಯಲ್ಲಿ ಗುರುವಾರ ಬೆಳಿಗ್ಗೆ ಸರಣಿ ಅಪಘಾತ ಸಂಭವಿಸಿದ್ದು, ಏಳು ಕಾರುಗಳಿಗೆ ಹಾನಿಯಾಗಿದೆ. ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ. ಬೆಳಿಗ್ಗೆ ಮಳೆ ಬರುತ್ತಿದ್ದಾಗ ಮೇಲ್ಸೇತುವೆಯಲ್ಲಿ ಕಾರುಗಳು ಚಲಿಸುತ್ತಿದ್ದವು. ಕಾರೊಂದು ನಿಯಂತ್ರಣ ತಪ್ಪಿ, ಮತ್ತೊಂದು ಕಾರಿಗೆ ಡಿಕ್ಕಿಯಾಗಿದೆ. ಹಿಂದೆ ಇದ್ದ ಕಾರುಗಳು ಒಂದರ ಹಿಂದೆ ಒಂದು ಡಿಕ್ಕಿಯಾದವು. ಒಂದು ಕಾರಿನಲ್ಲಿದ್ದ ಮಗುವಿಗೆ ಸಣ್ಣ ಗಾಯವಾಗಿದೆ. ಅಪಘಾತದಿಂದಾಗಿ ವಾಹನಗಳು ಸಾಲುಗಟ್ಟಿ ನಿಲ್ಲುವಂತಾಯಿತು ಎಂದು ಪ್ರತ್ಯಕ್ಷದರ್ಶಿಗಳು ತಿಳಿಸಿದ್ದಾರೆ.

ನಗರದಲ್ಲಿ ಇಂದು

‘ಮೇವು ಮೇಳ’ದ ಉದ್ಘಾಟನೆ: ಕೆ.ಸಿ. ವೀರಣ್ಣ, ಅತಿಥಿಗಳು: ಎಂ.ಕೆ.ಜಗದೀಶ್, ವಿ. ವೆಂಕಟ್ ಸುಬ್ರಮಣಿಯನ್, ಎಚ್.ಎಂ. ಜಯಪ್ರಕಾಶ್, ವಸಂತ್ ಬಿರಾದಾರ್, ವೆಂಕಟಾಚಲ ವಿ.ಎಸ್., ಬಸವರಾಜ್ ಪಿ. ಭತಮುರ್ಗೆ, ಲತಾ ಡಿ.ಎಚ್., ಸಂಗಪ್ಪ ದೊಡ್ಡಬಸಪ್ಪ, ಆಯೋಜನೆ: ಪಶುವೈದ್ಯಕೀಯ ಮಹಾವಿದ್ಯಾಲಯ ಹಾಗೂ ಭಾರತೀಯ ಡೇರಿ ಅಸೋಸಿಯೇಷನ್, ಸ್ಥಳ: ಪಶುವೈದ್ಯಕೀಯ ಕಾಲೇಜಿನ ಆವರಣ, ಹೆಬ್ಬಾಳ, ಬೆಳಿಗ್ಗೆ 10

ನಿಖಿಲ್ ಇನಯ್ ಅವರ ‘ಮೆಮೆಂಟೊ ಮೊರಿ’ ಕಲಾಕೃತಿಗಳ ಪ್ರದರ್ಶನ: ಅತಿಥಿ: ಎ.ಆರ್. ಬಾಲಸುಬ್ರಮಣಿಯನ್, ಆಯೋಜನೆ ಮತ್ತು ಸ್ಥಳ: ಆರ್ಟ್ ಹೌಸ್, ಅರಮನೆ ರಸ್ತೆ, ವಸಂತನಗರ, ಬೆಳಿಗ್ಗೆ 10

‘ಕೆ.ಎನ್.ವಿಜಯಲಕ್ಷ್ಮಿ ಅನುವಾದ ಕಾವ್ಯ ಕಮ್ಮಟ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭದ ಉದ್ಘಾಟನೆ: ಚನ್ನಪ್ಪ ಕಟ್ಟಿ, ಪ್ರಾಸ್ತಾವಿಕ ಮಾತು: ಎಚ್. ಎಲ್. ಪುಷ್ಪ, ಅಧ್ಯಕ್ಷತೆ: ಎಲ್.ಎನ್. ಮುಕುಂದರಾಜ್, ಅತಿಥಿಗಳು: ಶೂದ್ರ ಶ್ರೀನಿವಾಸ್, ಲಕ್ಷ್ಮೀಪತಿ ಸೊಂದಲಗೆರೆ, ಎಂ. ಜಯರಾಮು, ಉಪಸ್ಥಿತಿ: ಶಾಕಿರಾ ಖಾನಮ್, ‘ಅನುವಾದ ಕ್ರಿಯೆಯ ಮೂಲಭೂತ ತತ್ವ, ತಂತ್ರ ಮತ್ತು ಸಾಧ್ಯತೆಗಳು’ ಕುರಿತು ಉಪನ್ಯಾಸ: ಅಬ್ದುಲ್ ರೆಹಮಾನ್ ಪಾಷ, ಆಯೋಜನೆ: ಸಂಸ ಥಿಯೇಟರ್, ಕರ್ನಾಟಕ ಲೇಖಕಿಯರ ಸಂಘ, ಸ್ಥಳ: ವರ್ಣ ಆರ್ಟ್ ಗ್ಯಾಲರಿ, ಎರಡನೇ ಮಹಡಿ, ಕನ್ನಡ ಭವನ, ಜೆ.ಸಿ ರಸ್ತೆ, ಬೆಳಿಗ್ಗೆ 10.30

2024–25ನೇ ಸಾಲಿನ ಸಾಂಸ್ಕೃತಿಕ, ಕ್ರೀಡಾ, ಎನ್‌ಎಸ್‌ಎಸ್, ಎನ್‌ಸಿಸಿ, ರೇಂಜರ್ಸ್ ಆ್ಯಂಡ್ ರೋವರ್ಸ್, ಯುವ ರೆಡ್‌ಕ್ರಾಸ್, ರೆಡ್ ರಿಬ್ಬನ್ ಸೇರಿದಂತೆ ವಿವಿಧ ಚಟುವಟಿಕೆಗಳ ಉದ್ಘಾಟನೆ: ರಿಜ್ವಾನ್ ಅರ್ಷದ್, ಅತಿಥಿಗಳು: ಮಂಜುಶ್ರೀ ಎನ್., ನೀನಾಸಂ ಸತೀಶ್, ಪ್ರಾಚಿಗೌಡ, ಎನ್. ಎಂ. ಶಿವಕುಮಾರ್, ಅಧ್ಯಕ್ಷತೆ: ಚಂದ್ರಶೇಖರ ಬಿ., ಆಯೋಜನೆ ಮತ್ತು ಸ್ಥಳ: ಸರ್ಕಾರಿ ರಾಂನಾರಾಯಣ್ ಚೆಲ್ಲಾರಾಂ ವಾಣಿಜ್ಯ ಮತ್ತು ನಿರ್ವಹಣಾ ಕಾಲೇಜು, ಅರಮನೆ ರಸ್ತೆ, ಬೆಳಿಗ್ಗೆ 10.30



ನೀನಾಸಂ ಸತೀಶ್

ಕನ್ನಡ ಬಾವುಟ ಹಾರಿಸಿದವರು ನೆನಪಿನ ಮಾಲೆ–19 ‘ಬಸವರಾಜ ಕಟ್ಟೀಮನಿ’ ಅವರ ಕುರಿತು ಉಪನ್ಯಾಸ: ಡಾ. ವಸುಂಧರಾ ಭೂಪತಿ, ಅಧ್ಯಕ್ಷತೆ: ವ.ಚ. ಚನ್ನೇಗೌಡ, ಆಶಯ ನುಡಿ: ರಾ.ನಂ. ಚಂದ್ರಶೇಖರ, ಆಯೋಜನೆ: ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ, ಸ್ಥಳ: ಬಿ.ಎಂ.ಶ್ರೀ ಪ್ರತಿಮೆ ಎದುರು, ಬಸವನಗುಡಿ, ಬೆಳಿಗ್ಗೆ 11

ನೂತನ ಒಳಾಂಗಣ ಕ್ರೀಡಾ ಸಂಕೀರ್ಣದ ಉದ್ಘಾಟನೆ, ಮೊದಲನೇ ವರ್ಷದ ಬಿ.ಇ. ತರಗತಿಗಳ ಉದ್ಘಾಟನೆ ಸಮಾರಂಭ: ಅತಿಥಿಗಳು: ಸಿದ್ದರಾಮಯ್ಯ, ಡಾ.ಎಂ.ಸಿ. ಸುಧಾಕರ್, ಅಧ್ಯಕ್ಷತೆ: ಎಸ್. ಮರಿಸ್ವಾಮಿ, ಆಯೋಜನೆ ಮತ್ತು ಸ್ಥಳ: ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯದ ಆವರಣ, ಜ್ಞಾನಭಾರತಿ, ಬೆಳಿಗ್ಗೆ 11

ಪರಿಸರ ಪ್ರಜ್ಞೆ–ಯುವ ತಲೆಮಾರು ಅಭಿಯಾನದ ಉದ್ಘಾಟನೆ: ಅತಿಥಿಗಳು: ನಾಗೇಶ ಹೆಗಡೆ, ಎನ್.ಕೆ. ವಸಂತ್ ರಾಜ್, ಅಧ್ಯಕ್ಷತೆ: ವೆಂಕಟೇಶ್, ಸೊರಪ್ಪಲ್ಲಿ ಚಂದ್ರಶೇಖರ್, ಆಯೋಜನೆ: ಜಯಶಿಕ್ಷಣ ಟ್ರಸ್ಟ್, ರಾಷ್ಟ್ರೀಯ ಸೇವಾ ಯೋಜನೆ, ಸ್ಥಳ: ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಜಯನಗರ, ಬೆಳಿಗ್ಗೆ 11

ಮರಕುಂಬಿ ಜಾತಿ ಸಂಘರ್ಷ ಪ್ರಕರಣ; ಮೂವರಿಗೆ ಐದು ವರ್ಷ ಜೈಲು

98 ಜನರಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಕೊಪ್ಪಳ: ಒಂದು ದಶಕದ ಹಿಂದೆ ಗಂಗಾವತಿ ತಾಲ್ಲೂಕಿನ ಮರಕುಂಬಿಯಲ್ಲಿ ನಡೆದ ದಲಿತರು ಹಾಗೂ ಸವರ್ಣೀಯರ ನಡುವಿನ ಜಾತಿ ಸಂಘರ್ಷಕ್ಕೆ ಸಂಬಂಧಿಸಿದಂತೆ ಒಟ್ಟು 101 ಅಪರಾಧಿಗಳ ಪೈಕಿ 98 ಜನರಿಗೆ ಜೀವಾವಧಿ ಶಿಕ್ಷೆ ಹಾಗೂ ತಲಾ ₹5,000 ದಂಡ ವಿಧಿಸಲಾಗಿದೆ.

ಇನ್ನುಳಿದ ಮೂವರಿಗೆ ಐದು ವರ್ಷ ಜೈಲು ಹಾಗೂ ತಲಾ ₹2,000 ದಂಡ ವಿಧಿಸಿ ಇಲ್ಲಿನ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯ ಗುರುವಾರ ಆದೇಶ ಹೊರಡಿಸಿದೆ. ಈ ಮೂವರೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡಕ್ಕೆ ಸೇರಿದವರಾಗಿದ್ದರಿಂದ ಜಾತಿನಿಂದನೆ ಕಾಯ್ದೆ ಅನ್ವಯವಾಗಿಲ್ಲ.

ಈ ಪ್ರಕರಣದಲ್ಲಿ ಒಟ್ಟು 117 ಜನ ಆರೋಪಿಗಳಿದ್ದರು. ಅದರಲ್ಲಿ 11 ಜನ ಮೃತಪಟ್ಟಿದ್ದು, ಇಬ್ಬರು ಕಾನೂನು ಸಂಘರ್ಷಕ್ಕೆ ಒಳಗಾದವರಾಗಿದ್ದಾರೆ. ಇನ್ನುಳಿದವರಲ್ಲಿ ಕೆಲವರ ಹೆಸರು ಪುನರಾವರ್ತನೆಯಾಗಿದ್ದವು. ಒಟ್ಟು 172 ಪುಟಗಳ ತೀರ್ಪು ಪ್ರಕಟಿಸಲಾಗಿದೆ. ಪ್ರಕರಣದಲ್ಲಿ 101 ಜನ ಅಪರಾಧಿಗಳಾಗಿದ್ದಾರೆ ಎಂದು ಇಲ್ಲಿನ ನ್ಯಾಯಾಲಯ ಅ. 21ರಂದು ಆದೇಶ ನೀಡಿ ಶಿಕ್ಷೆ ಪ್ರಮಾಣವನ್ನು ಗುರುವಾರಕ್ಕೆ ಕಾಯ್ದಿರಿಸಿತ್ತು.

ಆಗಿದ್ದೇನು?

2014ರ ಆಗಸ್ಟ್ 28ರಂದು ಗಂಗಾವತಿಯ ಶಿವ ಚಿತ್ರಮಂದಿರದಲ್ಲಿ 'ಪವರ್' ಸಿನಿಮಾ ನೋಡಲು ಹೋದಾಗ ಟಿಕೆಟ್ ಪಡೆಯುವಾಗ ದಲಿತರು ಹಾಗೂ ಸವರ್ಣೀಯರ ನಡುವೆ ಮಾತಿಗೆ ಮಾತು ಬೆಳೆದು ಶುರುವಾದ ಜಗಳ ಸಂಘರ್ಷಕ್ಕೆ ತಿರುಗಿತ್ತು.

ಈ ಕುರಿತು ಅದೇ ಗ್ರಾಮದ ಮಾದಿಗ ಸಮುದಾಯದ ಭೀಮೇಶ ಎಂಬುವರು, 'ನಮ್ಮ ಗ್ರಾಮದ ಸವರ್ಣೀಯ ಮಂಜುನಾಥ ಈಳಿಗೇರ ಹಾಗೂ ಇತರರು ಟಿಕೆಟ್ ಪಡೆಯುವಾಗ ಯಾರೊ ವ್ಯಕ್ತಿಗಳ ಜೊತೆ ಜಗಳ ಮಾಡಿಕೊಂಡಿದ್ದರು. ಆಗ ಅವರ ಮೇಲೆ ಹಲ್ಲೆಯಾಗಿತ್ತು. ಅದನ್ನು ನಾವೇ ಮಾಡಿಸಿದ್ದೇವೆ ಎಂದು ತಪ್ಪು ತಿಳಿದುಕೊಂಡು ಮಂಜುನಾಥ ಗ್ರಾಮಕ್ಕೆ ಸವರ್ಣೀಯರನ್ನು ಕರೆದುಕೊಂಡು ಬಂದು ನಮ್ಮ ಸಮುದಾಯದ ಜನರಿಗೆ ಜಾತಿನಿಂದನೆ ಮಾಡಿ ಹಲ್ಲೆ ನಡೆಸಿದ್ದ. ಗ್ರಾಮದಲ್ಲಿ ಗುಡಿಸಲುಗಳಿಗೆ ಬೆಂಕಿಯನ್ನೂ ಹಚ್ಚಲಾಗಿತ್ತು' ಎಂದು ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆಗೆ ದೂರು ನೀಡಿದ್ದರು.

ಮಂಜುನಾಥನನ್ನೇ ಮೊದಲನೇ ಆರೋಪಿಯನ್ನಾಗಿ ಮಾಡಲಾಗಿತ್ತು. ಚಿತ್ರಮಂದಿರದಲ್ಲಿ ಈ ಘಟನೆ ನಡೆಯುವುದಕ್ಕೂ ಮೊದಲು ಹಾಗೂ ನಂತರ ಗ್ರಾಮದಲ್ಲಿ ದಲಿತರು ಹಾಗೂ ಸವರ್ಣೀಯರ ನಡುವೆ ಸಂಘರ್ಷಗಳು ನಡೆಯುತ್ತಲೇ ಇದ್ದವು. ದೇಶದಲ್ಲಿ ಹಲವು ಕಡೆ ನಡೆದ ಪ್ರಕರಣಗಳ ತೀರ್ಪುಗಳನ್ನು ನ್ಯಾಯಾಧೀಶರು ತಮ್ಮ ಆದೇಶದಲ್ಲಿ ಉಲ್ಲೇಖಿಸಿದ್ದಾರೆ.

'ಒಂದೇ ಪ್ರಕರಣದಲ್ಲಿ ಇಷ್ಟೊಂದು ದೊಡ್ಡ ಸಂಖ್ಯೆಯಲ್ಲಿ ಜನರಿಗೆ ಜೀವಾವಧಿ ಶಿಕ್ಷೆ ವಿಧಿಸಿದ್ದು ದೇಶದಲ್ಲಿ ಇದೇ ಮೊದಲಿರಬಹುದು' ಎಂದು ಹಿರಿಯ ವಕೀಲ ಎ.ವಿ. ಕಣವಿ ಹೇಳಿದರು. ಸರ್ಕಾರಿ ವಕೀಲೆ ಅಪರ್ಣಾ ಬಂಡಿ ವಾದ ಮಂಡಿಸಿದ್ದರು.

ಮಾರಕಾಸ್ತ್ರ ಹಿಡಿದು ಗಲಭೆ (ಐಪಿಸಿ 148), ಉದ್ದೇಶಪೂರ್ವಕವಾಗಿ ಬೆಂಕಿ ಸ್ಫೋಟಕ ಬಳಕೆ (ಐಪಿಸಿ 436), ಅಕ್ರಮ ಪ್ರವೇಶ (ಐಪಿಸಿ 448), ದೊಣ್ಣೆಯಿಂದ ಹಲ್ಲೆ (ಐಪಿಸಿ 324), ಅಪಾಯಕಾರಿ ಆಯುಧದಿಂದ ಗಂಭೀರ ಸ್ವರೂಪದ ಗಾಯ ಮಾಡುವುದು (ಐಪಿಸಿ 326), ಲೈಂಗಿಕ ಕಿರುಕುಳ (ಐಪಿಸಿ 354), ಅಪರಾಧ ಕೃತ್ಯ ಕೈಗೊಳ್ಳಲು ಪ್ರಚೋದನೆ (ಐಪಿಸಿ 504) ಹಾಗೂ ಜೀವ ಬೆದರಿಕೆ (ಐಪಿಸಿ 506) ಸೇರಿದಂತೆ ಹಲವು ಸೆಕ್ಷನ್‌ಗಳ ಅಡಿ ಎಫ್‌ಐಆರ್ ದಾಖಲಿಸಲಾಗಿತ್ತು.

ಟಿಕೆಟ್‌ಗಾಗಿ ಸುಲಿಗೆ ಆರೋಪ: ದಾಖಲೆ ಸಲ್ಲಿಸಲು ತಾಕೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ಟಿಕೆಟ್ ಕೊಡಿಸುವುದಾಗಿ ಆಮಿಷವೊಡ್ಡಿ ವಿಜಯಪುರ ಜಿಲ್ಲೆಯ ನಾಗಠಾಣ ವಿಧಾನಸಭಾ ಕ್ಷೇತ್ರದ ಮಾಜಿ ಶಾಸಕ ದೇವಾನಂದ್ ಫೂಲ್ ಸಿಂಗ್ ಚವ್ಹಾಣ್ ಅವರಿಂದ ₹2 ಕೋಟಿ ಸುಲಿಗೆ ಮಾಡಿದ್ದಾರೆ ಎಂಬ ಆರೋಪದಡಿ ಬಂಧನದಲ್ಲಿರುವ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅಣ್ಣ ಗೋಪಾಲ ಜೋಶಿ ಮತ್ತಿತರರ ವಿರುದ್ಧದ ಪ್ರಕರಣಕ್ಕೆ ಸಂಬಂಧಿಸಿದ ಎಲ್ಲ ದಾಖಲೆಗಳನ್ನು ನ್ಯಾಯಾಲಯಕ್ಕೆ ಸಲ್ಲಿಸಿ' ಎಂದು ಹೈಕೋರ್ಟ್, ರಾಜ್ಯ ಪ್ರಾಸಿಕ್ಯೂಷನ್‌ಗೆ ಆದೇಶಿಸಿದೆ.

ಎಫ್‌ಐಆರ್ ರದ್ದುಪಡಿಸುವಂತೆ ಕೋರಿ ಗೋಪಾಲ ಜೋಶಿ ಸೇರಿ ಇತರರು ಸಲ್ಲಿಸಿರುವ ಅರ್ಜಿಯನ್ನು ತುರ್ತಾಗಿ ವಿಚಾರಣೆಗೆ ಕೈಗೆತ್ತಿಕೊಳ್ಳುವಂತೆ ಕೋರಿ ಅರ್ಜಿದಾರರ ಪರ ಹಿರಿಯ ವಕೀಲ ಡಿ.ಆರ್.ರವಿಶಂಕರ್ ಅವರು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠಕ್ಕೆ ಮೆಮೊ ಸಲ್ಲಿಸಿದರು.

ನ್ಯಾ.ನಾಗಪ್ರಸನ್ನ ವಿರುದ್ಧ ತನಿಖೆಗೆ ಅರ್ಜಿ: ಸುಪ್ರೀಂ ಕೋರ್ಟ್ ಗರಂ

ಪ್ರಜಾವಾಣಿ ವಾರ್ತೆ

ನವದೆಹಲಿ: ಮೂರು ಪ್ರಕರಣಗಳ ವಿಚಾರಣೆಯಿಂದ ಹಿಂದೆ ಸರಿದಿರುವ ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರ ನಿರ್ಧಾರದ ಕುರಿತು ತನಿಖೆ ನಡೆಸುವಂತೆ ಕೋರಿದ್ದ ಅರ್ಜಿದಾರರನ್ನು ಸುಪ್ರೀಂ ಕೋರ್ಟ್ ಗುರುವಾರ ತೀವ್ರವಾಗಿ ತರಾಟೆಗೆ ತೆಗೆದುಕೊಂಡಿದೆ. ಈ ಅರ್ಜಿಯು ನ್ಯಾಯಾಧೀಶರ ವಿರುದ್ಧ ಅವಹೇಳನಕಾರಿ, ಅಪ್ರಸ್ತುತ ಹಾಗೂ ಅಸಹ್ಯಕರವಾಗಿದೆ ಎಂದು ನ್ಯಾಯಪೀಠ ಕಟುವಾಗಿ ಹೇಳಿದೆ.

ಅರ್ಜಿ ಸಲ್ಲಿಸಿದ ವಿಧಾನದ ಬಗ್ಗೆಯೂ ನ್ಯಾಯಮೂರ್ತಿಗಳಾದ ಅಭಯ್ ಎಸ್.ಓಕಾ, ಅಹ್ಸಾನುದ್ದೀನ್ ಅಮಾನುಲ್ಲಾ ಹಾಗೂ ಆಗಸ್ಟಿನ್ ಜಾರ್ಜ್ ಮಸೀಹ್ ಅವರಿದ್ದ ಪೀಠವು ಅರ್ಜಿದಾರರನ್ನು ತರಾಟೆಗೆ ತೆಗೆದುಕೊಂಡಿತು. ಈ ಅರ್ಜಿ ಅತ್ಯಂತ ಆಕ್ಷೇಪಾರ್ಹ ಹಾಗೂ ತಪ್ಪು ಸಂದೇಶ ರವಾನಿಸುತ್ತದೆ ಎಂದು ಪೀಠ ಅಭಿಪ್ರಾಯ ಪಟ್ಟಿತು.

'ಇದೇನು? ಈ ಅರ್ಜಿಯು ತಪ್ಪು ಸಂದೇಶಗಳನ್ನು ಕಳುಹಿಸುತ್ತದೆ. ಮಾರ್ಗಸೂಚಿಗಳು ಉತ್ತಮವಾಗಿವೆ. ಆದರೆ, ಯಾವ ಸಂದರ್ಭಗಳಲ್ಲಿ ನ್ಯಾಯಾಧೀಶರು ಹಿಂದೆ ಸರಿದಿದ್ದಾರೆ ಎಂಬ ವಿಷಯಕ್ಕೆ ಸಂಬಂಧಿಸಿದಂತೆ ನೀವು ತನಿಖೆಗೆ ಒತ್ತಾಯಿಸಲು ಸಾಧ್ಯವಿಲ್ಲ. ನಿಮ್ಮ ಅರ್ಜಿಯಲ್ಲಿ ಬೇರೆ ಯಾವುದೋ ಉದ್ದೇಶ ಇರುವಂತಿದೆ' ಎಂದು ಪೀಠ ಹೇಳಿತು.

ಪ್ರಕರಣದ ವಿಚಾರಣೆಯಿಂದ ಹಿಂದಕ್ಕೆ ಸರಿಯುವುದು ನ್ಯಾಯಾಧೀಶರ ವಿವೇಚನೆಗೆ ಸಂಬಂಧಿಸಿದ ವಿಷಯ. ಅಂತಹ ವಿಷಯಗಳನ್ನು ಪ್ರಶ್ನಿಸುವುದು ಕಾರ್ಯಸಾಧುವೇ ಎಂದು ಪೀಠ ಪ್ರಶ್ನಿಸಿತು. ಈ ಅರ್ಜಿಯಲ್ಲಿ ಪ್ರಾಮಾಣಿಕತೆಯ ಕೊರತೆ ಇದೆ ಎಂದೂ ಪೀಠ ಅಭಿಪ್ರಾಯಪಟ್ಟಿತು.

'ನಿಮ್ಮ ಪ್ರಕಾರ ನ್ಯಾಯಾಧೀಶರು ಕೂಡ ದುರ್ಬಲರೇ? ಲೋಕಾಯುಕ್ತರು ನ್ಯಾಯಾಂಗದ ತೀರ್ಪುಗಳ ಮೇಲೆ ಪ್ರಭಾವ ಬೀರಬಹುದೇ? ಈ ರಿಟ್ ಅರ್ಜಿ ಸಲ್ಲಿಕೆ ವಿಧಾನವೇ ಸರಿ ಇಲ್ಲ. ಈ ಅರ್ಜಿಯು ಅನೇಕ ಆಕ್ಷೇಪಾರ್ಹ ಅಂಶಗಳನ್ನು ಒಳಗೊಂಡಿದೆ. ನ್ಯಾಯಾಧೀಶರ ವಿವೇಚನೆಯನ್ನು ನಾವು ತನಿಖೆ ನಡೆಸಲು ಸಾಧ್ಯವಿಲ್ಲ' ಎಂದು ಪೀಠ ಹೇಳಿತು.

ಅಂತಿಮವಾಗಿ ನ್ಯಾಯಪೀಠವು ಅರ್ಜಿದಾರರಿಗೆ ಅರ್ಜಿ ಹಿಂಪಡೆಯಲು ಅನುಮತಿ ನೀಡಿತು.

ಕರ್ನಾಟಕ ಲೋಕಾಯುಕ್ತರ ಪತ್ನಿ ಹಾಗೂ ಪುತ್ರನ ವಿರುದ್ಧ ಕ್ರಿಮಿನಲ್ ಪ್ರಕರಣಗಳನ್ನು ದಾಖಲಿಸಬೇಕು ಎಂದು ಕೋರಿದ್ದ ಪ್ರಕರಣದಲ್ಲಿ ಆದೇಶ ಕಾಯ್ದಿರಿಸಿದ ಬಳಿಕ ನ್ಯಾಯಮೂರ್ತಿ ನಾಗಪ್ರಸನ್ನ ಅವರು ವಿಚಾರಣೆಯಿಂದ ಹಿಂದಕ್ಕೆ ಸರಿದಿದ್ದಾರೆ ಎಂಬುದು ಅರ್ಜಿದಾರರ ಒಂದು ಆರೋಪ.

ಭ್ರಷ್ಟಾಚಾರದ ಆರೋಪಗಳ ಬಗ್ಗೆ ನ್ಯಾಯಾಲಯದ ಮೇಲ್ವಿಚಾರಣೆಯಲ್ಲಿ ತನಿಖೆ ನಡೆಸಬೇಕು ಎಂದು ಅರ್ಜಿಯಲ್ಲಿ ಕೋರಲಾಗಿತ್ತು.

ಹೊಸ ಹೆಜ್ಜೆಯಿತ್ತ ನ್ಯಾ.ನಾಗಪ್ರಸನ್ನ



ನಾಗಪ್ರಸನ್ನ

ಬೆಂಗಳೂರು: ಪ್ರಕರಣಗಳ ತ್ವರಿತ ವಿಲೇವಾರಿಗೆ ಹೆಸರುವಾಸಿಯಾಗಿರುವ ರಾಜ್ಯ ಹೈಕೋರ್ಟ್ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರು ತೆರೆದ ನ್ಯಾಯಾಲಯದ ಅಮೂಲ್ಯ ಸಮಯವನ್ನು ಉಳಿಸುವ ನಿಟ್ಟಿನಲ್ಲಿ ಇದೀಗ ಮತ್ತೊಂದು ಹೆಜ್ಜೆ ಇರಿಸಿದ್ದಾರೆ.

'ಪ್ರಕರಣಗಳಲ್ಲಿ ದೀರ್ಘವಾದ ತೀರ್ಪುಗಳ ಬಗ್ಗೆ ತೆರೆದ ನ್ಯಾಯಾಲಯದಲ್ಲಿ ಉಕ್ತ ಲೇಖನ ನೀಡದೇ ಇರುವ ಬಗ್ಗೆ ತೀರ್ಮಾನ ಕೈಗೊಂಡಿದ್ದೇನೆ' ಎಂದು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರು ಗುರುವಾರ ಮುಕ್ತ ನ್ಯಾಯಾಲಯದಲ್ಲಿ ಪ್ರಕರಣವೊಂದರ ವಿಚಾರಣೆ ವೇಳೆ ಮೌಖಿಕವಾಗಿ ಪ್ರಕಟಿಸಿದರು.

'ಮುಕ್ತ ನ್ಯಾಯಾಲಯದಲ್ಲಿ ದೀರ್ಘವಾದ ತೀರ್ಪುಗಳಿಗೆ ಉಕ್ತಲೇಖನ ನೀಡುವುದನ್ನು ತಪ್ಪಿಸಿ' ಎಂದು ಸುಪ್ರೀಂ ಕೋರ್ಟ್ ನೀಡಿರುವ ಸಲಹೆಯ ಪಾಲನೆಗೆ ಈ ನಿರ್ಧಾರ ಕೈಗೊಳ್ಳುತ್ತಿದ್ದೇನೆ' ಎಂದು ಅವರು ಇದಕ್ಕೆ ಸ್ಪಷ್ಟನೆ ನೀಡಿದರು.

'ನ್ಯಾಯಾಂಗದ ಮತ್ತು ಕೋರ್ಟ್‌ನ ಸಮಯ ಉಳಿಸಲು ದೀರ್ಘವಾದ ತೀರ್ಪುಗಳ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ನೀಡದಂತೆ ಸುಪ್ರೀಂ ಕೋರ್ಟ್ ಮೊನ್ನೆಯಷ್ಟೇ ಆದೇಶಿಸಿದೆ. ಹೀಗಾಗಿ, ಇನ್ನು ಮುಂದೆ ದೀರ್ಘವಾದ ತೀರ್ಪುಗಳ ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ನೀಡುವುದಿಲ್ಲ. ಬದಲಿಗೆ ಕಚೇರಿಯಲ್ಲಿ ನೀಡಲಾಗುವುದು' ಎಂದು ತಿಳಿಸಿದರು.

ಮಹತ್ವದ ಪ್ರಕರಣಗಳು ಅದರಲ್ಲೂ, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ನ್ಯಾಯಪೀಠದಲ್ಲಿರುವ ನ್ಯಾಯಮೂರ್ತಿ ನಾಗಪ್ರಸನ್ನ ಅವರು ಕಳೆದ ತಿಂಗಳಲ್ಲಿ 550ಕ್ಕೂ ಹೆಚ್ಚು ಪ್ರಕರಣಗಳನ್ನು ಒಂದೇ ದಿನದಲ್ಲಿ ವಿಚಾರಣೆ ನಡೆಸಿದ್ದರು. ಅಂತೆಯೇ, ಈ ಹಿಂದೆ ಇದೇ ರೀತಿ ದಿನವೊಂದರಲ್ಲಿ 600ಕ್ಕೂ ಹೆಚ್ಚು ಪ್ರಕರಣಗಳನ್ನು ವಿಚಾರಣೆ ನಡೆಸಿದ್ದಾರೆ. ಇವರಿಗೂ ಮೊದಲು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರು ಏಕಸದಸ್ಯ ನ್ಯಾಯಪೀಠದಲ್ಲಿದ್ದಾಗ ಇದೇ ರೀತಿ ಅತಿ ಹೆಚ್ಚು ಪ್ರಕರಣಗಳನ್ನು ತ್ವರಿತವಾಗಿ ವಿಲೇವಾರಿ ಮಾಡಿದ ಹೆಗ್ಗಳಿಕೆ ಹೊಂದಿದ್ದಾರೆ.

ಒಳಮೀಸಲಾತಿ ಹಂಚಿಕೆ ಅವೈಜ್ಞಾನಿಕ

ಕೇಂದ್ರಕ್ಕೆ ಸಲ್ಲಿಸಿದ ವರದಿ ವಾಪಸ್‌ಗೆ ಸರ್ಕಾರಕ್ಕೆ ಒತ್ತಾಯ

• ಮೋಹನ್ ಕುಮಾರ ಸಿ.

ಮೈಸೂರು: 'ಪರಿಶಿಷ್ಟ ಜಾತಿಗಳಿಗೆ ಒಳ ಮೀಸಲಾತಿ ಕಲ್ಪಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿರುವ ಈ ಹಿಂದಿನ ಬಿಜೆಪಿ ನೇತೃತ್ವದ ರಾಜ್ಯ ಸರ್ಕಾರದ ವರದಿಯು ನ್ಯೂನತೆಗಳಿಂದ ಕೂಡಿದ್ದು, 2011ರ ಜನಗಣತಿಯ ಅಂಕಿ– ಅಂಶಗಳನ್ನು ಮರೆಮಾಚಲಾಗಿದೆ' ಎಂಬ ಆಕ್ಷೇಪ ಒಳಪಂಗಡಗಳಿಂದ ವ್ಯಕ್ತವಾಗಿದೆ. ಶಿಫಾರಸನ್ನು ವಾಪಸ್ ಪಡೆಯಬೇಕೆಂದು ಒತ್ತಾಯ ಮಾಡಲಾಗಿದೆ.

ಈ ಬಗ್ಗೆ, ರಾಜ್ಯ ಭೋವಿ ಅಭಿವೃದ್ಧಿ ನಿಗಮದ ಮಾಜಿ ಅಧ್ಯಕ್ಷ ಜಿ.ವಿ. ಸೀತಾರಾಮು ಅವರು ಮಾಹಿತಿ ಹಕ್ಕು ಕಾಯ್ದೆಯಡಿ 2023ರ ಅ.3ರಂದು 'ಜನಗಣತಿ ಕಾರ್ಯ ನಿರ್ದೇಶನಾಲಯ'ದಿಂದ ಪಡೆದಿರುವ ಪರಿಶಿಷ್ಟ ಜಾತಿ ಹಾಗೂ ಪಂಗಡಗಳ ಜಿಲ್ಲಾವಾರು ಅಂಕಿ–ಅಂಶಕ್ಕೂ, ಸರ್ಕಾರವು ಶಿಫಾರಸು ಮಾಡಿರುವ ಒಳಮೀಸಲಾತಿ ಪ್ರಮಾಣಕ್ಕೂ ವ್ಯತ್ಯಾಸವಿದೆ. ಇದರ ಪ್ರತಿ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

'ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರವಿದ್ದಾಗ ಆಗಿನ ಸಂಸದೀಯ ವ್ಯವಹಾರಗಳ ಸಚಿವ ಜೆ.ಸಿ.ಮಾಧುಸ್ವಾಮಿ ಅಧ್ಯಕ್ಷತೆಯ ಐವರು ಸದಸ್ಯರ ಒಳಮೀಸಲಾತಿ ಸಮಿತಿಯ ಶಿಫಾರಸುಗಳು ಅವೈಜ್ಞಾನಿಕವಾಗಿವೆ. ಅವನ್ನೇ ಕೇಂದ್ರಕ್ಕೆ ಕಳುಹಿಸಲಾಗಿದೆ. ಅದರಿಂದ ಸಮುದಾಯಗಳ ವಿದ್ಯಾಭ್ಯಾಸ, ಉದ್ಯೋಗ, ಸರ್ಕಾರದ ಸೌಲಭ್ಯಗಳು ಅಸಮಾನವಾಗಿ ಹಂಚಿಕೆಯಾಗಲಿವೆ. ಅದು ಸಮುದಾಯಗಳ ಒಳಗೇ ದ್ವೇಷ ಭಾವನೆ ಮೂಡಿಸಲಿದೆ' ಎಂಬ ಆತಂಕವನ್ನು ಕೆಪಿಸಿಸಿ ವಕ್ತಾರ ಸೀತಾರಾಮು ವ್ಯಕ್ತಪಡಿಸಿದರು.

'ವರದಿಗೆ ಬೇಕಾದ ಜನಗಣತಿಯ ಅಂಕಿ– ಅಂಶವನ್ನು ಸರ್ಕಾರದ ನೋಡಲ್ ಏಜೆನ್ಸಿಯಾದ ಆರ್ಥಿಕ ಹಾಗೂ ಸಾಂಖ್ಯಿಕ ನಿರ್ದೇಶನಾಲಯದಿಂದ ಪಡೆಯದೆಯೇ ತಪ್ಪು ಮಾಹಿತಿ ಆಧರಿಸಿ ಮೀಸಲಾತಿ ಹಂಚಲಾಗಿದೆ' ಎಂದು ಸರ್ಕಾರಕ್ಕೆ ಪತ್ರ ಬರೆದಿದ್ದಾರೆ.

'ನ್ಯಾ.ಎ.ಜೆ.ಸದಾಶಿವ ಆಯೋಗದ ವರದಿಯ ಶಿಫಾರಸುಗಳ ಜಾರಿಗೆ ಪರಿಶಿಷ್ಟ ಜಾತಿಯ 101 ಜಾತಿಗಳಲ್ಲಿ ಎಡಗೈ ಸಮುದಾಯದವರು ಹೋರಾಟ ನಡೆಸಿದ್ದರು. ಬೊಮ್ಮಾಯಿ ನೇತೃತ್ವದ ಸರ್ಕಾರ ವರದಿಯನ್ನು ಅನುಷ್ಠಾನಗೊಳಿಸದೆ, ಸಮಿತಿ ರಚಿಸಿ ಹೆಚ್ಚುವರಿ ಒಳ ಮೀಸಲಾತಿ ಹಂಚಿದೆ. ಈ ವರ್ಗೀಕರಣವೇ ತಪ್ಪು. 89 ಸಮುದಾಯಗಳಿಗೆ ನ್ಯಾಯ ಸಿಗಬೇಕೆಂದು ಈಗಿನ ಸರ್ಕಾರದ ಗಮನವನ್ನೂ ಸೆಳೆಯಲಾಗಿದೆ' ಎಂದರು.

ವ್ಯತ್ಯಾಸ ಪ್ರಮಾಣ...

ಸರ್ಕಾರವು ಶಿಫಾರಸು ಮಾಡಿರುವಂತೆ, ಪರಿಶಿಷ್ಟ ಜಾತಿ ಸಮುದಾಯಗಳನ್ನು ನಾಲ್ಕು ಗುಂಪುಗಳನ್ನಾಗಿ ವಿಂಗಡಿಸಿ ಒಳ ಮೀಸಲಾತಿಯನ್ನು ಹಂಚಿಕೆ ಮಾಡಲಾಗಿದೆ. ಮೊದಲ ಗುಂಪಿನಲ್ಲಿ ಆದಿ ದ್ರಾವಿಡ, ಮಾದಿಗ, ಸಮಗಾರ ಸೇರಿದಂತೆ 27 ಜಾತಿಗಳ ಜನಸಂಖ್ಯೆಯು ಶೇ 25.06ರಷ್ಟಿದ್ದು, 2011ರ ಜನಗಣತಿ ಪ್ರಕಾರ ಶೇ 4.26ರಷ್ಟು ಒಳ ಮೀಸಲಾತಿ ನೀಡುವ ಬದಲು ಶೇ 6ರಷ್ಟು ನಿಗದಿಪಡಿಸಲಾಗಿದೆ.

ಎರಡನೇ ಗುಂಪಿನಲ್ಲಿ ಆದಿ ಕರ್ನಾಟಕ, ಛಲವಾದಿ, ಚೆನ್ನ ದಾಸರ್, ಮಹರ್ ಸೇರಿದಂತೆ 10 ಜಾತಿಗಳ ಜನಸಂಖ್ಯೆಯು ಶೇ 33.62ರಷ್ಟಿದ್ದು, ಶೇ 5.72 ಒಳ ಮೀಸಲಾತಿ ನೀಡುವ ಬದಲು ಸಮಿತಿಯು ಶೇ 5.50 ನಿಗದಿ ಮಾಡಿದೆ.

ಮೂರನೇ ಗುಂಪಿನಲ್ಲಿ ಬಂಜಾರ, ಲಂಬಾಣಿ, ಬೋವಿ, ಕೊರಚ ಸೇರಿದಂತೆ 19 ಜಾತಿಗಳ ಜನಸಂಖ್ಯೆ ಶೇ 27.19ರಷ್ಟಿದ್ದು ಶೇ 4.62 ಒಳ ಮೀಸಲಾತಿ ನೀಡುವ ಬದಲು ಶೇ 4.5ರಷ್ಟು ನೀಡಲಾಗಿದೆ. ನಾಲ್ಕನೇ ಗುಂಪಿನಲ್ಲಿ 89 ಜಾತಿಗಳಿದ್ದು, ಸಮುದಾಯದ ಜನಸಂಖ್ಯೆಯು ಶೇ 14.14ರಷ್ಟಿದೆ. ಅದರಲ್ಲಿ ಶೇ 2.4ರಷ್ಟು ಒಳ ಮೀಸಲು ನೀಡುವ ಬದಲು ಶೇ 1ರಷ್ಟು ಮೀಸಲನ್ನು ವರದಿಯಲ್ಲಿ ಶಿಫಾರಸು ಮಾಡಲಾಗಿದೆ.

ನೀತಿಸಂಹಿತೆ ಮುಗಿದ ಬಳಿಕ ಜಾತಿ ಗಣತಿ ಮಂಡನೆ– ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಉಪ ಚುನಾವಣೆಯ ನೀತಿಸಂಹಿತೆ ಮುಗಿದ ಬಳಿಕ ಸಾಮಾಜಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ (ಜಾತಿ ಜನಗಣತಿ) ವರದಿ ಕುರಿತು ಸಚಿವ ಸಂಪುಟ ಸಭೆಯಲ್ಲಿ ಚರ್ಚಿಸಿ, ಮುಂದಿನ ತೀರ್ಮಾನ ತೆಗೆದುಕೊಳ್ಳಲಾಗುವುದು' ಎಂದು ಕರ್ನಾಟಕ ಶೋಷಿತ ಸಮುದಾಯಗಳ ಮಹಾಒಕ್ಕೂಟಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಭರವಸೆ ನೀಡಿದ್ದಾರೆ.

ಮಹಾ ಒಕ್ಕೂಟದ ಪ್ರಧಾನ ಸಂಚಾಲಕ ಕೆ.ಎಂ. ರಾಮಚಂದ್ರಪ್ಪ ನೇತೃತ್ವದಲ್ಲಿ ಪದಾಧಿಕಾರಿಗಳು ಮತ್ತು ವಿವಿಧ ಸಮುದಾಯಗಳ ಮುಖಂಡರು ಸೇರಿ ನೂರಕ್ಕೂ ಹೆಚ್ಚು ಮಂದಿಯ ನಿಯೋಗವು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಗುರುವಾರ ಭೇಟಿ ಮಾಡಿ ಜಾತಿ ಜನಗಣತಿ ವರದಿ ಒಪ್ಪಿಕೊಳ್ಳುವಂತೆ ಮನವಿ ಸಲ್ಲಿಸಿತು.

'ನವೆಂಬರ್ ತಿಂಗಳ ಮೊದಲ ವಾರದ ಒಳಗೆ ಜಾತಿ ಜನಗಣತಿ ವರದಿಯನ್ನು ಒಪ್ಪಿಕೊಳ್ಳದಿದ್ದರೆ ರಾಜ್ಯ ಸರ್ಕಾರದ ವಿರುದ್ಧ ತೀವ್ರ ಹೋರಾಟ ಹಮ್ಮಿಕೊಳ್ಳುತ್ತೇವೆ' ಎಂದೂ ನಿಯೋಗ ಎಚ್ಚರಿಕೆ ನೀಡಿದೆ.



ಮಿಜೋರಾಂ ರಾಜ್ಯದ ಆಹಾರ ಸಚಿವ ಬಿ. ಲಾಲ್ಚನ್ಜೋವಾ ನೇತೃತ್ವದ ನಿಯೋಗದ ಜೊತೆ ರಾಜ್ಯ ಆಹಾರ ಇಲಾಖೆಯ ಪ್ರಮುಖ ವಿಷಯಗಳ ಕುರಿತು ಸಚಿವ ಕೆ.ಎಚ್‌. ಮುನಿಯಪ್ಪ ಚರ್ಚೆ ನಡೆಸಿದರು

ಮಿಜೋರಾಂ ಆಹಾರ ಸಚಿವರ ಜೊತೆ ಮುನಿಯಪ್ಪ ಚರ್ಚೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ಆಹಾರ ಸಚಿವ ಕೆ.ಎಚ್. ಮುನಿಯಪ್ಪ ಅವರನ್ನು ಮಿಜೋರಾಂ ರಾಜ್ಯದ ಆಹಾರ ಸಚಿವ ಬಿ. ಲಾಲ್ಚನ್ಜೋವಾ ಅವರು ಗುರುವಾರ ಭೇಟಿ ಮಾಡಿ ಆಹಾರ ಇಲಾಖೆಯ ಪ್ರಮುಖ ವಿಷಯಗಳ ಕುರಿತು ಚರ್ಚೆ ನಡೆಸಿದರು.

ರಾಜ್ಯದಲ್ಲಿ ಅಕ್ಕಿ ಸರಬರಾಜು ಹಾಗೂ ರಾಗಿ ಮತ್ತು ಗೋಧಿಯನ್ನು ಯಾವ ರೀತಿ ಖರೀದಿಸಲಾಗುತ್ತಿದೆ ಎಂಬ ಕುರಿತು ಮಿಜೋರಾಂ ಸಚಿವರಿಗೆ ಮುನಿಯಪ್ಪ ವಿವರಿಸಿದರು.

ಬಿಪಿಎಲ್ ಪಡಿತರ ಚೀಟಿ ಫಲಾನುಭವಿಗಳಿಗೆ 5 ಕೆ.ಜಿ ಅಕ್ಕಿ ಮತ್ತು ಉಳಿದ 5 ಕೆ.ಜಿ ಅಕ್ಕಿ ಬದಲಿಗೆ ₹ 170 ನೇರ ನಗದು ವರ್ಗಾವಣೆ (ಡಿಬಿಟಿ) ಮೂಲಕ ಖಾತೆಗೆ ಜಮೆ ಮಾಡುತ್ತಿರುವ ಬಗ್ಗೆ ಅಧಿಕಾರಿಗಳು ಮಾಹಿತಿ ಹಂಚಿಕೊಂಡರು. ಮಿಜೋರಾಂನಲ್ಲಿ 8 ಕೆ.ಜಿ ಅಕ್ಕಿ ವಿತರಿಸುತ್ತಿರುವುದಾಗಿ ಅಲ್ಲಿನ ಅಧಿಕಾರಿಗಳು ತಿಳಿಸಿದರು.

ಬಸ್ ಸೇವೆಗೆ ಉಬರ್ ಚಿಂತನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರಿನಲ್ಲಿ ಉಬರ್ ಬಸ್ ಸೇವೆ ಆರಂಭಿಸಲು ಚಿಂತನೆ ನಡೆಸಲಾಗಿದೆ. ಹಲವು ಮಧ್ಯಸ್ಥಗಾರರ ಜೊತೆಗೆ ಮಾತುಕತೆ ಕೂಡ ನಡೆಸಲಾಗುತ್ತಿದೆ' ಎಂದು ಉಬರ್ ಇಂಡಿಯಾ ಮತ್ತು ದಕ್ಷಿಣ ಏಷ್ಯಾದ ಅಧ್ಯಕ್ಷ ಪ್ರಭಜೀತ್ ಸಿಂಗ್ ತಿಳಿಸಿದ್ದಾರೆ.

ಈಗಾಗಲೇ ಕೋಲ್ಕತ್ತ ಮತ್ತು ದೆಹಲಿಯಲ್ಲಿ ಬಸ್ ಸೇವೆ ಪ್ರಾರಂಭಿಸಲಾಗಿದೆ. ಹೈದರಾಬಾದ್ ಮತ್ತು ಮುಂಬೈನಲ್ಲಿ ಪ್ರಾಯೋಗಿಕವಾಗಿ ಬಸ್ ಸೇವೆ ಆರಂಭಿಸಲು ಸಿದ್ಧತೆ ನಡೆದಿದೆ ಎಂದು ಬುಧವಾರ ನಡೆದ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಬೆಂಗಳೂರಿನಲ್ಲಿ ಉಬರ್ ಬಸ್ ಸೇವೆ ಪ್ರಾರಂಭಿಸುವುದಕ್ಕೆ ಸಂಬಂಧಿಸಿದಂತೆ ರಾಜ್ಯ ಸರ್ಕಾರವು ಅನುಮತಿ ನೀಡಬೇಕಿದೆ. ಇದಕ್ಕೆ ಕೆಲವು ನಿಯಮಾವಳಿಗಳನ್ನು ಸಡಿಲಗೊಳಿಸಬೇಕಿದೆ ಎಂದು ಹೇಳಿದರು.

ಹೆಬ್ಬಾಳ ಮತ್ತು ಹೊರವರ್ತುಲ ರಸ್ತೆಯಲ್ಲಿ ಹವಾನಿಯಂತ್ರಿತ ಬಸ್ ಸೇವೆ ಆರಂಭಿಸಬಹುದಾಗಿದೆ. ಇದು ಸಾರ್ವಜನಿಕ ಸಾರಿಗೆಗೆ ಪರ್ಯಾಯ ಆಯ್ಕೆ ಕಲ್ಪಿಸಲಿದೆ. ಸರ್ಕಾರವು ಉಬರ್‌ನ ಈ ಹೊಸ ಯೋಜನೆಗೆ ಅವಕಾಶ ನೀಡಬೇಕಿದೆ ಎಂದು ಕೋರಿದರು.

ನಿಧನ ವಾರ್ತೆ

ಜಯಮ್ಮ



ಜಯಮ್ಮ

ಬೆಂಗಳೂರು: ಗಿರಿನಗರ ನಿವಾಸಿ ದಿವಂಗತ ಬರ್ಮಾ ಕೇಶವುಲು ನಾಯ್ಡು ಅವರ ಪತ್ನಿ ಜಯಮ್ಮ (84) ಅವರು ವಯೋಸಹಜ ಅನಾರೋಗ್ಯದಿಂದ ಗುರುವಾರ ನಿಧನರಾದರು.

ಅವರಿಗೆ ಪುತ್ರರಾದ ಜಿ.ಕೆ. ರಮೇಶ್, ಜಿ.ಕೆ.ಕೃಷ್ಣಮೂರ್ತಿ ಹಾಗೂ ಪುತ್ರಿ ಲಕ್ಷ್ಮಿ, ಶೇಖರ್ ಇದ್ದಾರೆ. ಬನಶಂಕರಿ ಚಿತಾಗಾರದಲ್ಲಿ ಶುಕ್ರವಾರ ಮಧ್ಯಾಹ್ನ 1 ಗಂಟೆಗೆ ಅಂತ್ಯಕ್ರಿಯೆ ನೆರವೇರಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ. ಮಾಹಿತಿಗೆ 9880383940 ಸಂಪರ್ಕಿಸಬಹುದು.

ಡಾನಾ ಚಂಡಮಾರುತ: ರೈಲು ಸಂಚಾರ ರದ್ದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾನಾ ಚಂಡಮಾರುತದ ಕಾರಣಕ್ಕಾಗಿ ಪುರಿ–ಯಶವಂತಪುರ–ಪುರಿ, ಗುವಾಹಟಿ–ಎಸ್‌ಎಂವಿಟಿ ರೈಲುಗಳ ಸಂಚಾರವನ್ನು ರದ್ದು ಮಾಡಲಾಗಿದೆ.

ಅಕ್ಟೋಬರ್ 25ರಂದು ಪುರಿಯಿಂದ ಯಶವಂತಪುರಕ್ಕೆ ಹೊರಡುವ ಗರೀಬ್ ರಥ ಸಾಪ್ತಾಹಿಕ ರೈಲು ಅ.26ರಂದು ಯಶವಂತಪುರದಿಂದ ಪುರಿಗೆ ಹೊರಡುವ ಗರೀಬ್ ರಥ ಸಾಪ್ತಾಹಿಕ ರೈಲುಗಳ ಸಂಚಾರವನ್ನು ರದ್ದುಪಡಿಸಲಾಗಿದೆ. ಅ.27ರಂದು ಗುವಾಹಟಿಯಿಂದ ಬೆಂಗಳೂರು ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್‌ಗೆ ಹೊರಡುವ ಟ್ರೈ–ವೀಕ್ಲಿ ರೈಲುಗಳನ್ನು ಪೂರ್ವ ಕರಾವಳಿ ಮತ್ತು ಈಶಾನ್ಯ ಗಡಿ ರೈಲ್ವೆ ವಲಯವು ರದ್ದು ಪಡಿಸಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಮೈಸೂರು ಅರಮನೆ ಪ್ರವೇಶಕ್ಕೂ ಜಿಎಸ್‌ಟಿ

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಅಂಬಾವಿಲಾಸ ಅರಮನೆಯ ಪ್ರವೇಶ ಶುಲ್ಕವನ್ನು ಪರಿಷ್ಕರಿಸಿದ್ದು, ಟಿಕೆಟ್ ದರಕ್ಕೆ ಶೇ 18ರಷ್ಟು ಜಿಎಸ್‌ಟಿ (ಸರಕು ಸೇವಾ ತೆರಿಗೆ) ಸೇರಿಸಿ ಹೆಚ್ಚಿಸಲಾಗಿದೆ. ಇದು ಶುಕ್ರವಾರ (ಅ.25)ದಿಂದಲೇ ಜಾರಿಗೆ ಬರಲಿದೆ.

ಈಚೆಗೆ ನಡೆದ ಅರಮನೆ ಮಂಡಳಿಯ ಸಭೆಯಲ್ಲಿ ಈ ತೀರ್ಮಾನ ಕೈಗೊಳ್ಳಲಾಗಿದೆ. 'ವಯಸ್ಕರಿಗೆ ₹100 ರಿಂದ ₹120 ಹಾಗೂ 10ರಿಂದ 18 ವರ್ಷದೊಳಗಿನ ಮಕ್ಕಳಿಗೆ ₹ 50ರಿಂದ ₹70ಕ್ಕೆ (10 ವರ್ಷದೊಳಗಿನ ಮಕ್ಕಳಿಗೆ ಉಚಿತ) ಹೆಚ್ಚಿಸಲಾಗಿದೆ. ಶೈಕ್ಷಣಿಕ ಪ್ರವಾಸ ಕೈಗೊಳ್ಳುವ ಶಾಲಾ ಅಥವಾ ಕಾಲೇಜು ವಿದ್ಯಾರ್ಥಿಗಳಿಗೆ ರಿಯಾಯಿತಿ ದರ ₹50 (ಹಿಂದೆ ₹30 ಇತ್ತು) ನಿಗದಿಪಡಿಸಲಾಗಿದೆ. ವಿದೇಶಿ ಪ್ರವಾಸಿಗರಿಗೆ ₹1 ಸಾವಿರ ಶುಲ್ಕ ವಿಧಿಸಲು ಅನುಮೋದನೆ ದೊರೆತಿದೆ' ಎಂದು ಅರಮನೆ ಮಂಡಳಿಯ ಉಪ ನಿರ್ದೇಶಕ ಟಿ.ಎಸ್. ಸುಬ್ರಹ್ಮಣ್ಯ ತಿಳಿಸಿದರು.

'ಪ್ರವಾಸಿಗರು ಈಗ, ಪ್ರವೇಶ ಶುಲ್ಕವನ್ನಷ್ಟೆ ಪಾವತಿಸಿದರೆ ಸಾಕು. ಅರಮನೆ ಒಳಾವರಣದಲ್ಲಿ ಚಪ್ಪಲಿ ಸ್ಟಾಂಡ್, ಲಗೇಜ್ ಕೊಠಡಿ, ಶೌಚಾಲಯ ಬಳಕೆ ಉಚಿತವಾಗಿರಲಿದೆ. ಹಿಂದೆ ಇದಕ್ಕೆ ಶುಲ್ಕ ಪಾವತಿಸಬೇಕಾಗಿತ್ತು. ವಿದೇಶಿ ಪ್ರವಾಸಿಗರಿಗೆ ಹಿಂದಿನಿಂದಲೂ ₹100 ಇತ್ತು. ಇದನ್ನು ಈಗ ಹೆಚ್ಚಿಸಲಾಗಿದೆ' ಎಂದು ಮಾಹಿತಿ ನೀಡಿದರು.

ಬಾಬು ಸಾ ಪಾಳ್ಯದಲ್ಲಿ ಏಳು ಅಂತಸ್ತಿನ ಕಟ್ಟಡ ಕುಸಿತ ಪ್ರಕರಣ

ಇನ್ನೂ ಸಿಗದ ಉಪ ಗುತ್ತಿಗೆದಾರನ ಸುಳಿವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇಲ್ಲಿನ ಬಾಬು ಸಾ ಪಾಳ್ಯದ ಕಟ್ಟಡ ಕುಸಿದ ಸ್ಥಳದಲ್ಲಿ ಗುರುವಾರ ದಿನವಿಡೀ ಅವಶೇಷಗಳನ್ನು ತೆರವುಗೊಳಿಸಿ ರಕ್ಷಣಾ ಸಿಬ್ಬಂದಿ ಶೋಧ ನಡೆಸಿದರೂ ನಾಪತ್ತೆಯಾಗಿರುವ ಉಪ ಗುತ್ತಿಗೆದಾರ ಏಳುಮಲೈ ಅವರ ಸುಳಿವು ಲಭಿಸಲಿಲ್ಲ.

ಗುರುವಾರ ರಾತ್ರಿ ಎಂಟು ಗಂಟೆ ಸುಮಾರಿಗೆ ರಕ್ಷಣಾ ಸಿಬ್ಬಂದಿ ಕಾರ್ಯಾಚರಣೆ ಸ್ಥಗಿತಗೊಳಿಸಿದರು. ಶುಕ್ರವಾರ ಬೆಳಿಗ್ಗೆ ಮತ್ತೆ ಶೋಧ ಕಾರ್ಯ ಆರಂಭಿಸಲಿದ್ದಾರೆ.

ಕಟ್ಟಡ ಕುಸಿತ ದುರಂತದಲ್ಲಿ ಎಂಟು ಮಂದಿ ಮೃತಪಟ್ಟಿದ್ದು, ಅವರ ಮೃತದೇಹವನ್ನು ಹೊರಕ್ಕೆ ತೆಗೆಯಲಾಗಿದೆ. ಏಳುಮಲೈ ಹಾಗೂ ಗಜೇಂದ್ರ ಎಂಬುವರು ನಾಪತ್ತೆ ಆಗಿದ್ದಾರೆ ಎನ್ನುವ ಮಾಹಿತಿ ಆಧರಿಸಿ ಮೂರು ದಿನಗಳಿಂದ ಶೋಧ ಕಾರ್ಯ ನಡೆಸಲಾಗುತ್ತಿದೆ.

'ರಕ್ಷಣೆಯಾದ ಎಲ್ಲ ಸಹ ಕಾರ್ಮಿಕರನ್ನೂ ವಿಚಾರಣೆ ನಡೆಸಲಾಗಿದ್ದು, ಗಜೇಂದ್ರ ಹೆಸರಿನ ಕಾರ್ಮಿಕ ಕಟ್ಟಡದಲ್ಲಿ ಕೆಲಸ ಮಾಡುತ್ತಿರಲಿಲ್ಲ ಎಂಬುದು ಗೊತ್ತಾಗಿದೆ. ಸದ್ಯಕ್ಕೆ ಏಳುಮಲೈ ಅವರಿಗಾಗಿ ಶೋಧ ನಡೆಸಲಾಗುತ್ತಿದೆ. ಏಳುಮಲೈ ಅವರು ಬಳಸುತ್ತಿದ್ದ ಮೊಬೈಲ್ ರಿಂಗ್ ಆಗುತ್ತಿದೆ. ಲೊಕೇಷನ್ ಸಹ ಇದೇ ವ್ಯಾಪ್ತಿಯಲ್ಲಿ ಇದೆ' ಎಂದು ಮೂಲಗಳು ತಿಳಿಸಿವೆ.

ವ್ಯಕ್ತಿ ಓಡಿ ಹೋಗುತ್ತಿರುವ ದೃಶ್ಯ ಸೆರೆ: ಕಟ್ಟಡ ಕುಸಿಯುವ ಸಂದರ್ಭದಲ್ಲಿ ಉಂಟಾದ ಜೋರು ಶಬ್ದದಿಂದ ಎಚ್ಚೆತ್ತು ವ್ಯಕ್ತಿಯೊಬ್ಬ ಓಡಿ ಹೋಗುತ್ತಿರುವ ದೃಶ್ಯ ಪಕ್ಕದ ಮನೆಯ ಸಿಸಿಟಿವಿ ಕ್ಯಾಮೆರಾದಲ್ಲಿ ಸೆರೆಯಾಗಿದೆ. ಸೆರೆಯಾದ ದೃಶ್ಯದಲ್ಲಿರುವ ವ್ಯಕ್ತಿಯ ಚಹರೆ ಪತ್ತೆ ಆಗುತ್ತಿಲ್ಲ. ಕಟ್ಟಡ ಕುಸಿಯುವುದಕ್ಕೂ ಕೆಲವೇ ನಿಮಿಷಗಳ ಹಿಂದೆ ಏಳುಮಲೈ ಅವರು ಮೊಬೈಲ್ ಅನ್ನು ಕಟ್ಟಡದಲ್ಲಿಯೇ ಬಿಟ್ಟು ಹೊರಗೆ ತೆರಳಿರುವ ಸಾಧ್ಯತೆಯೂ ಇರಬಹುದು ಎಂದು ಪೊಲೀಸರು ಶಂಕೆ ವ್ಯಕ್ತಪಡಿಸಿದ್ದಾರೆ. 'ಅವಶೇಷಗಳನ್ನು ಸಂಪೂರ್ಣ ತೆರವುಗೊಳಿಸಿದ ಬಳಿಕವಷ್ಟೇ ಏಳುಮಲೈ ಅವರು ತಪ್ಪಿಸಿಕೊಂಡಿದ್ದಾರೆಯೇ ಅಥವಾ ಅವಶೇಷಗಳ ಅಡಿ ಸಿಲುಕಿಕೊಂಡಿದ್ದಾರೆಯೇ ಎಂಬುದು ತಿಳಿಯಲಿದೆ' ಎಂದು ಪೊಲೀಸರು ಹೇಳಿದರು.

'ಆರಂಭಿಕ ಹಂತದಲ್ಲಿ ಮುನಿಯಪ್ಪ ಗುತ್ತಿಗೆ ಪಡೆದುಕೊಂಡಿದ್ದರು. ಮಾಲೀಕ ಮುನಿರೆಡ್ಡಿ ಹಾಗೂ ಮೊದಲನೇ ಗುತ್ತಿಗೆದಾರರ ಮಧ್ಯೆ ಭಿನ್ನಾಭಿಪ್ರಾಯ ಉಂಟಾಗಿ ಏಳುಮಲೈ ಅವರಿಗೆ ಉಪ ಗುತ್ತಿಗೆ ನೀಡಲಾಗಿತ್ತು. ಗುತ್ತಿಗೆ ಕೆಲಸದ ಜತೆಗೆ ಕಾರ್ಮಿಕರನ್ನು ಕರೆತರುವ ಜವಾಬ್ದಾರಿಯನ್ನೂ ಏಳುಮಲೈ ನಿಭಾಯಿಸುತ್ತಿದ್ದರು. ಏಳುಮಲೈ ವಿರುದ್ಧವೂ ಹೆಣ್ಣೂರು ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಮುನಿರೆಡ್ಡಿ ಅವರು ಅನಾರೋಗ್ಯಕ್ಕೆ ಒಳಗಾಗಿದ್ದು, ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ದಾಖಲಾಗಿದ್ದಾರೆ. ಅವರ ಪುತ್ರ ಭುವನ್ ರೆಡ್ಡಿ ಹಾಗೂ ಮುನಿಯಪ್ಪ ಅವರನ್ನು ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ ನ್ಯಾಯಾಲಯಕ್ಕೆ ಹಾಜರು ಪಡಿಸಲಾಯಿತು. ನ್ಯಾಯಾಲಯವು ಆರೋಪಿಗಳನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.



ಬೆಂಗಳೂರಿನ ಬಾಬು ಸಾ ಪಾಳ್ಯದಲ್ಲಿ ನಿರ್ಮಾಣ ಹಂತದ ಕಟ್ಟಡ ಕುಸಿದ ಸ್ಥಳದಲ್ಲಿ ರಕ್ಷಣಾ ಸಿಬ್ಬಂದಿ ಗುರುವಾರ ಕಾರ್ಯಾಚರಣೆ ನಡೆಸಿದರು
ಪ್ರಜಾವಾಣಿ ಚಿತ್ರ/ ಎಂ.ಎಸ್.ಮಂಜುನಾಥ್

ಮೃತರ ಕುಟುಂಬಕ್ಕೆ ತಲಾ ₹7 ಲಕ್ಷ

ಬಾಬು ಸಾ ಪಾಳ್ಯದಲ್ಲಿ ಕಟ್ಟಡ ಕುಸಿತದಿಂದ ಮೃತಪಟ್ಟವರ ಕುಟುಂಬದವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಲಾ ₹5 ಲಕ್ಷ ಹಾಗೂ ಪ್ರಧಾನಿ ನರೇಂದ್ರ ಮೋದಿ ಅವರು ತಲಾ ₹2 ಲಕ್ಷ ಪರಿಹಾರ ಘೋಷಿಸಿದ್ದಾರೆ.

ಮೃತಪಟ್ಟವರ ಮತ್ತು ಗಾಯಗೊಂಡವರ ಕುಟುಂಬದವರನ್ನು ಭೇಟಿ ಮಾಡಿ ಸಾಂತ್ವನ ಹೇಳಿದ ಸಿದ್ದರಾಮಯ್ಯ, ಆಸ್ಪತ್ರೆಗೆ ತೆರಳಿ ಗಾಯಾಳುಗಳ ಚಿಕಿತ್ಸೆ ಬಗ್ಗೆ ವೈದ್ಯರಿಂದ ಮಾಹಿತಿ ಪಡೆದರು. ಅಗತ್ಯವೆನಿಸಿದರೆ ಯಾವುದೇ ಉನ್ನತ ಚಿಕಿತ್ಸೆಗೆ ವ್ಯವಸ್ಥೆ ಕಲ್ಪಿಸಲು ಸೂಚಿಸಿದರು.

ಕಾರ್ಮಿಕ ಇಲಾಖೆಯಿಂದ ತಲಾ ₹3 ಲಕ್ಷ, ಬಿಬಿಎಂಪಿಯಿಂದ ತಲಾ ₹2 ಲಕ್ಷ ಪರಿಹಾರವನ್ನು ಮೃತರ ಕುಟುಂಬಕ್ಕೆ ನೀಡಲಾಗುತ್ತದೆ. ಗಾಯಗೊಂಡವರ ಚಿಕಿತ್ಸೆ ವೆಚ್ಚವನ್ನು ಸಂಪೂರ್ಣವಾಗಿ ಸರ್ಕಾರದಿಂದಲೇ ಭರಿಸಲಾಗುವುದು. ಗಾಯಗೊಂಡವರಿಗೂ ಪರಿಹಾರ ನೀಡಲಾಗುತ್ತದೆ. ಅದನ್ನು ಮುಂದಿನ ದಿನಗಳಲ್ಲಿ ನಿರ್ಧರಿಸಿ ಆದೇಶಿಸಲಾಗುತ್ತದೆ ಎಂದರು.

ದುರಂತದಲ್ಲಿ ಗಾಯಗೊಂಡ ಕಾರ್ಮಿಕರಿಗೆ ಮೋದಿ ತಲಾ ₹50,000 ಪರಿಹಾರ ಪ್ರಕಟಿಸಿದ್ದಾರೆ.

ಸುದ್ದಿ 2 ನಿಮಿಷ

ನಾಗೇಂದ್ರಗೆ ತುರ್ತು ನೋಟಿಸ್

ಬೆಂಗಳೂರು: 'ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಬ್ಯಾಂಕ್ ಖಾತೆಯಿಂದ ಅಕ್ರಮವಾಗಿ ₹95 ಕೋಟಿ ವರ್ಗಾವಣೆ ಮಾಡಲಾಗಿದೆ' ಎಂಬ ಪ್ರಕರಣದಲ್ಲಿ; ಮಾಜಿ ಸಚಿವ ಬಿ.ನಾಗೇಂದ್ರ ಜಾಮೀನು ರದ್ದು ಪಡಿಸುವಂತೆ ಕೋರಲಾದ ಅರ್ಜಿಗೆ ಸಂಬಂಧಿಸಿದಂತೆ ನಾಗೇಂದ್ರ ಅವರಿಗೆ ತುರ್ತು ನೋಟಿಸ್ ಜಾರಿಗೊಳಿಸಲು ಹೈಕೋರ್ಟ್ ಆದೇಶಿಸಿದೆ.

ಈ ಸಂಬಂಧ ಜಾರಿ ನಿರ್ದೇಶನಾಲಯ (ಇ.ಡಿ) ಸಲ್ಲಿಸಿರುವ ಕ್ರಿಮಿನಲ್ ಅರ್ಜಿಯನ್ನು ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಇ.ಡಿ ಪರ ಖುದ್ದು ಹಾಜರಾಗಿದ್ದ ಸುಪ್ರೀಂ ಕೋರ್ಟ್‌ನ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್. ವಿ.ರಾಜು, 'ಈ ಪ್ರಕರಣದಲ್ಲಿ ನಾಗೇಂದ್ರ ಅವರು ಬಹುಕೋಟಿ ಮೊತ್ತವನ್ನು ಅಕ್ರಮವಾಗಿ ವರ್ಗಾವಣೆ ಮಾಡಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ ಮತ್ತು ಈ ಕುರಿತಂತೆ ಇ.ಡಿ ಸಾಕಷ್ಟು ಸಾಕ್ಷ್ಯಗಳನ್ನು ತನಿಖೆಯ ವೇಳೆ ಪತ್ತೆ ಮಾಡಿದೆ. ಹಣ ಅಕ್ರಮ ವರ್ಗಾವಣೆ ಕಾಯ್ದೆ-2002ರ (ಪಿಎಂಎಲ್‌ಎ) ಕಲಂ 45ರ ಅನುಸಾರ ಆರೋಪಿಗೆ ಜಾಮೀನು ನೀಡಲು ಸಾಧ್ಯವಿಲ್ಲ. ಹಾಗಾಗಿ, ನಾಗೇಂದ್ರ ಅವರಿಗೆ ವಿಚಾರಣಾ ನ್ಯಾಯಾಲಯ ನೀಡಿರುವ ಜಾಮೀನು ಆದೇಶವನ್ನು ರದ್ದುಪಡಿಸಬೇಕು' ಎಂದು ಕೋರಿದರು.

ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ನಾಗೇಂದ್ರ ಅವರಿಗೆ ತುರ್ತು ನೋಟಿಸ್ ಜಾರಿಗೆ ಆದೇಶಿಸಿ ವಿಚಾರಣೆಯನ್ನು ನವೆಂಬರ್ 15ಕ್ಕೆ ಮುಂದೂಡಿತು. ಇ.ಡಿ ಪರ ಹೈಕೋರ್ಟ್ ವಕೀಲ ಪಿ.ಪ್ರಸನ್ನ ಕುಮಾರ್ ಹಾಜರಿದ್ದರು.

ನಾಗೇಂದ್ರ ಜಾಮೀನು ಅರ್ಜಿಯನ್ನು, 'ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ'ಯ ವಿಶೇಷ ಕೋರ್ಟ್‌ನ ನ್ಯಾಯಾಧೀಶ ಸಂತೋಷ ಗಜಾನನ ಭಟ್ ಇದೇ 10ರಂದು ಪುರಸ್ಕರಿಸಿ ಷರತ್ತುಬದ್ಧ ಜಾಮೀನು ಮಂಜೂರು ಮಾಡಿದ್ದರು.



'ಗಾಳಿಪಟಗಳಿಗೆ ಮಾಂಜಾ ದಾರ ಬಳಸುವಂತಿಲ್ಲ'

ಬೆಂಗಳೂರು: ಗಾಳಿಪಟಗಳನ್ನು ಹಾರಿಸುವ ಸಂಬಂಧ ರಾಜ್ಯ ಸರ್ಕಾರ ಮಾರ್ಗಸೂಚಿಯೊಂದನ್ನು ಹೊರಡಿಸಿದ್ದು, ಗಾಳಿಪಟಗಳಿಗೆ ಹತ್ತಿಯಿಂದ ಮಾಡಿದ ದಾರಗಳನ್ನು ಮಾತ್ರ ಬಳಸಬೇಕು ಎಂದು ಸೂಚಿಸಿದೆ.

ಯಾವುದೇ ವ್ಯಕ್ತಿ, ಅಂಗಡಿಗಳು, ಸಗಟು ಮತ್ತು ಚಿಲ್ಲರೆ ಮಾರಾಟಗಾರರು, ನೈಲಾನ್ ಮತ್ತು ಗಾಜು ಮತ್ತಿತರ ಅಪಾಯಕಾರಿ ವಸ್ತುಗಳನ್ನು ಬಳಸಿ ಚೀನಿ ಮಾಂಜಾ, ಚೀನಿ ದಾರಗಳನ್ನು ತಯಾರು ಮಾಡುವುದು, ದಾಸ್ತಾನು ಮಾಡುವುದು ಹಾಗೂ ಮಾರಾಟ ಮಾಡುವುದನ್ನು ನಿಷೇಧಿಸಲಾಗಿದೆ. ಇವುಗಳನ್ನು ಗಾಳಿಪಟಗಳಿಗೆ ಬಳಸುವಂತಿಲ್ಲ ಎಂದು ಹೇಳಿದೆ.

ಹತ್ತಿಯಿಂದ ಮಾಡಿದ ದಾರಗಳಿಗೂ ಹರಿತ, ಲೋಹ ಅಥವಾ ಗಾಜಿನ ವಸ್ತುಗಳನ್ನು ಬಳಸುವಂತಿಲ್ಲ ಎಂದು ರಾಜ್ಯ ಸರ್ಕಾರ ಹೊರಡಿಸಿರುವ ಅಧಿಸೂಚನೆಯಲ್ಲಿ ಸ್ಪಷ್ಟಪಡಿಸಿದೆ.

ಕೊಡಗಿನ ಕೆಲವೆಡೆ ಭಾರಿ ಮಳೆ • ರಾಮನಗರದಲ್ಲಿ ಜಾರಿದ ಬಂಡೆ

ನಾಗಮಂಗಲ: ಕೊಚ್ಚಿಹೋದ ಕಚ್ಚಾ ರಸ್ತೆ

ಪ್ರಜಾವಾಣಿ ವಾರ್ತೆ

ಮೈಸೂರು: ಮೈಸೂರು ಭಾಗದ ಕೊಡಗಿನಲ್ಲಿ ಮಳೆ ಮುಂದುವರಿದಿದ್ದು, ಉಳಿದ ಜಿಲ್ಲೆಗಳಲ್ಲಿ ಕಡಿಮೆಯಾಗಿದೆ. ಹಲವೆಡೆ ಮನೆಯ ಗೋಡೆಗಳು ಕುಸಿಯುತ್ತಿವೆ. ಮಡಿಕೇರಿ, ಸುಂಟಿಕೊಪ್ಪ ಹಾಗೂ ಗೋಣಿಕೊಪ್ಪಲು ವ್ಯಾಪ್ತಿಯಲ್ಲಿ ಗುರುವಾರ ಭಾರಿ ಮಳೆಯಾಗಿದೆ. ಮಂಡ್ಯ ಜಿಲ್ಲೆಯ ನಾಗಮಂಗಲ ತಾಲ್ಲೂಕಿನ ಮಾಚನಾಯಕನಹಳ್ಳಿ ತೊರೆಯ ಹಳ್ಳದ ಚೆಕ್ ಡ್ಯಾಂಗೆ ಹೆಚ್ಚಿನ ನೀರು ಹರಿದು ಇರಕನಘಟ್ಟ ಸಂಪರ್ಕ ರಸ್ತೆ ಕೊಚ್ಚಿ ಹೋಗಿದೆ.

ಗೋಣಿಕೊಪ್ಪಲಿನಲ್ಲಿ ಪ್ರಾಥಮಿಕ–ಪ್ರೌಢಶಾಲಾ ಹಂತದ ಮೈಸೂರು ವಿಭಾಗ ಮಟ್ಟದ ಹಾಕಿ ಪಂದ್ಯಾವಳಿ ನಡೆಯುತ್ತಿದ್ದ ಪೊನ್ನಂಪೇಟೆ ಕರ್ನಾಟಕ ಪಬ್ಲಿಕ್ ಶಾಲೆಯ ಟರ್ಫ್ ಮೈದಾನವನ್ನು ಆವರಿಸಿದ್ದ ನೀರನ್ನು ಹೊರಹಾಕಲು ಆಯೋಜಕರು ಪರದಾಡಿದರು. ಶನಿವಾರ ಸಂತೆಯಲ್ಲಿ ಬುಧವಾರ ರಾತ್ರಿ ಮತ್ತು ಗುರುವಾರ ಸಂಜೆ ಭಾರಿ ಮಳೆಯಾಗಿದೆ. ಸುಂಟಿಕೊಪ್ಪದಲ್ಲಿ ಮನೆಗಳಿಗೆ ನೀರು ನುಗ್ಗಿತ್ತು. ಹೊಸ ಬಡಾವಣೆಗಳಿಂದ ಕೆಸರು ಮಿಶ್ರಿತ ನೀರು ಹರಿದು ಸಂಚಾರ ಅಸ್ತವ್ಯಸ್ತಗೊಂಡಿತ್ತು. 'ಕ್ರಮ ಕೈಗೊಳ್ಳಲಿಲ್ಲ' ಎಂದು ದೂರಿ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ ವಿ.ಜಿ.ಲೋಕೇಶ್ ವಿರುದ್ಧ ಸಾರ್ವಜನಿಕರು ಅಸಮಾಧಾನ ವ್ಯಕ್ತಪಡಿಸಿದರು. ಮೈಸೂರು ಜಿಲ್ಲೆ ತಿ.ನರಸೀಪುರ ತಾಲ್ಲೂಕಿನ ತಲಕಾಡಿನ 3ನೇ ವಾರ್ಡ್ ನಿವಾಸಿ ರತ್ನಮ್ಮ ಅವರ ಮನೆ ಗೋಡೆ ಬುಧವಾರ, ನಂಜನಗೂಡು ತಾಲ್ಲೂಕಿನ ನಗರ್ಲೆಯಲ್ಲಿ ಜವನಮ್ಮ ಅವರ ಮನೆಯ ಗೋಡೆ ಗುರುವಾರ ಕುಸಿದಿದೆ.

ಮನೆಗೆ ಅಪ್ಪಳಿಸಿದ ಬಂಡೆ (ರಾಮನಗರ ವರದಿ): ನಗರದಲ್ಲಿ ಬುಧವಾರ ತಡರಾತ್ರಿ ಸುರಿದ ಮಳೆಯಿಂದ ಇಲ್ಲಿಯ ಯಾರಬ್ ನಗರದ ಗೆಜ್ಜಲಗುಡ್ಡೆಯಲ್ಲಿ ದೊಡ್ಡ ಬಂಡೆಯೊಂದು ಜಾರಿ ಮನೆಯ ಗೋಡೆಗೆ ಅಪ್ಪಳಿಸಿದೆ. ಮಹಮ್ಮದ್ ಗೌಸ್ ಎಂಬುವರ ಮನೆಯ ಮೇಲ್ಭಾಗದದ್ದ ಬಂಡೆ ಬೆಳಗಿನ ಜಾವ ಜಾರಿ ಗೋಡೆಗೆ ಅಪ್ಪಳಿಸಿದೆ. ಅಪ್ಪಳಿಸಿದ ರಸಭಕ್ಕೆ ಗೋಡೆ ಕುಸಿದು ಮನೆಯೊಳಗೆ ಮಲಗಿದ್ದವರ ಮೇಲೆ ಬಿದ್ದಿದೆ. ಘಟನೆಯಲ್ಲಿ ಐವರು ಗಾಯಗೊಂಡಿದ್ದಾರೆ.



ಮಂಡ್ಯ ಜಿಲ್ಲೆ ನಾಗಮಂಗಲ ತಾಲ್ಲೂಕಿನ ಮಾಚನಾಯಕನಹಳ್ಳಿ–ಇರಕನಘಟ್ಟ ಸಂಪರ್ಕ ಕಲ್ಪಿಸುವ ಕಚ್ಚಾ ರಸ್ತೆಯು ಕೊಚ್ಚಿ ಹೋಗಿದೆ

ಗಡಿಯಾರ ಚಿಹ್ನೆ: ಸೂಚನೆ ಪಾಲಿಸಲು ತಾಕೀತು

ನವದೆಹಲಿ: 'ಗಡಿಯಾರ'ವನ್ನು ಪಕ್ಷದ ಚಿಹ್ನೆಯಾಗಿ ತಾನು ಬಳಸಿಕೊಳ್ಳುವುದು ನ್ಯಾಯಾಲಯದ ಪರಿಶೀಲನೆಯಲ್ಲಿದೆ, ಅದು ನ್ಯಾಯಾಲಯ ನೀಡುವ ಅಂತಿಮ ತೀರ್ಪಿಗೆ ಒಳಪಟ್ಟಿದೆ ಎಂಬ ಸಂಗತಿಯನ್ನು ವಿಧಾನಸಭಾ ಚುನಾವಣೆಯ ಸಂದರ್ಭದಲ್ಲಿ ಪ್ರಚಾರ ಕರಪತ್ರಗಳಲ್ಲಿ ಸ್ಪಷ್ಟಪಡಿಸುವಂತೆ ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿಗೆ ಸುಪ್ರೀಂ ಕೋರ್ಟ್ ಗುರುವಾರ ಸೂಚನೆ ನೀಡಿದೆ.

ಚಿಹ್ನೆಯ ಬಳಕೆಯ ವಿಚಾರವಾಗಿ ಸುಪ್ರೀಂ ಕೋರ್ಟ್ ಈ ಹಿಂದೆ ನೀಡಿರುವ ಸೂಚನೆಗಳನ್ನು ಅಜಿತ್ ಪವಾರ್ ಬಣ ಉಲ್ಲಂಘಿಸುತ್ತಿದೆ ಎಂದು ದೂರಿ ಶರದ್ ಪವಾರ್ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ಪೀಠವು ನಡೆಸಿತು.

ಮುಡಾ: ಬಚ್ಚೇಗೌಡ ಹೇಳಿಕೆ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದಲ್ಲಿ (ಮುಡಾ) ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಪತ್ನಿಗೆ ಬದಲಿ ನಿವೇಶನ ಹಂಚಿಕೆ ಮಾಡಿರುವುದರಲ್ಲಿ ಅಕ್ರಮ ನಡೆದಿದೆ ಎಂಬ ಆರೋಪದ ಕುರಿತು ತನಿಖೆ ನಡೆಸುತ್ತಿರುವ ಲೋಕಾಯುಕ್ತ ಪೊಲೀಸರು, ಮಾಜಿ ಸಚಿವ ಬಿ.ಎನ್. ಬಚ್ಚೇಗೌಡ ಅವರ ಮನೆಗೆ ಗುರುವಾರ ಭೇಟಿನೀಡಿ ಹೇಳಿಕೆ ದಾಖಲಿಸಿಕೊಂಡರು.

ಜೆ.ಎಚ್. ಪಟೇಲ್ ಸಂಪುಟದಲ್ಲಿ ವಸತಿ ಮತ್ತು ನಗರಾಭಿವೃದ್ಧಿ ಸಚಿವರಾಗಿದ್ದ ಬಚ್ಚೇಗೌಡ ಅವರು ಮೈಸೂರಿನ ಕೆಸರೆ ಗ್ರಾಮದಲ್ಲಿ ಮುಡಾ ಸ್ವಾಧೀನಪಡಿಸಿಕೊಂಡಿದ್ದ 3 ಎಕರೆ 16 ಗುಂಟೆ ಜಮೀನನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡುವುದಕ್ಕೆ ಸಂಬಂಧಿಸಿದ ಕಡತವನ್ನು ಅನುಮೋದಿಸಿದ್ದರು. ಈ ಕಾರಣಕ್ಕಾಗಿ ಅವರ ವಿಚಾರಣೆ ನಡೆಸಲಾಗಿದೆ ಎಂದು ಲೋಕಾಯುಕ್ತದ ಮೂಲಗಳು ತಿಳಿಸಿವೆ.

ಬಚ್ಚೇಗೌಡ ಅವರಿಗೆ ವಯಸ್ಸಾಗಿರುವ ಕಾರಣದಿಂದ ಅವರಿಗೆ ತನಿಖಾ ತಂಡ ನೋಟಿಸ್ ಜಾರಿಗೊಳಿಸಿರಲಿಲ್ಲ. ಲೋಕಾಯುಕ್ತದ ಮೈಸೂರು ಎಸ್‌ಪಿ ಉದೇಶ್ ಟಿ.ಜೆ. ನೇತೃತ್ವದ ತಂಡವು ಲಾಲ್‌ಬಾಗ್ ಸಮೀಪದಲ್ಲಿರುವ ಮಾಜಿ ಸಚಿವರ ಮನೆಗೆ ಭೇಟಿ ನೀಡಿ, ಹೇಳಿಕೆ ದಾಖಲಿಸಿಕೊಂಡಿತು.

'ಕೆಸರೆ ಗ್ರಾಮದ ಜಮೀನನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡುವಂತೆ ಆಗ ಯಾರಾದರೂ ಒತ್ತಡ ಹೇರಿದ್ದರೆ? ಈಗ ಪ್ರಕರಣದ ತನಿಖೆಯ ಸಂಬಂಧ ಯಾರಾದರೂ ನಿಮ್ಮನ್ನು ಸಂಪರ್ಕಿಸಿ ಒತ್ತಡ ಹೇರಿದ್ದಾರೆಯೆ?' ಎಂಬ ಪ್ರಶ್ನೆಗಳನ್ನು ತನಿಖಾ ತಂಡವು ಬಚ್ಚೇಗೌಡರಿಗೆ ಕೇಳಿ, ಉತ್ತರ ಪಡೆದಿದೆ ಎಂದು ಮೂಲಗಳು ಹೇಳಿವೆ.

'ಕೆಸರೆ ಗ್ರಾಮದ 3 ಎಕರೆ 16 ಗುಂಟೆ ಜಮೀನನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಕೈಬಿಡುವಂತೆ ಕೋರಿ ಟಪಾಲಿನಲ್ಲಿ ಅರ್ಜಿ ಸಲ್ಲಿಸಲಾಗಿತ್ತು. ವಸತಿ ಮತ್ತು ನಗರಾಭಿವೃದ್ಧಿ ಸಚಿವನಾಗಿದ್ದ ಕಾರಣದಿಂದ ಸಹಜವಾಗಿಯೇ ನನ್ನ ಬಳಿ ಆ ಕಡತ ಬಂದಿತ್ತು. ಕಾನೂನು ಪ್ರಕಾರ ಕ್ರಮ ಕೈಗೊಳ್ಳುವಂತೆ ಸೂಚಿಸಿದ್ದೆ. ಆಗ ಯಾರೂ ನನ್ನ ಮೇಲೆ ಪ್ರಭಾವ ಬೀರಿರಲಿಲ್ಲ. ಈಗಲೂ ಯಾರೂ ಒತ್ತಡ ಹೇರಿಲ್ಲ' ಎಂಬ ಉತ್ತರವನ್ನು ಅವರು ನೀಡಿದ್ದಾರೆ ಎಂದು ಗೊತ್ತಾಗಿದೆ.

ಲೋಕಾಯುಕ್ತ ಪೊಲೀಸರಿಂದ ಪಾಲಯ್ಯ ವಿಚಾರಣೆ

ಮೈಸೂರು: ನಿವೃತ್ತ ಐಎಎಸ್ ಅಧಿಕಾರಿ ಎಸ್. ಪಾಲಯ್ಯ ಗುರುವಾರ ಇಲ್ಲಿನ ಲೋಕಾಯುಕ್ತ ಎಸ್.ಪಿ. ಕಚೇರಿಯಲ್ಲಿ ವಿಚಾರಣೆಗೆ ಹಾಜರಾದರು.

ಅವರು 2004-05ರಲ್ಲಿ ಮೈಸೂರಿನ ಹೆಚ್ಚುವರಿ ಜಿಲ್ಲಾಧಿಕಾರಿ ಹಾಗೂ ಕೆಲ ಕಾಲ ಮುಡಾ ಆಯುಕ್ತರಾಗಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಬಾಮೈದ ಮಲ್ಲಿಕಾರ್ಜುನ ಸ್ವಾಮಿ ಅವರು ದೇವರಾಜು ಅವರಿಂದ ಕೆಸರೆ ಗ್ರಾಮದ ಸರ್ವೆ ಸಂಖ್ಯೆ 464ರಲ್ಲಿನ ಜಮೀನು ಖರೀದಿಸಿದ ವೇಳೆ ಜಮೀನು ಪರಭಾರೆ, ಖಾತೆ ಸೇರಿದಂತೆ ಕೆಲವು ಕಡತಗಳಿಗೆ ಸಹಿ ಮಾಡಿದ್ದರು.

ಮುಡಾ ನಿವೇಶನ ಹಂಚಿಕೆ ಪ್ರಕರಣದ ತನಿಖೆ ನಡೆಸುತ್ತಿರುವ ಲೋಕಾಯುಕ್ತ ಎಸ್. ಪಿ. ಟಿ.ಜೆ. ಉದೇಶ್ ನೇತೃತ್ವದ ತಂಡವು ಅವರನ್ನು ವಿಚಾರಣೆಗೆ ಒಳಪಡಿಸಿತು. ನಂತರ ಮಾಧ್ಯಮಗಳಿಗೆ ಪ್ರತಿಕ್ರಿಯಿಸಿದ ಪಾಲಯ್ಯ, 'ಅಧಿಕಾರಿಗಳು ಮೊದಲ ನೋಟಿಸ್ ಕೊಟ್ಟಾಗ ಅನ್ಯ ಕಾರ್ಯಗಳ ನಿಮಿತ್ತ ಹಾಜರಾಗಲು ಆಗಿರಲಿಲ್ಲ. ಜಮೀನಿನ ವಿಚಾರದಲ್ಲಿ ನಾನು ಸಹಿ ಮಾಡಿದ ಕಡತಗಳಿಗೆ ಸಂಬಂಧಿಸಿ ಅಧಿಕಾರಿಗಳ ಪ್ರಶ್ನೆಗಳಿಗೆ ಉತ್ತರಿಸಿದ್ದೇನೆ' ಎಂದರು.

ಮುಡಾದಿಂದ ನಿಯಮಾನುಸಾರ ಭೂಪರಿವರ್ತನೆ



ಜಿ.ಕುಮಾರ ನಾಯಕ

ರಾಯಚೂರು: 'ಮುಡಾ ಪ್ರಕರಣದ ವಿವಾದಿತ ಜಮೀನು ಪರಿವರ್ತನೆ ನಿಯಮಾನುಸಾರ ಮಾಡಲಾಗಿದ್ದು, ಲೋಕಾಯುಕ್ತರಿಗೂ ಈ ಬಗ್ಗೆ ಸಂಪೂರ್ಣ ಮಾಹಿತಿ ಕೊಡಲಾಗಿದೆ' ಎಂದು ಸಂಸದ ಜಿ.ಕುಮಾರ ನಾಯಕ ತಿಳಿಸಿದರು.

'ಮುಡಾ ವಿವಾದಿತ ಜಮೀನು ಪ್ರಕರಣಕ್ಕೆ ಸಂಬಂಧಿಸಿದಂತೆ ಮೈಸೂರಿನಲ್ಲಿ ಒಂದು ಗಂಟೆಗೂ ಹೆಚ್ಚು ಸಮಯ ಲೋಕಾಯುಕ್ತ ಪೊಲೀಸರು ನನ್ನನ್ನು ವಿಚಾರಣೆಗೆ ಒಳಪಡಿಸಿ ಅನೇಕ ಪ್ರಶ್ನೆಗಳನ್ನು ಕೇಳಿದ್ದಾರೆ' ಎಂದು ಗುರುವಾರ ಮಾಧ್ಯಮ ಪ್ರತಿನಿಧಿಗಳಿಗೆ ಪ್ರತಿಕ್ರಿಯಿಸಿದರು.

'2002ರಿಂದ 2005ರವರೆಗೆ ಮೈಸೂರಿನಲ್ಲಿ ಜಿಲ್ಲಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದೆ. 1998ರಲ್ಲಿ ಭೂ ಅಧಿಸೂಚನೆ ಹೊರಡಿಸಲಾಗಿದೆ. ಅಂತಿಮ ನೋಟಿಫಿಕೇಷನ್ ಆದ 45 ದಿನಗಳ ಬಳಿಕ ಡಿನೋಟಿಫಿಕೇಷನ್ ಆಗಿದೆ. ಆರು ವರ್ಷಗಳ ನಂತರ ಜಿಲ್ಲಾಧಿಕಾರಿಯಿಂದ ಲೋಪವಾಗಿದೆ ಎನ್ನುವ ಆರೋಪದಲ್ಲಿ ಹುರುಳಿಲ್ಲ' ಎಂದರು.'ಲೋಕಾಯುಕ್ತರ ವಿಚಾರಣೆ ವೇಳೆ ಎಲ್ಲ ಮಾಹಿತಿ ನೀಡಿದ್ದೇನೆ. ನನ್ನ ಅಧಿಕಾರ ಅವಧಿಯಲ್ಲಿ ಕಡತಗಳನ್ನು ಸಮರ್ಪಕವಾಗಿ ನಿರ್ವಹಣೆ ಮಾಡಿದ್ದೇನೆ' ಎಂದರು.

ಗ್ರಾಮ ಆಡಳಿತ ಅಧಿಕಾರಿ ನೇಮಕಾತಿ ಪರೀಕ್ಷೆಗೆ ಕಟ್ಟೆಚ್ಚರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮ ಆಡಳಿತ ಅಧಿಕಾರಿಗಳ ನೇಮಕಾತಿಗಾಗಿ ಇದೇ ಭಾನುವಾರ ಪರೀಕ್ಷೆ ನಡೆಯಲಿದೆ. ಈ ಪರೀಕ್ಷೆಯಲ್ಲಿ ಯಾವ ಅಕ್ರಮಗಳೂ ನಡೆಯದಂತೆ ಎಚ್ಚರಿಕೆ ವಹಿಸಬೇಕು ಎಂದು ಜಿಲ್ಲಾಧಿಕಾರಿಗಳು ಮತ್ತು ಎಸ್ಪಿಗಳಿಗೆ ಕಂದಾಯ ಸಚಿವ ಕೃಷ್ಣ ಬೈರೇಗೌಡ ಸೂಚಿಸಿದ್ದಾರೆ.

ಈ ಸಂಬಂಧ ಅವರು ಜಿಲ್ಲಾಧಿಕಾರಿಗಳು ಮತ್ತು ಎಸ್ಪಿಗಳ ಜತೆಗೆ ಗುರುವಾರ ವಿಡಿಯೊ ಸಂವಾದ ನಡೆಸಿ ಸೂಚನೆಗಳನ್ನು ನೀಡಿದರು.

ಈ ಹಿಂದೆ ಕರ್ನಾಟಕ ಲೋಕಸೇವಾ ಆಯೋಗ ಹಾಗೂ ಕರ್ನಾಟಕ ಪರೀಕ್ಷಾ ಪ್ರಾಧಿಕಾರ ನಡೆಸಿರುವ ಕೆಲವು ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಅಕ್ರಮ ನಡೆದಿರುವುದು ಕಂಡುಬಂದಿದೆ. ಪಿಎಸ್ಐ ಪರೀಕ್ಷೆಯಲ್ಲಿ ನಡೆದ ಅಕ್ರಮ ಇಡೀ ವ್ಯವಸ್ಥೆಯೇ ತಲೆ ತಗ್ಗಿಸುವಂತಹ ಕೃತ್ಯವಾಗಿದೆ. ಗ್ರಾಮ ಆಡಳಿತ ಅಧಿಕಾರಿಗಳ ಪರೀಕ್ಷೆಯಲ್ಲಿ ಇಂತಹ ಯಾವುದೇ ಅಕ್ರಮಗಳಿಗೂ ಅಧಿಕಾರಿಗಳು ಅವಕಾಶ ನೀಡಬಾರದು ಎಂದು ಸಚಿವರು ತಾಕೀತು ಮಾಡಿದರು.

ಈ ಬಾರಿ ಒಟ್ಟು 4.71 ಲಕ್ಷ ಅಭ್ಯರ್ಥಿಗಳು ಪರೀಕ್ಷೆ ಬರೆಯುತ್ತಿದ್ದಾರೆ. ಈ ಹಿಂದೆ ಮೂರು ಲಕ್ಷ ಅಭ್ಯರ್ಥಿಗಳು ಪರೀಕ್ಷೆ ಬರೆದಿದ್ದರು. ಕೆಲವು ಜಿಲ್ಲೆಗಳಲ್ಲಿ ಕನಿಷ್ಠ 40 ಕೇಂದ್ರಗಳಲ್ಲಿ ಪರೀಕ್ಷೆ ನಡೆದರೆ, ಇನ್ನೂ ಕೆಲವು ಜಿಲ್ಲೆಗಳಲ್ಲಿ ಗರಿಷ್ಠ 86 ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ ಎಂದರು.

ಹಾಸನಾಂಬ ದರ್ಶನೋತ್ಸವ ಆರಂಭ

ಪ್ರಜಾವಾಣಿ ವಾರ್ತೆ

ಹಾಸನ: ಜಿಲ್ಲೆಯ ಅಧಿದೇವತೆ ಹಾಸನಾಂಬ ದೇಗುಲದ ದರ್ಶನೋತ್ಸವ ಗುರುವಾರ ವಿಧ್ಯುಕ್ತವಾಗಿ ಆರಂಭವಾಯಿತು.

ಸಂಪ್ರದಾಯದಂತೆ, ತಳವಾರ ವಂಶದ ನರಸಿಂಹರಾಜ್ ಅರಸ್ ಅವರು ಮಧ್ಯಾಹ್ನ 12.10 ಕ್ಕೆ ಬಾಳೆ ಕಂದು ಕಡಿದು ಬಾಗಿಲು ತೆರೆಯಲು ಅನುವು ಮಾಡಿಕೊಟ್ಟರು. ಬಾಗಿಲಿಗೆ ಹಾಕಿದ್ದ ಬೀಗಮುದ್ರೆ ಯನ್ನು ಆದಿಚುಂಚನಗಿರಿ ಮಹಾಸಂಸ್ಥಾನದ ಮಠದ ನಿರ್ಮಲಾನಂದನಾಥ ಸ್ವಾಮೀಜಿ, ಸಿದ್ದಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ, ಶಂಭುನಾಥ ಸ್ವಾಮೀಜಿ ಉಪಸ್ಥಿತಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಕೆ.ಎನ್. ರಾಜಣ್ಣ ಸಮ್ಮುಖದಲ್ಲಿ ತೆರವುಗೊಳಿಸಲಾಯಿತು. ಕಳೆದ ವರ್ಷ ದೇಗುಲದ ಬಾಗಿಲು ಮುಚ್ಚುವಾಗ ಹಚ್ಚಿಟ್ಟದ್ದ ನಂದಾದೀಪ ಬೆಳಗುತ್ತಿತ್ತು. ಹಾಸನಾಂಬ, ಸಿದ್ದೇಶ್ವರ ಜಾತ್ರಾ ಮಹೋತ್ಸವದ ಅಂಗವಾಗಿ ದೇವಾಲಯವನ್ನು ವಿವಿಧ ಪುಷ್ಪಗಳಿಂದ ಅಲಂಕರಿಸಲಾಗಿದೆ. ನವೆಂಬರ್ 3ರವರೆಗೆ ದೇಗುಲದ ಬಾಗಿಲು ತೆರೆದಿರಲಿದ್ದು, 11 ದಿನದಲ್ಲಿ 9 ದಿನ ಮಾತ್ರ ಸಾರ್ವಜನಿಕರಿಗೆ ದರ್ಶನ ಅವಕಾಶ ಕಲ್ಪಿಸಲಾಗಿದೆ.



ಒಂದು ವರ್ಷದ ಬಳಿಕ, ಹಾಸನಾಂಬ ದೇಗುಲದ ಗರ್ಭಗುಡಿಯ ಬಾಗಿಲನ್ನು ಗುರುವಾರ ತೆರೆದಾಗ ನಂದಾದೀಪಗಳು ಬೆಳಗುತ್ತಿದ್ದವು

120 ಹೊಸ ರುಡ್‌ಸೆಟ್ ಸ್ಥಾಪನೆ: ಹೆಗ್ಗಡೆ

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): ಕೇಂದ್ರ ಸರ್ಕಾರದ ಸಹಯೋಗದಲ್ಲಿ ದೇಶದಲ್ಲಿ ಇನ್ನೂ 120 ಹೊಸ ಗ್ರಾಮೀಣ ಅಭಿವೃದ್ಧಿ ಮತ್ತು ಸ್ವಯಂ ಉದ್ಯೋಗ ತರಬೇತಿ (ರುಡ್‌ಸೆಟ್) ಸಂಸ್ಥೆಗಳನ್ನು ಪ್ರಾರಂಭಿಸ ಲಾಗುವುದು ಎಂದು ಧರ್ಮಸ್ಥಳದ ಧರ್ಮಾಧಿಕಾರಿ ಡಿ.ವೀರೇಂದ್ರ ಹೆಗ್ಗಡೆ ತಿಳಿಸಿದರು.

ಧರ್ಮಸ್ಥಳದಲ್ಲಿ ಗುರುವಾರ ನಡೆದ ತಮ್ಮ ಪಟ್ಟಾಭಿಷೇಕದ 57ನೇ ವರ್ಧಂತ್ಯು ತ್ಸವದಲ್ಲಿ ಅವರು ಮಾತನಾಡಿದರು.

ಧರ್ಮಸ್ಥಳದಲ್ಲಿ ಆರಾಮದಾಯಕ ಸರತಿ ಸಾಲಿನ ಸೌಲಭ್ಯವನ್ನು ಉಪ ರಾಷ್ಟ್ರಪತಿ ಜಗದೀಪ್ ಧನ್‌ಕರ್ ಅವರು ನವೆಂಬರ್ 8ರಂದು ಉದ್ಘಾಟಿಸಲಿದ್ದಾರೆ ಎಂದರು. ಮೂಡುಬಿದಿರೆ ಜೈನಮಠದ ಚಾರುಕೀರ್ತಿ ಭಟ್ಟಾರಕ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸಂಸದ ಡಾ.ಸಿ. ಎನ್. ಮಂಜುನಾಥ್ ಅವರು ಡಿ.ವೀರೇಂದ್ರ ಹೆಗ್ಗಡೆ ಅವರ ಮೇಣದ ಪ್ರತಿಮೆ ಅನಾವರಣಗೊಳಿಸಿದರು.

ಹೇಮಾವತಿ ವಿ.ಹೆಗ್ಗಡೆ, ಡಿ.ಸುರೇಂದ್ರ ಕುಮಾರ್, ಡಿ.ಹರ್ಷೇಂದ್ರ ಕುಮಾರ್ ಭಾಗವಹಿಸಿದ್ದರು.



ವೀರೇಂದ್ರ ಹೆಗ್ಗಡೆ ಅವರ ಮೇಣದ ಪ್ರತಿಮೆಯನ್ನು ಡಾ.ಸಿ.ಎನ್.ಮಂಜುನಾಥ್ ಅನಾವರಣಗೊಳಿಸಿದರು, ವೀರೇಂದ್ರ ಹೆಗ್ಗಡೆ ಚಿತ್ರದಲ್ಲಿದ್ದಾರೆ

ವೈದ್ಯಕೀಯ: ಉಳಿಕೆ ಸೀಟು ಹಂಚಿಕೆ ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಪ್‌ಅಪ್ ಹಂತದ ಸೀಟು ಹಂಚಿಕೆಯ ನಂತರ ಉಳಿದಿರುವ ವೈದ್ಯಕೀಯ ಪದವಿ ಸೀಟುಗಳನ್ನು ಆನ್‌ಲೈನ್ (ಸ್ಟ್ರೇ ವೇಕೆನ್ಸಿ) ಸುತ್ತಿನಲ್ಲಿ ಹಂಚಿಕೆ ಮಾಡುವ ಪ್ರಕ್ರಿಯೆ ಗುರುವಾರದಿಂದ ಆರಂಭವಾಗಿದೆ.

ವೈದ್ಯಕೀಯ ಸೀಟ್‌ಮ್ಯಾಟ್ರಿಕ್ಸ್ ಪ್ರಕಟಿಸಲಾಗಿದ್ದು, ಅರ್ಹ ಅಭ್ಯರ್ಥಿಗಳು ಅ.28ರ ಮಧ್ಯಾಹ್ನ 2ಕ್ಕೆ ಮುನ್ನ ಹೊಸ ಆಪ್ಷನ್ ಗಳನ್ನು ನಮೂದಿಸಬೇಕು ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ ಸೂಚಿಸಿದ್ದಾರೆ.

ಇದುವರೆಗೂ ವೈದ್ಯಕೀಯ ಸೀಟು ಹಂಚಿಕೆಯಾಗದ ಅಭ್ಯರ್ಥಿಗಳು ಮಾತ್ರ ಈ ಸುತ್ತಿನಲ್ಲಿ ಭಾಗವಹಿಸಲು ಅರ್ಹರು. ಶುಲ್ಕ ಠೇವಣಿ ಪಾವತಿಸಲು ಅ. 28ರ ಮಧ್ಯಾಹ್ನ 12ರವರೆಗೆ ಅವಕಾಶವಿರುತ್ತದೆ. ಅಂದು ರಾತ್ರಿ 8ರ ನಂತರ ಈ ಸುತ್ತಿನ ಸೀಟು ಹಂಚಿಕೆ ಫಲಿತಾಂಶ ಪ್ರಕಟವಾಗಲಿದೆ.

ಶುಲ್ಕ ಪಾವತಿಸಿದ ಅಭ್ಯರ್ಥಿಗಳು ಪ್ರವೇಶದ ಆದೇಶವನ್ನು 29 ಅಥವಾ 30ರಂದು ಡೌನ್‌ಲೋಡ್ ಮಾಡಿಕೊಳ್ಳಬಹುದು. ಮೂಲ ಹಾಗೂ ದೃಢೀಕೃತ ದಾಖಲೆಗಳೊಂದಿಗೆ ಕಾಲೇಜಿನಲ್ಲಿ 30ರ ಸಂಜೆ 5:30ರ ಒಳಗೆ ಪ್ರವೇಶ ಪಡೆಯಬೇಕು ಎಂದು ಹೇಳಿದ್ದಾರೆ.

ಡೆಂಟಲ್, ಆಯುಷ್‌ಗೆ ಮಾಪ್‌ಅಪ್ ಸುತ್ತು: ದಂತ ವೈದ್ಯಕೀಯ ಮತ್ತು ಆಯುಷ್ ಕೋರ್ಸ್‌ಗಳಿಗೆ ಆನ್‌ಲೈನ್ ಮಾಪ್‌ಅಪ್ ಸುತ್ತಿನ ಸೀಟು ಹಂಚಿಕೆ ನಡೆಯಲಿದೆ. ಆಪ್ಷನ್ ದಾಖಲಿಸಲು ಅ. 27ರವರೆಗೆ ಅವಕಾಶ ನೀಡಲಾಗಿದೆ.


ಲಂಚ; ಬೆಸ್ಕಾಂ ಎಇಇ, ಜೆಇ ಸೆರೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನೂತನ ವಸತಿ ಬಡಾವಣೆಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ₹16 ಲಕ್ಷ ಲಂಚ ಪಡೆಯುವಾಗ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ಆವಲಹಳ್ಳಿ ಬೆಸ್ಕಾಂ ಕಚೇರಿಯ ಎಇಇ ಮತ್ತು ಜೆಇಯನ್ನು ಲೋಕಾಯುಕ್ತ ಪೊಲೀಸರು ಬಂಧಿಸಿದ್ದಾರೆ.



ರಮೇಶ್ ಬಾಬು



ನಾಗೇಶ್

ಕೆ.ಆರ್.ಪುರದ ಆವಲಹಳ್ಳಿ ವ್ಯಾಪ್ತಿಯ ಬೊಮ್ಮನಹಳ್ಳಿಯ ಮುತ್ತುಸ್ವಾಮಿ ಅವರು ತಮ್ಮ ಜಮೀನಿನಲ್ಲಿ ವಸತಿ ಬಡಾವಣೆ ನಿರ್ಮಿಸಿದ್ದರು. ಬಡಾವಣೆಯ ವಿದ್ಯುತ್ ಸಂಪರ್ಕ ಮತ್ತಿತರ ಕೆಲಸಗಳನ್ನು ಶ್ರೀ ಚಕ್ರ ಎಲೆಕ್ಟ್ರಿಕಲ್ಸ್ ಎಂಬ ಸಂಸ್ಥೆಗೆ ಗುತ್ತಿಗೆ ನೀಡಿದ್ದರು.

ಸಂಸ್ಥೆಯ ವ್ಯವಸ್ಥಾಪಕ ವಿಜಯ್ ಕುಮಾರ್, ವಿದ್ಯುತ್ ಸಂಪರ್ಕ ಸಂಬಂಧ ಕೆಲಸಗಳಿಗಾಗಿ ಬೆಸ್ಕಾಂನ ಆವಲಹಳ್ಳಿ ಕಚೇರಿಯ ಎಇಇ ರಮೇಶ್ ಬಾಬು ಅವರನ್ನು ಸೆಪ್ಟೆಂಬರ್ 25ರಂದು ಭೇಟಿ ಮಾಡಿದ್ದರು. ಎಲ್ಲ ಕೆಲಸಗಳಿಗೆ ಎಷ್ಟು ಶುಲ್ಕವಾಗುತ್ತದೆ ಎಂದು ಕೇಳಿದ್ದರು. ಆಗ ರಮೇಶ್ ಬಾಬು, 'ಜೆಇ ನಾಗೇಶ್ ಅವರನ್ನು ಭೇಟಿ ಮಾಡಿ, ಅವರು ಮಾಹಿತಿ ನೀಡುತ್ತಾರೆ. ಅಲ್ಲಿಯವರೆಗೆ ನಿಮ್ಮ ಕಡತ ಹಾಗೇ ಇರುತ್ತದೆ' ಎಂದು ತಿಳಿಸಿದ್ದರು.



ವಶಕ್ಕೆ ಪಡೆಯಲಾದ ₹16.50 ಲಕ್ಷ

ಅದರಂತೆ ರಮೇಶ್ ಬಾಬು ಅವರು ನಾಗೇಶ್ ಅವರನ್ನು ಭೇಟಿ ಮಾಡಿದಾಗ, ₹16.50 ಲಕ್ಷ ಲಂಚ ನೀಡುವಂತೆ ಬೇಡಿಕೆ ಇಟ್ಟಿದ್ದರು. ಈ ಬಗ್ಗೆ ವಿಜಯ್‌ಕುಮಾರ್ ಅವರು ಲೋಕಾಯುಕ್ತಕ್ಕೆ ದೂರು ನೀಡಿದ್ದರು. ಈ ಪ್ರಕಾರ ಲೋಕಾಯುಕ್ತ ಬೆಂಗಳೂರು ಗ್ರಾಮಾಂತರ ಜಿಲ್ಲೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿತ್ತು. ರಮೇಶ್ ಬಾಬು ಅವರ ಸೂಚನೆಯಂತೆ ವಿಜಯ್‌ಕುಮಾರ್ ಅವರು, ಬೊಮ್ಮನಹಳ್ಳಿಯ ನ್ಯೂ ರಾಯಲ್ ಫ್ರೆಶ್ ಮಾರ್ಕೆಟ್ ಬಳಿ ಜೆಇ ನಾಗೇಶ್ ಅವರಿಗೆ ಗುರುವಾರ ₹16.50 ಲಕ್ಷ ನೀಡಿದ್ದರು. ಅದೇ ವೇಳೆ ಲೋಕಾಯುಕ್ತ ಪೊಲೀಸ್ ಇನ್‌ಸ್ಪೆಕ್ಟರ್ ರಮೇಶ್ ಅವರ ತಂಡವು ದಾಳಿ ನಡೆಸಿ ನಾಗೇಶ್ ಮತ್ತು ರಮೇಶ್ ಅವರನ್ನು ಬಂಧಿಸಿತು. ಬೆಂಗಳೂರು ಗ್ರಾಮಾಂತರ ಲೋಕಾಯುಕ್ತ ಎಸ್‌ಪಿ ಪವನ್ ನೆಜ್ಜೂರ್ ನೇತೃತ್ವದಲ್ಲಿ ಕಾರ್ಯಾಚರಣೆ ನಡೆಸಲಾಗಿತ್ತು. ದಾಳಿಯ ವೇಳೆ ಬಂಧಿತರಿಂದ ₹16.50 ಲಕ್ಷ ವಶಕ್ಕೆ ಪಡೆಯಲಾಗಿದೆ. ತನಿಖೆ ಮುಂದುವರೆಸಲಾಗಿದೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ವೀಣಾ ಶಾಂತೇಶ್ವರ, ವೈದೇಹಿ, ಮಾಲತಿ ಪಟ್ಟಣಶೆಟ್ಟಿ ಹೆಸರು ಮುಂಚೂಣಿಗೆ

ಮಂಡ್ಯ ಸಮ್ಮೇಳನ: ಮಹಿಳೆಗೆ 'ಸಮ್ಮಾನ'?

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಂಡ್ಯದಲ್ಲಿ ನಡೆಯಲಿರುವ 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದ ಸಮ್ಮೇಳನಾಧ್ಯಕ್ಷತೆಯ ಗಾದಿಯು ಮಹಿಳೆಯರಿಗೆ ಒಲಿಯುವ ಸಾಧ್ಯತೆ ಹೆಚ್ಚಿದೆ.

ಡಿಸೆಂಬರ್ 20, 21 ಹಾಗೂ 22ರಂದು ಸಮ್ಮೇಳನ ನಡೆಯಲಿದೆ. ಸಮ್ಮೇಳನಾಧ್ಯಕ್ಷತೆಗೆ ಸಂಬಂಧಿಸಿದಂತೆ ಸಾಹಿತ್ಯೇತರರ ಆಯ್ಕೆಯ ಚರ್ಚೆಯು ವಿವಾದದ ಸ್ವರೂಪ ತಾಳಿತ್ತು. ಈ ಬಾರಿ ಸಾಹಿತ್ಯ ಕ್ಷೇತ್ರದವರನ್ನು ಬಿಟ್ಟು, ರಾಜಕಾರಣಿಗಳು, ಮಠಾಧೀಶರು, ಹೋರಾಟಗಾರರನ್ನು ಅಧ್ಯಕ್ಷ ಗಾದಿಗೆ ಕೂರಿಸುವ ಯತ್ನವೂ ನಡೆದಿತ್ತು. ಪರಿಷತ್ತಿನ ನಡೆಯ ಬಗ್ಗೆ ತೀವ್ರ ವಿರೋಧ ವ್ಯಕ್ತವಾಗಿತ್ತು. ಇದರಿಂದ ಎಚ್ಚೆತ್ತಂತಿರುವ, ಕನ್ನಡ ಸಾಹಿತ್ಯ ಪರಿಷತ್ತು (ಕಸಾಪ) ಸಾಹಿತಿಗಳನ್ನೇ ಆಯ್ಕೆ ಮಾಡುವ ಮೂಲಕ ಸಮ್ಮೇಳನದ ಪರಂಪರೆಯನ್ನು ಮುಂದುವರಿಸಲು ನಿರ್ಧರಿಸಿದೆ. ಅದರಲ್ಲೂ ಮಹಿಳಾ ಸಾಹಿತಿಗಳಿಗೆ ಅಧ್ಯಕ್ಷ ಸ್ಥಾನ ನೀಡಲು ಮುಂದಾಗಿದೆ.

ಸಾಹಿತ್ಯ ಸಮ್ಮೇಳನದ ಇತಿಹಾಸದಲ್ಲಿ ಈವರೆಗೆ ನಾಲ್ವರು ಮಹಿಳೆಯರಿಗೆ ಮಾತ್ರ ಸಮ್ಮೇಳನಾಧ್ಯಕ್ಷತೆ ಒಲಿದು ಬಂದಿತ್ತು. ಮಹಿಳೆಯರನ್ನು ಕಡೆಗಣಿಸಲಾಗುತ್ತಿದೆ ಎಂಬ ಅಸಮಾಧಾನವೂ ಸಾಹಿತ್ಯ ವಲಯದಲ್ಲಿತ್ತು. ಈ ಬಾರಿ ಸಮ್ಮೇಳನಾಧ್ಯಕ್ಷರ ಆಯ್ಕೆಯ ವಿಧಾನ ವಿವಾದಕ್ಕೆ ತಿರುಗಿದಾಗ, ಕಸಾಪ ನಿಲುವನ್ನು ಪ್ರಶ್ನಿಸಿದ ಬಹುತೇಕರು ಮಹಿಳೆಯರನ್ನೇ ಆಯ್ಕೆ ಮಾಡಬೇಕು ಎಂದೂ ಪ್ರತಿಪಾದಿಸಿದ್ದರು. ಅದಕ್ಕೆ, ಪರಿಷತ್ತು ಮಣಿದಂತಿದೆ.

ಕಸಾಪ ಮೂಲಗಳ ಪ್ರಕಾರ, ವೀಣಾ ಶಾಂತೇಶ್ವರ, ವೈದೇಹಿ ಹಾಗೂ ಮಾಲತಿ ಪಟ್ಟಣಶೆಟ್ಟಿ ಅವರ ಹೆಸರು ಸಮ್ಮೇಳನಾಧ್ಯಕ್ಷತೆಗೆ ಮುಂಚೂಣಿಯಲ್ಲಿವೆ. ವಿಜಯಾ, ಲತಾ ರಾಜಶೇಖರ್, ಬಿ.ಟಿ. ಲಲಿತಾ ನಾಯಕ್ ಅವರ ಹೆಸರುಗಳೂ ಈ ಸಾಲಿನಲ್ಲಿ ಸೇರಿವೆ. ಮಂಡ್ಯ ಜಿಲ್ಲೆಯ ಕೆ.ಆರ್. ಪೇಟೆಯವರಾದ ಲತಾ ರಾಜಶೇಖರ್ ಅವರು ಮೈಸೂರಿನಲ್ಲಿ ನೆಲೆಸಿದ್ದಾರೆ. ಮಂಡ್ಯದಲ್ಲಿ ನಡೆಯುತ್ತಿರುವ ಸಮ್ಮೇಳನಕ್ಕೆ ಅವರನ್ನೇ ಅಧ್ಯಕ್ಷರಾಗಿ ಮಾಡಬೇಕು ಎಂದು ಕೆಲವು ಪ್ರಭಾವಿ ರಾಜಕಾರಣಿಗಳು ಒತ್ತಡ ಹೇರುತ್ತಿದ್ದಾರೆ ಎಂದೂ ಹೇಳಲಾಗುತ್ತಿದೆ.

ಧಾರವಾಡ ನಿವಾಸಿಯಾಗಿರುವ ಕತೆ ಹಾಗೂ ಕಾದಂಬರಿಕಾರ್ತಿ ವೀಣಾ ಶಾಂತೇಶ್ವರ ಅವರು ಸಮ್ಮೇಳನಾಧ್ಯಕ್ಷರಾಗುವ ಸಾಧ್ಯತೆಗಳು ಹೆಚ್ಚಿವೆ. ಮಂಡ್ಯದಲ್ಲಿ ಸಮ್ಮೇಳನ ನಡೆಯುತ್ತಿರುವುದರಿಂದ, ಉತ್ತರ ಕರ್ನಾಟಕದ ಭಾಗದವರಿಗೆ ಆದ್ಯತೆ ನೀಡಿದಂತಾಗುತ್ತದೆ ಎಂಬ ಲೆಕ್ಕಾಚಾರವೂ ಇದೆ. 1974ರಲ್ಲಿ ಮಂಡ್ಯದಲ್ಲಿ ನಡೆದ 48ನೇ ಸಾಹಿತ್ಯ ಸಮ್ಮೇಳನದಲ್ಲಿ ಜಯದೇವಿತಾಯಿ ಲಿಗಾಡೆ ಅವರು ಸಮ್ಮೇಳನಾಧ್ಯಕ್ಷರಾಗಿದ್ದರು. ಮೂರನೇ ಬಾರಿ ಮಂಡ್ಯ ಸಮ್ಮೇಳನದ ಆತಿಥ್ಯ ವಹಿಸಿದ್ದು, 30 ವರ್ಷ ಬಳಿಕ ಅಲ್ಲಿ ಸಮ್ಮೇಳನ ನಡೆಯುತ್ತಿದೆ.

28ಕ್ಕೆ ಕಾರ್ಯಕಾರಿ ಸಮಿತಿ ಸಭೆ

ಸಮ್ಮೇಳನಾಧ್ಯಕ್ಷರ ಆಯ್ಕೆಯ ಚರ್ಚೆಗೆ ಸಂಬಂಧಿಸಿದಂತೆ ಕಸಾಪ ತುರ್ತಾಗಿ ಇದೇ 28ರಂದು ಕಾರ್ಯಕಾರಿ ಸಮಿತಿ ಸಭೆ ಕರೆದಿದೆ. ಈ ಮೊದಲು ನ.12ರಂದು ಕಾರ್ಯಕಾರಿ ಸಮಿತಿ ಸಭೆ ನಿಗದಿಯಾಗಿತ್ತು. 28ರಂದು ಕಾರ್ಯಕಾರಿ ಸಮಿತಿ ಸದಸ್ಯರ ಅಭಿಪ್ರಾಯ ಸಂಗ್ರಹಿಸಿ, ಇನ್ನೊಂದು ಸಭೆಯಲ್ಲಿ ಸಮ್ಮೇಳನಾಧ್ಯಕ್ಷರ ಹೆಸರನ್ನು ಅಂತಿಮಗೊಳಿಸುವ ಸಾಧ್ಯತೆಯಿದೆ ಎಂದು ಪರಿಷತ್ತಿನ ಮೂಲಗಳು ತಿಳಿಸಿವೆ.

ಉಡುಪಿಯ ಶ್ರೀಕೃಷ್ಣ ಮಠದಲ್ಲಿ ಅಖಿಲ ಭಾರತ ಪ್ರಾಚ್ಯವಿದ್ಯಾ ಸಮ್ಮೇಳನಕ್ಕೆ ಚಾಲನೆ

‘ಇನ್ನು ಸನಾತನ ಧರ್ಮದ ಸಾಮ್ರಾಜ್ಯ’

ಪ್ರಜಾವಾಣಿ ವಾರ್ತೆ

ಉಡುಪಿ: ‘ಆಕ್ಸ್‌ಫರ್ಡ್, ಕೇಂಬ್ರಿಜ್, ಹಾರ್ವರ್ಡ್‌ಗಳ ಜಮಾನ ಹೋಗಿ ‘ಗುರುಕುಲ’ ಜಮಾನ ಬಂದಿದೆ. ಮುಂದೆ ವಿಶ್ವದೆಲ್ಲೆಡೆ ಸನಾತನ ಧರ್ಮದ ಸಾಮ್ರಾಜ್ಯ ನಿರ್ಮಾಣವಾಗಬೇಕು’ ಎಂದು ಯೋಗ ಗುರು ಬಾಬಾ ರಾಮದೇವ್ ಹೇಳಿದರು.

ಬೆಂಗಳೂರಿನ ಭಾರತೀಯ ವಿದ್ವತ್ ಪರಿಷತ್ (ಬಿವಿಪಿ), ನವದೆಹಲಿಯ ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯ (ಸಿಎಸ್‌ಯು) ಹಾಗೂ ಉಡುಪಿಯ ಪರ್ಯಾಯ ಪುತ್ತಿಗೆ ಮಠದ ಆಶ್ರಯದಲ್ಲಿ, ಕೃಷ್ಣ ಮಠದ ರಾಜಾಂಗಣದಲ್ಲಿ ಹಮ್ಮಿಕೊಂಡಿರುವ ಮೂರು ದಿನಗಳ ‘ಅಖಿಲ ಭಾರತ ಪ್ರಾಚ್ಯವಿದ್ಯಾ ಸಮ್ಮೇಳನ’ಕ್ಕೆ (ಎಐಒಸಿ) ಗುರುವಾರ ಚಾಲನೆ ನೀಡಿ ಅವರು ಮಾತನಾಡಿದರು.

‘ಸಂಸ್ಕೃತ ಕಲಿಯುವವರು ಕೀಳರಿಮೆ ಹೊಂದಬಾರದು. ಸಂಸ್ಕೃತ ನಮ್ಮ ಮೂಲ ಭಾಷೆ, ಸನಾತನ ಧರ್ಮ ನಮ್ಮ ಮೂಲ ಧರ್ಮ. ಸನಾತನ ಸಂಸ್ಕೃತ ಭಾಷೆಯು ವಿಶ್ವವನ್ನೇ ಆಳಲಿದೆ. ಇದರ ಕಲಿಕೆಗೆ ಇಂದು ಪ್ರೋತ್ಸಾಹ ಸಿಗುತ್ತಿರುವುದು ಉತ್ತಮ ಬೆಳವಣಿಗೆ’ ಎಂದರು.

‘ಪರಾಧೀನವಾಗಿದ್ದ ಶಿಕ್ಷಣ, ವೈದ್ಯಕೀಯ ಕ್ಷೇತ್ರದಲ್ಲಿ ಈಗ ನಾವು ಸ್ವಾವಲಂಬಿಗಳಾಗಿದ್ದೇವೆ. ಪತಂಜಲಿ ಸಂಸ್ಥೆಯು ಆರ್ಥಿಕ ಸಾಮ್ರಾಜ್ಯವನ್ನು ಕಟ್ಟಿದ್ದು, ಅಧ್ಯಾತ್ಮ ಕ್ಷೇತ್ರಕ್ಕೂ ಮೀಸಲಿಟ್ಟಿದ್ದೇವೆ’ ಎಂದು ಹೇಳಿದರು.

ಕಾಶಿ, ಮಥುರಾ, ಬೃಂದಾವನಕ್ಕೆ ಸಿಗುವಂತಹ ಗೌರವ ಉಡುಪಿಯ ಶ್ರೀಕೃಷ್ಣ ಮಠಕ್ಕೂ ಸಿಗಬೇಕು. ಇಲ್ಲಿ ಸಂಸ್ಕೃತ ವಿದ್ವಾಂಸರನ್ನು ಸೃಷ್ಟಿಸುವ ಕೆಲಸ ನಡೆಯುತ್ತಿದೆ ಎಂದರು.



ಅಖಿಲ ಭಾರತ ಪ್ರಾಚ್ಯವಿದ್ಯಾ ಸಮ್ಮೇಳನವನ್ನು ಬಾಬಾ ರಾಮದೇವ್ ಗುರುವಾರ ಉದ್ಘಾಟಿಸಿದರು. ಪರ್ಯಾಯ ಪುತ್ತಿಗೆ ಮಠಾಧೀಶ ಸುಗುಣೇಂದ್ರತೀರ್ಥ ಸ್ವಾಮೀಜಿ, ಕಿರಿಯ ಯತಿ ಸುಶ್ರೀಂದ್ರತೀರ್ಥ ಸ್ವಾಮೀಜಿ, ಪೇಜಾವರ ಮಠದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಆಚಾರ್ಯ ಬಾಲಕೃಷ್ಣ, ಭಂಡಾರಕೇರಿ ಮಠಾಧೀಶ ವಿದ್ಯೇಶ ತೀರ್ಥ ಸ್ವಾಮೀಜಿ ಉಪಸ್ಥಿತರಿದ್ದರು

> ಇಂಗ್ಲಿಷ್ ಅಸ್ಪೃಶ್ಯ ಭಾಷೆ. ಸಂಸ್ಕೃತವು ಸುಸ್ಪೃಶ್ಯ ಭಾಷೆ. ಉಳಿದ ಭಾಷೆಗಳು ಕಾಲ ಕಾಲಕ್ಕೆ ಪರಿವರ್ತನೆ ಆಗುತ್ತಿದ್ದರೂ ಸಂಸ್ಕೃತ ಮಾತ್ರ ಏಕರೂಪದಲ್ಲಿದೆ
> **ಸುಗುಣೇಂದ್ರತೀರ್ಥ ಶ್ರೀ**, ಪರ್ಯಾಯ ಪುತ್ತಿಗೆ ಮಠ ಉಡುಪಿ

ಪರ್ಯಾಯ ಪುತ್ತಿಗೆ ಮಠದ ಸುಗುಣೇಂದ್ರತೀರ್ಥ ಶ್ರೀಪಾದರು ಮಾತನಾಡಿ, ‘ಪ್ರಾಚೀನ ವಿದ್ಯೆಗಳಿಗೆ ಸಂಸ್ಕೃತವೇ ಮೂಲ. ಆದ್ದರಿಂದ ಸಂಸ್ಕೃತ ಭಾಷೆಯನ್ನು ಉಳಿಸುವ ಕೆಲಸವಾಗಬೇಕು. ದಶ ಸಹಸ್ರ ವರ್ಷಗಳಷ್ಟು ಇತಿಹಾಸವಿರುವ ಸಂಸ್ಕೃತ ಭಾಷೆಯೇ ಅತಿ ಶ್ರೇಷ್ಠವಾದುದು’ ಎಂದು ಅಭಿಪ್ರಾಯಪಟ್ಟರು.

ಪೇಜಾವರ ಮಠದ ವಿಶ್ವಪ್ರಸನ್ನ ತೀರ್ಥ ಶ್ರೀಪಾದರು ಮಾತನಾಡಿ, ‘ಪ್ರಾಚ್ಯವಿದ್ಯೆಗಳು ಪುರುಷಾರ್ಥಕ್ಕೆ ಪೂರಕ’ ಎಂದರು.

ಪತಂಜಲಿ ಸಂಸ್ಥೆಯ ಆಚಾರ್ಯ ಬಾಲಕೃಷ್ಣ ಅವರು, ‘ಸಂಸ್ಕೃತ ಭಾಷೆಯಲ್ಲಿ ನಮ್ಮ ಸಂಸ್ಕೃತಿ ಇದೆ. ವಿದ್ಯೆ ಪ್ರಾಚೀನವಾದರೂ, ಆಲೋಚನೆಗಳು ಹೊಸತು. ಈ ಭಾಷೆಯನ್ನು ಉಳಿಸುವ ಅಗತ್ಯವಿದೆ’ ಎಂದರು.

ಕೇಂದ್ರೀಯ ಸಂಸ್ಕೃತ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಶ್ರೀನಿವಾಸ ವರಖೇಡಿ ಮಾತನಾಡಿದರು. ಪುಣೆ ವಿಶ್ವವಿದ್ಯಾಲಯದ ನಿವೃತ್ತ ಪ್ರಾಧ್ಯಾಪಕಿ ಸರೋಜಾ ಭಾಟೆ ಅಧ್ಯಕ್ಷತೆ ವಹಿಸಿದ್ದರು.

ಪರ್ಯಾಯ ಪುತ್ತಿಗೆ ಮಠದ ಕಿರಿಯ ಯತಿ ಸುಶ್ರೀಂದ್ರತೀರ್ಥ ಸ್ವಾಮೀಜಿ, ಭಂಡಾರಕೇರಿ ಮಠಾಧೀಶ ವಿದ್ಯೇಶ ತೀರ್ಥ ಸ್ವಾಮೀಜಿ, ಭಾರತೀಯ ವಿದ್ವತ್ ಪರಿಷತ್‌ನ ಅಧ್ಯಕ್ಷ ಪ್ರೊ. ವೀರನಾರಾಯಣ ಪಾಂಡುರಂಗಿ, ಚ.ಮೂ. ಕೃಷ್ಣ ಶಾಸ್ತ್ರಿ, ಪ್ರೊ. ಕವಿತಾ ಹೋಲೆ, ಶಿವಾನಿ ವಿ., ಕೊರಡ ಸುಬ್ರಹ್ಮಣ್ಯಂ, ರಾಘವೇಂದ್ರ ರಾವ್, ಸಂಸದ ಕೋಟ ಶ್ರೀನಿವಾಸ ಪೂಜಾರಿ, ಶಾಸಕ ಗುರ್ಮೆ ಸುರೇಶ್ ಶೆಟ್ಟಿ ಭಾಗ ವಹಿಸಿದ್ದರು. ಸಮ್ಮೇಳನದಲ್ಲಿ 1500ಕ್ಕೂ ಹೆಚ್ಚು ವಿದ್ವಾಂಸರು ಭಾಗಿಯಾಗಿದ್ದಾರೆ.

ಶಾಸಕ ಕಾಣೆ: ರೈಲು ಟಿಕೆಟ್ ಕಾಯ್ದಿರಿಸಿದ ಮತದಾರ

ಪ್ರಜಾವಾಣಿ ವಾರ್ತೆ



ಶಾಸಕ ರುದ್ರಪ್ಪ ಲಮಾಣಿ ಅವರ ಹೆಸರಿನಲ್ಲಿ ಕಾಯ್ದಿರಿಸಲಾದ ರೈಲು ಟಿಕೆಟ್



ರುದ್ರಪ್ಪ ಲಮಾಣಿ

ಹಾವೇರಿ: ‘ಶಾಸಕ ರುದ್ರಪ್ಪ ಲಮಾಣಿ ಕಾಣೆ ಆಗಿದ್ದಾರೆ’ ಎಂದು ಹಾವೇರಿ ಕ್ಷೇತ್ರದ ಕೆಲ ಮತದಾರರು ಆರೋಪಿಸಿದ್ದಾರೆ. ‘ನಿಮಗಾಗಿ ರೈಲಿನ ವಿಂಡೊ ಸೀಟ್ ಟಿಕೆಟ್ ಕಾಯ್ದಿರಿಸಲಾಗಿದೆ. ದಯವಿಟ್ಟು ಹಾವೇರಿಗೆ ಬನ್ನಿ’ ಎಂದು ಅವರನ್ನು ಆಹ್ವಾನಿಸಿದ್ದಾರೆ.

‘ಜಿಲ್ಲೆಯಲ್ಲಿ ನಿರಂತರವಾಗಿ ಮಳೆ ಸುರಿಯುತ್ತಿದ್ದು, ಅಪಾರ ಹಾನಿಯಾಗಿದೆ. ಹಾವೇರಿಯಲ್ಲಿ ಕಾಲುವೆಯ ನೀರಿನಲ್ಲಿ ಕೊಚ್ಚಿ ಹೋಗಿ ಬಾಲಕ ಮೃತಪಟ್ಟಿದ್ದಾನೆ. ಇಷ್ಟಾದರೂ ಶಾಸಕ ರುದ್ರಪ್ಪ ಲಮಾಣಿ ಸ್ಥಳಕ್ಕೆ ಭೇಟಿ ನೀಡಿಲ್ಲ. ನೊಂದವರ ಅಳಲು ಆಲಿಸಿಲ್ಲ’ ಎಂದು ಮತದಾರರು ದೂರಿದ್ದಾರೆ.

‘ವಿಧಾನಸಭೆ ಉಪಸಭಾಪತಿಯೂ ಆಗಿರುವ ಶಾಸಕ ರುದ್ರಪ್ಪ ಲಮಾಣಿ ಹಾವೇರಿಯತ್ತ ಬರುತ್ತಿಲ್ಲ. ಬೆಂಗಳೂರಿನಲ್ಲೇ ಬೀಡು ಬಿಟ್ಟಿದ್ದಾರೆ. ಮತದಾರರ ಗೋಳು ಕೇಳುವವರು ಯಾರು?’ ಎಂದು ಮತದಾರರು ಅಳಲು ತೋಡಿಕೊಂಡಿದ್ದಾರೆ.

ಬೆಂಗಳೂರಿನಿಂದ ಹಾವೇರಿಗೆ ಹೊರಡುವ ಜನಶತಾಬ್ದಿ ಎಕ್ಸ್‌ಪ್ರೆಸ್ ರೈಲಿನಲ್ಲಿ ಅಕ್ಟೋಬರ್ 25ರಂದು ರುದ್ರಪ್ಪ ಲಮಾಣಿ ಅವರ ಹೆಸರಿನಲ್ಲಿ ಸಿಎಸ್‌ಎಫ್ ಡಿ-9 ಬೋಗಿಯಲ್ಲಿ 37ನೇ ಸೀಟ್ ಕಾಯ್ದಿರಿಸಲಾಗಿದೆ. ಲಮಾಣಿಯವರ ಮೊಬೈಲ್ ವಾಟ್ಸ್‌ಆ್ಯಪ್‌ಗೆ ಟಿಕೆಟ್ ಕಳುಹಿಸಲಾಗಿದೆ. ಇದೇ ಟಿಕೆಟ್‌ನ ಚಿತ್ರ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ಟಿಕೆಟ್‌ನ ಚಿತ್ರ ಅಪ್‌ಲೋಡ್ ಮಾಡಿ ಸಾಮಾಜಿಕ ಮಾಧ್ಯಮಗಳಲ್ಲಿ ಪೋಸ್ಟ್ ಪ್ರಕಟಿಸಿರುವ ಕೆಲ ಮತದಾರರು, ‘ಸನ್ಮಾನ್ಯ ಶಾಸಕರಿಗೆ ದುಡ್ಡಿನ ಅಭಾವ ಅಂತ ತಿಳಿದು, ಹಾವೇರಿ ವಿಧಾನಸಭಾ ಕ್ಷೇತ್ರದ ಜನತೆಯೇ ಅವರಿಗೆ ರೈಲಿನ ಟಿಕೆಟ್ ಕಾಯ್ದಿರಿಸಿದೆ. ಈ ರೈಲು ಏರಿ ಹಾವೇರಿಗೆ ಬಂದರೆ, ಇಲ್ಲಿ ಜನರ ಸಮಸ್ಯೆಗಳನ್ನು ನೋಡಿ. ಸಾಧ್ಯವಾದರೆ ಪರಿಹರಿಸಿ. ಬೇಕಾದಲ್ಲಿ ಅವರಿಗೆ ಹಾವೇರಿಯಿಂದ ಬೆಂಗಳೂರಿಗೆ ವಾಪಸ್ ಹೋಗಲು ನಾವೇ ರೈಲು ಟಿಕೆಟ್ ಕಾಯ್ದಿರಿಸಿ ಕೊಡುತ್ತೇವೆ- ಇಂತಿ ನಿಮ್ಮ ಬಡಪಾಯಿ ಮತದಾರರು’ ಎಂದೂ ಪೋಸ್ಟ್‌ನಲ್ಲಿ ಬರೆದಿದ್ದಾರೆ.

ಗ್ರೆನೇಡ್ ಸ್ಫೋಟ

ಶ್ರೀನಗರ (ಪಿಟಿಐ): ಜಮ್ಮು ಮತ್ತು ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯ ನ್ಯಾಯಾಲಯದ ಸಾಕ್ಷ್ಯಾಧಾರಗಳನ್ನು ಸಂಗ್ರಹಿಸುವ ಕೊಠಡಿಯಲ್ಲಿ ಗ್ರೆನೇಡ್ ಸ್ಫೋಟಗೊಂಡಿದೆ. ಈ ವೇಳೆ ಪೊಲೀಸರೊಬ್ಬರು ಗಾಯಗೊಂಡಿದ್ದಾರೆ.

80ಕ್ಕೂ ಹೆಚ್ಚು ವಿಮಾನಗಳಿಗೆ ಬಾಂಬ್ ಬೆದರಿಕೆ

ನವದೆಹಲಿ (ಪಿಟಿಐ): ಭಾರತೀಯ ವಿಮಾನಯಾನ ಸಂಸ್ಥೆಗಳಿಗೆ ಸೇರಿದ ದೇಶೀಯ ಮತ್ತು ಅಂತರರಾಷ್ಟ್ರೀಯ ವಿಮಾನಗಳಿಗೆ ಬಾಂಬ್ ಬೆದರಿಕೆಗಳು ಬರುವುದು ಮುಂದುವರಿದಿದ್ದು, ಗುರುವಾರ 80ಕ್ಕೂ ಹೆಚ್ಚು ವಿಮಾನಗಳಿಗೆ ಈ ರೀತಿಯ ಬೆದರಿಕೆ ಸಂದೇಶಗಳು ಬಂದಿವೆ ಎಂದು ಮೂಲಗಳು ತಿಳಿಸಿವೆ.

ಏರ್ ಇಂಡಿಯಾ, ವಿಸ್ತಾರಾ ಮತ್ತು ಇಂಡಿಗೊ ಸಂಸ್ಥೆಗಳ ತಲಾ 20 ವಿಮಾನಗಳಿಗೆ, ಆಕಾಸಾ ಏರ್ ಸಂಸ್ಥೆಯ 13 ಹಾಗೂ ಅಲಯನ್ಸ್ ಏರ್ ಮತ್ತು ಸ್ಪೈಸ್‌ಜೆಟ್‌ನ ತಲಾ ಐದು ವಿಮಾನಗಳಿಗೆ ಬೆದರಿಕೆಗಳು ಬಂದಿವೆ ಎಂದು ಮೂಲಗಳು ಹೇಳಿವೆ. ಈ ಮೂಲಕ ದೇಶದಲ್ಲಿ 11 ದಿನಗಳಿಂದ ಒಟ್ಟು 250 ವಿಮಾನಗಳಿಗೆ ಹುಸಿ ಬಾಂಬ್ ಬೆದರಿಕೆಗಳು ಬಂದಂತಾಗಿವೆ.

ಆಕಾಸಾ ಏರ್ ವಿಮಾನಯಾನ ಸಂಸ್ಥೆಯ 13 ವಿಮಾನಗಳಿಗೆ ಬೆದರಿಕೆಗಳು ಬಂದಿದ್ದವು. ಕೂಡಲೇ ತಪಾಸಣೆ ನಡೆಸಲಾಯಿತು. ಬೆದರಿಕೆಗಳು ಹುಸಿ ಎಂಬುದು ಖಚಿತವಾದ ಬಳಿಕ ಎಲ್ಲ ವಿಮಾನಗಳ ಕಾರ್ಯಾಚರಣೆಗೆ ಅವಕಾಶ ಮಾಡಿಕೊಡಲಾಯಿತು ಎಂದು ಆಕಾಸಾ ಏರ್‌ನ ವಕ್ತಾರರು ಮಾಹಿತಿ ನೀಡಿದ್ದಾರೆ.

ಸಾಮಾಜಿಕ ಮಾಧ್ಯಮಗಳ ಮೂಲಕ ತನ್ನ ಕೆಲವು ವಿಮಾನಗಳಿಗೆ ಗುರುವಾರ ಬೆದರಿಕೆಗಳು ಬಂದಿದ್ದವು ವಿಸ್ತಾರಾ ವಕ್ತಾರರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೊಚ್ಚಿ ವಿಮಾನ ನಿಲ್ದಾಣದಿಂದ ಹೊರಡುವ ಕನಿಷ್ಠ 6 ವಿಮಾನಗಳಿಗೆ ಗುರುವಾರ ಬಾಂಬ್ ಬೆದರಿಕೆಗಳು ಬಂದಿವೆ. ಇದರಲ್ಲಿ ಸ್ಪೈಸ್‌ಜೆಟ್‌ನ ದುಬೈ-ಕೊಚ್ಚಿ ವಿಮಾನವೂ ಸೇರಿದೆ.

ವಿಮಾನಯಾನ ಸಂಸ್ಥೆಗಳಿಗೆ ಬಾಂಬ್ ಬೆದರಿಕೆ ಸಂದೇಶ ಕಳಿಸುವುದನ್ನು ಗಂಭೀರ ಅಪರಾಧವಾಗಿ ಪರಿಗಣಿಸಲು ಮತ್ತು ಅಪರಾಧಿಗಳನ್ನು ‘ನೋ-ಫ್ಲೈ’ ಪಟ್ಟಿಗೆ ಸೇರಿಸಲು ಸರ್ಕಾರ ಯೋಚಿಸುತ್ತಿದೆ ಎಂದು ನಾಗರಿಕ ವಿಮಾನಯಾನ ಸಚಿವ ಕೆ.ರಾಮಮೋಹನ್ ನಾಯ್ಡು ಇತ್ತೀಚೆಗೆ ತಿಳಿಸಿದ್ದರು. ಈ ಸಂಬಂಧ ಸೂಕ್ತ ಕಾನೂನುಗಳನ್ನು ಜಾರಿಗೆ ತರಲೂ ಸರ್ಕಾರ ಯೋಜಿಸಿದೆ ಎಂದೂ ಅವರು ಹೇಳಿದ್ದರು.

ಮುಂಬೈ- ಕೊಲಂಬೊ ವಿಮಾನಕ್ಕೂ ಹುಸಿ ಬಾಂಬ್ ಕರೆ: ಕೊಲಂಬೊ (ಪಿಟಿಐ): ಇಲ್ಲಿನ ಬಂಡಾರನಾಯಕೆ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಭೂ ಸ್ಪರ್ಶ ಮಾಡಿದ ವಿಸ್ತಾರಾ ವಿಮಾನಯಾನ ಸಂಸ್ಥೆಯ ಮುಂಬೈ- ಕೊಲಂಬೊ ವಿಮಾನದಲ್ಲಿ ಯಾವುದೇ ಬಾಂಬ್ ಪತ್ತೆಯಾಗಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ವಿಮಾನವು ಭೂ ಸ್ಪರ್ಶ ಮಾಡುವುದಕ್ಕೂ ಕೆಲ ನಿಮಿಷಗಳ ಮುನ್ನ ಬೆದರಿಕೆ ಕರೆ ಬಂದ ಕಾರಣ ಆತಂಕದ ವಾತಾವರಣ ನಿರ್ಮಾಣವಾಗಿತ್ತು.

ಬೆದರಿಕೆ ಕರೆ ಬೆನ್ನಲ್ಲೇ ತುರ್ತು ಪರಿಸ್ಥಿತಿ ಘೋಷಿಸಿ, ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ತೆಗೆದುಕೊಳ್ಳಲಾಯಿತು ಎಂದು ವಿಮಾನ ನಿಲ್ದಾಣದ ಅಧಿಕಾರಿಗಳು ತಿಳಿಸಿದ್ದಾರೆ.

107 ಪ್ರಯಾಣಿಕರು, ಒಂದು ಶಿಶು ಮತ್ತು ಎಂಟು ಸಿಬ್ಬಂದಿಯನ್ನು ಒಳಗೊಂಡಿದ್ದ ವಿಮಾನವು ಸುರಕ್ಷಿತವಾಗಿ ಭೂ ಸ್ಪರ್ಶ ಮಾಡಿತು. ಎಲ್ಲ ಪ್ರಯಾಣಿಕರನ್ನು ಸುರಕ್ಷಿತವಾಗಿ ಇಳಿಸಿ, ಸ್ಥಳದಿಂದ ತೆರವುಗೊಳಿಸಿದ ಬಳಿಕ ವಿಮಾನ ತಪಾಸಣೆ ನಡೆಸಲಾಯಿತು ಎಂದು ಅಧಿಕಾರಿಗಳು ಹೇಳಿದ್ದಾರೆ.


ದತ್ತಾಂಶ ಹಂಚಿಕೊಳ್ಳಲು ‘ಮೆಟಾ’, ‘ಎಕ್ಸ್’ಗೆ ಸೂಚನೆ

ನವದೆಹಲಿ (ಪಿಟಿಐ): ವಿಮಾನಯಾನ ಸಂಸ್ಥೆಗಳಿಗೆ ಬರುತ್ತಿರುವ ಹುಸಿ ಬಾಂಬ್ ಬೆದರಿಕೆ ಸಂದೇಶಗಳು ಮತ್ತು ಕರೆಗಳನ್ನು ಗಂಭೀರವಾಗಿ ಪರಿಗಣಿಸಿರುವ ಸರ್ಕಾರ, ಇವುಗಳ ಹಿಂದಿರುವವರನ್ನು ಗುರುತಿಸಲು ಪ್ರಾರಂಭಿಸಿದೆ. ಈ ರೀತಿಯ ಸಂದೇಶಗಳ ಕುರಿತು ಮಾಹಿತಿ ಹಂಚಿಕೊಳ್ಳುವಂತೆ ಸಾಮಾಜಿಕ ಮಾಧ್ಯಮ ವೇದಿಕೆಗಳಾದ ‘ಮೆಟಾ’ ಮತ್ತು ‘ಎಕ್ಸ್’ಗಳಿಗೆ ಸೂಚನೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಇಂತಹ ಹುಸಿ ಬೆದರಿಕೆ ಕರೆಗಳ ಹಿಂದೆ ಇರುವವರನ್ನು ಗುರುತಿಸಲು ಸಹಕರಿಸುವಂತೆ ಬಹುರಾಷ್ಟ್ರೀಯ ತಂತ್ರಜ್ಞಾನ ಸಮೂಹಗಳನ್ನೂ ಸರ್ಕಾರ ಕೇಳಿಕೊಂಡಿದೆ.

ಈ ರೀತಿಯ ಹುಸಿ ಬಾಂಬ್ ಬೆದರಿಕೆ ಸಂದೇಶ, ಕರೆಗಳ ಹಿಂದೆ ಇದ್ದ ಕೆಲ ವ್ಯಕ್ತಿಗಳನ್ನು ಸರ್ಕಾರ ಪತ್ತೆ ಮಾಡಿದ್ದು, ಸೂಕ್ತ ಕ್ರಮ ತೆಗೆದುಕೊಳ್ಳುತ್ತಿದೆ ಎಂದು ಉನ್ನತ ಮೂಲಗಳು ತಿಳಿಸಿವೆ. ಈ ಹುಸಿ ಬೆದರಿಕೆ ಸಂದೇಶಗಳು ಎಲ್ಲಿಂದ ಬಂದವು ಮತ್ತು ಅದರ ಹಿಂದೆ ಯಾರಿದ್ದಾರೆ ಎಂಬುದರ ಕುರಿತು ವಿವರಗಳನ್ನು ನೀಡಲು ಮೂಲಗಳು ನಿರಾಕರಿಸಿವೆ.

ಕಾನೂನು ಆಯೋಗದ ಅಧ್ಯಕ್ಷರಾಗಿ ಅಶೋಕ ಹಿಂಚಿಗೇರಿ ನೇಮಕ



ಬೆಂಗಳೂರು: ರಾಜ್ಯ ಕಾನೂನು ಆಯೋಗದ ಅಧ್ಯಕ್ಷರನ್ನಾಗಿ ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಅಶೋಕ ಬಿ. ಹಿಂಚಿಗೇರಿ ಅವರನ್ನು ನೇಮಿಸಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ತಕ್ಷಣದಿಂದ ಜಾರಿಗೆ ಬರುವಂತೆ ಮತ್ತು ಮುಂದಿನ ಆದೇಶದವರೆಗೆ ಅಶೋಕ ಬಿ. ಹಿಂಚಿಗೇರಿ ಅವರ ಅಧಿಕಾರ ಅವಧಿ ಇರಲಿದೆ ಎಂದು ಕಾನೂನು ಇಲಾಖೆ ತಿಳಿಸಿದೆ.

ಕಾನೂನು ಆಯೋಗದ ಅಧ್ಯಕ್ಷರಾಗಿದ್ದ ಎಸ್.ಆರ್. ಬನ್ನೂರ್‌ಮಠ ಅವರ ಐದು ವರ್ಷಗಳ ಅಧಿಕಾರ ಅವಧಿ ಸೆ. 19ಕ್ಕೆ ಅಂತ್ಯವಾಗಿತ್ತು.

ಹೋಂಸ್ಟೇ; 2025ರಿಂದ ಹೊಸ ನೀತಿ ಜಾರಿ: ಡಾ.ಕೆ.ವಿ.ರಾಜೇಂದ್ರ

ಪ್ರಜಾವಾಣಿ ವಾರ್ತೆ

ಮಡಿಕೇರಿ: ‘ರಾಜ್ಯದಲ್ಲಿ ಹೋಂ ಸ್ಟೇ ನಿರ್ವಹಣೆ ಸಂಬಂಧ ನೂತನ ನೀತಿಯನ್ನು ಮುಂದಿನ ಜನವರಿ-ಫೆಬ್ರು=ವರಿ ಯಲ್ಲಿ ಪ್ರಕಟಿಸಲಾಗು-ವುದು’ ಎಂದು ಪ್ರವಾಸೋದ್ಯಮ ಇಲಾಖೆ ನಿರ್ದೇಶಕ ಡಾ.ಕೆ.ವಿ.ರಾಜೇಂದ್ರ ತಿಳಿಸಿದರು.

ನಗರದ ಹೊರವಲಯದ ರೆಸಾರ್ಟ್‌ನಲ್ಲಿ ಗುರುವಾರ ಕರ್ನಾಟಕ ಪ್ರವಾಸೋದ್ಯಮ ಸೊಸೈಟಿ ಮತ್ತು ಕರ್ನಾಟಕ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ವತಿಯಿಂದ ನಡೆದ ‘ಕನೆಕ್ಟ್ ಕರ್ನಾಟಕ-2024’ ಕಾರ್ಯಕ್ರಮದಲ್ಲಿ ಮಾತನಾಡಿ, ‘ನೋಂದಣಿ ಮಾಡಿಕೊಂಡು ಪ್ರವಾಸಿಗರಿಗೆ ಉತ್ತಮ ಮೂಲ ಸೌಕರ್ಯ ಕಲ್ಪಿಸುವಂಥ ಹೋಂ ಸ್ಟೇಗಳಿಗೆ ಪ್ರೋತ್ಸಾಹ ನೀಡಲಾಗುವುದು’ ಎಂದು ಅವರು ಹೇಳಿದರು.

‘ಪ್ರವಾಸೋದ್ಯಮ ಕ್ಷೇತ್ರದಲ್ಲಿ ರಾಜ್ಯವುದೇಶದಲ್ಲಿ 10ನೇ ಸ್ಥಾನದ ಒಳಗಿದೆ. ಕೊಡಗು ಜಿಲ್ಲೆಯು ರಾಜ್ಯದಲ್ಲಿ 3ನೇ ಸ್ಥಾನದಲ್ಲಿದೆ’ ಎಂದು ಹೇಳಿದರು.

ಗಮನ ಸೆಳೆದ ರೋಡ್ ಶೋ; ನಾಮಪತ್ರ ಸಲ್ಲಿಕೆಗೆ ಮುಖ್ಯಮಂತ್ರಿ, ಉಪಮುಖ್ಯಮಂತ್ರಿ, ಸಚಿವರ ಸಾಥ್

ಚನ್ನಪಟ್ಟಣದಲ್ಲಿ ಕಾಂಗ್ರೆಸ್ ಶಕ್ತಿ ಪ್ರದರ್ಶನ

ಪ್ರಜಾವಾಣಿ ವಾರ್ತೆ

ಚನ್ನಪಟ್ಟಣ (ರಾಮನಗರ): ಉಪ ಚುನಾವಣೆ ಅಭ್ಯರ್ಥಿಯಾಗಿ ಕಡೆ ಗಳಿಗೆಯಲ್ಲಿ ಕಾಂಗ್ರೆಸ್‌ನಿಂದ ಕಣಕ್ಕಿಳಿದ ಸಿ.ಪಿ. ಯೋಗೇಶ್ವರ್ ಗುರುವಾರ ಭರ್ಜರಿ ಮೆರವಣಿಗೆಯಲ್ಲಿ ತೆರಳಿ ನಾಮಪತ್ರ ಸಲ್ಲಿಸಿದರು.

ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಸಮೇತ ಸಚಿವರು, ಶಾಸಕರು ಭಾಗವಹಿಸಿದ್ದ ಮೆರವಣಿಗೆಯು ಗೊಂಬೆಗಳ ನಗರಿಯಲ್ಲಿ ಕಾಂಗ್ರೆಸ್ ಶಕ್ತಿ ಪ್ರದರ್ಶನಕ್ಕೆ ಸಾಕ್ಷಿಯಾಯಿತು.

ಮಂಗಳವಾರಪೇಟೆಯ ಕಾಂಗ್ರೆಸ್ ಕಚೇರಿಯಿಂದ ಚುನಾವಣಾಧಿಕಾರಿ ಕಚೇರಿವರೆಗೆ ತೆರೆದ ವಾಹನದಲ್ಲಿ ಎರಡು ಕಿ.ಮೀ. ನಡೆದ ನಾಮಪತ್ರ ಸಲ್ಲಿಕೆಯ ರೋಡ್ ಶೋದಲ್ಲಿ ಸಾವಿರಾರು ಕಾರ್ಯಕರ್ತರು ಉತ್ಸಾಹದಿಂದ ಭಾಗವಹಿಸಿದ್ದರು.

ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಚಿವರಾದ ರಾಮಲಿಂಗಾ ರೆಡ್ಡಿ, ಬೈರತಿ ಸುರೇಶ್, ಡಾ. ಎಂ.ಸಿ. ಸುಧಾಕರ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಎಚ್.ಎಂ. ರೇವಣ್ಣ, ಶಾಸಕರು, ವಿಧಾನ ಪರಿಷತ್ ಸದಸ್ಯರ ದಂಡು ರೋಡ್ ಶೋನಲ್ಲಿ ಭಾಗವಹಿಸಿದ್ದರು.

ಬೆಂಗಳೂರು–ಮೈಸೂರು ರಸ್ತೆಯಲ್ಲಿ ರೋಡ್ ಶೋ ಸಾಗಿದ ಮಾರ್ಗದುದ್ದಕ್ಕೂ ಕಾಂಗ್ರೆಸ್ ಬಾವುಟ ರಾರಾಜಿಸಿದವು. ರಸ್ತೆಯ ಎರಡೂ ಬದಿ ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಯಕರ್ತರು ಜಮಾಯಿಸಿದ್ದರು. ಡೊಳ್ಳು ಮತ್ತು ತಮಟೆ ಸದ್ದು ಕಾರ್ಯಕರ್ತರ ಉತ್ಸಾಹ ಇಮ್ಮಡಿಗೊಳಿಸಿತು. ಜೈಕಾರ, ಘೋಷಣೆ ಮುಗಿಲು ಮುಟ್ಟುವುದರೊಂದಿಗೆ ಕ್ಷೇತ್ರದ ಚುನಾವಣಾ ಕಾವು ಹೆಚ್ಚಿತು.

ಗಾಂಧಿ ಭವನ ವೃತ್ತದಲ್ಲಿ ಕಾಂಗ್ರೆಸ್ ನಾಯಕರು ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು. ಎರಡು ತಾಸಿನ ರೋಡ್ ಶೋ ಮಧ್ಯಾಹ್ನ 1 ಗಂಟೆಗೆ ಚುನಾವಣಾಧಿಕಾರಿ ಕಚೇರಿ ತಲುಪಿತು. ನಾಯಕರೊಂದಿಗೆ ಕಚೇರಿಯೊಳಕ್ಕೆ ಹೋದ ಯೋಗೇಶ್ವರ್ ಮೂರು ಸೆಟ್ ನಾಮಪತ್ರ ಸಲ್ಲಿಸಿದರು.

ಒಂದೇ ದಿನ 17 ಅಭ್ಯರ್ಥಿಗಳಿಂದ 20 ನಾಮಪತ್ರ: ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪ ಚುನಾವಣೆಗೆ ಗುರುವಾರ ಒಂದೇ ದಿನ 17 ಅಭ್ಯರ್ಥಿಗಳಿಂದ 20 ನಾಮಪತ್ರ ಸಲ್ಲಿಕೆಯಾಗಿವೆ. ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ಅವರೇ ಮೂರು ನಾಮಪತ್ರ ಸಲ್ಲಿಸಿದ್ದಾರೆ.

ಉಳಿದಂತೆ ಪಕ್ಷೇತರ ಅಭ್ಯರ್ಥಿ ಪ್ರದೀಪ್ ಟಿ.ವಿ 2, ಕರ್ನಾಟಕ ಜನತಾ ಪಕ್ಷದ ಎಸ್. ಶಿವಕುಮಾರ್, ಪೂರ್ವಾಚಲ್ ಮಹಾ ಪಂಚಾಯತ್ ಪಕ್ಷದ ಎಚ್.ಡಿ. ರೇವಣ್ಣ, ಕಂಟ್ರಿ ಸಿಟಿಜನ್ ಪಾರ್ಟಿಯ ಜೆ.ಟಿ. ಪ್ರಕಾಶ್, ಚಿಕ್ಕಸಿದ್ದಯ್ಯ, ರಮೇಶ್ ಎಚ್.ಆರ್, ಅರವಿಂದ್, ಯೋಗೇಶ್, ಎಂ.ಎಸ್. ಯೋಗೇಶ್, ಡಾ. ಚಂದ್ರೇಗೌಡ ಎಚ್.ಎಸ್, ಅನಿಲ್ ಕುಮಾರ್ ಎಂ., ಕುಮಾರಸ್ವಾಮಿ, ನಿಂಗರಾಜ್ ಜಿ, ಶ್ರೀನಿವಾಸ ಮೂರ್ತಿ ಎಚ್.ಕೆ, ಮಹದೇವಸ್ವಾಮಿ ಬಿ.ಎಂ. ಹಾಗೂ ಎಚ್.ಪಿ. ನಂಜೇಗೌಡ ತಲಾ ಒಂದು ನಾಮಪತ್ರ ಸಲ್ಲಿಸಿದ್ದಾರೆ ಎಂದು ಚುನಾವಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ರೋಡ್ ಶೋನಲ್ಲಿ ಭಾಗವಹಿಸಿದ್ದ ಕಾರ್ಯಕರ್ತರು

ಕ್ಷೇತ್ರಕ್ಕೆ ಕುಮಾರಸ್ವಾಮಿ ಕೊಡುಗೆ ಏನು: ಡಿಕೆಶಿ ಪ್ರಶ್ನೆ

ಚನ್ನಪಟ್ಟಣವನ್ನು ಎರಡು ಸಲ ಪ್ರತಿನಿಧಿಸಿರುವ ಕುಮಾರಸ್ವಾಮಿ ಕ್ಷೇತ್ರಕ್ಕೆ ನೀಡಿರುವ ಕೊಡುಗೆ ಏನೆಂದು ಜನರು ಪ್ರಶ್ನಿಸಬೇಕು. ಅನುಕೂಲ ರಾಜಕಾರಣಕ್ಕಾಗಿ ಜಾತ್ಯತೀತ ಹೆಸರಿನ ಜೆಡಿಎಸ್ ಕೋಮುವಾದಿ ಬಿಜೆಪಿ ಜೊತೆ ಹೊಂದಾಣಿಕೆ ಮಾಡಿಕೊಂಡಿತು. ಈ ಚುನಾವಣೆಯಲ್ಲಿ ಅವರಿಗೆ ತಕ್ಕ ಪಾಠ ಕಲಿಸಬೇಕು ಎಂದು ಡಿ.ಕೆ. ಶಿವಕುಮಾರ್ ಹೇಳಿದರು.

'ಕಳೆದ ಮೂರು ತಿಂಗಳಲ್ಲಿ ಕ್ಷೇತ್ರದಲ್ಲಿ ನಾವು ₹500 ಕೋಟಿ ಮೊತ್ತದ ಅಭಿವೃದ್ಧಿ ಕೆಲಸಗಳಿಗೆ ಚಾಲನೆ ನೀಡಿದ್ದೇವೆ. ಶುಭ ಗಳಿಗೆಯಲ್ಲಿ ಕಾಂಗ್ರೆಸ್‌ಗೆ ಬಂದಿರುವ ಯೋಗೇಶ್ವರ್ ಕೈ ಬಲಪಡಿಸಿ ದೇಶಕ್ಕೆ ಸ್ಪಷ್ಟ ಸಂದೇಶ ಕೊಡಬೇಕು' ಎಂದರು.

'ಎಚ್‌ಡಿಕೆ ಸ್ಪರ್ಧಿಸಿದರೂ ಸೋಲುತ್ತಾರೆ'

ಕಾಂಗ್ರೆಸ್ ಅಭ್ಯರ್ಥಿ ಸಿ.ಪಿ. ಯೋಗೇಶ್ವರ್ ವಿರುದ್ಧ ಜೆಡಿಎಸ್ ನಾಯಕ ಎಚ್.ಡಿ.ಕುಮಾರಸ್ವಾಮಿ, ಅವರ ಪತ್ನಿ, ಪುತ್ರ ಸೇರಿದಂತೆ ಯಾರೇ ಸ್ಪರ್ಧಿಸಿದರೂ ಅವರು ಸೋಲುವುದು ಖಚಿತ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

'ಮೂಲ ಕಾಂಗ್ರೆಸ್ಸಿಗರಾದ ಯೋಗೇಶ್ವರ್ ಅಭಿವೃದ್ಧಿ ಪರವಾಗಿರುವುದರಿಂದಲೇ ಕ್ಷೇತ್ರದಲ್ಲಿ ಐದು ಸಲ ಶಾಸಕರಾಗಿದ್ದಾರೆ. ಕೆರೆಗಳನ್ನು ತುಂಬಿಸಿ ರೈತರ ಬದುಕು ಬೆಳಗಿದ ರಾಜಕಾರಣಿ. ಅವರನ್ನು ಗೆಲ್ಲಿಸಿ ಕ್ಷೇತ್ರದಲ್ಲಿ ಸ್ಥಗಿತಗೊಂಡಿರುವ ಅಭಿವೃದ್ಧಿಗೆ ಮರು ಚಾಲನೆ ನೀಡಬೇಕು. ಇಲ್ಲಿ ಎರಡು ಸಲ ಗೆದ್ದ ಜೆಡಿಎಸ್‌ನ ಎಚ್.ಡಿ. ಕುಮಾರಸ್ವಾಮಿಯನ್ನು ಒಮ್ಮೆ ನಾವೇ ಮುಖ್ಯಮಂತ್ರಿ ಮಾಡಿದೆವು. ಕ್ಷೇತ್ರಕ್ಕೆ ಏನೂ ಕೆಲಸ ಮಾಡದ ಅವರು ಈಗ ಮಂಡ್ಯ ಹಿಡಿದುಕೊಂಡಿದ್ದಾರೆ' ಎಂದರು.

'ನಿಖಿಲ್ ಸ್ಪರ್ಧೆ ನಿರೀಕ್ಷಿತ; ಗೆದ್ದೇ ಗೆಲ್ಲುವೆ'

'ಲೋಕಸಭಾ ಚುನಾವಣೆ ಬಳಿಕ ಕುಮಾರಸ್ವಾಮಿ ನಡವಳಿಕೆಯಿಂದಲೇ ನನಗೆ ಉಪ ಚುನಾವಣೆ ಟಿಕೆಟ್ ಸಿಗುವುದಿಲ್ಲವೆಂದು ಗೊತ್ತಾಯಿತು. ಅಂದುಕೊಂಡಂತೆ ತಮ್ಮ ಮಗ ನಿಖಿಲ್ ಕುಮಾರ ಸ್ವಾಮಿಯನ್ನೇ ಅಭ್ಯರ್ಥಿ ಮಾಡಿರುವ ಅವರು ಕಣ್ಣೀರು ಹಾಕಿ ಭಾವನಾತ್ಮಕವಾಗಿ ಚುನಾವಣೆ ಮಾಡಲು ಮುಂದಾಗಿದ್ದಾರೆ. ಅಭಿವೃದ್ಧಿ ಕೆಲಸ ಮಾಡಿಕೊಂಡು ಬಂದಿರುವ ನಾನು ಕಳೆದೆರಡು ಚುನಾವಣೆಗಳಲ್ಲಿ ತಾಂತ್ರಿಕ ಕಾರಣಗಳಿಂದ ಸೋತಿದ್ದೆ. ಈ ಸಲ ಗೆದ್ದೇ ಗೆಲ್ಲುವೆ' ಎಂದು ಸಿ.ಪಿ. ಯೋಗೇಶ್ವರ ವಿಶ್ವಾಸ ವ್ಯಕ್ತಪಡಿಸಿದರು.

ಸಂತೋಷ್ ಲಾಡ್ ನೇತೃತ್ವದಲ್ಲಿ ಅನ್ನಪೂರ್ಣ ನಾಮಪತ್ರ ಸಲ್ಲಿಕೆ


ಸಂಡೂರಿನಲ್ಲಿ ಗುರುವಾರ ನಾಮಪತ್ರ ಸಲ್ಲಿಕೆ ವೇಳೆ ನಡೆದ ಮೆರವಣಿಗೆಯಲ್ಲಿ ಶಾಸಕ ಬಿ. ನಾಗೇಂದ್ರ, ಸಚಿವರಾದ ಜಮೀರ್ ಅಹಮದ್ ಖಾನ್, ಸಂತೋಷ್ ಲಾಡ್, ಅಭ್ಯರ್ಥಿ ಅನ್ನಪೂರ್ಣ ಮತ್ತು ಕೆಎಂಎಫ್ ಅಧ್ಯಕ್ಷ ಭೀಮಾ ನಾಯ್ಕ ಇದ್ದರು

ಪ್ರಜಾವಾಣಿ ವಾರ್ತೆ

ಸಂಡೂರು (ಬಳ್ಳಾರಿ ಜಿಲ್ಲೆ): ಸಂಡೂರು ಉಪಚುನಾವಣೆಗೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಸಂಸದ ಇ. ತುಕಾರಾಂ ಪತ್ನಿ ಅನ್ನಪೂರ್ಣ ಗುರುವಾರ ನಾಮಪತ್ರ ಸಲ್ಲಿಸಿದರು. ಇದಕ್ಕೂ ಮುನ್ನ ಸಂಡೂರಿನ ಕುಮಾರಸ್ವಾಮಿ ದೇಗುಲಕ್ಕೆ ಕುಟುಂಬ ಸಹಿತ ಭೇಟಿ ನೀಡಿ, ಪೂಜೆ ಸಲ್ಲಿಸಿದರು. ನಂತರ ತಾಲ್ಲೂಕು ಕಚೇರಿಯವರೆಗೆ ಮೆರವಣಿಗೆ ನಡೆಯಿತು.

ಕೈ ಹಿಡಿದುಕೊಂಡೇ ಅನ್ನಪೂರ್ಣ ಅವರನ್ನು ಸಚಿವ ಸಂತೋಷ್ ಲಾಡ್ ಅವರು ತಾಲ್ಲೂಕು ಕಚೇರಿಗೆ ಕರೆದೊಯ್ದರು. ನಾಮಪತ್ರ ಸಲ್ಲಿಸಿದ ಬಳಿಕ, ಶುಭ ಹಾರೈಸಿದರು. ಈ ವೇಳೆ ಸಚಿವ ಜಮೀರ್ ಅಹಮದ್ ಖಾನ್, ಶಾಸಕ ಬಿ. ನಾಗೇಂದ್ರ, ಅನ್ನಪೂರ್ಣ ಅವರ ಪುತ್ರಿ ಸೌಪರ್ಣಿಕಾ, ಟಿಕೆಟ್ ಆಕಾಂಕ್ಷಿಯಾಗಿದ್ದ ತುಮಟಿ ಲಕ್ಷ್ಮಣ, ಜನಪ್ರತಿನಿಧಿಗಳು ಮತ್ತು ಮುಖಂಡರು ಇದ್ದರು.

ಈ ಸಂದರ್ಭದಲ್ಲಿ ಅನ್ನಪೂರ್ಣ ಮಾತನಾಡಿ, 'ಸಂತೋಷ್ ದಾದಾ, ತುಕಾರಾಂ ಎಂಬ ಜೋಡೆತ್ತುಗಳ ಸಹಕಾರದೊಂದಿಗೆ ಸಂಡೂರು ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸುವೆ. ಸಂಡೂರು ಇತಿಹಾಸದಲ್ಲೇ ಮೊದಲ ಸಲ ಮಹಿಳೆಯೊಬ್ಬರಿಗೆ ಕಾಂಗ್ರೆಸ್ ಟಿಕೆಟ್ ಸಿಕ್ಕಿದೆ. ಹೆಣ್ಣುಮಗಳಿಗೆ ಆದ್ಯತೆ ನೀಡಿದ್ದು ಮತ್ತು ನನಗಾಗಿ ಇಷ್ಟು ಜನ ಸೇರಿದ್ದು ಬಹಳ ಖುಷಿ ತರಿಸಿದೆ' ಎಂದರು.

'ಸಂಡೂರು ಕ್ಷೇತ್ರ ಕಾಂಗ್ರೆಸ್ ಕೋಟೆ. ಜನಾರ್ದನ ರೆಡ್ಡಿ ಅಲ್ಲದೇ ಯಾರೇ ಬಂದರೂ ಕ್ಷೇತ್ರ ಗೆಲ್ಲುತ್ತೇವೆ' ಎಂದು ಜಮೀರ್ ಅಹಮದ್ ಖಾನ್ ತಿಳಿಸಿದರು.

ಅಭ್ಯರ್ಥಿ ಅಖೈರು; ಯಾರಿಗೆ ಪೈರು?

ಒಂದನೇ ಪುಟದಿಂದ...

ಈ ಮಧ್ಯೆ ಚನ್ನಪಟ್ಟಣದಲ್ಲಿ ಸಿ.ಪಿ.ಯೋಗೇಶ್ವರ್, ಸಂಡೂರಿನಲ್ಲಿ ಅನ್ನಪೂರ್ಣ ತುಕಾರಾಂ ಅವರು ಕಾಂಗ್ರೆಸ್‌ನಿಂದ ಮತ್ತು ಶಿಗ್ಗಾವಿಯಲ್ಲಿ ಭರತ್ ಬೊಮ್ಮಾಯಿ ಬಿಜೆಪಿ ಅಭ್ಯರ್ಥಿಯಾಗಿ ಗುರುವಾರ ನಾಮಪತ್ರ ಸಲ್ಲಿಸಿದ್ದಾರೆ. ನಾಮಪತ್ರ ಸಲ್ಲಿಕೆಗೆ ಶುಕ್ರವಾರ ಕೊನೇ ದಿನ.

ಸಿ.ಪಿ.ಯೋಗೇಶ್ವರ್ ಅವರು ಬಿಜೆಪಿ ತೊರೆದು ಕಾಂಗ್ರೆಸ್ ಸೇರಿದ ಬೆನ್ನಲ್ಲೇ, ಬಿಜೆಪಿಗಿದ್ದ ಒತ್ತಡ ನಿವಾರಣೆ ಆಯಿತು. ಆದರೆ, ಯಾರನ್ನು ಕಣಕ್ಕೆ ಇಳಿಸಬೇಕು ಎಂಬ ಇಕ್ಕಟ್ಟಿಗೆ ಸಿಲುಕಿದ ಜೆಡಿಎಸ್ ನಾಯಕರು ನಿಖಿಲ್ ಕುಮಾರಸ್ವಾಮಿ ಅವರನ್ನು ಕಣಕ್ಕಿಳಿಸುವ ತೀರ್ಮಾನದ ಮೂಲಕ ಗುರುವಾರ ಗೊಂದಲಕ್ಕೆ ತೆರೆ ಎಳೆದರು.

ಚನ್ನಪಟ್ಟಣ ತಾಲ್ಲೂಕು ಜೆಡಿಎಸ್ ಘಟಕದ ಅಧ್ಯಕ್ಷ ಜಯಮುತ್ತು ಅವರು ತಾವು ಸ್ಪರ್ಧಿಸುವುದಿಲ್ಲ ಎಂದು ಬುಧವಾರವೇ ಸ್ಪಷ್ಟಪಡಿಸಿದ್ದರು. ನಿಖಿಲ್ ಅವರೇ ಸ್ಪರ್ಧಿಸಬೇಕು ಎಂಬುದಾಗಿ ಜೆಡಿಎಸ್ ಕಾರ್ಯಕರ್ತರು ಪಟ್ಟುಹಿಡಿದಿದ್ದರು. ಎಚ್.ಡಿ.ದೇವೇಗೌಡ ಅವರ ನೇತೃತ್ವದಲ್ಲಿ ಪಕ್ಷದ ಕಚೇರಿಯಲ್ಲಿ ಗುರುವಾರ ನಡೆದ ಸಭೆಯಲ್ಲಿ ಜೆಡಿಎಸ್ ನಾಯಕರು ನಿಖಿಲ್ ಅವರ ಹೆಸರನ್ನು ಅಂತಿಮಗೊಳಿಸಿದರು. ಆ ಬಳಿಕ ನಿರ್ಧಾರವನ್ನು ಬಿಜೆಪಿ ನಾಯಕರಿಗೆ ತಿಳಿಸಲಾಯಿತು.

ತಮ್ಮ ಮಕ್ಕಳನ್ನು ಕಣಕ್ಕೆ ಇಳಿಸಿರುವ ಎಚ್.ಡಿ. ಕುಮಾರಸ್ವಾಮಿ ಹಾಗೂ ಬಸವರಾಜ ಬೊಮ್ಮಾಯಿ ಅವರಿಗೆ ಈ ಚುನಾವಣೆ ತಮ್ಮ ರಾಜಕೀಯ ಪ್ರಭಾವಳಿಯನ್ನು ತೋರಿಸಿ, ಪುತ್ರರನ್ನು ಗೆಲ್ಲಿಸಿಕೊಳ್ಳಲು ಪ್ರತಿಷ್ಠೆಯನ್ನು ಪಣಕ್ಕಿಡಬೇಕಾದ ಸವಾಲನ್ನು ಸೃಷ್ಟಿಸಿದೆ.

ಚನ್ನಪಟ್ಟಣವನ್ನು ಕಾಂಗ್ರೆಸ್ ತೆಕ್ಕೆಗೆ ತೆಗೆದುಕೊಳ್ಳುವ ಮೂಲಕ, ಎಚ್.ಡಿ. ಕುಮಾರಸ್ವಾಮಿ ಅವರನ್ನು ರಾಮನಗರ ಕ್ಷೇತ್ರದಿಂದ ಹೊರಗಟ್ಟಬೇಕು ಎಂಬ ಛಲಕ್ಕೆ ಬಿದ್ದಿರುವ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್‌ಗೆ ತಮ್ಮ ಸಾಮರ್ಥ್ಯ ಸಾಬೀತುಪಡಿಸುವ ಚುನಾವಣೆ ಇದಾಗಿದೆ. ಹಾಗೆಯೇ, ಅಧಿಕಾರದಲ್ಲಿದ್ದ ಪಕ್ಷ ಉಪ ಚುನಾವಣೆಯಲ್ಲಿ ಗೆಲ್ಲುತ್ತದೆ ಎಂಬ 'ಪರಂಪರೆ'ಯನ್ನು ಮುಂದುವರಿಸುವ ಸವಾಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮುಂದಿದೆ.


ಚನ್ನಪಟ್ಟಣ ಕ್ಷೇತ್ರದ ಎನ್‌ಡಿಎ ಅಭ್ಯರ್ಥಿಯಾಗಿ ಆಯ್ಕೆಯಾದ ನಿಖಿಲ್ ಕುಮಾರಸ್ವಾಮಿ ಅವರನ್ನು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಅಭಿನಂದಿಸಿದರು. ಆರ್. ಅಶೋಕ, ಎಚ್.ಡಿ. ಕುಮಾರಸ್ವಾಮಿ, ಛಲವಾದಿ ನಾರಾಯಣಸ್ವಾಮಿ ಜತೆಗಿದ್ದರು —ಪ್ರಜಾವಾಣಿ ಚಿತ್ರ

ಚನ್ನಪಟ್ಟಣದಲ್ಲಿ ಪಕ್ಷಕ್ಕೆ ದ್ರೋಹ ಮಾಡಿದವರ ಬಗ್ಗೆ ಜನರಲ್ಲಿ ಆಕ್ರೋಶ ಇದೆ. ಹೀಗಾಗಿ ಅಲ್ಲಿ ನಿಖಿಲ್ ಕುಮಾರಸ್ವಾಮಿ ಗೆಲ್ಲುವರು.

ಬಿ.ಎಸ್.ಯಡಿಯೂರಪ್ಪ, ಸದಸ್ಯ, ಬಿಜೆಪಿ ಕೇಂದ್ರೀಯ ಸಂಸದೀಯ ಮಂಡಳಿ

ಶಿಗ್ಗಾವಿ: ಕಾಂಗ್ರೆಸ್‌ನಲ್ಲಿ ಬಂಡಾಯದ ಬಿಸಿ

ಒಂದನೇ ಪುಟದಿಂದ...

ಲಿಂಗಾಯತ ಸಮುದಾಯದ ಸಾದರ ಉಪ ಪಂಗಡಕ್ಕೆ ಸೇರಿದ ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ಅವರನ್ನು ಎದುರಿಸಲು ಅದೇ ಸಮುದಾಯದ ಪಂಚಮಸಾಲಿ ಉಪ ಪಂಗಡದ ಅಭ್ಯರ್ಥಿಯನ್ನು ಕಣಕ್ಕಿಳಿಸಬೇಕು ಎಂದು ಕಾಂಗ್ರೆಸ್‌ನ ಸ್ಥಳೀಯ ಕೆಲವು ಮುಖಂಡರು ಒತ್ತಡ ಹೇರಿದ್ದರು. ಧಾರವಾಡ ಗ್ರಾಮೀಣ ಶಾಸಕ ವಿನಯ ಕುಲಕರ್ಣಿ ಅವರು ತಮ್ಮ ಪತ್ನಿ ಶಿವಲೀಲಾ ಅಥವಾ ಮಗಳು ವೈಶಾಲಿಗೆ ಟಿಕೆಟ್ ನೀಡುವಂತೆ ಮನವಿ ಮಾಡಿದ್ದರು. ಆದರೆ, ಕಾಂಗ್ರೆಸ್ ವರಿಷ್ಠರು ಮತ್ತೊಮ್ಮೆ ಅಲ್ಪಸಂಖ್ಯಾತ (ಮುಸ್ಲಿಂ) ಅಭ್ಯರ್ಥಿಗೆ ಮಣೆ ಹಾಕಿದ್ದಾರೆ.

ನಿಖಿಲ್ ಹೆಸರು ಘೋಷಿಸಿದ ಯಡಿಯೂರಪ್ಪ

ಒಂದನೇ ಪುಟದಿಂದ...

ನಂತರ ನಡೆದ ಜಂಟಿ ಪತ್ರಿಕಾಗೋಷ್ಠಿಯಲ್ಲಿ ಯಡಿಯೂರಪ್ಪ ಅವರು ನಿಖಿಲ್ ಕುಮಾರಸ್ವಾಮಿ ಹೆಸರು ಪ್ರಕಟಿಸಿದರು.

'ನಿಖಿಲ್‌ಗೆ ಪ್ರಧಾನಿ ನರೇಂದ್ರ ಮೋದಿ ಅವರ ಆಶೀರ್ವಾದ ಇದೆ. ಬಿಜೆಪಿ ಬೆಂಬಲ, ಜೆಡಿಎಸ್ ಬಲದಿಂದ ಗೆಲುವು ಖಚಿತ. ಎರಡೂ ಪಕ್ಷಗಳ ನಾಯಕರು ಒಟ್ಟಾಗಿ ಚುನಾವಣಾ ಪ್ರಚಾರ ನಡೆಸುತ್ತೇವೆ. ಪಕ್ಷಾಂತರ ಮಾಡಿದವರ ಬಗ್ಗೆ ಮಾತಾನಾಡುವುದಿಲ್ಲ. ಫಲಿತಾಂಶದ ಮೂಲಕ ಉತ್ತರ ಕೊಡುತ್ತೇವೆ' ಎಂದು ಯಡಿಯೂರಪ್ಪ ಹೇಳಿದರು.

ನಾಮಪತ್ರ ಸಲ್ಲಿಸಿದ ಭರತ್ ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಹಾವೇರಿ: ಶಿಗ್ಗಾವಿ ವಿಧಾನಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಭರತ್ ಬೊಮ್ಮಾಯಿ ಅವರು ಗುರುವಾರ ಸಾಂಕೇತಿಕವಾಗಿ ನಾಮಪತ್ರ ಸಲ್ಲಿಸಿದರು.

ಭರತ್ ಅವರು ತಂದೆ ಬಸವರಾಜ ಬೊಮ್ಮಾಯಿ ಅವರ ಕಾರಿನಲ್ಲೇ ಚುನಾವಣಾಧಿಕಾರಿ ಕಚೇರಿಗೆ ತೆರಳಿದರು. ಸಂಸದ ಬಸವರಾಜ ಬೊಮ್ಮಾಯಿ ಅವರು ನಾಲ್ಕೂ ಅವಧಿಯಲ್ಲೂ ನಾಮಪತ್ರ ಸಲ್ಲಿಕೆಗೆ ತೆರಳುವಾಗ (ಕೆಎ 25 ಎಂಸಿ 2691) ಕಾರು ಬಳಸಿದ್ದರು. ನಾಮಪತ್ರ ಸಲ್ಲಿಕೆ ಸಂದರ್ಭದಲ್ಲಿ ಬಿಜೆಪಿ ಮುಖಂಡರು ಉಪಸ್ಥಿತರಿದ್ದರು.

ಭರತ್ ಅವರು ಶುಕ್ರವಾರ ಮೆರವಣಿಗೆ ಮೂಲಕ ಸಾಗಿ, ಅಧಿಕೃತವಾಗಿ ನಾಮಪತ್ರ ಸಲ್ಲಿಸುವರು. ಬಿಜೆಪಿ ವರಿಷ್ಠ ಬಿ.ಎಸ್. ಯಡಿಯೂರಪ್ಪ, ಪ್ರಲ್ಹಾದ ಜೋಶಿ, ಚಲವಾದಿ ನಾರಾಯಣ ಸ್ವಾಮಿ, ಗೋವಿಂದ ಕಾರಜೋಳ, ಬಸನಗೌಡ ಪಾಟೀಲ ಯತ್ನಾಳ ಸೇರಿ ಹಲವರು ಭಾಗವಹಿಸುವರು ಎಂದು ಪಕ್ಷದ ಮುಖಂಡರು ತಿಳಿಸಿದ್ದಾರೆ.

ಈ ಸಂದರ್ಭದಲ್ಲಿ ಸುದ್ದಿಗಾರರ ಜೊತೆ ಭರತ್ ಬೊಮ್ಮಾಯಿ ಮಾತನಾಡಿ, 'ತಾಯಿಯವರ ಸೂಚನೆಯಂತೆ ಒಳ್ಳೆಯ ಮುಹೂರ್ತದಲ್ಲಿ ಶಿಗ್ಗಾವಿ ಕ್ಷೇತ್ರದ ಬಿಜೆಪಿ ಅಭ್ಯರ್ಥಿಯಾಗಿ ನಾಮಪತ್ರ ಸಲ್ಲಿಸಿರುವೆ. ತಂದೆ ಬಸವರಾಜ ಬೊಮ್ಮಾಯಿ ಅವರಿಗೆ ಮಾಡಿರುವ ಆಶೀರ್ವಾದವನ್ನು ನನಗೂ ಮಾಡುವಂತೆ ಜನರಿಗೆ ಕೋರುವೆ. ಪ್ರಧಾನಿ ನರೇಂದ್ರ ಮೋದಿ ಅವರ ಮಾರ್ಗದರ್ಶನದಲ್ಲಿ ಬಡವರು ಸೇರಿ ಎಲ್ಲರ ಪರ ಕೆಲಸ ಮಾಡುವೆ' ಎಂದು ತಿಳಿಸಿದರು.

ಅಭ್ಯರ್ಥಿಗಳ ಆಸ್ತಿ ವಿವರ

ಹೆಸರು
ಸಿ.ಪಿ. ಯೋಗೇಶ್ವರ್



ಕ್ಷೇತ್ರ: **ಚನ್ನಪಟ್ಟಣ**
ಪಕ್ಷ: **ಕಾಂಗ್ರೆಸ್**
ಶಿಕ್ಷಣ: **ಬಿ.ಎಸ್‌ಸಿ**
ಒಟ್ಟು ಆಸ್ತಿ ಮೌಲ್ಯ
₹35.09 ಕೋಟಿ
ಚರಾಸ್ತಿ: ₹7.15 ಕೋಟಿ
ಸ್ಥಿರಾಸ್ತಿ: ₹27.94 ಕೋಟಿ
ಕಳೆದ ಚುನಾವಣೆಯಲ್ಲಿದ್ದ ಆಸ್ತಿ:
₹30.69 ಕೋಟಿ
ಈಗ ಎಷ್ಟು ಹೆಚ್ಚಳ: ₹4.41 ಕೋಟಿ ▲
ಸಾಲ: ₹25.46 ಕೋಟಿ
ಕೈಯಲ್ಲಿರುವ ನಗದು: ₹2.78 ಲಕ್ಷ
ಚಿನ್ನ: 250 ಗ್ರಾಂ.
ಮಕ್ಕಳ ಹೆಸರಿನಲ್ಲಿರುವ ಆಸ್ತಿ: ಇಲ್ಲ
ಅಪರಾಧ ಪ್ರಕರಣ: 10
ಪತ್ನಿ ಶೀಲಾ ಆಸ್ತಿ ಮೌಲ್ಯ
₹32.46 ಕೋಟಿ
* ಕುಟುಂಬದ ಒಟ್ಟು ಆಸ್ತಿ ಮೌಲ್ಯ (ಪತಿ,ಪತ್ನಿ ಆಸ್ತಿ ಸೇರಿ): ₹67.55 ಕೋಟಿ
ಆಸ್ತಿ ಹೆಚ್ಚಳ: ₹32.3 ಕೋಟಿ
ಒಟ್ಟು ಸಾಲ: ₹28.87 ಕೋಟಿ
- ಯೋಗೇಶ್ವರ್ ಹೆಸರಿನಲ್ಲಿ ₹70 ಲಕ್ಷ ಮೌಲ್ಯದ ಬೆಂಜ್ ಮತ್ತು ಬಿಎಂಡಬ್ಲ್ಯು ಐಷಾರಾಮಿ ಕಾರುಗಳಿವೆ. 54.2 ಎಕರೆ ಕೃಷಿ ಭೂಮಿ ಮತ್ತು ಬೆಂಗಳೂರಿನಲ್ಲಿ ಮನೆ ಇದೆ.
- ಅವರ ಪತ್ನಿ ಶೀಲಾ ಬಳಿ 1.50 ಕೆ.ಜಿ ಚಿನ್ನ ಮತ್ತು 20 ಕೆ.ಜಿ ಬೆಳ್ಳಿ ಹಾಗೂ 14.19 ಎಕರೆ ಕೃಷಿ ಭೂಮಿ ಇದೆ.

ಭರತ್ ಬೊಮ್ಮಾಯಿ



ಕ್ಷೇತ್ರ: **ಶಿಗ್ಗಾವಿ**
ಪಕ್ಷ: **ಬಿಜೆಪಿ**
ಶಿಕ್ಷಣ: ಅಮೆರಿಕದ ಇಂಡಿಯಾನಾದ ಪುರ್ಡ್ಯೂ ವಿಶ್ವವಿದ್ಯಾಲಯದಲ್ಲಿ **ಬಿ.ಎಸ್.** (ಬ್ಯಾಚುಲರ್ ಆಫ್ ಎಂಜಿನಿಯರಿಂಗ್) ಪದವಿ ಮತ್ತು ಸಿಂಗಪುರ ಮ್ಯಾನೇಜ್‌ಮೆಂಟ್ ವಿಶ್ವವಿದ್ಯಾಲಯದಲ್ಲಿ **ಎಂ.ಬಿ.ಎ** ಪದವಿ
ಒಟ್ಟು ಆಸ್ತಿ ಮೌಲ್ಯ: ₹ 9.29 ಕೋಟಿ
ಚರಾಸ್ತಿ: ₹ 3.79 ಕೋಟಿ
ಸ್ಥಿರಾಸ್ತಿ: ₹ 5.50 ಕೋಟಿ
ಸಾಲ: ₹ 2.32 ಕೋಟಿ (ತಂದೆ ಬಸವರಾಜ ಬೊಮ್ಮಾಯಿಯಿಂದ ₹ 5 ಲಕ್ಷ ಸಾಲ)
ಕೈಯಲ್ಲಿರುವ ನಗದು: ₹ 2.03 ಲಕ್ಷ
ಸ್ವಂತ ವಾಹನ: **ಇಲ್ಲ**
ಅಪರಾಧ ಪ್ರಕರಣ: **ಇಲ್ಲ**
ಪತ್ನಿ ಇಬ್ಬನಿ ಒಟ್ಟು ಆಸ್ತಿ: ₹ **6.47 ಕೋಟಿ**
ಮಗ ಇದ್ಯಾನ್ ಹೆಸರಿನಲ್ಲಿರುವ ಆಸ್ತಿ
₹ 40 ಲಕ್ಷ ಚರಾಸ್ತಿ
ಕುಟುಂಬದ ಒಟ್ಟು ಆಸ್ತಿ (ಪತ್ನಿ, ಮಗ ಸೇರಿ):
₹ 16.17 ಕೋಟಿ

ಬಂಗಾರು ಹನುಮಂತ



ಕ್ಷೇತ್ರ: **ಸಂಡೂರು**
ಪಕ್ಷ: **ಬಿಜೆಪಿ**
ಶಿಕ್ಷಣ: **ಬಿ.ಎ, ಬಿ.ಇಡಿ**
ಒಟ್ಟು ಆಸ್ತಿ ಮೌಲ್ಯ
₹18.54 ಕೋಟಿ
ಚರಾಸ್ತಿ: ₹7.58 ಕೋಟಿ
ಸ್ಥಿರಾಸ್ತಿ: ₹11.00 ಕೋಟಿ
ಸಾಲ: ₹2.54 ಕೋಟಿ
ಕೈಯಲ್ಲಿರುವ ನಗದು: ₹5 ಲಕ್ಷ
ಮಕ್ಕಳ ಹೆಸರಿನಲ್ಲಿರುವ ಆಸ್ತಿ: ₹15 ಲಕ್ಷ
ಅಪರಾಧ ಪ್ರಕರಣ: **ಇಲ್ಲ**
ಪತ್ನಿ ರೂಪಶ್ರೀ ಆಸ್ತಿ ಮೌಲ್ಯ: 4.25 ಕೋಟಿ
ಕುಟುಂಬದ ಒಟ್ಟು ಆಸ್ತಿ ಮೌಲ್ಯ
(ಪತಿ,ಪತ್ನಿ,ಮಕ್ಕಳ ಆಸ್ತಿ ಸೇರಿ)
₹ 25.34 ಕೋಟಿ

ಇ. ಅನ್ನಪೂರ್ಣ



ಕ್ಷೇತ್ರ: **ಸಂಡೂರು**
ಪಕ್ಷ: **ಕಾಂಗ್ರೆಸ್**
ಶಿಕ್ಷಣ: **ಬಿಎ**
ಒಟ್ಟು ಆಸ್ತಿ ಮೌಲ್ಯ
₹1.07 ಕೋಟಿ
ಚರಾಸ್ತಿ: ₹44.37 ಲಕ್ಷ
ಸ್ಥಿರಾಸ್ತಿ: ₹63.21 ಲಕ್ಷ
ಸಾಲ: ₹ 1.02 ಕೋಟಿ
ಕೈಯಲ್ಲಿರುವ ನಗದು: ₹2.57 ಲಕ್ಷ
ಮಕ್ಕಳ ಹೆಸರಿನಲ್ಲಿರುವ ಆಸ್ತಿ
₹20.58 ಲಕ್ಷ
ಅಪರಾಧ ಪ್ರಕರಣ: **ಇಲ್ಲ**
ಪತಿ ತುಕಾರಾಂ ಆಸ್ತಿ ಮೌಲ್ಯ
₹1.96 ಕೋಟಿ
ಕುಟುಂಬದ ಒಟ್ಟು ಆಸ್ತಿ ಮೌಲ್ಯ
(ಪತಿ,ಪತ್ನಿ, ಮಕ್ಕಳ ಆಸ್ತಿ ಸೇರಿ)
₹3.24 ಕೋಟಿ
ಒಟ್ಟು ಸಾಲ: ₹1.32 ಕೋಟಿ

ಉ.ಪ್ರದೇಶ: ಕಾಂಗ್ರೆಸ್ ಸ್ಪರ್ಧೆ ಇಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಉತ್ತರ ಪ್ರದೇಶದ ವಿಧಾನ ಸಭಾ ಉಪಚುನಾವಣೆಗೆ ಯಾವುದೇ ಅಭ್ಯರ್ಥಿಯನ್ನು ಕಣಕ್ಕಿಳಿಸದೆ, ಎಲ್ಲ ಒಂಬತ್ತು ಕ್ಷೇತ್ರಗಳಲ್ಲಿ ಸಮಾಜವಾದಿ ಪಕ್ಷದ ಚಿಹ್ನೆಯಡಿ ಕಣಕ್ಕಿಳಿದಿರುವ 'ಇಂಡಿಯಾ' ಒಕ್ಕೂಟದ ಅಭ್ಯರ್ಥಿಗಳನ್ನು ಬೇಷರತ್ತಾಗಿ ಬೆಂಬಲಿಸುವುದಾಗಿ ಕಾಂಗ್ರೆಸ್ ಗುರುವಾರ ಘೋಷಿಸಿದೆ.

'ಬಿಜೆಪಿಯವರು ಸಂವಿಧಾನಕ್ಕೆ ಬೆದರಿಕೆ ಒಡ್ಡುತ್ತಿರುವಾಗ, ಸೀಟುಗಳನ್ನು ಪಡೆಯುವುದು ಮುಖ್ಯವಲ್ಲ, ಗೆಲುವೇ ಮುಖ್ಯವಾಗಿದೆ' ಎಂದು ಅದು ಹೇಳಿದೆ.

ಪಕ್ಷದ ಕೇಂದ್ರ ಮತ್ತು ರಾಜ್ಯ ನಾಯಕರ ಜತೆಗೆ ಚರ್ಚೆ ನಡೆಸಿದ ನಂತರ ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಮತ್ತು ಉತ್ತರ ಪ್ರದೇಶದ ಉಸ್ತುವಾರಿ ಅವಿನಾಶ್ ಪಾಂಡೆ ಅವರು ತಿಳಿಸಿದ್ದಾರೆ..

'ಇಂಡಿಯಾ' ಒಕ್ಕೂಟದ ಅಭ್ಯರ್ಥಿಗಳು ತಮ್ಮ ಪಕ್ಷದ ಚುನಾವಣಾ ಚಿಹ್ನೆ 'ಸೈಕಲ್'ನಡಿ ರಾಜ್ಯದ ಎಲ್ಲ ಒಂಬತ್ತು ಕ್ಷೇತ್ರಗಳಲ್ಲಿ ಸ್ಪರ್ಧಿಸಲಿದ್ದಾರೆ ಎಂದು ಎಸ್‌ಪಿ ಮುಖ್ಯಸ್ಥ ಅಖಿಲೇಶ್ ಯಾದವ್ ಬುಧವಾರ ಹೇಳಿದ್ದರು.

ಉಪಚುನಾವಣೆ ನಡೆಯುತ್ತಿರುವ ಒಂಬತ್ತು ಕ್ಷೇತ್ರಗಳ ಪೈಕಿ ಕನಿಷ್ಠ ಮೂರು ಕ್ಷೇತ್ರಗಳನ್ನು ನೀಡಬೇಕು ಎಂದು ಎಸ್‌ಪಿಯೊಂದಿಗೆ ಕಾಂಗ್ರೆಸ್ ತೀವ್ರ ಚೌಕಾಶಿ ನಡೆಸಿತ್ತು. ಆದರೆ, ನಂತರದಲ್ಲಿ ಖೈರ್ ಮತ್ತು ಗಾಜಿಯಾಬಾದ್ ಕ್ಷೇತ್ರಗಳನ್ನು ಒಪ್ಪಿಕೊಂಡಿತ್ತು. ಕಾಂಗ್ರೆಸ್ ಕೇಳಿದ್ದ ಫೂಲ್ಪುರ್ ಮತ್ತು ಮಂಜಾವದಂತಹ ಸ್ಥಾನಗಳನ್ನು ಬಿಟ್ಟುಕೊಡಲು ಎಸ್‌ಪಿ ಒಪ್ಪಲಿಲ್ಲ. ಕೊನೆಗೆ, ಗೆಲುವಿನ ಸಾಧ್ಯತೆ ಕಡಿಮೆ ಇರುವ ಖೈರ್ ಮತ್ತು ಗಾಜಿಯಾಬಾದ್ ಕ್ಷೇತ್ರಗಳಿಂದಲೂ ಕಾಂಗ್ರೆಸ್ ಹಿಂದೆ ಸರಿದಿದೆ.

'ಇಂಡಿಯಾ' ಮೈತ್ರಿಕೂಟ ಪರ ಕೇಜ್ರಿವಾಲ್ ಪ್ರಚಾರ?

ನವದೆಹಲಿ (ಪಿಟಿಐ): ಮಹಾರಾಷ್ಟ್ರ, ಜಾರ್ಖಂಡ್ ವಿಧಾನಸಭಾ ಚುನಾವಣೆಯಲ್ಲಿ 'ಇಂಡಿಯಾ' ಮೈತ್ರಿಕೂಟದ ಪರ ಆಮ್ ಆದ್ಮಿ ಪಕ್ಷದ ಸಂಚಾಲಕ ಅರವಿಂದ ಕೇಜ್ರಿವಾಲ್ ಪ್ರಚಾರ ನಡೆಸುವ ಸಾಧ್ಯತೆ ಇದೆ ಎಂದು ಪಕ್ಷದ ಮೂಲಗಳು ಗುರುವಾರ ತಿಳಿಸಿದೆ.

ಮಹಾ ವಿಕಾಸ್ ಆಘಾಡಿ (ಎಂವಿಎ) ಮೈತ್ರಿಕೂಟದ ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ (ಯುಬಿಟಿ) ಮತ್ತು ಶರದ್ ಪವಾರ್ ನೇತೃತ್ವದ ಎನ್‌ಸಿಪಿ (ಎಸ್‌ಪಿ) ಪರ ಮಹಾರಾಷ್ಟ್ರದಲ್ಲಿ ಪ್ರಚಾರ ನಡೆಸಲಿದ್ದಾರೆ. ಈ ಸಂಬಂಧ ಇಬ್ಬರೂ ಮುಖಂಡರೊಂದಿಗೆ ಪಕ್ಷವು ಸಂಪರ್ಕದಲ್ಲಿದೆ ಎಂದು ಮೂಲಗಳು ತಿಳಿಸಿವೆ. ಜಾರ್ಖಂಡ್ ಮುಕ್ತಿ ಮೋರ್ಚಾ ಪರ ಜಾರ್ಖಂಡ್‌ನಲ್ಲಿ ಪ್ರಚಾರ ನಡೆಸಲಿದ್ದು, ಪ್ರಚಾರದ ದಿನಾಂಕವನ್ನು ನಂತರ ಘೋಷಿಸಲಾಗುವುದು ಎಂದು ತಿಳಿಸಿದೆ.

ಕಳೆದ ಲೋಕಸಭಾ ಚುನಾವಣೆಯಲ್ಲಿ ದೆಹಲಿ, ಗುಜರಾತ್, ಹರಿಯಾಣದಲ್ಲಿ ಜತೆಗೂಡಿ ಸ್ಪರ್ಧಿಸಿತ್ತು.

ಕಾಂಗ್ರೆಸ್‌ನಿಂದ ವಂಶಾಡಳಿತ ರಾಜಕೀಯ: ಬಿಜೆಪಿ ಟೀಕೆ


ಗೌರವ್ ಭಾಟಿಯಾ

ನವದೆಹಲಿ (ಪಿಟಿಐ): ವಯನಾಡ್ ಲೋಕಸಭಾ ಕ್ಷೇತ್ರದಲ್ಲಿ ಪ್ರಿಯಾಂಕಾ ಗಾಂಧಿ ಅವರನ್ನು ಕಾಂಗ್ರೆಸ್ ಕಣಕ್ಕಿಳಿಸಿರುವುದಕ್ಕೆ 'ಇದು ವಂಶಾಡಳಿತ ರಾಜಕೀಯದ ಗೆಲುವು ಮತ್ತು ಅರ್ಹತೆಯ ಪರಾಜಯ' ಎಂದು ಬಿಜೆಪಿಯು ಗಾಂಧಿ ಕುಟುಂಬದ ವಿರುದ್ಧ ವಾಗ್ದಾಳಿ ನಡೆಸಿದೆ.

ಬಿಜೆಪಿ ಪ್ರಧಾನ ಕಚೇರಿಯಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಪಕ್ಷದ ರಾಷ್ಟ್ರೀಯ ವಕ್ತಾರ ಗೌರವ್ ಭಾಟಿಯಾ, 'ಪ್ರಿಯಾಂಕಾ ಗಾಂಧಿ ಅವರು ಸಲ್ಲಿಸಿರುವ ತಮ್ಮ ಆಸ್ತಿಯ ವಿವರದಲ್ಲಿ ಕೆಲವು ವ್ಯತ್ಯಾಸಗಳಿವೆ' ಎಂದು ಆರೋಪಿಸಿದ್ದಾರೆ.

'ತೆರಿಗೆ ಇಲಾಖೆ ಪ್ರಕಾರ, ಪ್ರಿಯಾಂಕಾ ಪತಿ ರಾಬರ್ಟ್ ವಾದ್ರಾ ಅವರ ಆಸ್ತಿ ಮೌಲ್ಯವೇ ₹75 ಕೋಟಿ ಇದೆ. ಆದರೆ, ಪ್ರಿಯಾಂಕಾ ನಾಮಪತ್ರದ ಜತೆಗೆ ಸಲ್ಲಿಸಿರುವ ಆಸ್ತಿ ಪ್ರಮಾಣ ಪತ್ರದಲ್ಲಿ ಅದಕ್ಕಿಂತ ಕಡಿಮೆ ಆಸ್ತಿ ಘೋಷಿಸಿದ್ದಾರೆ. ಅವರ ಪ್ರಮಾಣಪತ್ರವು ಭ್ರಷ್ಟಾಚಾರದ ತಪ್ಪೊಪ್ಪಿಗೆಯಂತಿದೆ' ಎಂದು ಗಂಭೀರ ಆರೋಪ ಮಾಡಿದ್ದಾರೆ.

'ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರನ್ನು ನಾಮಪತ್ರ ಸಲ್ಲಿಕೆ ವೇಳೆ ಜತೆಗಿರಿಸಿಕೊಳ್ಳದೆ, ಗಾಂಧಿ ಕುಟುಂಬ ದಲಿತರಿಗೆ ಅವಮಾನ ಮಾಡಿದೆ' ಎಂದೂ ಅವರು ದೂರಿದ್ದಾರೆ.

'ಪ್ರಿಯಾಂಕಾ ಗಾಂಧಿಗೆ ಪಕ್ಷ ವಹಿಸಿದ ಜವಾಬ್ದಾರಿಗಳನ್ನು ಸಮರ್ಥವಾಗಿ ನಿಭಾಯಿಸದಿದ್ದರೂ ಅವರಿಗೆ ಬಡ್ತಿ ನೀಡಲಾಗಿದೆ. ಕಾಂಗ್ರೆಸ್‌ನಲ್ಲಿ ಅರ್ಹತೆಗೆ ಸ್ಥಾನವಿಲ್ಲ' ಎಂದು ಭಾಟಿಯಾ ಆರೋಪಿಸಿದ್ದಾರೆ

48 ಅಭ್ಯರ್ಥಿಗಳ 'ಕೈ' ಪಟ್ಟಿ ಪ್ರಕಟ

ನವದೆಹಲಿ (ಪಿಟಿಐ): ಮಹಾರಾಷ್ಟ್ರ ವಿಧಾನಸಭಾ ಚುನಾವಣೆಗೆ ಕಾಂಗ್ರೆಸ್ 48 ಅಭ್ಯರ್ಥಿಗಳ ತನ್ನ ಮೊದಲ ಪಟ್ಟಿಯನ್ನು ಗುರುವಾರ ಪ್ರಕಟಿಸಿದೆ.

ಪಕ್ಷದ ರಾಜ್ಯ ಘಟಕದ ಮುಖ್ಯಸ್ಥ ನಾನಾ ಪಟೋಲೆ ಸಾಕೋಲಿ ಕ್ಷೇತ್ರದಿಂದ, ಮಾಜಿ ಮುಖ್ಯಮಂತ್ರಿ ಪೃಥ್ವಿರಾಜ್‌ಚವಾಣ್‌ಅವರನ್ನು ಕರಾಡ್‌ದಕ್ಷಿಣದಿಂದ ಹಾಗೂ ವಿಧಾನಸಭೆ ವಿರೋಧ ಪಕ್ಷದ ನಾಯಕ ವಿಜಯ್ ವಡೆಟ್ಟಿವಾರ್ ಬ್ರಹ್ಮಪುರಿ ಕ್ಷೇತ್ರದಿಂದ ಸ್ಪರ್ಧಿಸಲಿದ್ದಾರೆ.

ಮಾಜಿ ಸಚಿವರಾದ ನಿತಿನ್ ರಾವುತ್ ಮತ್ತು ಬಾಳಾಸಾಹೇಬ್ ಥೋರಟ್ ಅವರಿಗೆ ಕ್ರಮವಾಗಿ ನಾಗ್ಪುರ ಉತ್ತರ ಮತ್ತು ಸಂಗಮ್ನೇರ್‌ನಿಂದ, ಧಾರಾವಿಯಿಂದ ಜ್ಯೋತಿ ಏಕನಾಥ್ ಗಾಯಕ್ವಾಡ್, ಲಾತೂರ್ ನಗರದಿಂದ ಅಮಿತ್ ದೇಶಮುಖ್ ಹಾಗೂ ಲಾತೂರ್ ಗ್ರಾಮಾಂತರದಿಂದ ಧೀರಜ್ ದೇಶಮುಖ್ ಅವರನ್ನು ಕಣಕ್ಕಿಳಿಸಿದೆ.

ಚಾಂದಿವಲಿಯಿಂದ ಮೊಹಮ್ಮದ್ ಆರಿಫ್ ನಸೀಮ್ ಖಾನ್, ಮಲಾಡ್ ಪಶ್ಚಿಮದಿಂದ ಅಸ್ಲಾಂ ಶೇಖ್, ದೇವ್ರೋಲಿಯಿಂದ ರಂಜಿತ್ ಕಾಂಬ್ಳೆ ಮತ್ತು ನಾಗ್ಪುರ ಪಶ್ಚಿಮದಿಂದ ವಿಕಾಸ್ ಠಾಕ್ರೆ ಅವರನ್ನು ಕಣಕ್ಕಿಳಿದಿದ್ದಾರೆ.

ಎಂವಿಎ ಮೈತ್ರಿಕೂಟದಲ್ಲಿ ಮೂರು ಪ್ರಮುಖ ಪಕ್ಷಗಳಿಗೆ ಸೀಟು ಹಂಚಿಕೆ ಸೂತ್ರದ ಪ್ರಕಾರ ಕಾಂಗ್ರೆಸ್ 85 ಸ್ಥಾನಗಳಿಗೆ ಸ್ಪರ್ಧಿಸಲಿದೆ.

ಪ್ರಚಾರದಲ್ಲಿ ಕಾಣದ ಶ್ರೀರಾಮುಲು: ವಿಜಯೇಂದ್ರ ಭೇಟಿ

ಪ್ರಜಾವಾಣಿ ವಾರ್ತೆ

ಬಳ್ಳಾರಿ: ಸಂಡೂರು ಉಪಚುನಾವಣೆಯ ಟಿಕೆಟ್ ಘೋಷಣೆಯಾಗಿ, ಪ್ರಚಾರ ಆರಂಭವಾದರೂ ಎಲ್ಲಿಯೂ ಕಾಣಿಸಿಕೊಳ್ಳದ ಮಾಜಿ ಸಚಿವ ಬಿ.ಶ್ರೀರಾಮುಲು ಮನೆಗೆ ಗುರುವಾರ ಭೇಟಿ ನೀಡಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಕೆಲ ಕಾಲ ಚರ್ಚೆ ನಡೆಸಿದರು. ಅಲ್ಲಿಯೇ ವಿಶೇಷ ಪೂಜೆ ಸಲ್ಲಿಸಿದ ಅವರು, ಉಪಾಹಾರವನ್ನು ಸೇವಿಸಿದರು.

ಭೇಟಿ ಕುರಿತು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದ ಶ್ರೀರಾಮುಲು, 'ಎಲ್ಲರೂ ಕೂತು ಮಾತನಾಡಿದ್ದೇವೆ. ನಾಳೆ ನಾಮಪತ್ರ ಸಲ್ಲಿಕೆಯಲ್ಲಿ ಎಲ್ಲರೂ ಭಾಗವಹಿಸುತ್ತೇವೆ' ಎಂದರು.

ಇತ್ತೀಚೆಗೆ ಸುದ್ದಿಗೋಷ್ಠಿಯೊಂದರಲ್ಲಿ ಮಾತನಾಡಿದ್ದ ಶ್ರೀರಾಮುಲು 'ಜನಾರ್ದನ ರೆಡ್ಡಿ ಅವರು ಪ್ರಚಾರ ಆರಂಭಿಸುವರು. ನಾನೂ ಸಾಧ್ಯವಾದ ಕಡೆ ಪಾಲ್ಗೊಳ್ಳುವೆ' ಎಂದಿದ್ದರು.

ಕಾಂಗ್ರೆಸ್ ಶಾಸಕ ಸತೀಶ್ ಸೈಲ್ ಜೈಲಿಗೆ

ಒಂದನೇ ಪುಟದಿಂದ...

ಸ್ವಸ್ತಿಕ್ ಕಂಪನಿ ಮಾಲೀಕರಾದ ಕೆ.ವಿ. ನಾಗರಾಜ್ ಮತ್ತು ಕೆ.ವಿ.ಗೋವಿಂದ ರಾಜ್, ಆಶಾಪುರ ಮೈನಿಂಗ್ ಕಂಪನಿ ಮಾಲೀಕ ಚೇತನ್ ಷಾ ಮತ್ತು ಲಾಲ್ ಮಹಲ್ ಕಂಪನಿ ಮಾಲೀಕ ಪ್ರೇಮ್ ಚಂದ್ ಗರಗ್ ಅವರೂ ದೋಷಿಗಳ ಪಟ್ಟಿಯಲ್ಲಿದ್ದಾರೆ.


'ಎಲ್ಲ ಅಪರಾಧಿಗಳ ಶಿಕ್ಷೆಯ ಪ್ರಮಾಣವನ್ನು ನ್ಯಾಯಾಧೀಶ ಸಂತೋಷ ಗಜಾನನ ಭಟ್ ಶುಕ್ರವಾರ ಪ್ರಕಟಿಸಲಿದ್ದಾರೆ. ದೋಷಾರೋಪ ಪಟ್ಟಿಯಲ್ಲಿದ್ದ ಪಿಜಿಎಸ್ ಕಂಪನಿಗೂ ಶಿಕ್ಷೆ ವಿಧಿಸಲಾಗಿದ್ದು, ಈ ಕಂಪನಿಯನ್ನೂ ದೋಷಿ ಎಂದು ತೀರ್ಮಾನಿಸಲಾಗಿದೆ. ಕಂಪನಿಗೆ ಕಾನೂನು ಪ್ರಕಾರ ದಂಡ ವಿಧಿಸುವ ನಿರೀಕ್ಷೆ ಇದೆ' ಎಂದು ಸಿಬಿಐ ಪರ ವಾದ ಮಂಡಿಸಿದ್ದ ಪ್ರಾಸಿಕ್ಯೂಟರ್ ಶಿವಾನಂದ ಪೆರ್ಲ ತಿಳಿಸಿದ್ದಾರೆ. ಮತ್ತೊಬ್ಬ ಪ್ರಾಸಿಕ್ಯೂಟರ್ ಕೆ.ಎಸ್.ಹೇಮಾ ಅವರೂ ವಾದ ಮಂಡಿಸಿದ್ದರು.

'ಪ್ರಕರಣದ ಆರೋಪಿಗಳಾಗಿದ್ದ ಕೆಲವರು ಅದಿರನ್ನು ನೇರವಾಗಿ ವಿದೇಶಗಳಿಗೆ ರಫ್ತು ಮಾಡಿದ್ದರೆ, ಮತ್ತೂ ಕೆಲವರು ಸತೀಶ್ ಸೈಲ್ ಕಂಪನಿಗೆ ಕಡಿಮೆ ದರಕ್ಕೆ ನೀಡಿದ್ದ ಮತ್ತು ಇನ್ನೂ ಕೆಲವರು ನೇರವಾಗಿ ಚೀನಾ ಸೇರಿದಂತೆ ಹಲವು ವಿದೇಶಗಳಿಗೆ ರಫ್ತು ಮಾಡಿದ ಆರೋಪ ಎದುರಿಸುತ್ತಿದ್ದರು. ಈ ಪ್ರಕರಣದಲ್ಲಿ 2010ರ ಅಂದಾಜಿನಂತೆ ಒಟ್ಟು ₹200 ಕೋಟಿಗೂ ಹೆಚ್ಚಿನ ಮೊತ್ತವು ಬೊಕ್ಕಸಕ್ಕೆ ನಷ್ಟ ತಂದಿದೆ' ಎಂದು ಸಿಬಿಐ ದೋಷಾರೋಪ ಪಟ್ಟಿಯಲ್ಲಿ ವಿವರಿಸಿತ್ತು.

ಪ್ರಕರಣಕ್ಕೆ ಸಂಬಂಧಿಸಿದಂತೆ 2010ರಲ್ಲಿ ಅಂಕೋಲಾ ಪೊಲೀಸ್ ಠಾಣೆಯಲ್ಲಿ ಮೊದಲಿಗೆ ದೂರು ದಾಖಲಿಸಲಾಗಿತ್ತು. ನಂತರ ಈ ಪ್ರಕರಣದ ತನಿಖೆಯನ್ನು ಸಿಬಿಐ ಕೈಗೆತ್ತಿಕೊಂಡಿತ್ತು. 2014ರಲ್ಲಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಲಾಗಿತ್ತು.

ಮಹಾರಾಷ್ಟ್ರ ವಿಧಾನಸಭೆ ಚುನಾವಣೆ

ಕುಟುಂಬ ರಾಜಕಾರಣ: ಎಲ್ಲ ಪಕ್ಷಗಳಿಂದಲೂ ಮಣೆ



ಮುಂಬೈ (ಪಿಟಿಐ): ಎಲ್ಲ ರಾಜಕೀಯ ಪಕ್ಷಗಳು ಕುಟುಂಬ ರಾಜಕಾರಣದ ಬಗ್ಗೆ ಮಾತನಾಡುತ್ತವೆ. ಇದೇ ವಿಚಾರವನ್ನು ಮುಂದಿಟ್ಟುಕೊಂಡು ತಮ್ಮ ವಿರೋಧಿಗಳನ್ನು ಟೀಕಿಸುತ್ತವೆ. ಆದರೆ, ಟಿಕೆಟ್ ಹಂಚಿಕೆ ವಿಷಯ ಬಂದಾಗ ಮಾತ್ರ ಎಲ್ಲ ಪಕ್ಷಗಳು ಇದಕ್ಕೆ ವಿರುದ್ಧವಾಗಿ ನಡೆದುಕೊಳ್ಳುತ್ತವೆ.

ಮಹಾರಾಷ್ಟ್ರ ವಿಧಾನಸಭೆ ಚುನಾವಣೆಗೆ ಎಲ್ಲ ಪಕ್ಷಗಳು ಟಿಕೆಟ್ ಹಂಚಿಕೆ ಮಾಡಿರುವುದನ್ನು ಗಮನಿಸಿದಾಗ ಈ ಅಂಶ ಸ್ಪಷ್ಟವಾಗುತ್ತದೆ.

ಎಲ್ಲ ಪ್ರಮುಖ ರಾಜಕೀಯ ಪಕ್ಷಗಳು ತಮ್ಮ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಪ್ರಕಟಿಸಿವೆ.

ಆಡಳಿತಾರೂಢ ಪಕ್ಷಗಳ ಪೈಕಿ, ಬಿಜೆಪಿ, ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಶಿವಸೇನಾ, ಅಜಿತ್ ಪವಾರ್ ನೇತೃತ್ವದ ಎನ್‌ಸಿಪಿ ತಮ್ಮ ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ಘೋಷಿಸಿವೆ.

ಇನ್ನು, ವಿಪಕ್ಷ ಪಾಳಯ 'ಮಹಾ ವಿಕಾಸ್ ಅಘಾಡಿ' (ಎಂವಿಎ)ಯ ಶಿವಸೇನಾ (ಯುಬಿಟಿ) ಮೊದಲ ಪಟ್ಟಿ ಪ್ರಕಟಿಸಿದೆ.

ಈ ಎಲ್ಲ ಪಕ್ಷಗಳ ಮೊದಲ ಪಟ್ಟಿಯನ್ನು ಗಮನಿಸಿದಾಗ, ಬಹುತೇಕ ಅಭ್ಯರ್ಥಿಗಳು ಹಾಲಿ ಸಚಿವರು, ಶಾಸಕರು ಇಲ್ಲವೇ ಸಂಸದರ ಪತ್ನಿ, ಪುತ್ರರು ಅಥವಾ ಪುತ್ರಿಯರು ಇಲ್ಲವೇ ಹತ್ತಿರದ ಸಂಬಂಧಿಗಳು ಅಥವಾ ಸಹೋದರ/ಸಹೋದರಿಯರು ಇರುವುದು ಕಂಡುಬರುತ್ತದೆ.

ಲೋಕಸಭಾ ಚುನಾವಣೆ ಸಂದರ್ಭದಲ್ಲಿ, ಕಾಂಗ್ರೆಸ್ ತೊರೆದು ಬಿಜೆಪಿಗೆ ಸೇರ್ಪಡೆಯಾಗಿರುವ ಅಶೋಕ್ ಚವಾಣ್ ಪುತ್ರಿ ಶ್ರೀಜಯಾ ಚವಾಣ್ ಅವರಿಗೆ ಬಿಜೆಪಿ ಟಿಕೆಟ್ ನೀಡಿದೆ.

ಬಿಜೆಪಿಯ ಮುಂಬೈ ಘಟಕದ ಅಧ್ಯಕ್ಷ ಆಶಿಶ್ ಶೇಲಾರ್ ಸಹೋದರ ವಿನೋದ್ ಶೇಲಾರ್, ಹಾಲಿ ಶಾಸಕ ಗಣಪತ್ ಗಾಯಕ್ವಾಡ್ ಬದಲಾಗಿ ಅವರ ಪತ್ನಿ ಸುಲಭಾ ಅವರನ್ನು ಕಣಕ್ಕಿಳಿಸಲಾಗಿದೆ. ಬಿಜೆಪಿ ಸಂಸದ ನಾರಾಯಣ ರಾಣೆ ಅವರ ಮತ್ತೊಬ್ಬ ಪುತ್ರ ನಿಲೇಶ್ ಶಿವಸೇನಾ (ಶಿಂದೆ ಬಣ) ಸೇರಿದ್ದು, ಅವರಿಗೆ ಕಂಕಾವಳಿ ಕ್ಷೇತ್ರದ ಟಿಕೆಟ್ ನೀಡಲಾಗಿದೆ. ರಾಣೆ ಅವರ ಇನ್ನೊಬ್ಬ ಪುತ್ರ ನಿತೇಶ್ ಹಾಲಿ ಶಾಸಕ.

ಪುಣೆಯ ಚಿಂಚವಾಡ ಕ್ಷೇತ್ರದ ಹಾಲಿ ಶಾಸಕಿ ಅಶ್ವಿನಿ ಜಗತಾಪ್ ಅವರಿಗೆ ಬಿಜೆಪಿ ಟಿಕೆಟ್ ನೀಡಿಲ್ಲ. ಅಶ್ವಿನಿ ಅವರ ಪತಿ, ಪಕ್ಷದ ನಾಯಕ ದಿವಂಗತ ಲಕ್ಷ್ಮಣ ಜಗತಾಪ್ ಅವರ ಸಹೋದರ ಶಂಕರ್ ಜಗತಾಪ್ ಅವರಿಗೆ ಬಿಜೆಪಿ ಮಣೆ ಹಾಕಿದೆ. ಇದು ಅವರ ಮೊದಲ ಚುನಾವಣೆ.

ಎನ್‌ಸಿಪಿ (ಅಜಿತ್ ಪವಾರ್) ಹಿರಿಯ ನಾಯಕ ಛಗನ್ ಭುಜಬಲ್ ಅವರ ಸೋದರ ಸಂಬಂಧಿ ಸಮೀರ್ ಸ್ವತಂತ್ರ ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿದ್ದಾರೆ.

ಶಿವಸೇನಾ (ಯುಬಿಟಿ) ಮುಖ್ಯಸ್ಥ ಉದ್ಧವ್ ಠಾಕ್ರೆ ಪುತ್ರ ಆದಿತ್ಯ ಠಾಕ್ರೆ ಮುಂಬೈನ ವರ್ಲಿ ಕ್ಷೇತ್ರದಿಂದ ಮತ್ತೊಮ್ಮೆ ಅದೃಷ್ಟ ಪರೀಕ್ಷೆಗೆ ಇಳಿದಿದ್ದರೆ, ಅವರ ಸಂಬಂಧಿ ವರುಣ್ ಸರ್ದೇಸಾಯಿ ಬಾಂದ್ರಾ (ಪೂರ್ವ)ದಿಂದ ಸ್ಪರ್ಧಿಸುತ್ತಿದ್ದಾರೆ.

ಪಕ್ಷದ ರಾಜ್ಯಸಭಾ ಸದಸ್ಯ ಸಂಜಯ್ ರಾವುತ್ ಸಹೋದರ ಹಾಗೂ ಹಾಲಿ ಶಾಸಕ ಸುನಿಲ್ ರಾವುತ್ ಅವರಿಗೆ ಶಿವಸೇನಾ (ಯುಬಿಟಿ)ಮತ್ತೊಮ್ಮೆ ಮಣೆ ಹಾಕಿದೆ. ಶರದ್ ಪವಾರ್ ನೇತೃತ್ವದ ಎನ್‌ಸಿಪಿ ಕೂಡ ತನ್ನ ಅನೇಕ ನಾಯಕರ ಸಂಬಂಧಿಕರಿಗೆ ಟಿಕೆಟ್ ಘೋಷಿಸಿದೆ.


FINANCE BONANZA
Upto ₹10,000
ಕ್ಯಾಶ್ ಬ್ಯಾಕ್*
CASH BACK BONANZA
Upto ₹26,000
ಕ್ಯಾಶ್ ಬ್ಯಾಕ್*
ಉಚಿತ*
FIRE-BOLTT SMART CALLING WATCH WORTH ₹20000
BIGGEST Deepavali SALE
UPTO 70% OFF
ಗಿರಿಯಾಸ್
ಗೃಹಬಳಕೆ ವಸ್ತುಗಳ ವ್ಯಾಪಾರಿಗಳು 1971 ರಿಂದ
EXCHANGE DHAMAKA
Upto ₹65,000
ಮಹೋನ್ನತ ಪ್ರಾರಂಭೋತ್ಸವ
ಮೆಗಾ 165ನೇ ಸ್ಟೋರ್
ಕೆಜಿಎಫ್
ಬಂಗಾರಪೇಟೆ ಮುಖ್ಯ ರಸ್ತೆ (ಕೋರ್ಟ್ ಕಾಂಪ್ಲೆಕ್ಸ್ ಎದುರು)
ರಾಬರ್ಟ್‌ಸನ್‌ಪೇಟ್, ಕೆಜಿಎಫ್ – 563101, ದೂ: 95917 98130
ಮಳಿಗೆಗಳು 10.30AM – 10PM ವರೆಗು ತೆರೆದಿರುತ್ತದೆ (25ನೇ ಅಕ್ಟೋಬರ್ – 3ನೇ ನವೆಂಬರ್ 2024)
FINANCE POWERED BY Groww
0% EMI Upto 3,500 Cash Back*
MIN PRODUCT VALUE ₹10,000
1 ಇ.ಎಮ್.ಐ ಉಚಿತ*
ಕೇವಲ ಪಾವತಿಸಿ ₹1 ಮನೆಗೆ ತೆಗೆದುಕೊಂಡು ಹೋಗಿ*
HDFC BANK FESTIVE TREATS
10% INSTANT DISCOUNT ON CC & DC EMI* MIN SWIPE ₹17,500 MAX CASH BACK UPTO ₹3,000
YES BANK 5% INSTANT CASHBACK ON CC EMI* MIN SWIPE ₹20000 MAX CASH BACK UPTO ₹2000
DBS BANK 5% INSTANT CASHBACK ON CC EMI* MIN SWIPE ₹15000 MAX CASH BACK UPTO ₹2500
ASSURED BUYBACK UPTO 70% On New Purchase*
Redmi REDMI 13 5G 6+128
EFFECTIVE PRICE ₹14,999* (PRICE AFTER CASH BACK)
EMI STARTS FROM ₹1,422
ಉಚಿತ: POWERBANK WORTH ₹1599*
vivo V40E 5G 8+128
EFFECTIVE PRICE ₹23,690* (PRICE AFTER CASH BACK)
EMI STARTS FROM ₹2,189
ಉಚಿತ: EARBUDS WORTH ₹4999*
oppo RENO 12 5G 8/256
EFFECTIVE PRICE ₹29,490* (PRICE AFTER CASH BACK)
EMI STARTS FROM ₹2,696
ಉಚಿತ: TWS EARBUDS WORTH ₹4990*
iPhone 16
EFFECTIVE PRICE ₹74,900* (PRICE AFTER CASH BACK)
EXCHANGE BONUS UPTO ₹6000
EMI STARTS FROM ₹2,825
ಉಚಿತ: ANC EARBUDS OR WIRELESS MAGSAFE POWER BANK WORTH ₹6499*
SAMSUNG Galaxy S24 Series
own now at ₹2625/- month*
EFFECTIVE PRICE ₹59,990* (PRICE AFTER CASH BACK)
GET: ANC EARBUDS @ ₹199*
DELL INS 15 10% CASH BACK
Ryzen 3-7320U
8GB 512GB SSD
15.6 FHD
Win 11 MSO 21
OFFER PRICE ₹31,990
ಇ.ಎಮ್.ಐ ₹2,666 MRP ₹49,395
ಉಚಿತ: 32GB PENDRIVE + W/L MOUSE WORTH ₹1299*
Lenovo SLIM 3 10% CASH BACK
RYZEN 5 7520U
16GB, 512GB SSD
RADEON 610M
15.6" FHD
WIN 11 MSO, 21
OFFER PRICE ₹43,990
ಇ.ಎಮ್.ಐ ₹3,666 MRP ₹69,890
ಉಚಿತ: 32GB PENDRIVE AND W/L MOUSE WORTH ₹1,299*
MacBook
EMI STARTS FROM ₹3,031
UPTO ₹10000 CASHBACK
ಉಚಿತ: 1 YEAR EXTENDED WARRANTY WORTH ₹9999*
DELL INS 15 3520 10% CASH BACK
12th Gen i5
16GB, 512GB
15.6" FHD
Win 11 MSO 21
OFFER PRICE ₹50,990
ಇ.ಎಮ್.ಐ ₹4,249 MRP ₹78,753
ಉಚಿತ: SMART WATCH WORTH ₹7,999
hp VICTUS 10% CASH BACK
RYZEN 5, 5600H
512GB SSD, 16GB
4GB NVIDIA RTX 3050
15.6FHD 144 HZ
WIN 11 MSO21
OFFER PRICE ₹61,990
ಇ.ಎಮ್.ಐ ₹5,166 MRP ₹84,638
ಉಚಿತ: SMART WATCH WORTH ₹7,999*
LG 75 UHD Ai 4K SMART ಎಲ್ಇಡಿ 75UT80406LA
ಇ.ಎಮ್.ಐ ₹4,999
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
SAMSUNG 55 CRYSTAL 4K UHD SMART ಎಲ್ಇಡಿ 55Q60D
ಇ.ಎಮ್.ಐ ₹1,990
SONY BRAVIA 55 4K ULTRA HD SMART ಓಎಲ್ಇಡಿ GOOGLE TV
BEST PRICE ₹1,39,990
Haier 43 ಕ್ಯೂಎಲ್ಇಡಿ GOOGLE TV
ಇ.ಎಮ್.ಐ ₹3,116
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
NVY PRIDE OF INDIA LOWEST PRICE CHALLENGE 4K ಎಲ್ಇಡಿ
52% OFF
NVY Official LED partner of RCB
Model	Price	EMI
43 4K SMART	₹18,990	₹1,582
55 4K SMART	₹29,490	₹2,457
SAMSUNG 653 LITRES SIDE BY SIDE RS76CG8103S9HL
ಇ.ಎಮ್.ಐ ₹4,990
LG 650 Ltrs CONVERTIBLE SIDE BY SIDE REFRIGERATOR WITH PREMIUM GLASS DOOR, SMART INVERTER COMPRESSOR, HYGIENE FRESH+ GL-B257DBM3
ಇ.ಎಮ್.ಐ ₹3,999
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
Whirlpool 411L 2 Star Convertible Frost Free Double-Door Refrigerator
ಇ.ಎಮ್.ಐ ₹3,733
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
IFB 8 ಕೆಜಿ ಫ್ರಂಟ್ ಲೋಡಿಂಗ್
ಇ.ಎಮ್.ಐ ₹3,274
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
Panasonic 7 ಕೆಜಿ ಟಾಪ್ ಲೋಡಿಂಗ್
ಇ.ಎಮ್.ಐ ₹1,449
Haier 22 ಲೀ ಕನ್‌ವೆಂಕ್ಷನ್ ಮೈಕ್ರೋವೇವ್
ಇ.ಎಮ್.ಐ ₹884
DAIKIN 1.0 TON 3 STAR INVERTER SPLIT AC
ಇ.ಎಮ್.ಐ ₹3,249
ಉಚಿತ: ₹20000 ಮೌಲ್ಯದ FIRE-BOLTT SMART CALLING WATCH
OFFER VALID TILL STOCK LAST | OFFER VALID TILL STOCK LAST
Prestige MIXER GRINDER ENDURA 1000W+ PRESSURE COOKER SS POPULAR 3 LTR MILTON CASSEROLE MARVEL JR GIFT SET
OFFER PRICE ₹8,590 MRP ₹13,890
EUREKA FORBES WATER PURIFIERS AQUAGUARD BLAZE INSTA RO+UV+TA HOT & AMB + VACUUM CLEANER CLEAN SWEEP+ lifelong MASSAGER GUN MASSAGER (LLGM09, BLACK)
OFFER PRICE ₹31,990 MRP ₹56,499
KAFF CHIMNEY MAINZ 60-DC + HOB HBR 604A + KENSTAR 3 LTRS INSTANT GEYSER
OFFER PRICE ₹34,990 MRP ₹60,790
VIJAYALAKSHMI WET GRINDER PYRAMIDS+ IRON BOX ECO DRY IRON+ Prestige NON STICK COOKWARE DLX GRANITE BYK
OFFER PRICE ₹6,190 MRP ₹11,495
SONY AUDIO SOUND BAR HT-S20 - 5.1CH, 400W, DOLBY DIGITAL.
OFFER PRICE ₹13,990
ಇ.ಎಮ್.ಐ ₹1,166 MRP ₹23,990
LG SAMSUNG SONY Haier Panasonic NVY IFB Godrej LLOYD Whirlpool BOSCH Electrolux PHILIPS hp acer DELL Lenovo ASUS vivo oppo ONEPLUS mi iPhone JBL
BLUE STAR HAFELE Symphony HAVELLS USHA DAIKIN GENERAL Prestige VOLTAS VOLTAS·beko Butterfly Preethi VIJAYALAKSHMI ULTRA EUREKA FORBES pureit Livpure FABER KENSTAR BAJAJ Crompton MAHARAJA V-GUARD ZEBRONICS KAFF OZONE
GIRIAS THE CONSUMER DURABLE PEOPLE Since 1971
ಅಂದ್ರಹಳ್ಳಿ 95918 35070 | ಅತ್ತಿಬೆಲೆ 99009 99009 77747 | ಆರ್.ಟಿ.ನಗರ 91080 65665 | ಆನೇಕಲ್ 9036289556 | ಇಂದಿರಾನಗರ 9035499255 | ಉತ್ತರಹಳ್ಳಿ 90362 89563 | ಕತ್ರಿಗುಪ್ಪೆ 9035499288 | ಕನಕಪುರ ಮುಖ್ಯ ರಸ್ತೆ 90082 20739 | ಕುಣಿಗಲ್ 90362 89546 | ಕೆಂಗೇರಿ 99009 77712 | ಕೆಜಿಎಫ್ 95917 98130 | ಕೆಆರ್ ಪುರಂ 9019929881 | ಕೋರಮಂಗಲ 90354 11200 | ಕೋಲಾರ 90082 20791 | ಗಾಂಧಿನಗರ 9035499311 | ಗುಬ್ಬಿ 9035027688 | ಗೌರಿಬಿದನೂರು 90354 99244 | ಚನ್ನಪಟ್ಟಣ 9035023186 | ಚಿಂತಾಮಣಿ 90362 89552 | ಚಿಕ್ಕಜಾಲ 95918 32080 | ಚಿಕ್ಕಬಳ್ಳಾಪುರ 9591561669 | ಜಯನಗರ 90354 99077 | ಜಾಲಹಳ್ಳಿ ಕ್ರಾಸ್ 9008220804 | ತಿಪಟೂರು 90362 89548 | ತುಮಕೂರು 90082 18009 | ದೊಡ್ಡಬಳ್ಳಾಪುರ 77602 12888 | ನಾಗರಭಾವಿ 90354 99191 | ನೆಲಮಂಗಲ 9606922798 | ಬಾಗೇಪಲ್ಲಿ 9036289562 | ಬ್ರಿಗೇಡ್ ರಸ್ತೆ 9035499066 | ಬನಶಂಕರಿ 9035499199 | ಬನ್ನೇರುಘಟ್ಟ ರೋಡ್ 9035422500 | ಬಸವನಗುಡಿ 90354 99244 | ಭಾರ್ತಿಯಾ ಮಾಲ್ 70900 00981 | ಮಾದನಾಯಕನಹಳ್ಳಿ 90362 89550 | ಮತ್ತಿಕೆರೆ 90352 22377 | ಮಲ್ಲೇಶ್ವರಂ 90354 99233 | ಮಾಗಡಿರಸ್ತೆ 90362 89557 | ಮಾರತ್‌ಹಳ್ಳಿ 90354 99011 | ಮಾಲೂರು 9036984484 | ಮೈಸೂರು ರಸ್ತೆ 90354 99188 | ಯಲಹಂಕ 9036001315 | ರಾಜಾಜಿನಗರ 9035499144 | ರಾಮನಗರ 9606922697 | ವಿಜಯನಗರ 96069 22795 | ಶಿರಾ 9035023188 | ಸದಾಶಿವನಗರ 9035499088 | ಸಹಕಾರನಗರ 90199 29882 | ಹಿರಿಯೂರು 9035023185 | ಹೆಚ್‌ಆರ್‌ಬಿಆರ್ ಲೇಔಟ್ 90354 99177 | ಹೆಬ್ಬಗೋಡಿ 90350 50023 | ಹೆಸರಘಟ್ಟ ಮುಖ್ಯ ರಸ್ತೆ 90362 89551 | ಹೊಸಕೋಟೆ 90362 89545 | ಹೊಸೂರು 04344 243633 | ಹೊಸೂರು ರಸ್ತೆ 9035499022
STORE LOCATOR
*ನಿಯಮಗಳು ಮತ್ತು ಷರತ್ತುಗಳು ಅನ್ವಯಿಸುತ್ತವೆ. ಹಣಕಾಸು ಕಂಪನಿಯ ಸ್ವಂತ ವಿವೇಚನೆಯಿಂದ ಹಣಕಾಸು. ಆಯ್ದ ಬ್ರಾಂಡ್‌ಗಳು ಮತ್ತು ಮಾಡೆಲ್‌ಗಳ ಮೇಲೆ 20% ಕ್ಯಾಶ್‌ಬ್ಯಾಕ್ ಮತ್ತು 1 ಇಎಂಐ ರಿಯಾಯಿತಿ. ರೂ.10000 ವರೆಗೆ ಬಜಾಜ್ ಕ್ಯಾಶ್ ಬ್ಯಾಕ್ / ವೋಚರ್‌ಗಳು ಆಯ್ದ ನಗರಗಳಲ್ಲಿ ಮಾತ್ರ ಮಾನ್ಯವಾಗಿರುತ್ತವೆ. 3 ಇಎಂಐ ಅನ್ನು ತೆರವುಗೊಳಿಸಿದ ನಂತರ ಕ್ಯಾಶ್ ಬ್ಯಾಕ್ / ವೋಚರ್‌ಗಳನ್ನು ಗ್ರಾಹಕರ ಬ್ಯಾಂಕ್ ಖಾತೆ / ಐಎಫ್‌ಎಲ್ ವ್ಯಾಲೆಟ್‌ಗೆ ಕ್ರೆಡಿಟ್ ಮಾಡಲಾಗುತ್ತದೆ. ಆಯ್ಕೆಮಾಡಿದ ಮೊಬೈಲ್‌ಗಳಲ್ಲಿ 70% ವರೆಗೆ ಖಚಿತವಾದ ಮರುಖರೀದಿಯು ಮಾನ್ಯವಾಗಿರುತ್ತದೆ.*ಉತ್ತಮ ಕೆಲಸದ ಸ್ಥಿತಿಯಲ್ಲಿರಲು ಎಂ.ಆರ್.ಪಿ ಮತ್ತು ಉತ್ಪನ್ನದ ಮೇಲೆ ಮಾನ್ಯವಾದ ವಿನಿಮಯ ಕೊಡುಗೆ. ಹಳೆಯ ಉತ್ಪನ್ನದ ಸ್ಥಿತಿಯನ್ನು ಆಧರಿಸಿ ವಿನಿಮಯ ಮೌಲ್ಯವು ಭಿನ್ನವಾಗಿರುತ್ತದೆ.
165 ಮೆಗಾ ಸ್ಟೋರ್ಸ್. ದಕ್ಷಿಣ ಭಾರತದ ನಂ.1 ಗೃಹೋಪಯೋಗಿ ವಸ್ತುಗಳ ಮಾರಾಟಗಾರರು.
SHOP ONLINE @ www.giriasindia.com
"like" us on facebook HTTPS://WWW.FACEBOOK.COM/GIRIAS.INDIA
WE SUPPORT ROUND TABLE INDIA LADIES CIRCLE INDIA

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ನಿಮಗೆ ಮನಃಶಾಂತಿ ಬೇಕಾಗಿದ್ದರೆ ಇತರರಲ್ಲಿ ದೋಷ ಹುಡುಕಬೇಡಿ. ಸಾಧ್ಯವಾದಷ್ಟೂ ನಿಮ್ಮಲ್ಲಿ ಇರುವ ದೋಷಗಳನ್ನು ಕಂಡುಕೊಳ್ಳಿ.

-ಶಾರದಾದೇವಿ

ಬೆಂಗಳೂರಿನಲ್ಲಿ ಕಟ್ಟಡ ದುರಂತ ಮಾಲೀಕ, ಅಧಿಕಾರಿಗಳೇ ಹೊಣೆ

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ವ್ಯಾಪ್ತಿಯ ಬಾಬು ಸಾ ಪಾಳ್ಯದಲ್ಲಿ ನಿರ್ಮಾಣ ಹಂತದಲ್ಲಿದ್ದ ಏಳು ಅಂತಸ್ತಿನ ಕಟ್ಟಡ ಕುಸಿದು, ದೇಶದ ಬೇರೆ ಬೇರೆ ರಾಜ್ಯಗಳ ಎಂಟು ಕಾರ್ಮಿಕರು ಜೀವ ಕಳೆದುಕೊಂಡಿದ್ದಾರೆ. ನಾಪತ್ತೆಯಾಗಿರುವ ಒಬ್ಬರ ಸುಳಿವು ಮೂರು ದಿನ ಕಳೆದರೂ ಪತ್ತೆಯಾಗಿಲ್ಲ. ಅವಶೇಷಗಳಡಿ ಸಿಕ್ಕಿಬಿದ್ದಿರುವ ಸಂಶಯದ ಮೇಲೆ, ಶೋಧ ಕಾರ್ಯಾಚರಣೆ ಮುಂದುವರಿದಿದೆ. ಇಂತಹ ಅನಾಹುತ ಘಟಿಸಿದಾಗಲೆಲ್ಲ ಸರ್ಕಾರದ ನೇತಾರರು, ಹಿರಿಯ ಅಧಿಕಾರಿಗಳು, 'ಇನ್ನು ಮುಂದೆ ಹೀಗಾಗದಂತೆ ಕಟ್ಟೆಚ್ಚರ ವಹಿಸಲಾಗುವುದು, ನಿಯಮ ಪಾಲನೆಯಲ್ಲಿ ನಿರ್ಲಕ್ಷ್ಯ ತೋರಿದ ಅಧಿಕಾರಿಗಳ ವಿರುದ್ಧ ಶಿಸ್ತುಕ್ರಮ ಜರುಗಿಸಲಾಗುವುದು' ಎಂದು ಘೋಷಿಸುತ್ತಾರೆ. ಜೀವಹಾನಿಯ ಆಘಾತ ನೆನಪಿನಿಂದ ಮರೆಯಾಗುತ್ತಿದ್ದಂತೆ, ಆಡಳಿತದ ಚುಕ್ಕಾಣಿ ಹಿಡಿದವರು, ಅಧಿಕಾರಿಗಳು ಮೌನವಾಗುತ್ತಾರೆ. ಮತ್ತೊಂದು ಅವಘಡ ನಡೆಯುವವರೆಗೆ ಕಾಯ್ದೆ, ನಿಯಮಗಳ ಅನುಷ್ಠಾನ, ಶಿಸ್ತುಕ್ರಮ ಎಲ್ಲವನ್ನೂ ಮರೆತುಬಿಡುತ್ತಾರೆ. ಹೀಗಾಗಿ, ಬೆಂಗಳೂರು ಸೇರಿದಂತೆ ರಾಜ್ಯದ ವಿವಿಧ ನಗರಗಳಲ್ಲಿ ಕಟ್ಟಡಗಳ ಕುಸಿತ ಹಾಗೂ ಸಾವಿನ ಪ್ರಕರಣಗಳು ಮರುಕಳಿಸುತ್ತಲೇ ಇವೆ. ಬಾಬು ಸಾ ಪಾಳ್ಯದ ಪ್ರಕರಣವನ್ನೇ ನೋಡುವುದಾದರೆ, ನಿರ್ಮಾಣ ಹಂತದ ಕಟ್ಟಡ ಮಹಾನಗರ ಪಾಲಿಕೆಯ ವ್ಯಾಪ್ತಿಯಲ್ಲಿಯೇ ಇದೆಯಾದರೂ ಅದು ಸರ್ಕಾರದ ಯಾವುದೇ ನಗರ ಯೋಜನಾ ಪ್ರಾಧಿಕಾರದ ಅನುಮೋದನೆ ಪಡೆಯದ ರೆವಿನ್ಯೂ ಬಡಾವಣೆಯ ಪ್ರದೇಶ. ರಾಜಕೀಯ ನಾಯಕರು, ರಿಯಲ್ ಎಸ್ಟೇಟ್ ಉದ್ಯಮಿಗಳ ಹಿತಾಸಕ್ತಿ ಹಾಗೂ ಪಾಲಿಕೆಗೆ ವರಮಾನ ಬರಬೇಕೆಂಬ ಏಕೈಕ ಕಾರಣಕ್ಕೆ ಇಂತಹ ಅನಧಿಕೃತ ಬಡಾವಣೆಗಳ ನಿವೇಶನಗಳಿಗೆ 'ಬಿ' ಖಾತೆಯನ್ನು ನೀಡಲಾಗುತ್ತಿದೆ. 'ಬಿ' ಖಾತೆಯನ್ನೂ ಸಕ್ರಮಗೊಳಿಸಿ 'ಎ' ಖಾತೆ ನೀಡಬೇಕೆಂಬ ಬೇಡಿಕೆ-ಪ್ರಕ್ರಿಯೆ ದಶಕಗಳಿಂದ ನನೆಗುದಿಗೆ ಬಿದ್ದಿದೆ. ಆಡಳಿತ ನಡೆಸಿದ ಎಲ್ಲ ಪಕ್ಷಗಳ ನಾಯಕರೂ ಈ ಅಕ್ರಮದ ಮಹಾಪೋಷಕರಂತೆ ಕಾರ್ಯನಿರ್ವಹಿಸಿದ್ದಾರೆ. ಹೀಗಾಗಿ, ಯಾರೋ ಒಬ್ಬರನ್ನು ದೂರಿದರೆ ಪ್ರಯೋಜನವೇನೂ ಆಗದು.



ಐಎಎಸ್ ಶ್ರೇಣಿಯ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡುವುದರ ಜತೆಗೆ ಇಂತಹ ಕಟ್ಟಡ ಮಾಲೀಕರ ವಿರುದ್ಧ ಕಠಿಣ ಕ್ರಮ ಜರುಗಿಸಿದರಷ್ಟೇ ವ್ಯವಸ್ಥೆ ಸರಿದಾರಿಗೆ ಬಂದೀತು

ಬಾಬು ಸಾ ಪಾಳ್ಯದಲ್ಲಿ ನಿರ್ಮಾಣ ಹಂತದ ಕಟ್ಟಡವು ರೆವಿನ್ಯೂ ಬಡಾವಣೆ ವ್ಯಾಪ್ತಿಯಲ್ಲಿ ಇದ್ದುದರಿಂದಾಗಿ, ನಿರ್ಮಾಣಕ್ಕೆ ಮುನ್ನ ಕಟ್ಟಡ ನಕ್ಷೆಗೆ ಅನುಮೋದನೆ ಪಡೆದಿರಲಿಲ್ಲ. ತರಾತುರಿಯಲ್ಲಿ ನಿರ್ಮಿಸಿ, ಯಾರಿಗೋ ಮಾರಾಟ ಮಾಡಿ ದುಡ್ಡು ಸಂಪಾದಿಸುವ ಕಟ್ಟಡ ಮಾಲೀಕನ ದುರಾಸೆ ಹಾಗೂ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಬಡಪಾಯಿ ಕಾರ್ಮಿಕರು ಬಲಿಯಾಗಿದ್ದಾರೆ. ಹೀಗಾಗಿಯೇ, ಭದ್ರವಾದ ತಳಪಾಯ ಹಾಕದೇ ಏಳು ಅಂತಸ್ತಿನ ಕಟ್ಟಡವನ್ನು ನಿರ್ಮಿಸಲಾಗುತ್ತಿತ್ತು. ಬಿಬಿಎಂಪಿ ವ್ಯಾಪ್ತಿಯಲ್ಲಿ ಕಟ್ಟಡಗಳನ್ನು ನಕ್ಷೆಗೆ ಅನುಗುಣವಾಗಿ ನಿರ್ಮಿಸಲಾಗುತ್ತಿದೆಯೇ? ನಿಯಮ ಉಲ್ಲಂಘಿಸಲಾಗಿದೆಯೇ ಎಂಬುದರ ಪರಿಶೀಲನೆಗೆ ಪ್ರತ್ಯೇಕ ವಿಭಾಗವೇ ಇದೆ. ಇಂತಹ ಕಟ್ಟಡಗಳ ಬಗ್ಗೆ ಯಾರಿಗೆ ಸಂದೇಹ ಬಂದರೂ ಸಂಬಂಧಿಸಿದ ವಾರ್ಡ್‌ನ ಕಿರಿಯ ಅಥವಾ ಸಹಾಯಕ ಎಂಜಿನಿಯರ್‌ಗೆ ದೂರು ನೀಡಬಹುದು. ದೂರು ಬಂದ 24 ಗಂಟೆಯೊಳಗೆ ಈ ಎಂಜಿನಿಯರ್‌ಗಳು ಸ್ಥಳ ಪರಿಶೀಲನೆ ಮಾಡಿ, ಉಲ್ಲಂಘನೆಯಾಗಿದ್ದರೆ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗೆ ವರದಿ ಸಲ್ಲಿಸಬೇಕು. ಸ್ಥಳ ಭೇಟಿಗೆ 15 ದಿನದೊಳಗೆ ಸಮಯ ನಿಗದಿ ಮಾಡುವಂತೆ ಕಟ್ಟಡ ಮಾಲೀಕನಿಗೆ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ನೋಟಿಸ್ ನೀಡಬೇಕು. ಅದರೊಳಗೆ ಸ್ಥಳ ಪರಿಶೀಲನೆ ಮಾಡಿ, ಮೇಲಧಿಕಾರಿಗಳಿಗೆ ವರದಿ ಸಲ್ಲಿಸಬೇಕು. ನಿಯಮ ಉಲ್ಲಂಘಿಸಿ ನಿರ್ಮಿಸಿದ್ದರೆ, ನಿರ್ಮಿಸುತ್ತಿದ್ದರೆ 30 ದಿನದೊಳಗೆ ಅದನ್ನು ತೆರವುಗೊಳಿಸುವಂತೆ ಗಡುವು ನೀಡಿ ನೋಟಿಸ್ ಜಾರಿಗೊಳಿಸಬೇಕು. ನೋಟಿಸ್ ಜಾರಿಯಾದ ದಿನದಿಂದ ನಿರ್ಮಾಣ ಹಂತದ ಕಟ್ಟಡದ ಯಥಾಸ್ಥಿತಿ ಕಾಪಾಡುವುದು ವಾರ್ಡ್ ಮಟ್ಟದ ಎಂಜಿನಿಯರ್ ಹೊಣೆಯಾಗಿರುತ್ತದೆ. ಈ ಪ್ರಕರಣದಲ್ಲಿ ಸೆಪ್ಟೆಂಬರ್ 21ರಂದೇ ಇಂತಹ ನೋಟಿಸ್ ನೀಡಲಾಗಿತ್ತು. ಹಾಗಿದ್ದರೂ ಕಟ್ಟಡ ಕಾಮಗಾರಿ ಮುಂದುವರಿದಿತ್ತು. ನೋಟಿಸ್ ಕೊಟ್ಟ ಬಳಿಕ ಕಾಮಗಾರಿ ಸ್ಥಗಿತಗೊಳಿಸಲು ಕ್ರಮ ಜರುಗಿಸದೇ ಇದ್ದುದು ಅಧಿಕಾರಿಯ ಕರ್ತವ್ಯಲೋಪ. ಜತೆಗೆ, ಮಾಲೀಕನ ಪ್ರಮಾದವೂ ಹೌದು. ಸಾಮಾನ್ಯವಾಗಿ ಇಂತಹ ಪ್ರಕರಣಗಳಲ್ಲಿ, ನೋಟಿಸ್ ಸ್ವೀಕರಿಸಿದ ಕೂಡಲೆ ಅದನ್ನೇ ಮುಂದಿಟ್ಟು ಕಟ್ಟಡ ಮಾಲೀಕರು ನ್ಯಾಯಾಲಯದ ಮೊರೆ ಹೋಗಿ ತಡೆಯಾಜ್ಞೆ ತರುತ್ತಾರೆ. ಅಲ್ಲಿಗೆ, ಯಾವುದೇ ಕ್ರಮವನ್ನೂ ಕೈಗೊಳ್ಳದ ಅಸಹಾಯಕತೆಗೆ ಅಧಿಕಾರಿಗಳು ಸಿಲುಕುತ್ತಾರೆ. ಏತನ್ಮಧ್ಯೆ, ಸ್ಥಳೀಯ ರಾಜಕೀಯ ನಾಯಕರು ಕೂಡ ಇಂತಹ ಅಕ್ರಮ ಕಟ್ಟಡಗಳ ತಂಟೆಗೆ ಹೋಗದಂತೆ ಅಧಿಕಾರಿಗಳ ಮೇಲೆ ಒತ್ತಡ ಹಾಕುತ್ತಾರೆ. ಹೀಗೆ, ಮಾಲೀಕ, ಅಧಿಕಾರಿಗಳು, ಸ್ಥಳೀಯ ರಾಜಕಾರಣಿಗಳ ಅಪವಿತ್ರ ಮೈತ್ರಿಯಿಂದಾಗಿ ಇಂತಹ ಅಕ್ರಮ ಕಟ್ಟಡಗಳು ತಲೆ ಎತ್ತುತ್ತಲೇ ಇವೆ. ಅಕ್ರಮಗಳನ್ನು ತಡೆಯಲು ಇರುವ ಕಾನೂನುಗಳು ಪಾಲನೆಯಾಗಬೇಕಾದರೆ, ಮತ್ತೆ ಇಂತಹ ದುರಂತಗಳು ನಡೆಯದಂತೆ ನೋಡಿಕೊಳ್ಳಬೇಕಾದರೆ ಈ ಅಕ್ರಮ ಕೂಟವನ್ನು ಭೇದಿಸುವ ಕೆಲಸವನ್ನು ಸರ್ಕಾರ ನಿಷ್ಠುರವಾಗಿಯೇ ಮಾಡಬೇಕು. ಅನಧಿಕೃತವಾಗಿ ಕಟ್ಟಡಗಳು ನಿರ್ಮಾಣವಾದರೆ ಅದಕ್ಕೆ ವಲಯ ಆಯುಕ್ತರನ್ನೇ ಹೊಣೆ ಮಾಡುವುದಾಗಿ ಮುಖ್ಯಮಂತ್ರಿ ಎಚ್ಚರಿಸಿದ್ದಾರೆ. ಐಎಎಸ್ ಶ್ರೇಣಿಯ ಅಧಿಕಾರಿಗಳನ್ನು ಹೊಣೆಗಾರರನ್ನಾಗಿ ಮಾಡುವುದರ ಜತೆಗೆ ಇಂತಹ ಕಟ್ಟಡ ಮಾಲೀಕರ ವಿರುದ್ಧ ಕಠಿಣ ಕ್ರಮ ಜರುಗಿಸಿದರಷ್ಟೇ ವ್ಯವಸ್ಥೆ ಸರಿದಾರಿಗೆ ಬಂದೀತು. ಕ್ರಮದ ಎಚ್ಚರಿಕೆಯು ಮಾತಿಗೆ ಸೀಮಿತವಾಗದೆ ಅನುಷ್ಠಾನಕ್ಕೆ ಬರಲಿ.

ದಿನದ ಟ್ವೀಟ್

ಅದೇ ರಾಗ ಅದೇ ಹಾಡು



ಒಮ್ಮೆ ಮಳೆ ನಿಂತು, ಜಲಾವೃತ ಪ್ರದೇಶಗಳಲ್ಲಿ ನೀರು ಇಳಿಮುಖವಾಗಿ, ಸೂರ್ಯ ಪ್ರಕಾಶಿಸತೊಡಗಿದಂತೆ ದೈನಂದಿನ ವ್ಯವಹಾರ ಎಂದಿನಂತೆ ಸಾಗತೊಡಗುತ್ತದೆ. ಕೋಪ ಕರಗುತ್ತದೆ, ಭವಿಷ್ಯದಲ್ಲಿ ಅಂತಹ ಪ್ರವಾಹ ಸ್ಥಿತಿ ಬಾರದಂತೆ ಮಾಡಲು ಯಾವುದೇ ಕಾರ್ಯತಂತ್ರ ಇರುವುದಿಲ್ಲ, ಮಾಧ್ಯಮಗಳಲ್ಲಿ ಪ್ರಚಾರ ಇರುವುದಿಲ್ಲ, ಇಂತಹುದೇ ಸ್ಥಿತಿಯನ್ನು ಮತ್ತೆ ನಾವು ಎದುರಿಸುವವರೆಗೂ ಅವುಗಳ ಬಗ್ಗೆ ತಲೆಕೆಡಿಸಿಕೊಳ್ಳಲು ಸಮಯ ಇರುವುದಿಲ್ಲ. ವ್ಯವಸ್ಥೆಯು ಹದಗೆಡುತ್ತಿದೆ ಮತ್ತು ದುರಸ್ತಿ ಮಾಡಲಾರದಂತೆ ಆಗಿದೆ.

ರೋಹಿತ್ ಸಿಂಹ, ಎಂಜಿನಿಯರ್

ಕಿಡಿನುಡಿ



ಕ್ಷೇತ್ರ ಪುನರ್ವಿಂಗಡಣೆ ಕಾರಣವನ್ನು ಮುಂದಿಟ್ಟು, ಹೆಚ್ಚು ಮಕ್ಕಳನ್ನು ಮಾಡಿಕೊಳ್ಳುವಂತೆ ಸ್ಟಾಲಿನ್ ಮತ್ತು ನಾಯ್ಡು ಅವರು ನಾಗರಿಕರನ್ನು ಒತ್ತಾಯಿಸಿದ್ದಾರೆ. ನಮ್ಮ ಗರ್ಭಕೋಶವು ಅವರ ಮತಯಂತ್ರವಲ್ಲ ಎಂದು ಈ ನಾಯಕರಿಗೆ ಹೇಳುವವರು ಯಾರು? ಎರಡು ರಾಜ್ಯಗಳ ಮುಖ್ಯಮಂತ್ರಿಗಳಿಂದ ಇದೆಂತಹ ಬೇಜವಾಬ್ದಾರಿಯ ಹೇಳಿಕೆಗಳು? ಇದನ್ನು ಕೇಳಿ ಮಹಿಳೆಯರಿಗೆ ಕೋಪ ಬಂದಿಲ್ಲವೇಕೆ?

ಶಾಲಿನ್ ಮರಿಯಾ ಲಾರೆನ್ಸ್, ಲೇಖಕಿ

25 ವರ್ಷಗಳ ಹಿಂದೆ

ಸೋಮವಾರ, 25-10-1999

● **ಬಿಜೆಪಿ ಸಭೆಯಲ್ಲಿ ಗದ್ದಲ, ಮಾರಾಮಾರಿ**

ಬೆಂಗಳೂರು, ಅ. 24– ಬಿಜೆಪಿ ಕಾರ್ಯಕರ್ತರಿಂದ ಕಲ್ಲುತೂರಾಟ, ಪಕ್ಷದ ಕಚೇರಿಗೆ ಮುತ್ತಿಗೆ, ಪೊಲೀಸರಿಂದ ಲಾಠಿ ಪ್ರಹಾರ... ಇಷ್ಟೆಲ್ಲಾ ಅವಾಂತರಗಳ ನಡುವೆಯೇ ಜಗದೀಶ ಶೆಟ್ಟರ್ ಅವರು ಬಿಜೆಪಿ ಶಾಸಕಾಂಗ ಪಕ್ಷದ ನಾಯಕರಾಗಿ ಇಂದು ಆಯ್ಕೆಯಾದರು.

ಶೆಟ್ಟರ್ ಅವರು ಪಕ್ಷದ ಹಿರಿಯ ಮುಖಂಡ ಬಿ.ಬಿ. ಶಿವಪ್ಪ ಅವರನ್ನು 32–11 ಮತಗಳಿಂದ ಪರಾಭವಗೊಳಿಸಿದರು. ಶೆಟ್ಟರ್ ಅವರ ಆಯ್ಕೆಯ ಸುದ್ದಿ ತಿಳಿಯುತ್ತಲೇ, ಪಕ್ಷದ ಕಚೇರಿಯ ಹೊರಗೆ ಭಾರಿ ಸಂಖ್ಯೆಯಲ್ಲಿ ಕಾದು ನಿಂತಿದ್ದ ಕಾರ್ಯಕರ್ತರು ಹಾಗೂ ಶಿವಪ್ಪ ಅವರ ಬೆಂಬಲಿಗರು ಆಕ್ರೋಶಗೊಂಡು ಬಿ.ಎಸ್.ಯಡಿಯೂರಪ್ಪ ಹಾಗೂ ಅನಂತ ಕುಮಾರ್ ಅವರ ವಿರುದ್ಧ ಘೋಷಣೆಗಳನ್ನು ಕೂಗುತ್ತಾ, ಕಲ್ಲುತೂರಾಟ ಆರಂಭಿಸಿದರು, ಕುರ್ಚಿಗಳನ್ನು ಎತ್ತೆಸೆದರು.

50 ವರ್ಷಗಳ ಹಿಂದೆ

ಶುಕ್ರವಾರ, 25-10-1974

● **ಪಿಎಲ್‌ಒಗೆ ಪಶ್ಚಿಮದಂಡೆ ಹಿಂದಿರುಗಿಸಲು ಜೋರ್ಡನ್ ವಿರೋಧ**

ರಬಾತ್, ಅ. 24- ಪಶ್ಚಿಮದಂಡೆಯನ್ನು ಪ್ಯಾಲೆಸ್ಟೀನ್ ವಿಮೋಚನಾ ಸಂಘಟನೆಗೆ (ಪಿಎಲ್‌ಒ) ಹಿಂದಿರುಗಿಸುವ ಯಾವುದೇ ಪ್ರಯತ್ನವನ್ನು ವಿರೋಧಿಸಿ ಜೋರ್ಡನ್ ಮತ ಚಲಾಯಿಸಿದ್ದರಿಂದ ಅರಬ್ ಶೃಂಗಸಭೆಯು ತೀವ್ರ ಬಿಕ್ಕಟ್ಟಿಗೆ ಸಿಲುಕಿದೆ.

ನಾಳೆಯಿಂದ ಆರಂಭವಾಗಲಿರುವ ಶೃಂಗಸಭೆಯಲ್ಲಿ ಪಾಲ್ಗೊಳ್ಳಲಿರುವ 20 ಅರಬ್ ದೇಶಗಳ ವಿದೇಶಾಂಗ ಸಚಿವರು, 1967ರಲ್ಲಿ ಇಸ್ರೇಲ್‌ನಿಂದ ಆಕ್ರಮಣಕ್ಕೆ ಒಳಗಾದ ಪಶ್ಚಿಮದಂಡೆಯ ಮೇಲೆ ದೊರೆ ಹುಸೇನ್ ಸಾರ್ವಭೌಮತ್ವದ ಪಟ್ಟವನ್ನು ಕಿತ್ತುಹಾಕುವ ನಿರ್ಣಯದ ಪರವಾಗಿ ಮತ ಹಾಕಿದರು. ಪಶ್ಚಿಮದಂಡೆಯನ್ನು ಹಿಂದಿರುಗಿಸುವ ಪ್ರಯತ್ನದ ವಿರುದ್ಧವಾಗಿ ತಮ್ಮ ನಿಯೋಗವು ಮತ ಚಲಾಯಿಸಿತು ಎಂದು ಮೊರೊಕ್ಕೊದಲ್ಲಿನ ಜೋರ್ಡನ್‌ನ ರಾಯಭಾರಿ ಸುದ್ದಿಗಾರರಿಗೆ ತಿಳಿಸಿದರು.

ಜಾತಿ ತಾರತಮ್ಯದ ವಾಸ್ತವವನ್ನು ಎದುರಿಸಲಾರದವರು ಅಂಕಿ–ಅಂಶಗಳಿಗೆ ಹೆದರುತ್ತಾರೆ

ಜಾತ್ಯತೀತತೆ ಮತ್ತು ಜಾತಿ ಜನಗಣತಿ



ಅನುರಣನ

ನಾರಾಯಣ ಎ.

ಜಾತಿ ಜನಗಣತಿ ಅರ್ಥಾತ್ ದೇಶದ ಜನಸಂಖ್ಯೆಯನ್ನು ಜಾತಿವಾರು ಲೆಕ್ಕ ಹಾಕುವುದಕ್ಕೆ ಕೆಲವರು ವ್ಯಕ್ತಪಡಿಸುತ್ತಿರುವ ಆಕ್ಷೇಪಗಳು ವಿಚಿತ್ರವಾಗಿವೆ. ಜಾತಿ ಜನಗಣತಿ ನಡೆಸಿದರೆ ಜಾತೀಯತೆ ಹೆಚ್ಚಾಗುತ್ತದೆ, ಧರ್ಮದಲ್ಲಿ ಒಡಕು ಮೂಡುತ್ತದೆ, ದೇಶದ ಏಕತೆಗೆ ತೊಡಕಾಗುತ್ತದೆ ಎಂಬಂತಹ ವಿತಂಡವಾದಗಳನ್ನು ಕೇಳಿಸಿಕೊಂಡಾಗಿದೆ. ಈಗ ಉಡುಪಿಯ ಪೇಜಾವರ ಮಠದ ಮುಖ್ಯಸ್ಥರಾದ ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, 'ಭಾರತ ಜಾತ್ಯತೀತ ರಾಷ್ಟ್ರವಾಗಿರುವುದರಿಂದ ಇಲ್ಲಿ ಜಾತಿ ಜನಗಣತಿ ಯಾಕೆ?' ಎಂಬ ಪ್ರಶ್ನೆ ಎತ್ತಿದ್ದಾರೆ.

ಭಾರತದ ಸಂವಿಧಾನದ ಮಹೋನ್ನತ ಮೌಲ್ಯಗಳಲ್ಲಿ ಒಂದಾಗಿರುವ ಜಾತ್ಯತೀತತೆಯನ್ನು (ಸೆಕ್ಯುಲರಿಸಂ ಅಂತ ಕರೆಯಲಾಗಿರುವ ಈ ಮೌಲ್ಯವನ್ನು ಜಾತ್ಯತೀತತೆ ಅಂತ ಭಾಷಾಂತರಿಸುವುದು ಸರಿಯೇ ಎಂಬ ವಿಚಾರಕ್ಕೆ ಮತ್ತೆ ಬರೋಣ) ವಿರೋಧಿಸುವುದು, ಅಣಕಿಸುವುದು, ನಿಷೇಧಿಸಿಯೇ ಬಿಡಬೇಕೆಂಬ ಒತ್ತಡ ಹೇರುವುದೆಲ್ಲಾ ಬಹಳ ಕಾಲದಿಂದ ನಡೆಯುತ್ತಿದೆ. ಈಗ ಜಾತ್ಯತೀತತೆಯನ್ನು ಎಳೆದುತಂದು ಜಾತಿ ಜನಗಣತಿಯನ್ನು ವಿರೋಧಿಸುವ ಪ್ರಯತ್ನದ ಎಳೆಯೊಂದು ಮೊಳಕೆಯೊಡೆಯುತ್ತಿರುವಂತಿದೆ. ಕರ್ನಾಟಕದಲ್ಲಿ ಈಗಾಗಲೇ ಆಗಿಹೋಗಿರುವ ಜಾತಿ ಜನಗಣತಿಯ ಅಥವಾ ಸಾಮಾಜಿಕ, ಆರ್ಥಿಕ ಮತ್ತು ಶೈಕ್ಷಣಿಕ ಸಮೀಕ್ಷೆಯ ವರದಿಯನ್ನು ಬಿಡುಗಡೆ ಮಾಡುವುದರ ವಿರುದ್ಧ ಲಿಂಗಾಯತರು ಮತ್ತು ಒಕ್ಕಲಿಗರಂತಹ ಪ್ರಬಲ ಸಮುದಾಯಗಳ ಮುಖಂಡರು ಒಟ್ಟುಸೇರಿ ಪ್ರತಿಭಟಿಸುತ್ತಿದ್ದಾರೆ. ಹಾಗಿರುವಾಗ, ಬ್ರಾಹ್ಮಣ ಜಾತಿಗೆ ಸೇರಿದ ಒಂದು ಪಂಗಡದವರ ಒಂದು ಉಪಪಂಗಡಕ್ಕೆ ಸಂಬಂಧಿಸಿದ ಎಂಟು ಮಠಗಳ ಪೈಕಿ ಒಂದು ಮಠಕ್ಕೆ ನಡೆದುಕೊಳ್ಳುವವರಿಗೆ ಸ್ವಾಮೀಜಿಯಾಗಿರುವವರೊಬ್ಬರು ಜಾತಿ ಜನಗಣತಿಯ ಬಗ್ಗೆ ಆಕ್ಷೇಪವೆತ್ತಿದರೆ ಏನೀಗ ಎಂದು ಯಾರಾದರೂ ಕೇಳಬಹುದು. ಇಲ್ಲೊಂದು ವ್ಯತ್ಯಾಸವಿದೆ.

ಕರ್ನಾಟಕದಲ್ಲಿ ದಶಕದ ಹಿಂದೆ ನಡೆದ ಜಾತಿ ಜನಗಣತಿ ಸಮರ್ಪಕವಾಗಿ ನಡೆದಿಲ್ಲ ಎನ್ನುವ ವಾದ ಮುಂದಿಟ್ಟು, ಅದರ ಫಲಿತಾಂಶ ಬಹಿರಂಗಗೊಳಿಸುವುದು ಬೇಡ ಅಂತ ಒಕ್ಕಲಿಗ ಮತ್ತು ಲಿಂಗಾಯತ ಮುಖಂಡರು ಹಟ ಹಿಡಿದಿದ್ದಾರೆ. ಅವರ ವಾದ ಸರಿಯೋ ತಪ್ಪೋ ಅನ್ನುವ ಜಿಜ್ಞಾಸೆ ಬೇರೆ. ಆದರೆ, ಅವರು ಜಾತಿ ಜನಗಣತಿಯೇ ಬೇಡ ಅಂತ ಮೇಲ್ನೋಟಕ್ಕೆ ಹೇಳುತ್ತಿಲ್ಲ. ಪೇಜಾವರ ಮಠದ ಮುಖ್ಯಸ್ಥರು ಹೇಳುತ್ತಿರುವುದು ಹಾಗಲ್ಲ. ಅವರ ಹೇಳಿಕೆಯಲ್ಲಿ ಜಾತಿ ಜನಗಣತಿಯೇ ಬೇಡ ಎನ್ನುವ ಅರ್ಥವಿದೆ. ಅದಕ್ಕಿಂತಲೂ ಮುಖ್ಯವಾಗಿ ಜಾತಿ ಜನಗಣತಿಯನ್ನು ವಿರೋಧಿಸಲು ಅವರು ಸಂವಿಧಾನವನ್ನೇ ಗುರಾಣಿಯನ್ನಾಗಿ ಬಳಸಲು ಹೊರಟಿದ್ದಾರೆ. ಆದಕಾರಣ, ಈ ಆಕ್ಷೇಪವನ್ನು ಅವರು ಎತ್ತಿರುವುದರ ಯುಕ್ತಾಯುಕ್ತತೆಯ ಬಗ್ಗೆ ಮತ್ತು ಆಕ್ಷೇಪಕ್ಕೆ ಅವರು ಬಳಸಿರುವ ಸಮರ್ಥನೆಯ ಪ್ರಸ್ತುತತೆಯ ಬಗ್ಗೆ ಹಲವು ಪ್ರಶ್ನೆಗಳು ಏಳುತ್ತವೆ.

ಮೊದಲಿಗೆ, ಜಾತ್ಯತೀತ ರಾಷ್ಟ್ರವೊಂದು ಜಾತಿ ಆಧಾರಿತ ಜನಗಣತಿಯ ಉಸಾಬರಿಗೆ ಯಾಕೆ ಮುಂದಾಗಬೇಕು ಎನ್ನುವುದು ಪೇಜಾವರ ಮಠದ ಮುಖ್ಯಸ್ಥರ ಪ್ರಶ್ನೆಯಾಗಿದ್ದರೆ, ಕಾವಿ ತೊಟ್ಟು 'ಸ್ವಾಮೀಜಿ' ಅಂತ ಕರೆಸಿಕೊಳ್ಳುವ ಅವರಿಗೆ ಅಪ್ಪಟ ಲೌಕಿಕ ವ್ಯವಹಾರಗಳಿಗೆ ಸಂಬಂಧಿಸಿದ ಜಾತಿ ಜನಗಣತಿ, ಅದರೊಳಗಣ ರಾಜಕಾರಣದ ಒಳಸುಳಿಗಳಂತಹವನ್ನು ಪ್ರಶ್ನಿಸುವ ಉಸಾಬರಿ ಬೇಕೇ ಎನ್ನುವ ಮರುಪ್ರಶ್ನೆಯನ್ನು ಯಾರಾದರೂ ಕೇಳಬೇಕಲ್ಲವೇ? ಜಾತಿವಾರು ಅಂಕಿ-ಅಂಶಗಳ ಆಧಾರದ ಮೇಲೆಯೇ ಹಿಂದುಳಿದ ಜಾತಿಗಳ ರಾಜಕೀಯ ಪ್ರಾತಿನಿಧ್ಯದ ಪ್ರಶ್ನೆ ಇತ್ಯರ್ಥ ಆಗಬೇಕು ಎಂದು ನ್ಯಾಯಾಂಗ ಹೇಳಿದೆ. ಈ ಅಂಕಿ-ಅಂಶ ಇನ್ನೂ ಸರಿಯಾಗಿ ಲಭ್ಯವಿಲ್ಲದೆ ಹಲವಾರು ರಾಜ್ಯಗಳಲ್ಲಿ ಸ್ಥಳೀಯ ಚುನಾವಣೆಗಳೇ ನನೆಗುದಿಗೆ ಬಿದ್ದಿವೆ.

ಜಾತಿಯಾಧಾರಿತ ಜನಗಣತಿ ನಡೆಸುವಲ್ಲಿ ನುರಿತ ನ್ಯಾಯಾಧೀಶರಿಗೆ ಕಾಣಿಸದ ಜಾತ್ಯತೀತತೆಯ ಅಡ್ಡಿ, ಸದರಿ ಮಠದ ಮುಖ್ಯಸ್ಥರಿಗೆ ಯಾವ ನ್ಯಾಯಿಕ, ಧಾರ್ಮಿಕ ತತ್ವದ ಆಧಾರದಲ್ಲಿ ಕಾಣಿಸಿದ್ದು? ಅಂಕಿ–ಅಂಶ ಕಲೆಹಾಕುವುದರ ಮೂಲಕ, ಯಾವ ಜಾತಿಯವರು ಎಷ್ಟೆಷ್ಟು ಮಂದಿ ಇದ್ದಾರೆ, ಯಾರ‍್ಯಾರ ಸ್ಥಿತಿಗತಿಗಳು ಹೇಗಿವೆ ಅಂತ ವಸ್ತುನಿಷ್ಠವಾಗಿ ಅರಿತುಕೊಳ್ಳುವುದು ಎಂದರೆ ವಾಸ್ತವದ ಜತೆ ಮುಖಾಮುಖಿಯಾಗುವುದು ಎಂದು ಅರ್ಥ. ಸನ್ಯಾಸಿಗಳು ಅಂತ ಕರೆಸಿಕೊಳ್ಳುವವರು ವಾಸ್ತವವನ್ನು ಎದುರಿಸುವುದು ಹೇಗೆ ಅಂತ ಸಮಾಜಕ್ಕೆ ತಿಳಿಹೇಳುವ ಜವಾಬ್ದಾರಿ ಹೊತ್ತವರು. ಸತ್ಯದ ಜತೆ ಅನುಸಂಧಾನ ನಡೆಸಲು ಲೌಕಿಕ ಜಗತ್ತಿನ ಜನರಲ್ಲಿ ಸ್ಥೈರ್ಯ ತುಂಬಬೇಕಾದವರು. ವಾಸ್ತವದಿಂದ ವಿಮುಖರಾಗಲು ಸಮರ್ಥನೆಗಳನ್ನು ಅನ್ವೇಷಿಸುವುದಕ್ಕೆ ಸನ್ಯಾಸಿಗಳು ಬೇಕಿಲ್ಲ. ಅದನ್ನು ಮಾಡಲು ರಾಜಕಾರಣಿಗಳಿದ್ದಾರೆ.

ಇನ್ನು, 'ಸೆಕ್ಯುಲರಿಸಂ' ಎನ್ನುವ ಪರಿಕಲ್ಪನೆಯನ್ನು ಸಂವಿಧಾನದಲ್ಲಿ ಸೇರಿಸಿರುವುದು ಜಾತಿಯನ್ನು ಉದ್ದೇಶಿಸಿ ಅಲ್ಲ. 'ಸೆಕ್ಯುಲರಿಸಂ' ಎಂದರೆ ಜಾತ್ಯತೀತತೆ ಎನ್ನುವುದಕ್ಕಿಂತ ಧರ್ಮನಿರಪೇಕ್ಷತೆ ಅಂತ ಅರ್ಥೈಸಿಕೊಳ್ಳುವುದೇ ಹೆಚ್ಚು ಸೂಕ್ತ. 'ಧರ್ಮ' ಎನ್ನುವ ಪದವನ್ನು ಯುರೋಪಿನ 'ರಿಲಿಜನ್' ಎಂಬ ಅರ್ಥದಲ್ಲಿ ಬಳಸಬಾರದು ಎಂದೂ, ಹಾಗಾಗಿ ಧರ್ಮನಿರಪೇಕ್ಷತೆಯ ಬದಲು ಮತನಿರಪೇಕ್ಷತೆ ಅಂತ ಕರೆಯುವುದು ಸೂಕ್ತ ಅಂತಲೂ ಒಂದು ವಾದವಿದೆ. ಅದೇ ರೀತಿ, 'ನಿರಪೇಕ್ಷತೆ' ಎನ್ನುವುದು ಸರಿಯಲ್ಲ, ಅದು 'ಸರ್ವಧರ್ಮ ಅಥವಾ ಸರ್ವಮತ ಸಮಭಾವ' ಅಂತ ಇನ್ನೊಂದು ವಾದವಿದೆ. ಏನೇ ಆದರೂ, ಯಾವ ಪದಪ್ರಯೋಗ ನಡೆಸಿದರೂ, ಅರ್ಥ ಇಷ್ಟೇ: ಸರ್ಕಾರಕ್ಕೆ ಅರ್ಥಾತ್ ಇಡೀ ಆಡಳಿತ ವ್ಯವಸ್ಥೆಗೆ ಅದರದ್ದೇ ಆದ ಒಂದು ಧರ್ಮ ಅಥವಾ ಮತ ಅಂತ ಇರಬಾರದು (The state shall not have any religious affiliation). ಎಲ್ಲಾ ಧರ್ಮ–ಮತಗಳನ್ನು ಅದು ಸಮನಾಗಿ ಕಾಣಬೇಕು. ಇದನ್ನೇ ಪರ್ಯಾಯವಾಗಿ ಜಾತ್ಯತೀತತೆ ಅಂತ ಕರೆಯುವುದಾದರೆ, ರಾಷ್ಟ್ರವು ಜಾತ್ಯತೀತವಾಗಿರುವುದಕ್ಕೂ ಜಾತಿ ಜನಗಣತಿ ನಡೆಸಬಾರದೆಂಬ ವಾದಕ್ಕೂ ಯಾವ ಸಂಬಂಧವೂ ಕಾಣಿಸುವುದಿಲ್ಲ. ಜಾತ್ಯತೀತತೆಯ ಉದಾತ್ತ ತತ್ವವನ್ನು ಅಕ್ಷರರೂಪದಲ್ಲಿ ಮಾತ್ರ ಸಂವಿಧಾನದಲ್ಲಿ ಉಳಿಸಿಕೊಂಡು ಆಡಳಿತದಲ್ಲಿ ಅದನ್ನು ಅಕ್ಷರಶಃ ಧಿಕ್ಕರಿಸಿ ಪ್ರಜಾತಂತ್ರದ ನಾಲ್ಕೂ ಸ್ತಂಭಗಳ ಮೇಲೆ ಬಹುಸಂಖ್ಯಾತರ ಧರ್ಮದ ಲೇಪ ಹಚ್ಚುವ ಮಹಾನ್ ಅಪಾಯಕಾರಿ ಬೆಳವಣಿಗೆಯನ್ನು ತೆರೆಮರೆಯಲ್ಲಿ ನಿಂತು ಪೋಷಿಸಿ-ಪ್ರೋತ್ಸಾಹಿಸುತ್ತಿರುವ ಕೆಲ ಮಂದಿ ಈಗ ಇದ್ದಕ್ಕಿದ್ದಂತೆಯೇ ಜಾತ್ಯತೀತತೆಯ ಬಗ್ಗೆ ಮಾತನಾಡುತ್ತಿರುವುದು ದೊಡ್ಡ ಅಸಂಗತ ನಾಟಕದಂತಿದೆ.



ನಿಜಕ್ಕೂ 'ಸ್ವಾಮೀಜಿಗಳು' ಅಂತ ಕರೆಯಬಹುದಾದ, ಸರ್ವಜನರ ಲೇಸನ್ನೇ ಬಯಸುವವರು ಯಾರಾದರೂ ಇದ್ದರೆ ಅವರು ಜಾತ್ಯತೀತವೆಂದು ಕರೆದುಕೊಳ್ಳುವ ಈ ದೇಶದ ಜಾತಿಯ ವಿದ್ಯಮಾನಗಳಿಗೆ ಸಂಬಂಧಿಸಿದಂತೆ ಕೇಳಬೇಕಿರುವ ಸಾವಿರ ಪ್ರಶ್ನೆಗಳಿವೆ, ಎತ್ತಿ ತೋರಿಸಬೇಕಿರುವ ನೋವಿನ ಚಿತ್ರಗಳಿವೆ. ಜಾತ್ಯತೀತ ರಾಷ್ಟ್ರದಲ್ಲಿ ಇನ್ನೂ ಕಸ ಗುಡಿಸುವ, ಕೊಳೆ ತೊಳೆಯುವ ಕೆಲಸಗಳನ್ನು ನಿರ್ದಿಷ್ಟ ಜಾತಿಯವರು ಮಾತ್ರ ಮಾಡುವ ಸ್ಥಿತಿ ಯಾಕಿದೆ? ಯಾವ ಪ್ರದೇಶದಲ್ಲಿ ಧ್ವನಿ ಇಲ್ಲದ ಜಾತಿಗಳು ಎಂದು ಕರೆಸಿಕೊಳ್ಳುವವರ ಸಂಖ್ಯೆ ಹೆಚ್ಚು ಇದೆಯೋ ಅಲ್ಲೆಲ್ಲಾ ಬಡತನ ಯಾಕೆ ತಾಂಡವ ವಾಡುತ್ತಿದೆ? ಆಧಾರವಿಲ್ಲದ ಆಪಾದನೆಗಳನ್ನು ಹೊರಿಸಿ, ಅಲ್ಪಸಂಖ್ಯಾತ, ಪರಿಶಿಷ್ಟ ಮುಂತಾಗಿ ಗುರುತಿಸಲ್ಪಡುವ ಸಮುದಾಯಗಳನ್ನು ಸಾರ್ವಜನಿಕವಾಗಿ ಬಡಿದು ಸಾಯಿಸುವುದು, ಅವರ ಮನೆಗಳನ್ನು ಬುಲ್ಡೋಜರ್ ಬಳಸಿ ಕೆಡವುವಂತಹ ಪ್ರಕರಣಗಳೇಕೆ ಹೆಚ್ಚುತ್ತಿವೆ? ಅಂದರೆ ಕೆಲವು ಜಾತಿಗಳಿಗೆ ನ್ಯಾಯಾಲಯಗಳ ಮೂಲಕ ಸಾಂಸ್ಥಿಕ ನ್ಯಾಯ, ಇನ್ನು ಕೆಲವು ಜಾತಿಗಳಿಗೆ ಕ್ರೂರಾತಿಕ್ರೂರ ಬೀದಿ ನ್ಯಾಯ! ಇವೆಲ್ಲಾ ಯಾವ ಸೀಮೆಯ ಜಾತ್ಯತೀತ ನ್ಯಾಯ ಎಂದು ಕೇಳುವ ಲೋಕಾತೀತ ಪ್ರಜ್ಞೆ ಇರುವ ಸಂತರು ಈ ದೇಶಕ್ಕೆ ಈಗ ಬೇಕಿದೆ.

ಮದುವೆಯು ಜಾತಿಯೊಳಗೆ ಆಗಬೇಕು, ಊಟ ಜಾತಿಯವರ ಜತೆಗೆ ಕುಳಿತು ಮಾಡಬೇಕು, ಜಾತಿಗೊಂದು, ಉಪಜಾತಿಗೊಂದು, ಪಂಗಡಕ್ಕೊಂದು, ಒಳಪಂಗಡಕ್ಕೊಂದು ಎಂಬಂತೆ ಮಠಗಳಿರಬೇಕು. ಜೈಲು-ಬೇಲು ಎಲ್ಲವೂ ಜಾತಿ ನೋಡಿಯೇ ನಿರ್ಣಯವಾಗಬೇಕು. ಇವು ಯಾವುವೂ ಜಾತಿಯ ಹೆಸರಲ್ಲಿ ಸಮಾಜವನ್ನು ಒಡೆಯುವುದಿಲ್ಲ. ಆದರೆ, ಯಾವ್ಯಾವ ಜಾತಿಯಲ್ಲಿ ಎಷ್ಟೆಷ್ಟು ಜನರಿದ್ದಾರೆ, ಎಷ್ಟೆಷ್ಟು ಸಂಪತ್ತಿದೆ, ಎಂಥೆಂಥ ಅಧಿಕಾರ ಸ್ಥಾನಗಳನ್ನು ಹೊಂದಿದ್ದಾರೆ ಅಂತ ಅಧಿಕೃತ ಅಂಕಿಅಂಶಗಳನ್ನು ಸಂಗ್ರಹಿಸಿದರೆ ಮಾತ್ರ ಧರ್ಮದಲ್ಲಿ ಒಡಕು ಮೂಡುತ್ತದೆಯಂತೆ! ರಾಷ್ಟ್ರೀಯತೆಗೆ ತೊಡಕಾಗುತ್ತದೆಯಂತೆ! ಬರಬರುತ್ತಾ ಈ ದೇಶದಲ್ಲಿ ರಾಷ್ಟ್ರೀಯತೆ ಮತ್ತು ಧರ್ಮರಕ್ಷಣೆಯ ಹೆಸರಲ್ಲಿ ತಲೆಬುಡ ಇಲ್ಲದ ಏನನ್ನೇ ಆದರೂ ಹೇಳಿ ದಕ್ಕಿಸಿಕೊಳ್ಳಬಹುದು.

ಚುರುಮುರಿ



ಹಲೋ... ನಾನು ಮಳೆ!

● ಬಿ.ಎನ್. ಮಲ್ಲೇಶ್

'ಹಲೋ... ಟೀವಿ ನ್ಯೂಸ್ ಚಾನೆಲ್ಲೋರಾ? ನಾನು ಮಳೆ ಮಾತಾಡೋದು'.

'ಏನು? ಮಳೇನಾ? ಹಂಗೂ ಹೆಸರಿಟ್ಕಂತಾರ?'

'ಯಾಕೆ... ನೀವು ಸೂರ್ಯ, ಚಂದ್ರ, ಆಕಾಶ ಅಂತ ಹೆಸರಿಟ್ಕಳಲ್ವಾ? ಹಂಗೇ ನಾನು ಮಳೆ'.

'ಸರಿ, ಏನು ಫೋನ್ ಮಾಡಿದ್ದು?'

'ನಿಮ್ ನ್ಯೂಸ್ ಚಾನೆಲ್‌ನಲ್ಲಿ ನನ್ನ ಮಾನ ಯಾಕೆ ಕಳೀತಿದೀರಿ?'

'ನಾವೆಲ್ಲಿ ನಿಮ್ ಮಾನ ಕಳೆದಿದೀವಿ?'

'ಮತ್ತೇನು? ಮಳೆ ಅವಾಂತರ, ಜನರ ಬದುಕು ಕಸಿದ ಮಳೆ, ಜೀವ ತೆಗೆದ ಮಳೆ ಅಂತೆಲ್ಲ ತೋರಿಸ್ತಿದೀರಿ. ಅಲ್ಲರೀ, ಚರಂಡಿ ಹೂಳು ತೆಗೆಯಲ್ಲ, ರಾಜಕಾಲುವೆ ಮೇಲೆ ಮನೆ ಕಟ್ಕಂಡಿದೀರಿ, ಮತ್ತೆ ನಾನೆಲ್ಲಿ ಹರೀಬೇಕು? ರಸ್ತೆ ಮೇಲೆ ತಾನೆ? ಕಳಪೆ ಕಾಮಗಾರಿ ಮಾಡಿದ್ದಕ್ಕೆ ರಸ್ತೆಗುಂಡಿ ಬೀಳುತ್ತೆ, ರಸ್ತೆ ಮೇಲೆ ವ್ಹೀಲಿಂಗ್, ರೀಲಿಂಗ್ ಮಾಡೋ ನಿಮ್ ಮಕ್ಳಿಗೆ ಚರಂಡೀಲಿ ತೇಲಿಂಗ್ ಮಾಡೋದು ಕಲ್ಸಿ, ಇಲ್ಲಿ ಮುಳುಗಿದ್ರೆ ಇನ್ನೆಲ್ಲಾದ್ರು ಏಳ್ತಾರೆ'.

'ಅಲ್ಲ, ನೀವೇನ್ ಹೇಳ್ತಿದೀರಿ?'

'ಇರೋದನ್ನೇ ಹೇಳ್ತಿರೋದು. ತಗ್ಗು ಪ್ರದೇಶಕ್ಕೆ ನೀರು ಅಂತಿದ್ರಲ್ಲ, ಈ ಸಲ ಐದನೇ ಫ್ಲೋರ್‌ಗೂ ನುಗ್ಗಿದೀನಿ. ನನ್ನ ದಾರಿ ನನಗೆ ಬಿಡದಿದ್ರೆ ನಿಮ್ ದಾರಿಗೇ ನಾನು ನುಗ್ಗೋದು'.

'ಅಲ್ಲ, ಸ್ವಲ್ಪ ಸಮಾಧಾನ...'

'ಏನ್ರೀ ಸಮಾಧಾನ? ನೀವು ಕರೆದಾಗ ಬರ್ಬೇಕು, ಬೇಡ ಅಂದಾಗ ಆಕಾಶದಲ್ಲೇ ನಿಲ್ಬೇಕಾ? ಮಳೆ ಬರದಿದ್ರೆ ಬರ ಅಂತೀರಿ, ಬಂದ್ರೆ ಅವಾಂತರ ಅಂತೀರಿ'.

'ಹಲೋ... ಹಲೋ...'

'ಯಾಕ್ರೀ... ಸಿಗ್ನಲ್ ಸಿಗ್ತಿಲ್ವಾ? ಅಥ್ವ ನಾಟಕನಾ?'

'ಅಯ್ಯೋ ಸಿಗ್ನಲ್ ಸಿಗೋದಿದ್ರಿ, ಟವರ್ರೇ ಕಳ್ಳನ ಆಗೋಗೇತಂತೆ. ಇರ್ರಿ, ಬ್ರೇಕಿಂಗ್ ನ್ಯೂಸ್ ಕೊಡ್ಬೇಕು'.

'ಆಹಾ, ಎಂಥಾ ಸುಳ್ಳು. ಮೊಬೈಲ್ ಕಳ್ಳನ ಆಗೋದು ಕೇಳಿದ್ದೆ, ಟವರ್ರೇ ಕಳ್ಳನಾನ?'

'ಅಯ್ಯೋ ದೇವ್ರಾಣೆ ಕಣ್ರಿ, ಶಿವಮೊಗ್ಗದಲ್ಲಿ ಕದ್ದಾರಂತೆ, ಇಡ್ರೀ ಫೋನು'.

ಮಳೆ ಮಾತಾಡಲಿಲ್ಲ.

ಸಂಗತ

ಅಸೂಕ್ಷ್ಮ ಜಾಹೀರಾತು: ವಿವೇಚನಾರಹಿತ ನಡೆ

ಮಹಿಳೆಯನ್ನು ವಸ್ತುವಿನಂತೆ ಪರಿಗಣಿಸುವ ಜಾಹೀರಾತೊಂದು ವಿವಾದಕ್ಕೆ ಎಡೆಮಾಡಿದೆ

● ದೀಪಾ ಹಿರೇಗುತ್ತಿ

ದೆಹಲಿ ಮೆಟ್ರೊ ರೈಲುಗಳಲ್ಲಿ ಸ್ತನ ಕ್ಯಾನ್ಸರ್ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಇತ್ತೀಚೆಗೆ ಹಾಕಿದ್ದ ಜಾಹೀರಾತೊಂದು ವಿವಾದಕ್ಕೆ ಕಾರಣವಾಯಿತು. ಕ್ರಿಕೆಟಿಗ ಯುವರಾಜ್ ಸಿಂಗ್ ಅವರ ಯುವಿಕ್ಯಾನ್ ಅನ್ನುವ ಎನ್‌ಜಿಒ ವತಿಯಿಂದ ಪ್ರಕಟಿಸಲಾಗಿದ್ದ ಈ ಜಾಹೀರಾತಿನಲ್ಲಿ 'ನಿಮ್ಮ ಸ್ತನಗಳನ್ನು' ಎನ್ನುವ ಬದಲು 'ನಿಮ್ಮ ಕಿತ್ತಳೆಗಳನ್ನು ತಿಂಗಳಿಗೊಮ್ಮೆ ಪರೀಕ್ಷಿಸಿಕೊಳ್ಳಿ' ಎಂದು ಬರೆಯಲಾಗಿತ್ತು!

ಚೆಕ್ ಯುವರ್ ಬ್ರೆಸ್ಟ್ಸ್ ಎನ್ನುವ ಬದಲು ಚೆಕ್ ಯುವರ್ ಆರೆಂಜಸ್ ಎಂದು ಬರೆಯಲಾಗಿದ್ದ ಈ ಜಾಹೀರಾತಿನ ಸಂಬಂಧ ವಿವಾದ ಸೃಷ್ಟಿಯಾಗುತ್ತಿದ್ದಂತೆಯೇ ದೆಹಲಿ ಮೆಟ್ರೊ ರೈಲು ನಿಗಮ (ಡಿಎಂಆರ್‌ಸಿ) ಇದೀಗ ಅದನ್ನು ವಾಪಸ್ ಪಡೆದಿದೆ. ಕ್ಯಾನ್ಸರ್‌ನಿಂದ ಬಳಲಿ ಗುಣಮುಖರಾಗಿರುವ ಯುವರಾಜ್ ಅವರ ಉದ್ದೇಶ ಒಳ್ಳೆಯದೇ. ಆದರೆ ಸೃಜನಶೀಲತೆಯ ಅತ್ಯುತ್ಸಾಹ ಎಂಬುದು ಹೇಗೆ ಹಿಮ್ಮುಖವಾಗಿ ಚಲಿಸಿ ಅಪಾಯವನ್ನು ಉಂಟು ಮಾಡಬಹುದು ಎನ್ನುವುದಕ್ಕೆ ಈ ಜಾಹೀರಾತಿನಲ್ಲಿ ಬಳಸಿದ್ದ ಪದವೇ ನಿದರ್ಶನ!

ಸರಿ, ಯಾರೋ ಈ ಬಗೆಯ ಯೋಚನೆ ಮಾಡಿದರು ಅಂದುಕೊಳ್ಳಿ. ಲಕ್ಷಾಂತರ ಮಂದಿ ನೋಡುವ ಮೆಟ್ರೊದಂತಹ ಜಾಗದಲ್ಲಿ ಅದನ್ನು ಹಾಕಲು ಅನುಮತಿ ಕೊಟ್ಟವರಿಗೆ, ಅದು ಅಲ್ಲಿ ಹಾಕಲು ಯೋಗ್ಯವೇ ಅಲ್ಲವೇ ಎಂದು ವಿವೇಚನೆಯಿಂದ ಯೋಚಿಸುವ ಸಾಮಾನ್ಯಜ್ಞಾನ ಮೊದಲಿಗೇ ಇರಲಿಲ್ಲವೆ? ಯಾರೋ ಎಷ್ಟೋ ದುಡ್ಡು ಕೊಡುತ್ತಾರೆ ಎಂದು ಏನನ್ನು ಬೇಕಾದರೂ ಹಾಕಲು ಜಾಗ ಕೊಡುವ ಅಧಿಕಾರವು ಮೆಟ್ರೊ ನಿರ್ವಾಹಕರಿಗಾಗಲಿ ಇನ್ನಾವುದೋ ಸಾರ್ವಜನಿಕ ಸಂಸ್ಥೆಗಾಗಲಿ ಇದೆಯೇ? ನಿಜವಾಗಿಯೂ ಇದು ಮುಜುಗರ ತರಿಸುವ ವಿಷಯ.

ಸ್ತನಗಳನ್ನು ಸ್ತನ ಎಂದು ಕರೆಯಲು ಹಿಂಜರಿಯುವ ದೇಶದಲ್ಲಿ ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸುವುದು ಹೇಗೆ ಸಾಧ್ಯ ಎಂದು ನೆಟ್ಟಿಗರೊಬ್ಬರು ಪ್ರಶ್ನಿಸಿದ್ದಾರೆ. ಸತ್ಯವೇ! ಇಂದಿಗೂ ನಮ್ಮ ದೇಶ ಹೆಣ್ಣುಮಕ್ಕಳ ಆರೋಗ್ಯದ ವಿಚಾರದಲ್ಲಿ ಹಿಂದೆಯೇ ಇದೆ. ಅದರಲ್ಲೂ ಖಾಸಗಿ ಅಂಗಗಳಲ್ಲಿ ಏನಾದರೂ ಸಮಸ್ಯೆಯಾದರೆ ವೈದ್ಯರಿಗೆ ತೋರಿಸಿಕೊಳ್ಳುವುದಕ್ಕೇ ಸಂಕೋಚಪಡುವ ಹೆಣ್ಣುಮಕ್ಕಳಲ್ಲಿ ಹಳ್ಳಿಯವರು, ಪಟ್ಟಣದವರು, ಓದಿದವರು, ಓದದವರು ಎನ್ನುವ ಭೇದವಿಲ್ಲ.

ನಮ್ಮೂರಲ್ಲಿ ಆಗಾಗ್ಗೆ ಮ್ಯಾಮೊಗ್ರಫಿ ಅಂದರೆ ಸ್ತನಪರೀಕ್ಷೆಯ ಶಿಬಿರಗಳು ನಡೆಯುತ್ತಿರುತ್ತವೆ. ಪರೀಕ್ಷೆ ಉಚಿತವಾಗಿ ನಡೆದರೂ ಬರುವ ಮಹಿಳೆಯರ ಸಂಖ್ಯೆ ಕಡಿಮೆಯೇ. ಇನ್ನು ಶುಲ್ಕ ಇಟ್ಟರಂತೂ ಬೆರಳೆಣಿಕೆಯಷ್ಟು ಮಹಿಳೆಯರು ಮಾತ್ರ ಬರುವುದು ಎಂದು ನಮ್ಮ ವೈದ್ಯ ಮಿತ್ರರು ಹೇಳುತ್ತಾರೆ. ಅಂದರೆ ನಮ್ಮ ದೇಹದ ಅಂಗಗಳಿಗೆ ತೊಂದರೆಯಾದರೂ ಸಂಕೋಚವು ವೈದ್ಯಕೀಯ ನೆರವು ಪಡೆಯುವುದನ್ನು ತಡೆಯುತ್ತದೆ ಎಂದರೆ ಅದಕ್ಕಿಂತ ಮೂರ್ಖತನದ ವಿಷಯ ಬೇರೊಂದಿರಲಾರದು.

ಪರಿಸ್ಥಿತಿ ಹೀಗಿರುವಾಗ, ಸ್ತನಗಳನ್ನು ಹಾಗೆಂದು ಕರೆಯದೆ ಕಿತ್ತಳೆಗಳು ಎಂದು ಘಂಟಾಘೋಷವಾಗಿ ಸಾರುವುದೆಂದರೆ? ದಿನನಿತ್ಯ ಲಕ್ಷಾಂತರ ಜನ ಓಡಾಡುವ ಮೆಟ್ರೊದಂತಹ ಜಾಗದಲ್ಲಿ ಬ್ರೆಸ್ಟ್ ಎಂಬ ಪದ ಬಳಸಿದ್ದಿದ್ದರೆ ದಿನವೂ ಅದನ್ನು ಓದಿ ಓದಿ ಅದು ಒಂದು ಸಾಮಾನ್ಯ ಪದವಾಗುತ್ತಿತ್ತು ಮತ್ತು ಆ ಪದದ ಬಗೆಗಿರುವ ಮುಜುಗರ ಕೊಂಚವಾದರೂ ಹೋಗುತ್ತಿತ್ತೇನೊ!

ಒಂದು ಮಾಮೂಲಿ ಸ್ಯಾನಿಟರಿ ಪ್ಯಾಡ್ ತರಲು ಗಂಡಸರ ಹತ್ತಿರ ಹೇಳಲು ನಾಚಿಕೆ ಪಡುವ ಹೆಂಗಸರ ಸಂಖ್ಯೆ ಕಡಿಮೆಯೇನೂ ಆಗಿಲ್ಲ. ಯಾವುದೋ ಕಾನೂನುಬಾಹಿರವಾದ ವಸ್ತುವನ್ನು ಮಾರಾಟ ಮಾಡುವವರಂತೆ ಅಂಗಡಿಯವರು ಪ್ಯಾಡ್‌ಗಳನ್ನು ಕಾಗದದಲ್ಲಿ ಸುತ್ತಿ ಕೊಡುವುದೂ ನಿಂತಿಲ್ಲ. ಮನುಷ್ಯನ ದೇಹದ ಇತರ ಅಂಗಗಳಂತೆ ಖಾಸಗಿ ಅಂಗಗಳನ್ನು ನೋಡದೇ ಅವುಗಳ ಜತೆಗೆ ಲೈಂಗಿಕತೆ ಥಳಕು ಹಾಕಿಕೊಂಡೇ ಇರುವುದರಿಂದ ಇವೆಲ್ಲ ಸಮಸ್ಯೆ. ಹಿಂದೆಲ್ಲ ಮಹಿಳಾ ವೈದ್ಯರು ಸಿಗದೇ ಪುರುಷ ವೈದ್ಯರ ಹತ್ತಿರ ಹೋಗದೇ ಗರ್ಭಿಣಿಯರು ಮೃತಪಟ್ಟಿದ್ದೂ ಇತ್ತು! ಇಂದು ಹೆಣ್ಣುಮಕ್ಕಳ ಉಡುಗೆಯಿಂದ ಬ್ರಾದ ಪಟ್ಟಿ ಕೊಂಚವೇ ಇಣುಕಿದರೂ ಹೃದಯಾಘಾತವಾದಂತೆ ವರ್ತಿಸುವವರೂ ಬೇಕಾದಷ್ಟು ಮಂದಿ ಇದ್ದಾರೆ.



ಕುಟುಂಬದವರೆಲ್ಲ ಟಿ.ವಿ. ನೋಡುತ್ತಿದ್ದಾಗ ಸ್ಯಾನಿಟರಿ ನ್ಯಾಪ್‌ಕಿನ್ ಜಾಹೀರಾತು ಬಂದರೆ ಚಾನೆಲ್ ಬದಲಾಯಿಸುವುದೂ ಇದೆ. ಅಂಗಡಿಯಲ್ಲಿ ಕಾಂಡೋಮ್ ಅನ್ನು ಕೇಳಿ ಪಡೆಯಲು ಸಂಕೋಚಪಡುವ ಜನರಿಂದ ಅಸುರಕ್ಷಿತ ಲೈಂಗಿಕತೆ ಸಾಮಾನ್ಯ ಸಂಗತಿ ಎಂಬಂತಾಗಿದೆ. ಇದರ ಪರಿಣಾಮವೆಂದರೆ, ಎಷ್ಟೋ ವರ್ಷಗಳ ಹಿಂದೆ ಕೇಳಿದ್ದ ಏಡ್ಸ್ ಕಾಯಿಲೆ ಮತ್ತೆ ಸದ್ದೇ ಮಾಡದೆ ಹರಡುತ್ತಿದೆ. ಯುವಕ, ಯುವತಿಯರಲ್ಲಿ ಇದರ ಪ್ರಮಾಣ ಹೆಚ್ಚುತ್ತಿದ್ದು ನಿಜಕ್ಕೂ ಆತಂಕಕ್ಕೆ ಕಾರಣವಾಗಿದೆ.

ಮದುವೆಯಾಗದವರಷ್ಟೇ ಅಲ್ಲ, ಮದುವೆಯಾದ ಮಹಿಳೆಯರು ಕೂಡ ಬೇಡದ ಗರ್ಭ ತೆಗೆಸಿಕೊಳ್ಳಲು ವೈದ್ಯರ ಹತ್ತಿರ ಹೋಗದೆ ಗರ್ಭಪಾತದ ಮಾತ್ರೆಯನ್ನು ನುಂಗಿ, ಆ ಗರ್ಭ ಎಕ್ಟೋಪಿಕ್ ಪ್ರೆಗ್ನೆನ್ಸಿ, ಅಂದರೆ ಗರ್ಭನಾಳದಲ್ಲಿ ಗರ್ಭ ಕಟ್ಟಿ ಜೀವವೇ ಹೋದ ಉದಾಹರಣೆಗಳಿವೆ. ಪರಿಸ್ಥಿತಿ ಹೀಗಿರುವಾಗ ಸ್ತನಗಳನ್ನು ಕಿತ್ತಳೆಗಳೆಂದು ಕರೆದು ಹೆಣ್ಣುಮಕ್ಕಳನ್ನು ಮತ್ತಷ್ಟು ಕತ್ತಲಿಗೆ ನೂಕುವ ಕೆಲಸವು ಹಾಸ್ಯಾಸ್ಪದ ಮತ್ತು ಖಂಡನೀಯ.

ಮಹಿಳೆಯರನ್ನು ವಸ್ತುವಾಗಿ ಪರಿಗಣಿಸುವ ಈ ಅಸೂಕ್ಷ್ಮವಾದ ಜಾಹೀರಾತನ್ನು ದೆಹಲಿ ಮೆಟ್ರೊ ವಾಪಸ್ ಪಡೆದಿರುವುದು ಸಮಯೋಚಿತ ನಿರ್ಧಾರವೇ ಸರಿ. ಇನ್ನಾದರೂ ನಾವು ಬದಲಾಗಬೇಕಾಗಿದೆ.

ವಾಚಕರ ವಾಣಿ

ಅಧಿಕಾರದ ಚಪ್ಪರದಲ್ಲಿ ವಂಶವೃಕ್ಷದ ಬಳ್ಳಿಗಳು!

ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ಉಪಚುನಾವಣೆಗೆ ಕೊನೆಗೂ ನಿಖಿಲ್ ಕುಮಾರಸ್ವಾಮಿ ಅವರನ್ನೇ ಅಭ್ಯರ್ಥಿಯನ್ನಾಗಿ ಜೆಡಿಎಸ್ ಘೋಷಿಸಿದೆ. ಮೊನ್ನೆಯೇ ಅವರ ಹೆಸರು ಅಂತಿಮಗೊಂಡಿತ್ತು ಎಂದು ಮಾಧ್ಯಮಗಳಲ್ಲಿ ವರದಿಯಾಗಿದೆ. ಅಂದರೆ, ಸಿ.ಪಿ.ಯೋಗೇಶ್ವರ್ ಅವರು ಬಿಜೆಪಿಯಿಂದ ಹೊರ ಹೋಗುವುದನ್ನೇ ಜೆಡಿಎಸ್‌ನವರು ಕಾಯುತ್ತಿದ್ದರು ಎನ್ನುವುದು ಇದರಿಂದ ಸ್ಪಷ್ಟವಾಗುತ್ತದೆ.

ಸಂಡೂರಿನಲ್ಲಿ ಸಂಸದ ತುಕಾರಾಂ ಅವರ ಪತ್ನಿ ಅನ್ನಪೂರ್ಣ ಅವರಿಗೆ ಕಾಂಗ್ರೆಸ್ ಮಣೆ ಹಾಕಿದ್ದರೆ, ಶಿಗ್ಗಾವಿಯಲ್ಲಿ ಸಂಸದ ಬಸವರಾಜ ಬೊಮ್ಮಾಯಿ ಅವರ ಪುತ್ರನಿಗೆ ಬಿಜೆಪಿ ಮಣೆ ಹಾಕಿದೆ. ಅತ್ತ ವಯನಾಡಿನಲ್ಲಿ ರಾಹುಲ್ ಗಾಂಧಿ ಅವರಿಂದ ತೆರವಾದ ಲೋಕಸಭಾ ಸದಸ್ಯ ಸ್ಥಾನದ ಅಖಾಡಕ್ಕೆ ಪ್ರಿಯಾಂಕಾ ಗಾಂಧಿ ಲಗ್ಗೆ ಇಟ್ಟಿದ್ದಾರೆ! ಅಂತೂ ವಂಶವೃಕ್ಷದ ಬಳ್ಳಿಗಳು ಅಧಿಕಾರದ ಚಪ್ಪರಕ್ಕೆ ಹಬ್ಬುತ್ತಿವೆ. ಜನರಿಗೆ ಸಂತೋಷವಾಗಿದೆ. ಕುಟುಂಬ ರಾಜಕಾರಣಕ್ಕೆ ಮತ್ತೊಮ್ಮೆ ಜೈ!

ಮುಳ್ಳೂರು ಪ್ರಕಾಶ್, ಮೈಸೂರು

ಸಮ್ಮೇಳನ: ಉಚಿತ ಊಟ ಸಲ್ಲ

ಮುಂಬರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ದುಂದುವೆಚ್ಚಕ್ಕೆ ಕಡಿವಾಣ ಹಾಕಿ, ಅದನ್ನು ಸರಳ, ಸುಂದರವಾಗಿ ಆಚರಿಸಬೇಕೆಂಬ ಅಭಿಪ್ರಾಯ ಕೆಲವರಿಂದ ಕೇಳಿಬಂದಿದೆ. ನನ್ನ ವೈಯಕ್ತಿಕ ಸಲಹೆಯೆಂದರೆ, ಸಮ್ಮೇಳನಕ್ಕೆ ಬರುವವರಿಗೆ ಉಚಿತವಾಗಿ ನೀಡುವ ಊಟವನ್ನು ನಿಲ್ಲಿಸಬೇಕು. ಇಲ್ಲಿಯೇ ಗೊಂದಲ, ನೂಕುನುಗ್ಗಲು ಹೆಚ್ಚಾಗಿ ಉಂಟಾಗುವುದು. ಹೆಚ್ಚು ಹೋಟೆಲ್ ಕೌಂಟರ್‌ಗಳನ್ನು ತೆರೆಯಲು ಖಾಸಗಿಯವರಿಗೆ ಅವಕಾಶ ನೀಡಬೇಕು. ತಿಂಡಿ ಮತ್ತು ಊಟಕ್ಕೆ ಕನಿಷ್ಠ ದರ ನಿಗದಿಪಡಿಸುವಂತೆ ಅವರಿಗೆ ಷರತ್ತು ವಿಧಿಸಬೇಕು. ಆಸಕ್ತರು ದುಡ್ಡು ಕೊಟ್ಟು ಊಟ ಮಾಡಿ, ಸಮ್ಮೇಳನದ ಆನಂದವನ್ನು ಸವಿಯುತ್ತಾರೆ. ಇದರಿಂದ ಸರ್ಕಾರಕ್ಕೆ ₹ 8 ಕೋಟಿಯಿಂದ ₹ 10 ಕೋಟಿವರೆಗೂ ಉಳಿತಾಯವಾಗುತ್ತದೆ.

ಗುರು ಜಗಳೂರು, ಹರಿಹರ

ದರ ರೌಂಡ್‌ಆಫ್ ಮಾಡಲು ಅಡ್ಡಿಯೇನು?

50 ಪೈಸೆ ಚಿಲ್ಲರೆ ವಾಪಸ್ ನೀಡದ ಕಾರಣಕ್ಕೆ ಮಾನಸಿಕವಾಗಿ ನೊಂದಿರುವ ಗ್ರಾಹಕರೊಬ್ಬರಿಗೆ ಪರಿಹಾರ ಹಾಗೂ ಮೊಕದ್ದಮೆ ವೆಚ್ಚವಾಗಿ ₹ 15,000 ನೀಡಲು ತಮಿಳುನಾಡಿನ ಕಾಂಚೀಪುರ ಗ್ರಾಹಕರ ವ್ಯಾಜ್ಯ ಪರಿಹಾರ ಆಯೋಗವು ಅಂಚೆ ಇಲಾಖೆಗೆ ಆದೇಶಿಸಿರುವುದು ವರದಿಯಾಗಿದೆ (ಪ್ರ.ವಾ., ಅ. 24). ಬರೀ 50 ಪೈಸೆಗೆ ಇಷ್ಟು ರಂಪ ರಾಮಾಯಣ ಬೇಕಿತ್ತೇ ಎಂಬ ಪ್ರಶ್ನೆ ಎದುರಾಗುತ್ತದೆ. ಆದರೆ, ಗ್ರಾಹಕರ ಹಿತರಕ್ಷಣೆಯನ್ನು ಆಯೋಗವು ಸಮರ್ಪಕವಾಗಿ ಮಾಡುತ್ತಿದೆ ಎಂಬ ನಂಬಿಕೆ ಇಂತಹ ತೀರ್ಪುಗಳಿಂದ ಜನರಿಗೆ ಉಂಟಾಗುತ್ತದೆ.

ಅಂಚೆ ಇಲಾಖೆ, ಬ್ಯಾಂಕ್ ಸೇರಿದಂತೆ ಅನೇಕ ಕಡೆಗಳಲ್ಲಿ ಇಂತಹ ಪರಿಸ್ಥಿತಿ ಇದೆ. ಕೆಲವು ಕಂಪನಿಯ ಚಪ್ಪಲಿಗಳಿಗೆ ₹ 499.95 ಎಂದೆಲ್ಲ ದರಪಟ್ಟಿ ಹಾಕಲಾಗಿರುತ್ತದೆ. ಅನೇಕ ಆಹಾರ ಪದಾರ್ಥಗಳು ಮತ್ತು ಇತರ ವಸ್ತುಗಳ ಬೆಲೆಯನ್ನೂ ಅದೇ ಮಾದರಿಯಲ್ಲಿ ನಿಗದಿಪಡಿಸಲಾಗಿರುತ್ತದೆ. ಬಸ್ ಪ್ರಯಾಣದಲ್ಲೂ (₹11, 21, 31, 19, 29, 39...) ಚಿಲ್ಲರೆ ನೀಡಲು ಕಷ್ಟವಾಗುವಂತಹ ದರಗಳು ಇರುತ್ತವೆ. ಸಾರ್ವಜನಿಕರೊಂದಿಗೆ ಹಣಕಾಸು ವ್ಯವಹಾರ ನಡೆಸುವ ಯಾವುದೇ ಇಲಾಖೆ ಅಥವಾ ಕೈಗಾರಿಕೆಯು ಶುಲ್ಕ ಮತ್ತು ವಸ್ತುಗಳ ಮೇಲೆ ದರದ ಸಮೀಪದ ರೌಂಡ್‌ಆಫ್ ಮಾಡಲು ಅಡ್ಡಿಯೇನು? ಹೀಗೆ ರೌಂಡ್‌ಆಫ್ ಮಾಡಿದಲ್ಲಿ ಅನಗತ್ಯ ಕಿರಿಕಿರಿಗಳಿಗೆ ಆಸ್ಪದ ಇರುವುದಿಲ್ಲ. ಸರ್ಕಾರ ಶೀಘ್ರವೇ ಈ ಕುರಿತು ಒಂದು ನಿರ್ಧಾರ ಕೈಗೊಳ್ಳಲಿ. ಆಗಮಾತ್ರ ಸಿಬ್ಬಂದಿ ಮತ್ತು ಗ್ರಾಹಕರ ನಡುವೆ ಚಿಲ್ಲರೆ ಹಣಕ್ಕಾಗಿ ತಿಕ್ಕಾಟ ಇಲ್ಲವಾಗುತ್ತದೆ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ಬಡಜನರ ಬಿಪಿಎಲ್ ಕಾರ್ಡ್ ಕಸಿದವರು

ರಾಜ್ಯದಲ್ಲಿ 13.87 ಲಕ್ಷ ಬಿಪಿಎಲ್ ಕಾರ್ಡ್‌ಗಳನ್ನು ಅನರ್ಹ ಎಂದು ಗುರುತಿಸಲಾಗಿದ್ದು, ಈ ಪೈಕಿ 3.63 ಲಕ್ಷಕ್ಕೂ ಹೆಚ್ಚು ಕಾರ್ಡ್‌ಗಳನ್ನು ರದ್ದುಪಡಿಸಲಾಗಿದೆ ಎಂದು ಆಹಾರ ಸಚಿವ ಕೆ.ಎಚ್.ಮುನಿಯಪ್ಪ ಸುದ್ದಿಗೋಷ್ಠಿಯಲ್ಲಿ ಇತ್ತೀಚೆಗೆ ಪ್ರಕಟಿಸಿದ್ದಾರೆ. ಇವರಲ್ಲಿ ಸುಮಾರು 4,000 ಸರ್ಕಾರಿ ನೌಕರರು ಇದ್ದಾರೆ ಎಂದು ಹೇಳಿದ್ದಾರೆ. ಕಾನೂನುಬಾಹಿರವಾಗಿ ಮತ್ತು ನಿಯಮ ಉಲ್ಲಂಘಿಸಿ ಬಡವರ ಪಾಲಿನ ಬಿಪಿಎಲ್ ಕಾರ್ಡ್‌ಗಳನ್ನು ಪಡೆದಿರುವ ಸರ್ಕಾರಿ ನೌಕರರ ಮೇಲೆ ಸರ್ಕಾರ ಏಕೆ ಕ್ರಮ ಕೈಗೊಳ್ಳಬಾರದು? ನನಗೆ ತಿಳಿದಿರುವಂತೆ, ಗ್ರಾಮೀಣ ಪ್ರದೇಶದಲ್ಲಿ ಈಗಲೂ 10-15 ಎಕರೆ ಜಮೀನು ಹೊಂದಿರುವ ರೈತರು ಸಹ ಬಿಪಿಎಲ್ ಕಾರ್ಡ್‌ನ ಉಪಯೋಗ ಪಡೆಯುತ್ತಿದ್ದಾರೆ. ಇಂತಹವರನ್ನು ಸಹ ಗುರುತಿಸುವ ಕೆಲಸವಾಗಬೇಕು.

ಬೂಕನಕೆರೆ ವಿಜೇಂದ್ರ, ಮೈಸೂರು

ಯಾವುದು ಅಪಶಕುನ? ಯಾರು ಅಮಂಗಲರು?

'ಕ್ಷೌರಿಕ ವೃತ್ತಿ ಮಾಡುವ ಸವಿತಾ ಸಮಾಜದವರು ಅಮಂಗಲ, ಅವರನ್ನು ನೋಡುವುದು ದುರದೃಷ್ಟ ಎಂಬ ಮಾತುಗಳು ಅನುಚಿತವಾದವು' ಎಂಬ ಶೃಂಗೇರಿ ಪೀಠಾಧೀಶ ವಿಧು ಶೇಖರ ಭಾರತಿ ಸ್ವಾಮೀಜಿ ಅವರ ಹೇಳಿಕೆ (ಪ್ರ.ವಾ. ಅ. 24) ಸರಿಯಾಗಿದೆ. ಕ್ಷೌರಿಕ ಕಾಯಕ ಮಾಡುತ್ತಿದ್ದ 12ನೇ ಶತಮಾನದ ವಚನಕಾರ ಹಡಪದ ಅಪ್ಪಣ್ಣನವರನ್ನು ಕ್ರಾಂತಿಕಾರಿ ಬಸವಣ್ಣನವರು ತಮ್ಮ ಆಪ್ತ ಕಾರ್ಯದರ್ಶಿಯನ್ನಾಗಿ ಮಾಡಿಕೊಳ್ಳುವ ಮೂಲಕ ಮೌಢ್ಯಕ್ಕೆ ಸಡ್ಡು ಹೊಡೆದಿದ್ದರು. ಆದರೂ ಇಂಥ ಕುರುಡು ನಂಬಿಕೆ ಚಾಲ್ತಿಯಲ್ಲಿರುವುದು ದುರದೃಷ್ಟಕರ.

ಕೆಲವು ನಿರ್ದಿಷ್ಟ ವೃತ್ತಿಗಳಲ್ಲಿ ತೊಡಗಿರುವವರ ಹಾಗೂ ಕೆಲವೊಂದು ಜಾತಿಗಳಿಗೆ ಸೇರಿದವರ ಮುಖ ನೋಡುವುದು ಅಮಂಗಲ ಎನ್ನುವ ಮೂಢನಂಬಿಕೆ ಸಮಾಜದಲ್ಲಿ ಬೇರೂರಿದೆ. ಇದೇ ರೀತಿ ವಿಧವೆಯ ಮುಖ, ಬೆಕ್ಕಿನ ಮುಖ ನೋಡುವುದು ಕೂಡ ಅಪಶಕುನ! ಮುಂಗುಸಿ, ಕಂಬಾರ, ಕಾಗೆ ಮುಖ ನೋಡುವುದು ಶುಭ ಶಕುನ! ಅಂತೂ ಮೌಢ್ಯಕ್ಕೆ ಕೊನೆ ಮೊದಲಿಲ್ಲ. ಸ್ವಾಮೀಜಿಗಳು, ಮಠಾಧೀಶರೇ ಮೊದಲಾದ ಧಾರ್ಮಿಕ ನೇತಾರರು ಇಂಥ ಮೂಢನಂಬಿಕೆಗಳನ್ನು ಸಮೂಲ ನಾಶಪಡಿಸುವಲ್ಲಿ ಮಹತ್ವದ ಪಾತ್ರ ವಹಿಸಬೇಕು. ಇಂಥ ಅನಿಷ್ಟಗಳ ವಿರುದ್ಧ ಜನಜಾಗೃತಿ ಮೂಡಬೇಕು. ಯಾರ ಮುಖವೂ ಅಮಂಗಲವೂ ಅಲ್ಲ, ಸುಮಂಗಲವೂ ಅಲ್ಲ ಎಂಬುದನ್ನು ಅರಿಯಬೇಕು.

ಶಿವಕುಮಾರ ಬಂಡೋಳಿ, ಹುಣಸಗಿ, ಯಾದಗಿರಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. To know more about The Printers (Mysore) Private Ltd, visit www.printersmysore.com.



ಕ್ಷೇತ್ರಗಳ ಪುನರ್ ವಿಂಗಡಣೆಯಾದರೆ ಉತ್ತರ ರಾಜ್ಯಗಳ ಲೋಕಸಭಾ ಕ್ಷೇತ್ರಗಳ ಸಂಖ್ಯೆಯಲ್ಲಿ ಭಾರಿ ಹೆಚ್ಚಳ

ಜನಸಂಖ್ಯೆ ಕುಸಿತ ದಕ್ಷಿಣಕ್ಕೆ ಹೊಡೆತ?

ತಮಿಳುನಾಡು, ಆಂಧ್ರದ ಮುಖ್ಯಮಂತ್ರಿಗಳು ತಮ್ಮ ರಾಜ್ಯದ ಜನರಿಗೆ ಜನಸಂಖ್ಯೆ ಏರಿಕೆಗೆ ಕರೆ ನೀಡಿದ ಬೆನ್ನಲ್ಲೇ ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆ ವಿಚಾರ ಮುನ್ನೆಲೆಗೆ ಬಂದಿದೆ. ಉತ್ತರ ಪ್ರದೇಶ, ಬಿಹಾರದಂಥ ರಾಜ್ಯಗಳ ಕ್ಷೇತ್ರಗಳು ಹೆಚ್ಚಾಗಿ, ದಕ್ಷಿಣದ ರಾಜ್ಯಗಳು ಲೋಕಸಭೆಯಲ್ಲಿ ತಮ್ಮ ಬಲ ಕಳೆದುಕೊಳ್ಳುವ ಆತಂಕ ಎದುರಾಗಿದೆ. ಹಿಂದಿ ಭಾಷಿಕ ರಾಜ್ಯಗಳು ಬಿಜೆಪಿಗೆ ಅನುಕೂಲಕರವಾಗಿ ಇವೆ. ಹಾಗಾಗಿ, ಕೇಂದ್ರವು ಈ ಅವಕಾಶ ಬಳಸಿಕೊಳ್ಳಬಹುದೇ ಎಂಬ ಪ್ರಶ್ನೆ ದಕ್ಷಿಣದ ರಾಜ್ಯಗಳಲ್ಲಿ ಮೂಡಿದೆ

ಪ್ರಜಾವಾಣಿ ವಾರ್ತೆ

ಭಾರತದಲ್ಲಿ ಇಷ್ಟು ವರ್ಷ ಜನಸಂಖ್ಯೆ ಏರಿಕೆಯ ಬಗ್ಗೆ ಕಳವಳ ವ್ಯಕ್ತವಾಗುತ್ತಿತ್ತು. ಆದರೆ, ಈ ಬಾರಿ ಜನಸಂಖ್ಯೆ ಇಳಿಕೆಯ ಬಗ್ಗೆ ಆತಂಕ ವ್ಯಕ್ತವಾಗಿದ್ದು, ಹೆಚ್ಚು ಮಕ್ಕಳನ್ನು ಹೊಂದುವಂತೆ ಆಂಧ್ರಪ್ರದೇಶದ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಮತ್ತು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ.ಸ್ಟಾಲಿನ್ ತಮ್ಮ ರಾಜ್ಯದ ಜನರಿಗೆ ಕರೆ ನೀಡಿದ್ದಾರೆ.

ಪರಸ್ಪರ ವಿರುದ್ಧ ಕೂಟಗಳಲ್ಲಿರುವ ಈ ಇಬ್ಬರು ಮುಖ್ಯಮಂತ್ರಿಗಳು ನೀಡಿರುವ ಈ ಕರೆಯ ಹಿಂದಿರುವುದು ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆ. ಲೋಕಸಭಾ ಕ್ಷೇತ್ರಗಳನ್ನು ಜನಸಂಖ್ಯೆಗೆ ಅನುಗುಣವಾಗಿ ಪುನರ್‌ವಿಂಗಡಿಸಲಾಗುತ್ತದೆ. ದಕ್ಷಿಣದ ರಾಜ್ಯಗಳು ಕುಟುಂಬ ಕಲ್ಯಾಣ ನೀತಿಯನ್ನು ಪರಿಣಾಮಕಾರಿಯಾಗಿ ಜಾರಿಗೆ ತಂದಿದ್ದರಿಂದ ಕೇರಳ, ತಮಿಳುನಾಡು, ಕರ್ನಾಟಕ ಮತ್ತು ಅವಿಭಜಿತ ಆಂಧ್ರಪ್ರದೇಶದ ಜನಸಂಖ್ಯೆಯ ಏರಿಕೆ ಪ್ರಮಾಣ ಕಡಿಮೆ ಆಗಿದೆ. ಆದರೆ, ಜನನ ನಿಯಂತ್ರಣವನ್ನು ಕಟ್ಟುನಿಟ್ಟಾಗಿ ಜಾರಿ ಮಾಡುವಲ್ಲಿ ಉತ್ತರ ಪ್ರದೇಶ, ಬಿಹಾರ ಮುಂತಾದ ಉತ್ತರದ ರಾಜ್ಯಗಳು ವಿಫಲವಾಗಿವೆ.

ದೇಶದ ಒಟ್ಟಾರೆ ಫಲವಂತಿಕೆ ದರ (ಟಿಎಫ್‌ಆರ್) ಕಡಿಮೆ ಆಗಿದ್ದರೂ ದಕ್ಷಿಣಕ್ಕೆ ಹೋಲಿಸಿದರೆ ಉತ್ತರದ ರಾಜ್ಯಗಳ ಜನಸಂಖ್ಯೆಯ ಏರಿಕೆ ಪ್ರಮಾಣ ಹೆಚ್ಚಾಗಿದೆ. ಹೀಗಾಗಿ ಜನಸಂಖ್ಯೆಯ ಆಧಾರದಲ್ಲಿ ಕ್ಷೇತ್ರ ಪುನರ್ ವಿಂಗಡಣೆ ಮಾಡಿದರೆ, ದಕ್ಷಿಣದ ರಾಜ್ಯಗಳಿಗೆ ನಷ್ಟವಾಗಲಿದೆ ಎಂದು ವಿಶ್ಲೇಷಿಸಲಾಗುತ್ತಿದೆ. ಜನನ ನಿಯಂತ್ರಣವನ್ನು ಯಶಸ್ವಿಯಾಗಿ ಸಾಧಿಸಿದ ತಪ್ಪಿಗೆ ದಕ್ಷಿಣ ರಾಜ್ಯಗಳಿಗೆ ಶಿಕ್ಷೆ ವಿಧಿಸಲಾಗುತ್ತಿದೆ ಎನ್ನುವ ಆಕ್ರೋಶವೂ ಈ ರಾಜ್ಯಗಳ ಮುಖಂಡರಲ್ಲಿದೆ. ಎಂ.ಕೆ. ಸ್ಟಾಲಿನ್ ಇದೇ ವರ್ಷದ ಫೆಬ್ರುವರಿ 14ರಂದು ಕ್ಷೇತ್ರ ಪುನರ್ ವಿಂಗಡಣೆ ಮತ್ತು 'ಒಂದು ರಾಷ್ಟ್ರ, ಒಂದು ಚುನಾವಣೆ' ವಿರುದ್ಧ ರಾಜ್ಯ ವಿಧಾನಸಭೆಯಲ್ಲಿ ನಿರ್ಣಯ ಅಂಗೀಕಾರವಾಗುವಂತೆ ನೋಡಿಕೊಂಡಿದ್ದರು.

ಇನ್ನೊಂದೆಡೆ, ದಕ್ಷಿಣದಲ್ಲಿ ಕಡಿಮೆ ಜನರಿದ್ದರೂ ಹೆಚ್ಚು ಲೋಕಸಭಾ ಕ್ಷೇತ್ರಗಳಿವೆ; ಉತ್ತರದಲ್ಲಿ ಹೆಚ್ಚು ಜನರಿದ್ದು, ಅವರ ಸಂಖ್ಯೆಗೆ ತಕ್ಕಂತೆ ಸಂಸದರ ಸ್ಥಾನಗಳಿಲ್ಲ ಎನ್ನುವ ವಾದವನ್ನು ಉತ್ತರದ ರಾಜ್ಯಗಳು ಮುಂದಿಡುತ್ತಿವೆ.

'ಕಾರ್ನೆಗೀ ಎಂಡೋಮೆಂಟ್ ಫಾರ್ ಇಂಟರ್‌ನ್ಯಾಷನಲ್ ಪೀಸ್' ಎನ್ನುವ ಚಿಂತಕರ ಚಾವಡಿಯು 2019ರ ಲೋಕಸಭಾ ಚುನಾವಣೆಯ ಸಂದರ್ಭದಲ್ಲಿ ನಡೆಸಿದ್ದ ಅಧ್ಯಯನದ ಪ್ರಕಾರ, ನಿಗದಿಯಂತೆ 2026ರಲ್ಲಿ ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆ ನಡೆದರೆ, ಉತ್ತರದ ರಾಜ್ಯಗಳು 32 ಹೆಚ್ಚು ಕ್ಷೇತ್ರಗಳನ್ನು ಪಡೆದರೆ, ದಕ್ಷಿಣದ ರಾಜ್ಯಗಳು 24 ಕ್ಷೇತ್ರಗಳನ್ನು ಕಳೆದುಕೊಳ್ಳಲಿವೆ.

ಈಗಿರುವ ಲೋಕಸಭಾ ಸ್ಥಾನಗಳನ್ನು ಉಳಿಸಿಕೊಂಡು, 2026ರ ಜನಸಂಖ್ಯೆಯ ಅಂದಾಜು ಏರಿಕೆಗೆ ತಕ್ಕಂತೆ ಕ್ಷೇತ್ರಗಳ ಸಂಖ್ಯೆಯನ್ನು ಹೆಚ್ಚಿಸಬಹುದಾಗಿದೆ ಎಂದೂ ಈ ಅಧ್ಯಯನ ಹೇಳಿದೆ. ಹೀಗೆ ಮಾಡಿದರೆ, ಲೋಕಸಭೆಯ ಬಲವು 846ಕ್ಕೆ ಏರಿಕೆಯಾಗಲಿದೆ. ಇದೇ ಆಧಾರದಲ್ಲಿಯೇ ಹೊಸ ಸಂಸತ್ ಭವನದಲ್ಲಿ ಲೋಕಸಭೆಯಲ್ಲಿ ಆಸನಗಳ ಸಂಖ್ಯೆಯನ್ನು 888ಕ್ಕೆ ಏರಿಸಲಾಗಿದೆ ಎನ್ನುವ ಮಾತುಗಳೂ ಕೇಳಿಬಂದಿದ್ದವು. ಉತ್ತರ ಪ್ರದೇಶದ ಕ್ಷೇತ್ರಗಳ ಸಂಖ್ಯೆಯು 80ರಿಂದ 143ಕ್ಕೆ ಹೆಚ್ಚಾಗಲಿದ್ದು, ಕೇರಳದ ಕ್ಷೇತ್ರಗಳ ಸಂಖ್ಯೆಯು ಈಗಿನಂತೆ 20ರಲ್ಲಿಯೇ ಉಳಿಯಲಿದೆ.


ಲೋಕಸಭೆಯಲ್ಲಿ ಹಾಲಿ 543 ಸ್ಥಾನಗಳಿವೆ. ಸಂವಿಧಾನದ ವಿಧಿ 82ರ ಪ್ರಕಾರ, ಪ್ರತಿ ಜನಗಣತಿಯ ನಂತರವೂ ಜನಸಂಖ್ಯೆಯ ಪ್ರಮಾಣಕ್ಕೆ ತಕ್ಕಂತೆ ಕ್ಷೇತ್ರಗಳನ್ನು ಪುನರ್ ವಿಂಗಡಣೆ ಮಾಡಬೇಕು. ಈ ವಿಧಿಗೆ ತುರ್ತುಪರಿಸ್ಥಿತಿಯ ಸಮಯದಲ್ಲಿ 42ನೇ (1976) ತಿದ್ದುಪಡಿ ತರಲಾಯಿತು. ಅದರಂತೆ, 2001ರ ಜನಗಣತಿಯವರೆವಿಗೂ ಕ್ಷೇತ್ರ ಪುನರ್ ವಿಂಗಡಣಾ ಪ್ರಕ್ರಿಯೆಯನ್ನು ಅಮಾನತಿನಲ್ಲಿಡಲಾಯಿತು. ಆ ತಿದ್ದುಪಡಿ ತರುವಾಗ ಇಂದಿರಾ ಗಾಂಧಿ ಅವರ ಮನಸ್ಸಿನಲ್ಲಿ ಇದ್ದ ವಿಚಾರವೇನೆಂದರೆ, ದೇಶದಲ್ಲಿ ಜನನ ನಿಯಂತ್ರಣ ನೀತಿಯನ್ನು ಯಶಸ್ವಿಯಾಗಿ ಜಾರಿಗೆ ತರುವುದು ಮತ್ತು ಜನಸಂಖ್ಯೆಯನ್ನು ನಿಯಂತ್ರಿಸುವುದು.

2002ರಲ್ಲಿ ಸಂಸತ್ ಸಂವಿಧಾನಕ್ಕೆ 84ನೇ ತಿದ್ದುಪಡಿ ತರುವ ಮೂಲಕ ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆಯನ್ನು 2026ರ ನಂತರದ (ಅಂದರೆ 2031ರ) ಜನಗಣತಿಯವರೆಗೆ ಮತ್ತೆ ಮುಂದೂಡಿತು. ಆದಾಗ್ಯೂ ಸಂವಿಧಾನಕ್ಕೆ 2003ರಲ್ಲಿ ತರಲಾದ 87ನೇ ತಿದ್ದುಪಡಿಯ ಪ್ರಕಾರ, ರಾಜ್ಯಗಳ ಕ್ಷೇತ್ರಗಳಲ್ಲಿ ಹೆಚ್ಚುಕಡಿಮೆ ಮಾಡದಂತೆ ಕ್ಷೇತ್ರಗಳನ್ನು ಮರುವಿಂಗಡಣೆ ಮಾಡಬಹುದು.

ದೇಶದಲ್ಲಿ ಇದುವರೆಗೆ ನಾಲ್ಕು ಬಾರಿ (1952, 1963, 1973 ಮತ್ತು 2002) ಲೋಕಸಭಾ ಕ್ಷೇತ್ರಗಳ ಪುನರ್ ವಿಂಗಡಣೆ ಮಾಡಲಾಗಿದೆ. '2024ರ ಲೋಕಸಭಾ ಚುನಾವಣೆಯ ನಂತರ ಜನಗಣತಿ ನಡೆಯಲಿದ್ದು, ಅದರ ಆಧಾರದ ಮೇಲೆ ಕ್ಷೇತ್ರ ಪುನರ್ ವಿಂಗಡಣೆ ನಡೆಯಲಿದೆ. ಆಗ ದಕ್ಷಿಣದ ರಾಜ್ಯಗಳು ಎತ್ತಿರುವ ಆಕ್ಷೇಪಗಳನ್ನೂ ಪರಿಗಣಿಸಲಾಗುವುದು' ಎಂದು ಕೇಂದ್ರ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ಇದೇ ಜನವರಿಯಲ್ಲಿ ಹೇಳಿದ್ದರು. ಆದರೆ, ಉತ್ತರದ ಹಿಂದಿ ಭಾಷಿಕ ರಾಜ್ಯಗಳ ಪರವಾಗಿರುವ ಕೇಂದ್ರ ಸರ್ಕಾರವು ಕ್ಷೇತ್ರ ಪುನರ್ ವಿಂಗಡಣೆ ಅವಕಾಶವನ್ನು ಹೇಗೆ ಬಳಸಿಕೊಳ್ಳಲಿದೆ ಎನ್ನುವುದರ ಬಗ್ಗೆ ದಕ್ಷಿಣದ ರಾಜ್ಯಗಳಲ್ಲಿ ಅನುಮಾನ ಮತ್ತು ಆತಂಕ ಇದೆ.

ಆಧಾರ: ಪಿಟಿಐ, ಕಾರ್ನೆಗೀ ಎಂಡೋಮೆಂಟ್ ಫಾರ್ ಇಂಟರ್‌ನ್ಯಾಷನಲ್ ಪೀಸ್ ವರದಿ, 13 ಮತ್ತು 15ನೇ ಹಣಕಾಸು ಆಯೋಗದ ವರದಿ, ರಾಷ್ಟ್ರೀಯ ಕುಟುಂಬ ಆರೋಗ್ಯ ಸಮೀಕ್ಷೆ 2019–21ರ ವರದಿ

2026ರ ಅಂದಾಜು ಜನಸಂಖ್ಯೆ ಆಧಾರದಲ್ಲಿ ಲೋಕಸಭಾ ಕ್ಷೇತ್ರ ಪುನರ್ ವಿಂಗಡಣೆಯಾದರೆ...




ಹಾಲಿ ಕ್ಷೇತ್ರಗಳ ಸಂಖ್ಯೆ **543**


ಪರಿಷ್ಕೃತ ಕ್ಷೇತ್ರಗಳ ಸಂಖ್ಯೆ **846**

ಫಲವಂತಿಕೆ ದರ ಕುಸಿತ

ದೇಶದಲ್ಲಿ ಮಹಿಳೆಯರು ಮಕ್ಕಳನ್ನು ಪಡೆಯುವ ಒಟ್ಟು ಫಲವಂತಿಕೆ ದರ (total fertility rate– ಟಿಎಫ್‌ಆರ್) ಕಡಿಮೆಯಾಗುತ್ತಿದೆ. ಟಿಎಫ್‌ಆರ್ ಎಂದರೆ, ಸಂತಾನೋತ್ಪತ್ತಿ ವಯೋಮಾನದ ಪ್ರತಿಯೊಬ್ಬ ಮಹಿಳೆಯು ಮಕ್ಕಳನ್ನು ಪಡೆಯುವ ಸರಾಸರಿ ಸಾಮರ್ಥ್ಯ. ದೇಶದಲ್ಲಿ ಜನಿಸಿದ ಮಕ್ಕಳ ಸಂಖ್ಯೆಯನ್ನು ಸಂತಾನೋತ್ಪತ್ತಿ ವಯೋಮಾನದ ಒಟ್ಟು ಮಹಿಳೆಯರ ಸಂಖ್ಯೆಯೊಂದಿಗೆ ತಾಳೆ ಮಾಡಿ ಫಲವಂತಿಕೆ ದರವನ್ನು ಲೆಕ್ಕ ಹಾಕಲಾಗುತ್ತದೆ. 1992–93 ಮತ್ತು 2019–21 ನಡುವೆ ಈ ದರದಲ್ಲಿ 1.4ರಷ್ಟು ಕಡಿಮೆಯಾಗಿದೆ. 1992–93ರಲ್ಲಿ ಟಿಎಫ್‌ಆರ್ 3.4ರಷ್ಟಿದ್ದಿದ್ದರೆ, 2019–21ರ ವೇಳೆಗೆ 2ಕ್ಕೆ ಕುಸಿದಿದೆ.



ಒಟ್ಟು ಫಲವಂತಿಕೆ ದರ



ಜನಸಂಖ್ಯೆ ಮತ್ತು ತೆರಿಗೆ ಪಾಲು


ಕೇಂದ್ರ ಸರ್ಕಾರವು ತೆರಿಗೆ ಆದಾಯ ಪಾಲನ್ನು ರಾಜ್ಯಗಳಿಗೆ ಹಂಚುವಾಗ ಜನಸಂಖ್ಯೆಯನ್ನೂ ಒಂದು ಮಾನದಂಡವಾಗಿ ಪರಿಗಣಿಸುತ್ತದೆ. ವರ್ಷದಿಂದ ವರ್ಷಕ್ಕೆ ರಾಜ್ಯಗಳಿಗೆ ಹಂಚಿಕೆ ಮಾಡಲಾಗುತ್ತಿರುವ ತೆರಿಗೆ ಪಾಲಿನ ಮೊತ್ತ ಹೆಚ್ಚಾಗುತ್ತಿದ್ದರೂ, ಒಟ್ಟಾರೆ ಪಾಲಿನ ಶೇಕಡವಾರು ಪ್ರಮಾಣ ಕಡಿಮೆಯಾಗುತ್ತಿದೆ.

ಆರಂಭದ ಏಳು ಹಣಕಾಸು ಆಯೋಗಗಳು ತೆರಿಗೆ ಪಾಲನ್ನು ಹಂಚಿಕೆ ಮಾಡುವಾಗ ಜನಸಂಖ್ಯೆ ಮಾನದಂಡಕ್ಕೆ ಹೆಚ್ಚು ಪ್ರಾಮುಖ್ಯ ನೀಡಿದ್ದವು. ಆ ಪ್ರಮಾಣ ಈಗ ಗಣನೀಯವಾಗಿ ಇಳಿದಿದೆ.

14ನೇ ಹಣಕಾಸು ಆಯೋಗವು ಕೇಂದ್ರದ ತೆರಿಗೆ ಆದಾಯದಲ್ಲಿ ರಾಜ್ಯಗಳ ಪಾಲನ್ನು ನಿಗದಿ ಪಡಿಸಲು ಜನಸಂಖ್ಯೆ ಸ್ವರೂಪ ಬದಲಾವಣೆ ಎಂಬ ಮಾನದಂಡವನ್ನು ಬಳಸಿತ್ತು. ಇದಕ್ಕಾಗಿ ಜನರ ವಲಸೆ ಮತ್ತು ವಯಸ್ಸನ್ನು ಪರಿಗಣಿಸಿತ್ತು. ಇದರಿಂದಾಗಿ, ತೆಲಂಗಾಣದಿಂದ ಪ್ರತ್ಯೇಕಗೊಂಡಿದ್ದ ಆಂಧ್ರಪ್ರದೇಶದ ಪಾಲು ಗಣನೀಯವಾಗಿ ಕುಸಿದಿತ್ತು. ಕರ್ನಾಟಕದ ಪಾಲು ಕೂಡ ಕಡಿಮೆ ಆಗಿದೆ. ಆದರೆ, ಜನಸಂಖ್ಯೆಯ ಕಾರಣಕ್ಕೆ ಉತ್ತರ ರಾಜ್ಯಗಳು ಹೆಚ್ಚು ಪಾಲನ್ನು ಪಡೆಯುತ್ತಿವೆ. ಜನಸಂಖ್ಯೆ ನಿಯಂತ್ರಣಕ್ಕೆ ಕ್ರಮ ಕೈಗೊಳ್ಳುತ್ತಿರುವ ದಕ್ಷಿಣದ ರಾಜ್ಯಗಳಿಗೆ ಕಡಿಮೆ ಪಾಲು ಸಿಗುತ್ತಿದೆ ಎಂಬ ಆರೋಪ ದಕ್ಷಿಣದ ರಾಜ್ಯಗಳದ್ದು. ಆದಾಯ ಹಂಚಿಕೆಯಲ್ಲಿ ಅನ್ಯಾಯವಾದಂತೆ ಲೋಕಸಭಾ ಕ್ಷೇತ್ರಗಳ ಸಂಖ್ಯೆಯಲ್ಲೂ ತಮಗೆ ಅನ್ಯಾಯವಾಗಲಿದೆ ಎನ್ನುವ ಆತಂಕ ದಕ್ಷಿಣ ರಾಜ್ಯಗಳದ್ದು.

ರಾಜಕೀಯ ಲೆಕ್ಕಾಚಾರವೇನು?


ಚಂದ್ರಬಾಬು ನಾಯ್ಡು ಮತ್ತು ಸ್ಟಾಲಿನ್ ಅವರ ಹೇಳಿಕೆ ಹಿಂದೆ ರಾಜಕೀಯ ಲೆಕ್ಕಾಚಾರ ಇದೆ ಎಂದೂ ಹೇಳಲಾಗುತ್ತಿದೆ.



ಉತ್ತರದ ಹಿಂದಿ ಭಾಷಿಕ ರಾಜ್ಯಗಳಲ್ಲಿ ಬಿಜೆಪಿ ಪ್ರಾಬಲ್ಯ ಹೆಚ್ಚಾಗಿದೆ. ಕ್ಷೇತ್ರ ಮರುವಿಂಗಡಣೆಗೊಂಡರೆ ದಕ್ಷಿಣ ರಾಜ್ಯಗಳಿಗಿಂತಲೂ ಉತ್ತರ ರಾಜ್ಯಗಳಲ್ಲಿ ಲೋಕಸಭಾ ಸ್ಥಾನಗಳ ಸಂಖ್ಯೆ ಗಣನೀಯ ಹೆಚ್ಚಳವಾಗಲಿದೆ. ಇದು ಚುನಾವಣೆಗಳಲ್ಲಿ ಬಿಜೆಪಿಗೆ ಅನುಕೂಲವಾಗಿ ಪರಿಣಮಿಸಬಹುದು ಎಂಬುದು ದಕ್ಷಿಣದ ಪ್ರಾದೇಶಿಕ ಪಕ್ಷಗಳ ಆತಂಕ.

ಜಮ್ಮು ಮತ್ತು ಕಾಶ್ಮೀರ ವಿಧಾನಸಭಾ ಚುನಾವಣೆಗೂ ಮುನ್ನ ಅಲ್ಲಿ ಕ್ಷೇತ್ರಗಳ ಮರುವಿಂಗಡಣೆ ಮಾಡಲಾಗಿತ್ತು. ಬಿಜೆಪಿ ಪ್ರಾಬಲ್ಯವಿರುವ ಜಮ್ಮು ವಿಭಾಗದಲ್ಲಿ ಮೊದಲು 37 ಕ್ಷೇತ್ರಗಳಿದ್ದವು. ಮರುವಿಂಗಡಣೆಯ ನಂತರ ಅದು 43ಕ್ಕೆ ಹೆಚ್ಚಿತ್ತು. ಬಿಜೆಪಿ ಬೆಂಬಲಿಗರು ಕಡಿಮೆ ಸಂಖ್ಯೆಯಲ್ಲಿರುವ ಕಾಶ್ಮೀರ ವಿಭಾಗದಲ್ಲಿ ಮೊದಲು 46 ಕ್ಷೇತ್ರಗಳಿದ್ದರೆ, ಪುನರ್ ವಿಂಗಡಣೆಯ ನಂತರ 47 ಆಗಿತ್ತಷ್ಟೇ (ಆದರೆ, ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಬಿಜೆಪಿ ಅಲ್ಲಿ ಉತ್ತಮ ಸಾಧನೆಯನ್ನೇನೂ ಮಾಡಿಲ್ಲ).

'ಲೋಕಸಭೆಯಲ್ಲಿ ಬಿಜೆಪಿಗೆ ಬಹುಮತ ಇಲ್ಲ. ಚಂದ್ರಬಾಬು ನಾಯ್ಡು ನೇತೃತ್ವದ ಟಿಡಿಪಿ ಬೆಂಬಲ ಇಲ್ಲದಿದ್ದರೆ ಸರ್ಕಾರ ಉಳಿಯುವುದೂ ಕಷ್ಟ. ನಾಯ್ಡು ಅವರ ಈಗಿನ ಹೇಳಿಕೆ ನೋಡಿದರೆ ಅವರು ಪುನರ್‌ವಿಂಗಡಣೆಯನ್ನು ಬೆಂಬಲಿಸುವುದು ಅನುಮಾನ. ಇದಲ್ಲದೇ, ಕ್ಷೇತ್ರಗಳು ಕಡಿಮೆಯಾಗುತ್ತವೆ ಎಂದಿದ್ದರೆ ದಕ್ಷಿಣದ ರಾಜ್ಯಗಳು ಇದನ್ನು ಬೆಂಬಲಿಸುವ ಸಾಧ್ಯತೆಯೂ ಕಡಿಮೆ. ಇದು ದೇಶದ ಉತ್ತರ ಭಾಗ, ದಕ್ಷಿಣ ಭಾಗದ ನಡುವೆ ಘರ್ಷಣೆಗೂ ಕಾರಣವಾಗಬಹುದು. ಹಾಗಾಗಿ, ಅಂತಹ ದುಸ್ಸಾಹಸಕ್ಕೆ ಎನ್‌ಡಿಎ ಸರ್ಕಾರ ಕೈಹಾಕುವ ಸಾಧ್ಯತೆ ಕಡಿಮೆ' ಎಂಬ ವಿಶ್ಲೇಷಣೆಯೂ ರಾಜಕೀಯ ವಲಯದಲ್ಲಿದೆ.



ಸಿನಿ ಬಿಟ್ಸ್



ಶರಣ್

ಮರ್ಯಾದೆ ಪ್ರಶ್ನೆಗೆ ಶರಣ್ ಸಾಥ್

ಆರ್.ಜೆ. ಪ್ರದೀಪ್ ನಿರ್ಮಾಣದ, ನಾಗರಾಜ್ ಸೋಮಯಾಜಿ ಆ್ಯಕ್ಷನ್ ಕಟ್ ಹೇಳಿರುವ 'ಮರ್ಯಾದೆ ಪ್ರಶ್ನೆ' ಸಿನಿಮಾ ನ.22ರಂದು ಬಿಡುಗಡೆಯಾಗುತ್ತಿದೆ. ಇತ್ತೀಚೆಗೆ ಸಿನಿಮಾದ ಹಾಡೊಂದು ಬಿಡುಗಡೆಯಾಗಿದ್ದು ಸ್ಯಾಂಡಲ್‌ವುಡ್ ಅಧ್ಯಕ್ಷರು ಧ್ವನಿಯಾಗಿದ್ದಾರೆ.

ಸಕ್ಕತ್ ಸ್ಟುಡಿಯೊ ಈ ಸಿನಿಮಾ ನಿರ್ಮಾಣ ಮಾಡಿದೆ. ಮಧ್ಯಮ ವರ್ಗವನ್ನು ಕುರಿತ ಈ ಹಾಡಿಗೆ ಪ್ರಮೋದ್ ಮರವಂತೆ ಸಾಹಿತ್ಯವಿದ್ದು, ನಟ ಶರಣ್ ಹಾಡಿದ್ದಾರೆ. ಸಂಗೀತ ನಿರ್ದೇಶಕ ಅರ್ಜುನ್ ರಾಮು ಈ ಹಾಡನ್ನು ಜಾನಪದ ಶೈಲಿಯಲ್ಲಿ ಸಂಯೋಜಿಸಿದ್ದಾರೆ. ಈ ಹಾಡಿನಲ್ಲಿ ನಟರ ಪಾತ್ರದ ಪರಿಚಯದ ಜೊತೆಗೆ ಅವರು ಬದುಕುತ್ತಿರುವ ಮಧ್ಯಮ ವರ್ಗದ ಸಮಾಜವನ್ನು ಪರಿಚಯಿಸಲಾಗಿದೆ. ಚಿತ್ರದಲ್ಲಿ ನಟ ರಾಕೇಶ್ ಅಡಿಗ ಒಬ್ಬ ಕಾರ್ಯಕರ್ತನಾಗಿ, ನಟ ಸುನಿಲ್ ರಾವ್ ಅವರು ಒಬ್ಬ ಡೆಲಿವರಿ ಬಾಯ್‌ಯಾಗಿ, ನಟ ಪೂರ್ಣಚಂದ್ರ ಮೈಸೂರು ಕ್ಯಾಬ್ ಚಾಲಕನಾಗಿ ಹಾಗೂ ತೇಜು ಬೆಳವಾಡಿ ಅವರು ಸೇಲ್ಸ್ ಗರ್ಲ್ ಆಗಿ ಪಾತ್ರ ನಿಭಾಯಿಸಿದ್ದಾರೆ.



ಹೊಸಬರ ಜೊತೆ ಭಟ್ಟರ ಸಿನಿಮಾ

ಸುಮುಖ್

'ಕರಟಕ ದಮನಕ' ಚಿತ್ರದ ಬಳಿಕ ನಿರ್ದೇಶಕ ಯೋಗರಾಜ್ ಭಟ್ 'ಮುಂಗಾರು ಮಳೆ' ನಿರ್ಮಾಪಕ ಇ.ಕೃಷ್ಣಪ್ಪ ಜೊತೆ ಕೈಜೋಡಿಸಿದ್ದು ಗೊತ್ತೇ ಇದೆ. ಶೂಟಿಂಗ್ ವೇಳೆ ನಡೆದ ಅವಘಡದಿಂದಾಗಿ 'ಮನದ ಕಡಲು' ಎಂಬ ಈ ಚಿತ್ರದ ಶೀರ್ಷಿಕೆ ಬಹಿರಂಗಗೊಂಡಿತ್ತು. ಇತ್ತೀಚೆಗಷ್ಟೇ ಮಂಗಳೂರಿನಲ್ಲಿ ಚಿತ್ರದ ಚಿತ್ರೀಕರಣ ನಡೆಸಿರುವ ಕುರಿತು ತಂಡ ಅಪ್‌ಡೇಟ್ ನೀಡಿತ್ತು.

'ಚಿತ್ರಕ್ಕೆ ಮೂರು–ನಾಲ್ಕು ಶೀರ್ಷಿಕೆಗಳನ್ನು ಯೋಚಿಸಲಾಗಿದ್ದು ಅದರಲ್ಲಿ 'ಮನದ ಕಡಲು' ಕೂಡ ಒಂದು. ಇದು ವರ್ಕಿಂಗ್ ಟೈಟಲ್. ಇದೇ ಅಂತಿಮ ಶೀರ್ಷಿಕೆಯಲ್ಲ' ಎನ್ನುತ್ತಿವೆ ಚಿತ್ರತಂಡದ ಮೂಲಗಳು. ಈ ಹಿಂದೆ 'ಫಿಸಿಕ್ಸ್ ಟೀಚರ್' ಎಂಬ ಸಿನಿಮಾವನ್ನು ನಿರ್ದೇಶಿಸಿ, ನಟಿಸಿದ್ದ ಸುಮುಖ್ ಈ ಚಿತ್ರದ ನಾಯಕ.

'ಚಿತ್ರದಲ್ಲಿ ಇಬ್ಬರು ನಾಯಕಿಯರಿದ್ದು, ಇದೊಂದು ತ್ರಿಕೋನ ಪ್ರೇಮಕಥೆ. ವೈದ್ಯರೊಬ್ಬರ ಬದುಕಿನ ತಿರುವಿನಿಂದ ಶುರುವಾಗುವ ಪ್ರೇಮಕಥೆ ರಾಜ್ಯದ ಗಡಿ ದಾಟಿ ಮಹಾರಾಷ್ಟ್ರದಲ್ಲಿಯೂ ನಡೆಯುತ್ತದೆ. ಬೆಂಗಳೂರು, ಮಂಗಳೂರು, ಮಹಾರಾಷ್ಟ್ರದಲ್ಲಿ ಚಿತ್ರೀಕರಣ ನಡೆದಿದೆ. ಈಗಾಗಲೇ ಚಿತ್ರದ ಬಹುಭಾಗ ಚಿತ್ರೀಕರಣ ಪೂರ್ಣಗೊಂಡಿದೆ' ಎನ್ನುತ್ತಿವೆ ಚಿತ್ರತಂಡದ ಮೂಲಗಳು.

ವಿ.ಹರಿಕೃಷ್ಣ ಸಂಗೀತ, ಸಂತೋಷ್ ರೈ ಪತಾಜೆ ಛಾಯಾಚಿತ್ರಗ್ರಹಣವಿದೆ. ಶಿವಧ್ವಜ್, ನೇತ್ರಾ ಸೇರಿದಂತೆ ಹಲವು ಕಲಾವಿದರು ಚಿತ್ರದಲ್ಲಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಪುಣ್ಯ ಚಲಾವಣೆಯ ನಾಣ್ಯ!



ನುಡಿ ಬೆಳಗು

ಅಭಿನವ ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

52

ಈಗ ನೀವು ಅಮೆರಿಕಕ್ಕೆ ಹೋಗ್ತೀರಿ. ಅಲ್ಲಿ ನಮ್ಮ ರೂಪಾಯಿ ನಡೆಯಲ್ಲ. ಡಾಲರ್ ಬಳಸಬೇಕು. ಇಂಗ್ಲೆಂಡ್‌ಗೆ ಹೋದರೆ ಪೌಂಡ್, ಯುರೋಪಿಗೆ ಹೋದರೆ ಯುರೊ, ಅರಬ್ ದೇಶಕ್ಕೆ ಹೋದರೆ ದಿರ್‌ಹಂ ಬೇಕು. ನೀವು ಸತ್ತು ಮೇಲಕ್ಕೆ ಹೋದರೆ ಅಲ್ಲಿ ಇದ್ಯಾವುದೂ ನಡೆಯೋದಿಲ್ಲ. ನೀವು ಗಳಿಸಿದ ಪುಣ್ಯ (ಒಳ್ಳೆಯ ಕೆಲಸಗಳು) ಮಾತ್ರ ನಡೀತದ. ಅಲ್ಲಿ ಅದೇ ನಾಣ್ಯ.

'ಪುಣ್ಯ, ಪುಣ್ಯ ಅಂತೀರಲ್ಲ, ಅದೇನ್ ಕಾಣ್ತದೇನು? ತೋರ್ಸಿ ನೋಡೋಣ' ಅಂತ ನೀವು ಕೇಳಬಹುದು. ಈಗ ನೋಡಿ ಕಂಪ್ಯೂಟರ್‌ನಲ್ಲಿ ಡೇಟಾ ಇಟ್ಟುಕೊಳ್ಳುತ್ತಾರೆ. ಈ ಡೇಟಾ ಬಹಳ ಆತು ಅಂದರೆ ಅಥವಾ ಯಾರೂ ಹ್ಯಾಕ್ ಮಾಡಬಾರದು, ವೈರಸ್ ಬಂದು ಹಾಳಾಗಬಾರದು ಅಂತ ಡೇಟಾಗಳನ್ನು ಕ್ಲೌಡ್‌ನಲ್ಲಿ ಇಡುತ್ತಾರೆ. ಅದಕ್ಕೊಂದು ಪಾಸ್ ವರ್ಡ್ ಇರತೈತಿ. ಅದೇ ರೀತಿ, ಪುಣ್ಯ ಅಂದರ ಕ್ಲೌಡ್ ಕಂಪ್ಯೂಟಿಂಗ್ ತರಹ. ವಿಶೇಷ ಏನೆಂದರೆ ಇಲ್ಲಿ ಪಾಸ್ ವರ್ಡ್ ನಿಮ್ಮ ಹತ್ತಿರ ಇರಲ್ಲ. ಅದು ದೇವರ ಬಳಿ ಇರತೈತಿ. ನೀವು ಲೋಡ್ ಗಟ್ಟಲೆ ಬೆಳೆ ಬೆಳೀಬಹುದು. ಆದರೆ ಎಷ್ಟು ತಗಂಡು ಹೋಗ್ತೀರಿ? ನಿಮ್ಮದೇ ವಾಹನ ಇತ್ತು ಅಂದರ 10 ಚೀಲ ತೆಗೆದುಕೊಂಡು ಹೋಗಬಹುದು. ಕೊರಿಯರ್‌ಗೆ ಹಾಕ್ತೀನಿ ಅಂದರೆ ಒಂದು ಕ್ವಿಂಟಲ್ ಒಯ್ಯಬಹುದು. ನಿಮ್ಮದೇ ಕಾರಿದ್ದರೆ ಅರ್ಧ ಕ್ವಿಂಟಲ್ ತೆಗೆದುಕೊಂಡು ಹೋಗಬಹುದು. ವಿಮಾನದಲ್ಲಾದರೆ 20–25 ಕೆ.ಜಿ ಅಷ್ಟೆ. ವಿಮಾನಕ್ಕಿಂತಲೂ ಮ್ಯಾಲೆ ಹೋಗ್ತೀನಿ ಅಂದರೆ ಖಾಲಿ ಕೈಲೇ ಹೋಗಬೇಕು. ಏನೂ ಒಯ್ಯಂಗಿಲ್ಲ. ಸಂಗ್ರಹದಿಂದ ಜೀವನ ಅಲ್ಲ. ಒಳ್ಳೆಯ ಕೆಲಸಗಳಿಂದ ಜೀವನ.

ಒಂದು ದಂಪತಿ ಇದ್ದರು. ಯಜಮಾನ ಬಹಳ ಕಂಜೂಸ್. ಒಂದಿನ 'ನನಗೆ ಕರಿಗಡುಬು ತುಪ್ಪ ಉಣಬೇಕು ಅಂತ ಆಸೆ ಆಗೈತಿ' ಎಂದು ಹೆಂಡತಿಗೆ ಹೇಳಿದ. ಹೆಂಡತಿ ಮಾಡಿ ಬಡಿಸಿದಳು. ತಾಟಿನಲ್ಲಿ ಕರಿಗಡುಬು ತುಪ್ಪ ಹಾಕಿಕೊಂಡು ಇನ್ನೇನು ತಿನ್ನಬೇಕು ಅನ್ನುವಾಗ ಬೀಗರು ಬಂದರು. 'ಕೆಲಸ ಕೆಟ್ಟಿತು. ಮೊದಲು ಇದನ್ನು ತೆಗಿ, ಅಡುಗೆ ಮನೆಯಲ್ಲಿ ಮುಚ್ಚಿಟ್ಟು ಬಾ' ಎಂದ. ಹೆಂಡತಿ ಹಾಗೇ ಮಾಡಿದಳು. 'ಬಂದವ ಹಾಂಗೇ ಹೋಗಲ್ಲ. ಕುಂದ್ರತಾನ. ಅದಕ್ಕೆ ನಾನು ಸತ್ತಂಗೆ ಮಾಡ್ತೀನಿ. ನೀನು ಅತ್ತಂಗೆ ಮಾಡು' ಎಂದ. ಹೆಂಡತಿ ಹಾಗೇ ಮಾಡಿದಳು. ಬೀಗ ಒಳಕ್ಕೆ ಬಂದು 'ಏನಾತು' ಎಂದು ಕೇಳಿದ. ಅದಕ್ಕೆ ಹೆಂಡತಿ 'ಯಾಕೋ ಗೊತ್ತಿಲ್ಲ. ಬೆಳಿಗ್ಗೆ ಚೆನ್ನಾಗಿದ್ದರು. ಈಗ ಹೋಗಿಬಿಟ್ಟರು' ಎಂದಳು. 'ಯಾರೂ ಇಲ್ಲಿ ಕಾಯಂ ಇರಾಕ ಬಂದಿಲ್ಲ, ಸಮಾಧಾನ ಮಾಡಿಕೊ' ಎಂದು ಹೇಳಿ ಹೊರಟ. 5 ನಿಮಿಷದ ನಂತರ ಎದ್ದು ಕುಳಿತ ಗಂಡ ಕರಿಗಡುಬು ತಗಂಬ ಅಂದ. ಆಕಿ ತಂದಳು. ತಟ್ಟೆ ಕೈ ಹಾಕಿ 'ನಾನೇನು ಸತ್ತಿಲ್ಲ, ಹ್ಯಾಗೆ ಸತ್ತಂಗ್ ಮಾಡಿದೆ ನೋಡು' ಅಂದ. ಅದಕ್ಕೆ ಹೆಂಡತಿ 'ನಾನೇನು ಅತ್ತಿಲ್ಲ. ಹ್ಯಾಗ್ ಅತ್ತಂಗ್ ಮಾಡಿದೆ ನೋಡು' ಅಂದಳು. ಆಗ ಬೀಗ ಬಂದು 'ನಾನು ಹೋಗಿಲ್ಲ. ಹ್ಯಾಂಗ್ ಹೋದಾಂಗ್ ಮಾಡಿದೆ ನೋಡು' ಅಂತ ಹೇಳಿ ಎಲ್ಲರಿಗಿಂತ ಮೊದಲು ಕರಿಗಡುಬು ತಿಂದ. ಒಂದಿಷ್ಟು ಕೊಟ್ಟು ತಿಂದಿದ್ದರೆ ಪುಣ್ಯ ಬರತಿತ್ತು.

ನಾವು ಪುಣ್ಯದ ಕೆಲಸ ಮಾಡಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಶುಕ್ರವಾರ ಅಕ್ಟೋಬರ್ 25, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಿಜ ಕೃಷ್ಣನವಮಿ ಗಂ. 27-23 ನಕ್ಷತ್ರ: ಪುಷ್ಯ ಗಂ. 07-40 ಯೋಗ: ಶುಭ ಗಂ. 29-26 ಕರಣ: ತೈತಿಲ ಗಂ. 14-36, ತುಲಾ ಮಾಸದ 08 ನೇ ದಿನ, ಮಳೆನಕ್ಷತ್ರ: ಸ್ವಾತಿ 1.
ರಾಹುಕಾಲ : ಬೆಳಿಗ್ಗೆ 10-30 – 12-00, ಸೂರ್ಯೋದಯ : 06-26 ಸೂರ್ಯಾಸ್ತ : 06-03
ಮುಸ್ಲಿಂ ದಿನಾಂಕ : 21 ರಬಿಯುಸ್ಸಾನಿ
ದಿನ ವಿಶೇಷ : ಸುಖ್ಖೋತ್ ಕೊನೆಯ ದಿನ
ಅದೃಷ್ಟ ಸಂಖ್ಯೆ : 8, 2

ಮೇಷ: ಮನೆಯಲ್ಲಿ ಯಾವುದಾದರೂ ಕಾರ್ಯಕ್ರಮದ ಸಲುವಾಗಿ ಕುಟುಂಬಸ್ಥರೆಲ್ಲ ಒಂದಾಗುವ ಸನ್ನಿವೇಶಗಳಿವೆ. ಮಗಳ ಮದುವೆಯ ಭರ್ಜರಿ ತಯಾರಿಗಳು ನಡೆಯಲಿವೆ. ಸುಮಧುರ ಗಾಯನ ಕೇಳುವಿರಿ.

ವೃಷಭ: ರೇಷ್ಮೆ ವಸ್ತ್ರಗಳ ತಯಾರಕರಿಗೆ ಹಾಗೂ ಮಾರಾಟಗಾರರಿಗೆ ವಿಶೇಷವಾದ ವ್ಯಾಪಾರವಾಗುವುದು. ದೇಶದ ಪರ್ಯಟನೆ ಮಾಡುವ ಕನಸಿಗೆ ಪುಷ್ಟಿ ದೊರೆಯುತ್ತದೆ. ಧಾರ್ಮಿಕ ವಿಷಯಗಳಲ್ಲಿ ಆಸಕ್ತಿಯನ್ನು ಹೊಂದುವಿರಿ.

ಮಿಥುನ: ಗುರಿ ತಲುಪುವ ವೇಳೆಯಲ್ಲಿ ಎದುರಾಗುವಂಥ ವಿಘ್ನಗಳನ್ನು ಸಮರ್ಥವಾಗಿ ನಿಭಾಯಿಸುವಿರಿ. ಗೃಹಸ್ಥರಿಗೆ ಮಕ್ಕಳ ವಿಷಯವಾಗಿ ತಲೆ ನೋವಾಗಬಹುದು. ದೇಹಕ್ಕೆ ಆಗದಂಥ ಆಹಾರದಿಂದ ದೂರವಿರಿ.

ಕರ್ಕಾಟಕ: ತಾಂತ್ರಿಕ ಕ್ಷೇತ್ರದಲ್ಲಿ ಉದ್ಯೋಗ ಮಾಡುತ್ತಿರುವವರು, ಸ್ವಂತ ಉದ್ಯೋಗ ನಡೆಸುವ ಯೋಚನೆ ಬಂದರೂ ಅದರಂತೆ ನಡೆಯುವುದು ಸರಿಯಲ್ಲ. ದುಂದುವೆಚ್ಚದಿಂದ ಹಣದ ಅಭಾವ ಉಂಟಾಗುತ್ತದೆ.

ಸಿಂಹ: ತರಬೇತಿ ಹೊಂದಿದ ಮರದ ಕೆತ್ತನೆಯ ಕುಶಲಕರ್ಮಿಗಳಿಗೆ ಆದಾಯ ಮತ್ತು ಬೇಡಿಕೆ ಹೆಚ್ಚಲಿದೆ. ಚರ್ಮವ್ಯಾಧಿಯಂತಹ ಅನಾರೋಗ್ಯ ಎದುರಾಗಬಹುದು. ಮಗನಿಗೆ ಉದ್ಯೋಗ ದೊರೆತು ಸಂತೋಷ ಆಗುವುದು.

ಕನ್ಯಾ: ಕುಟುಂಬದವರು ಹಾಗೂ ಸ್ನೇಹಿತರೊಂದಿಗೆ ಪ್ರವಾಸದ ಯೋಜನೆ ಹಾಕುವಿರಿ. ಇಂದಿನ ಯೋಚನೆ ಹೆಚ್ಚಿನ ಖರ್ಚಿಗೆ ದಾರಿಯಾದರೂ, ಅದರ ಫಲದಿಂದ ಸಂತೋಷವಿರುವುದು. ಹಬ್ಬದ ಖರೀದಿ ಮಾಡುವಿರಿ.

ತುಲಾ: ಅಧಿಕಾರಿಗಳ ಜತೆ ಸರಿ ಸಮಯದಲ್ಲಿ ಮುಕ್ತ ಚರ್ಚೆ ಮಾಡಿದಲ್ಲಿ ಸಮಸ್ಯೆಗಳಿಗೆ ಶಾಶ್ವತ ಪರಿಹಾರವನ್ನು ಪಡೆದುಕೊಳ್ಳಬಹುದು. ಕುಟುಂಬದಲ್ಲಿ ಸೌಹಾರ್ದತೆ ಕಾಪಾಡುವಲ್ಲಿ ಯಶಸ್ವಿಯಾಗುವಿರಿ.

ವೃಶ್ಚಿಕ: ಎಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ನಿರೀಕ್ಷಿತ ಫಲಿತಾಂಶ ದೊರೆತು ಮುಂದಿನ ವಿದ್ಯಾಭ್ಯಾಸಕ್ಕೆ ಹೆಚ್ಚಿನ ಅವಕಾಶಗಳು ದೊರೆಯುತ್ತವೆ. ಯೋಜನೆಗಳಿಗೆ ಸ್ತ್ರೀವರ್ಗದಿಂದ ಮಹತ್ವದ ಸಹಾಯ ಪ್ರಾಪ್ತವಾಗಲಿದೆ.

ಧನು: ಗ್ರಹಗಳ ಚಲನೆಯು ತಿರುಗಾಟವನ್ನು ಮಾಡಿಸುವುದರಿಂದ ಆರೋಗ್ಯದ ಬಗ್ಗೆ ಗಮನಹರಿಸುವುದು ಅನಿವಾರ್ಯ. ಸಂಸ್ಥೆಯ ಅಭಿವೃದ್ಧಿಗಾಗಿ ಕಾರ್ಮಿಕ ವರ್ಗದೊಡನೆ ಸಕಾರಾತ್ಮಕ ಮಾತುಕತೆ ನಡೆಸಲು ನಿರ್ಧರಿಸಿ.

ಮಕರ: ಕುಟುಂಬದ ಹಿರಿಯರ ಆರೋಗ್ಯ ನಷ್ಟದಿಂದ ಆಸ್ಪತ್ರೆಯ ತಿರುಗಾಟದ ಕ್ಲೇಶ ಉಂಟಾಗುವುದು. ಹಣ್ಣುಹೂವಿನ ಮಾರಾಟಗಾರರಿಗೆ ಸಾಧಾರಣ ಮಾರಾಟವಿರುವುದು. ಕಲಿಕೆಯಲ್ಲಿ ಸೋಮಾರಿತನದಿಂದ ಹಿಂದುಳಿಯುವಿರಿ.

ಕುಂಭ: ಜಮೀನು ಖರೀದಿ ಅಥವಾ ರಿಯಲ್ ಎಸ್ಟೇಟ್ ವ್ಯವಹಾರಗಳಿಂದ ವರಮಾನವನ್ನು ಹೆಚ್ಚಿಸಿಕೊಳ್ಳಬಹುದು. ರಾಜಕೀಯ ಕ್ಷೇತ್ರದಲ್ಲಿ ಇರುವವರಿಗೆ ಸ್ಥಾನಮಾನ ಹೆಚ್ಚಾಗಲಿದೆ. ರೈತಾಪಿ ವರ್ಗದವರಿಗೆ ಶುಭವಾಗುವುದು.

ಮೀನ: ಕಚೇರಿ ಕೆಲಸಗಳನ್ನು ಸಮರ್ಪಣಾ ಭಾವನೆಯಿಂದ ನಿರ್ವಹಿಸಿ. ಸ್ವಂತ ಉದ್ಯೋಗ ನಡೆಸುವವರ ಹಣಕಾಸಿನ ಸ್ಥಿತಿ ಉತ್ತಮಗೊಳ್ಳಲಿದೆ. ಇಂದಿನ ದೂರದ ಪ್ರಯಾಣ ಸುಖಕರವಾಗಿರುವುದು.

ಪದಬಂಧ 5842


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

3.ನಾಡಾಡಿಯ ರಕ್ತವಾಹಿನಿ (2)
6.ಮನಸ್ಸಿನ ಬಯಕೆ (4)
7.ಕತ್ತು ಕೊನೆಗಿದ್ದಾಗ ಭೇಟಿ! (4)
8.ನಂಬಿಸಿ ದ್ರೋಹಮಾಡುವವನು (6)
10.ಕಾಫಿನಾಡು ಎಂದು ಹೆಸರಾಗಿರುವ ಜಿಲ್ಲೆ (6)
13.ಸತ್ತವರನ್ನು ಬದುಕಿಸುವುದೆಂದು ನಂಬಲಾದ ಮೂಲಿಕೆ (4)
15.ಗಾಳಿಯ ಸ್ಥಿತಿಗತಿ (4)
16.ಕುಸ್ತಿ ಮಾಡುವ ಕಸುಬಿನವನು (2)

ಮೇಲಿಂದ ಕೆಳಕ್ಕೆ

1.ಲಕ್ಷಿಸಲು ಯೋಗ್ಯವಾದುದು (4)
2.ಅನುಗ್ರಹವುಳ್ಳ ಶ್ರೇಷ್ಠನಾದ ಕವಿ (4)
4.ಕಸುಗಾಯಿ ಉಲ್ಟಾ ಕಾಣುತ್ತಿದೆ (2)
5.ಅನಿರೀಕ್ಷಿತ ಘಟನೆ (4)
9.ಆನೆಗಳ ಗುಂಪಿನ ನಾಯಕ (3)
10.ಮರಣವಿಲ್ಲದೆ ದೀರ್ಘಕಾಲ ಬಾಳುವವನು (4)
11.ದೃಢಪಡಿಸುವ ಸಾಧನ (4)
12.ವನ ನಡುವಿದ್ದಾಗಲೇ ಕೀಳುದಸೆ! (4)
14.ಜನನಿ ನುಡಿದಿರುವ ಸತ್ಯ (2)



5841ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ಗಾವಳಿ 4.ದಡಿಯ
5.ವೀರಗಾಥೆ 6.ಕಡವರ 7.ರಕಂ
10.ಪ್ರತಿಬಂಧಕ
12.ತ್ರಯ 14.ಬೋಣಿಮಾಡು
17.ಅಮಾಯಕಿ
18.ರಥಿಕ 19.ಕುರುಬ

ಮೇಲಿಂದ ಕೆಳಕ್ಕೆ:
1.ಕುಂದಣ 2.ಗಾಯಕ
3.ಭಾಗಾಕಾರ 5.ವೀರಯೋಧ
8.ಕಂಬು 9.ಯಂತ್ರ
11.ತಿರುಬೋಕಿ 13.ಯಜಮಾನಿ
15.ದುರಬ 16.ತೆಂಕಣ

ಸುಡೊಕು 6227

	6	7		2		5		
5		4			7		2	3
	2		5			6		7
8		1		3				9
			9		8			4
9		2		5		3		6
7		3		9				
	8		7		5	9	3	
		9		8			7	5

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6226 ಸುಡೊಕು

3	4	7	6	5	1	8	2	9
8	2	9	4	7	3	1	6	5
1	6	5	8	9	2	3	4	7
4	8	2	7	1	6	9	5	3
9	7	3	5	2	8	4	1	6
6	5	1	9	3	4	7	8	2
5	3	4	2	8	9	6	7	1
2	9	8	1	6	7	5	3	4
7	1	6	3	4	5	2	9	8


ಕೋಮಲ್ ಕುಮಾರ್

ಕೋಮಲ್ ಎರಡನೇ ಇನಿಂಗ್ಸ್

ನಟ ಕೋಮಲ್ ಕುಮಾರ್ ನಾಯಕನಾಗಿ 25 ಸಿನಿಮಾಗಳನ್ನು ಪೂರೈಸಿದ್ದಾರೆ. ಕಳೆದ ಐದು ವರ್ಷದಿಂದ ಚಿತ್ರರಂಗದಿಂದ ದೂರವಿದ್ದ ಅವರು, 'ಯಲಾಕುನ್ನಿ'ಯಲ್ಲಿ 'ವ್ರಜಮುನಿ'ಯಾಗಿ ಬರುತ್ತಿದ್ದು, ಮುಂದಿನ ಯೋಜನೆಗಳ ಬಗ್ಗೆ ಮಾತನಾಡಿದ್ದಾರೆ...

ಅಭಿಲಾಷ್ ಪಿ.ಎಸ್.

- **ಇದು ನಿಮ್ಮ ಎರಡನೇ ಇನಿಂಗ್ಸ್ ಎನ್ನಬಹುದೇ?**

ನನ್ನ ಸಿನಿಪಯಣದಲ್ಲಿ ನೂರಕ್ಕೂ ಅಧಿಕ ಸಿನಿಮಾಗಳನ್ನು ಮಾಡಿದ್ದೇನೆ. ನಾಯಕನಾಗಿ 25 ಸಿನಿಮಾಗಳನ್ನು ಪೂರ್ಣಗೊಳಿಸಿದ್ದೇನೆ. ನನ್ನ ಈ 32 ವರ್ಷಗಳ ಸಿನಿಪಯಣದಲ್ಲಿ ಪಾತ್ರಗಳ ಆಯ್ಕೆ ವಿಚಾರದಲ್ಲಿ ಬಹಳ ಸೂಕ್ಷ್ಮವಾದ ಹಾಗೂ ಕಟ್ಟುನಿಟ್ಟಾದ ನಿರ್ಧಾರಗಳನ್ನು ತೆಗೆದುಕೊಂಡಾತ. ಸಾಮಾನ್ಯವಾಗಿ ಇಷ್ಟು ವರ್ಷ ಸಿನಿಮಾರಂಗದಲ್ಲಿ ಇದ್ದವರು ಮುನ್ನೂರಕ್ಕೂ ಅಧಿಕ ಸಿನಿಮಾಗಳಲ್ಲಿ ನಟಿಸಿರುತ್ತಾರೆ. ನನ್ನ ಸಿನಿಮಾಗಳ ಸಂಖ್ಯೆ ಕಡಿಮೆ ಇದೆ ಎಂದರೆ ಅದಕ್ಕೆ ನನ್ನ ಆಯ್ಕೆಯ ಮಾನದಂಡಗಳೇ ಕಾರಣ.

ಕೋವಿಡ್ ಸಂದರ್ಭದಲ್ಲಿ ಆರು ತಿಂಗಳು ಆರೋಗ್ಯ ಸಮಸ್ಯೆ ಕಾಡಿತು. ನಾನು ಗ್ರಹಗತಿಗಳನ್ನು ನಂಬುತ್ತೇನೆ. ಐದು ವರ್ಷ ಗ್ರಹಗತಿ ಒಳ್ಳೆಯದಿರದ ಕಾರಣಕ್ಕಾಗಿ ನಾನು ಸಿನಿಮಾದಿಂದ ದೂರ ಉಳಿದಿದ್ದೆ. ನಮ್ಮ ಗುರುಗಳು ಈಗಿನ ಅವಧಿ ಒಳ್ಳೆಯದಿದೆ ಎಂದಿದ್ದಾರೆ. ಇದಕ್ಕೆ ನಾನು ಒಪ್ಪಿಕೊಳ್ಳುತ್ತಿರುವ ಸಿನಿಮಾಗಳ ಸಂಖ್ಯೆ ಸಾಕ್ಷಿ. ಸಿನಿಪಯಣದಲ್ಲಿ ಬಹಳಷ್ಟು ಏಳುಬೀಳುಗಳ ನಡುವೆ ನನ್ನ ಪ್ರಯತ್ನವನ್ನು ಮುಂದುವರಿಸಿಕೊಂಡೇ ಬಂದಿದ್ದೇನೆ. ಒಂದೊಳ್ಳೆ ಸಿನಿಮಾ ಬಂದಾಗ ಪ್ರೇಕ್ಷಕರು ಬೆಂಬಲ ನೀಡುತ್ತಾರೆ. ಸಿನಿಮಾ ಚೆನ್ನಾಗಿಲ್ಲ ಎಂದರೆ ಯಾರೂ ಬೆಂಬಲಕ್ಕೆ ಬರಲು ಸಾಧ್ಯವಿಲ್ಲ. ನನ್ನ ಪಯಣದಲ್ಲಿ ಹೀಗೇ ಆಗಿದೆ. ನಾನು ಇಂದಿಗೂ ಸಿನಿಮಾ ಮಾಡುತ್ತಿದ್ದೇನೆ ಎಂದರೆ ಎಲ್ಲರ ಬೆಂಬಲವೇ ಕಾರಣ.

- **'ಯಲಾಕುನ್ನಿ'ಯ ಕಥೆ ಒಪ್ಪಿಕೊಂಡಿದ್ದು ಏಕೆ?**

ಈ ಸಿನಿಮಾದಲ್ಲಿ ಎರಡು ಶೇಡ್‌ಗಳಲ್ಲಿ ಕಾಣಿಸಿಕೊಂಡಿದ್ದೇನೆ. ವಜ್ರಮುನಿ ಎನ್ನುವ ಹೆಸರು ಕನ್ನಡ ಚಿತ್ರರಸಿಕರ ಮನಸ್ಸಿನಲ್ಲಿ ಉಳಿದುಕೊಂಡಿದೆ. ಇಂತಹ ಪಾತ್ರ ನಿಭಾಯಿಸಬೇಕು ಎಂದಾಗ ನಿರ್ಲಕ್ಷಿಸಲು ಸಾಧ್ಯವೇ ಇಲ್ಲ. ಪಾತ್ರವೇ ನನ್ನನ್ನು ಹುಡುಕಿಕೊಂಡು ಬಂದಿದೆ, ನೀವೇ ಆ ಪಾತ್ರವನ್ನು ನಿಭಾಯಿಸಲು ಸಾಧ್ಯ ಎಂದಾಗ ನನ್ನ ಮೇಲೆ ಅವರು ಇಟ್ಟಿರುವ ಭರವಸೆ ಕಂಡಿತು.

- **ವಜ್ರಮುನಿಯಾಗಿ ನಿಮ್ಮನ್ನು ನೀವು ಕಂಡಾಗ...**

ಮೇಕಪ್‌ಗೆ ಅಮೆರಿಕದಲ್ಲಿರುವ ಶ್ರೀಜಿತ್ ದಾಮೋದರನ್ ಎಂಬುವವರು ಶಿಫಾರಸು ಮಾಡಿದ ಕಲಾಮಂಡಳಂ ವೈಶಾಖ್ ಬಂದಿದ್ದರು. ಕೇವಲ ಒಂದು ವಿಗ್, ಮೀಸೆ ಮತ್ತು ಸ್ವಲ್ಪ ಮೇಕಪ್ ಅವರ ಬಳಿ ಇತ್ತು. ಇಷ್ಟರಲ್ಲೇ ವಜ್ರಮುನಿಯಾಗಲು ಸಾಧ್ಯವೇ ಎಂಬ ಅಳುಕು ಕಾಡಿತು. ಸಣ್ಣ ಕೂದಲೂ ಕಾಣದಂತೆ ಮೂರು ಮೂರು ಬಾರಿ ಶೇವ್ ಮಾಡಿಸಿದರು. ಅವರು ಮೇಕಪ್ ಮುಗಿಸುವವರೆಗೂ ಅವರ ಮೇಲೆ ನಂಬಿಕೆ ಬರಲಿಲ್ಲ. ಮೇಕಪ್ ಬಳಿಕ ಕಾಂಟ್ಯಾಕ್ಟ್ ಲೆನ್ಸ್ ಹಾಕಿ ಕನ್ನಡಿ ಮುಂದೆ ನಿಂತಾಗ, ವಜ್ರಮುನಿ ಅವರೇ ಕಣ್ಮುಂದೆ ಬಂದಂತಾಯಿತು. ಅಲ್ಲಿ ನಾನು ಕಾಣಿಸಲೇ ಇಲ್ಲ. ನಾನು ಆ ಸಂದರ್ಭದಲ್ಲಿ ಬಹಳ ಭಾವುಕನಾದೆ. ನನಗೆ ಒಂದು ರೀತಿಯ ಶಕ್ತಿಯನ್ನೂ ಇದು ನೀಡಿತು. ವೈಶಾಖ್ ಅವರನ್ನು ತಬ್ಬಿಕೊಂಡೆ. ನನ್ನನ್ನು ಇಷ್ಟಪಡದವರೂ ಸಾಮಾಜಿಕ ಮಾಧ್ಯಮಗಳಲ್ಲಿ ಈ ಗೆಟಪ್ ನೋಡಿ ಮೆಚ್ಚಿಕೊಂಡರು. ವಜ್ರಣ್ಣ ಅವರ ವಿಡಿಯೊ ನೋಡಿ ಹಾವಭಾವ ಕಲಿತುಕೊಳ್ಳೋಣ ಎಂದುಕೊಂಡಿದ್ದೆ. ಆದರೆ ಮಿಮಿಕ್ರಿ ರೀತಿ ಆಗಬಹುದು ಎಂಬ ಭಯ ಕಾಡಿತು. ಅವರನ್ನು ನೆನಪಿಸಿಕೊಂಡು ಹುಬ್ಬೆತ್ತಿದಾಗ ವಜ್ರಣ್ಣನೇ ಕಾಣಿಸಿಕೊಂಡಂತಾಯಿತು.

ವಸ್ತುಗಳಲ್ಲಿ ರೆಟ್ರೊ ಅನುಭವ ಕೊಡುವುದು ಸುಲಭ. ಆದರೆ ಜಯಸಿಂಹ ಮುಸರಿಯವರು ಮತ್ತು ನಾನು ಸೇರಿ, ವಜ್ರಮುನಿ ಮತ್ತು ಮುಸುರಿ ಅವರ ರೆಟ್ರೊ ಅನುಭವವನ್ನು ತೆರೆಯಲ್ಲಿ ಕಟ್ಟಿಕೊಟ್ಟಿದ್ದೇವೆ.

- **ಚಿತ್ರದಲ್ಲಿ ವಜ್ರಮುನಿಯವರ ಪಾತ್ರವೇ?**

ಅಲ್ಲ. ವಜ್ರಮುನಿಯವರನ್ನೇ ತದ್ರೂಪ ಮಾಡಿದ್ದೇವೆ. ಒಂದು ರೀತಿ ಕ್ಲೋನಿಂಗ್ ಮಾಡಿದ ಹಾಗೆ. ಇದೊಂದು ದೊಡ್ಡ ಸವಾಲೇ ಆಗಿತ್ತು. ನಾನು ವಜ್ರಮುನಿ ಎಂದು ಹೇಳುವುದೇ ಬೇಡ. ನನ್ನನ್ನು ನೋಡಿದಾಕ್ಷಣ ಎಲ್ಲರೂ ವಜ್ರಮುನಿ ಎನ್ನುತ್ತಿದ್ದರು. ಅವರ ವೈಯಕ್ತಿಕ ಬದುಕು ಇಲ್ಲಿಲ್ಲ. ಹೀರೊನ ತಂದೆಯಷ್ಟೆ. ಆ ಪಾತ್ರದ ಹೆಸರು 'ಕೆ.ಡಿ.ನಾಗಪ್ಪ'. ಆತನ ಮಗ ನಾಯಕ 'ಸತ್ಯ ಹರಿಶ್ಚಂದ್ರ'. ವಜ್ರಮುನಿ ಅವರಿಗೆ ಕಳಂಕ ಬರದಂತೆ ನಟಿಸಿದ್ದೇನೆ. ಈ ಸಿನಿಮಾದಲ್ಲಿ ಬರುವ ವಜ್ರಮುನಿಯವರ ಗೆಟಪ್‌ಗೂ ಅವರ ಯಾವ ಸಿನಿಮಾಗಳಿಗೂ ಸಂಬಂಧವಿಲ್ಲ. ಹೋಲಿಕೆ ಬರುವ ಪಾತ್ರವಷ್ಟೇ. ವಜ್ರಣ್ಣ ಹಾಸ್ಯ ಮಾಡಿದ್ದಿದ್ದರೆ ಹೇಗೆ ಇರುತ್ತಿತ್ತು ಎನ್ನುವುದನ್ನೂ ಪ್ರಯತ್ನಿಸಿದ್ದೇವೆ.

- **ಈ ಪಾತ್ರ ನಿಭಾಯಿಸುವಾಗ ಅಳುಕಿತ್ತೇ?**

ನಾನು ಕಲಾಶಾರದೆಯನ್ನು ಪೂಜಿಸಿಕೊಂಡು ಬಂದಿದ್ದೇನೆ. ಈ ಆಶೀರ್ವಾದವೇ ಪಾತ್ರ ನಿಭಾಯಿಸಲು ಧೈರ್ಯ ತುಂಬಿತು. ಸಣ್ಣದೊಂದು ಪಾತ್ರದಿಂದ ಇಲ್ಲಿಯವರೆಗೂ ಬೆಳೆದುಕೊಂಡು ಬಂದಿದ್ದೇನೆ. ನಾನು ರಂಗಭೂಮಿ ಕಲಾವಿದನಲ್ಲ. ಏಕಲವ್ಯನಂತೆ ಬೆಳೆದವನು. ನಟನಾ ಶಾಲೆಗೆ ಹೋಗದಿದ್ದರೂ ದೂರದಿಂದಲೇ ಎಲ್ಲವನ್ನೂ ಗ್ರಹಿಸಿದವನು. ಹೀಗಾಗಿ ಭರವಸೆ ಎನ್ನುವುದು ನನ್ನೊಳಗೆ ಭರಪೂರವಿದೆ. 32 ವರ್ಷಗಳಲ್ಲಿ ಈ ರೀತಿಯ ಭಿನ್ನಭಿನ್ನ ಪಾತ್ರಗಳನ್ನು ನಿಭಾಯಿಸಿಕೊಂಡೇ ಬಂದಿದ್ದೇನೆ. ಇದರಿಂದಾಗಿಯೇ ಇಲ್ಲಿಯವರೆಗೂ ಉಳಿದುಕೊಳ್ಳಲು ಸಾಧ್ಯವಾಯಿತು. ❖

ಮುಂದಿನ ಪ್ರಾಜೆಕ್ಟ್‌ಗಳು...

'ಯಲಾಕುನ್ನಿ' ಬಳಿಕ 'ಕಾಲಾಯ ನಮಃ' ಬಿಡುಗಡೆಯಾಗಲಿದೆ. 'ಕುಟೀರ' ಸಿನಿಮಾದ ಶೇಕಡ 70ರಷ್ಟು ಚಿತ್ರೀಕರಣ ಪೂರ್ಣಗೊಂಡಿದೆ. ಬಳಿಕ ಹರಿಕೃಷ್ಣ ಎಸ್. ನಿರ್ದೇಶನದ 'ಕೋಣ' ಬಿಡುಗಡೆಯಾಗಲಿದೆ. ಇದನ್ನು ಹೊರತುಪಡಿಸಿ ಇನ್ನೆರಡು ಸಿನಿಮಾಗಳ ಕಥೆಯನ್ನು ಕೇಳಿದ್ದೇನೆ, ಚರ್ಚೆ ನಡೆಯುತ್ತಿದೆ. ಈ ನಡುವೆ 'ರಾಜುಪುತ್ರನ್' ಎಂಬ ಒಂದು ತಮಿಳು ಸಿನಿಮಾ ಮಾಡಿದೆ. ಅಲ್ಲಿ ಪ್ರತಿಭೆಗಳನ್ನು ಬೇಗ ಗುರುತಿಸುತ್ತಾರೆ. ಇದಾದ ಬಳಿಕ 'ಖಳನಾಯಕ'ನ ಪಾತ್ರಕ್ಕೆ ಹಲವು ಆಫರ್‌ಗಳು ತಮಿಳಿನಿಂದ ಬಂದಿವೆ.



'ದೇವರು ರುಜು ಮಾಡಿದ' ದಿವಿತಾ ರೈ

ನಿರ್ದೇಶಕ ಸಿಂಪಲ್ ಸುನಿ ತಮ್ಮ ಸಿನಿಮಾಗಳ ಮೂಲಕ ಚಂದನವನಕ್ಕೆ ಹೊಸ ಕಲಾವಿದರನ್ನು ಪರಿಚಯಿಸುತ್ತಾ ಬಂದಿದ್ದಾರೆ. ತಮ್ಮ ಕಳೆದ ಸಿನಿಮಾ 'ಒಂದು ಸರಳ ಪ್ರೇಮಕಥೆ' ಮೂಲಕ ಸ್ವತಿಷ್ಠಾ ಕೃಷ್ಣನ್ ಹಾಗೂ ಮಲ್ಲಿಕಾ ಸಿಂಗ್ ಅವರನ್ನು ಕನ್ನಡಕ್ಕೆ ಕರೆತಂದಿದ್ದ ಸುನಿ ಇದೀಗ ಮತ್ತಿಬ್ಬರು ನಾಯಕಿಯರನ್ನು ಪರಿಚಯಿಸಿದ್ದಾರೆ.

ಸುನಿ ಅವರು ನಿರ್ದೇಶಿಸುತ್ತಿರುವ 'ದೇವರು ರುಜು ಮಾಡಿದನು' ಸಿನಿಮಾದಲ್ಲಿ ಇಬ್ಬರು ನಾಯಕಿಯರಿರಲಿದ್ದು, ವೀರಾಜ್ ನಾಯಕರಾಗಿ ನಟಿಸುತ್ತಿದ್ದಾರೆ. ವೀರಾಜ್ ಅವರಿಗೆ ನಾಯಕನಾಗಿ ಇದು ಚೊಚ್ಚಲ ಸಿನಿಮಾ. ಇವರಿಗೆ ಜೋಡಿಯಾಗಿ ದಿವಿತಾ ರೈ ಹಾಗೂ ಕೀರ್ತಿ ಕೃಷ್ಣ ನಟಿಸುತ್ತಿದ್ದಾರೆ.

ಮಂಗಳೂರಿನ ದಿವಿತಾ, ಮಿಸ್ ಇಂಡಿಯಾ ಯೂನಿವರ್ಸ್-2022 ವಿಜೇತೆ. ಹಿಂದಿಯಲ್ಲಿ ಒಂದು ಸಿನಿಮಾ ಬಿಡುಗಡೆಗೆ ಎದುರು ನೋಡುತ್ತಿರುವ ಇವರು, 'ದೇವರು ರುಜು ಮಾಡಿದನು' ಸಿನಿಮಾ ಮೂಲಕ ನಾಯಕಿಯಾಗಿ ಹೆಜ್ಜೆ ಇಡುತ್ತಿದ್ದಾರೆ. ಕೊಂಕಣಿ ಸಮುದಾಯಕ್ಕೆ ಸೇರಿದ ಕನ್ನಡ ಹುಡುಗಿಯಾಗಿ, ಹಾಡುಗಾರ್ತಿಯಾಗಿ ದಿವಿತಾ ಈ ಸಿನಿಮಾದಲ್ಲಿ ಪಾತ್ರ ನಿರ್ವಹಿಸಲಿದ್ದಾರೆ. ಕೀರ್ತಿ ಕೃಷ್ಣ ಅವರು ಪುಷ್ಕರ್ ಮಲ್ಲಿಕಾರ್ಜುನಯ್ಯ ಅವರ ಸ್ಟುಡಿಯೊದಲ್ಲಿ ನಟನೆಯ ಕೋರ್ಸ್ ಕಲಿತಿದ್ದಾರೆ. ಸಂಗೀತವೇ ತನ್ನ ಪ್ರಪಂಚ ಎಂದು ಜೀವಿಸುವ 'ಸುಶ್ರಾವ್ಯ' ಎಂಬ ಪಾತ್ರದಲ್ಲಿ ವೀಣಾ ವಾದಕಿಯಾಗಿ ಅಭಿನಯಿಸುತ್ತಿದ್ದಾರೆ.

ಗ್ರೀನ್ ಹೌಸ್ ಮೂವೀಸ್ ಅಡಿಯಲ್ಲಿ ಈ ಸಿನಿಮಾವನ್ನು ಗೋವಿಂದ್ ರಾಜ್ ನಿರ್ಮಾಣ ಮಾಡುತ್ತಿದ್ದಾರೆ. ❖

ಸೂಪರ್ ಹೀರೊ ಈ 'ಬಘೀರ'

'ಉಗ್ರಂ', 'ಕೆ.ಜಿ.ಎಫ್' ಸರಣಿಯ ನಿರ್ದೇಶಕ ಪ್ರಶಾಂತ್ ನೀಲ್ ಕಥೆ ಬರೆದಿರುವ, ಡಾ.ಸೂರಿ ನಿರ್ದೇಶನದ 'ಬಘೀರ' ಸಿನಿಮಾ ಅ.31ರಂದು ಬಿಡುಗಡೆಯಾಗುತ್ತಿದೆ. ಚಿತ್ರದ ಟ್ರೇಲರ್ ಇತ್ತೀಚೆಗೆ ರಿಲೀಸ್ ಆಗಿದ್ದು, ಸೂಪರ್ ಹೀರೊ ಆಗಿ ಶ್ರೀಮುರಳಿ ಕಾಣಿಸಿಕೊಂಡಿದ್ದಾರೆ.

ಸಿನಿಮಾವನ್ನು ಹೊಂಬಾಳೆ ಫಿಲಂಸ್ ನಿರ್ಮಾಣ ಮಾಡಿದ್ದು, ಚಿತ್ರತಂಡ ಇತ್ತೀಚೆಗೆ ಸುದ್ದಿಗೋಷ್ಠಿ ನಡೆಸಿ ಸಿನಿಮಾದ ಕುರಿತು ಮಾಹಿತಿ ಹಂಚಿಕೊಂಡಿತು. 'ಈ ಸಿನಿಮಾ ಮೂರು ವರ್ಷ ಹಲವು ವಿಷಯಗಳನ್ನು ತಿಳಿಸಿಕೊಟ್ಟಿತು' ಎಂದು ಮಾತು ಆರಂಭಿಸಿದ ಶ್ರೀಮುರಳಿ, 'ಸಿನಿಮಾದ ಕಥೆಯನ್ನು ಬರೆದ ಪ್ರಶಾಂತ್ ನೀಲ್ ನನ್ನ ನೆಚ್ಚಿನ ಕಥೆಗಾರ. ಖರ್ಚಿನ ಬಗ್ಗೆ ಹೊಂಬಾಳೆ ಫಿಲಂಸ್ ಎಂದಿಗೂ ಪ್ರಶ್ನೆ ಮಾಡಿಲ್ಲ. ವರ್ಷಕ್ಕೆ ಎರಡು ಮೂರು ಸಿನಿಮಾ ಮಾಡಬೇಕು ಎನ್ನುವ ಯೋಜನೆ ನನ್ನದು. ಆದರೆ ಈ ಸಿನಿಮಾದ ಚಿತ್ರೀಕರಣದ ವೇಳೆ ಗಾಯಗೊಂಡ ಕಾರಣ ಅದು ಆಗಲಿಲ್ಲ. ಗಾಯಗೊಂಡಿದ್ದಾಗ ಭಯಪಟ್ಟಿದ್ದೆ. ಗಾಯಗೊಂಡಿದ್ದ ಕಾಲನ್ನು ಮತ್ತೆ ಮರಳಿಕೊಡಿ, ಒಳ್ಳೊಳ್ಳೆಯ ಸಿನಿಮಾ ಮಾಡಬೇಕು ಎಂದು ವೈದ್ಯರ ಬಳಿ ಹೇಳಿದ್ದೆ. ಎಲ್ಲರಂತೆ ನಾನೂ ಶ್ರಮಪಟ್ಟಿದ್ದೇನೆ. 'ಬಘೀರ'ಕ್ಕಾಗಿ ಹೆಚ್ಚಿನ ಶ್ರಮವನ್ನೇ ಹಾಕಿದ್ದೇನೆ. ಈ ಸಿನಿಮಾ ದೊಡ್ಡ ಪ್ರಯತ್ನ. ನಮ್ಮ ಇಂಡಸ್ಟ್ರಿ ಹೆಮ್ಮೆಪಡುವ ಸಿನಿಮಾ ಆಗಲಿದೆ. 'ಬಘೀರ'ನ ಪಾತ್ರಕ್ಕೆ ಪ್ರವೇಶಿಸಿದಾಗ ಖುಷಿಪಟ್ಟಿದ್ದೆ. ಚಿಕ್ಕವರಿದ್ದಾಗ ನಾನು ಸೂಪರ್ ಹೀರೊ ಆಗಬೇಕು ಎಂಬ ಆಸೆ ಇಟ್ಟುಕೊಂಡಿದ್ದೆ. ಡಾ.ಸೂರಿ ಅವರ ಕಥೆಯೊಂದನ್ನು ಒಪ್ಪಿಕೊಂಡಿದ್ದು, ಅದನ್ನೂ ಶೀಘ್ರದಲ್ಲೇ ಮಾಡುತ್ತೇನೆ' ಎಂದರು.

ನಿರ್ದೇಶಕ ಡಾ.ಸೂರಿ ಮಾತನಾಡಿ, 'ಕನ್ನಡದಲ್ಲಿ ಸೂಪರ್ ಹೀರೊ ಸಿನಿಮಾವನ್ನು ಯಾರೂ ಮಾಡಿಲ್ಲ ಅಂದುಕೊಂಡಿದ್ದೇನೆ. 'ಬಘೀರ' ಬರುವುದೇ ರಾತ್ರಿ. ಹೀಗಾಗಿ ರಾತ್ರಿಯಲ್ಲಿ ನಡೆಸಿದ ಚಿತ್ರೀಕರಣವೇ ಹೆಚ್ಚು. 'ಬಘೀರ' ಎಂದರೆ ಕರಿಚಿರತೆ. ಪ್ರಶಾಂತ್ ಈ ಕಥೆ ಹೇಳಿದಾಗ 'ಬಘೀರ' ಎಂಬ ಶೀರ್ಷಿಕೆಯೇ ಮೊದಲು ತಲೆಗೆ ಬಂದಿತ್ತು. ದಿನದಲ್ಲಿ ನಾಯಕ ಒಬ್ಬ ನಿಷ್ಠಾವಂತ ಪೊಲೀಸ್ ಅಧಿಕಾರಿ, ರಾತ್ರಿ ಆತನೇ 'ಬಘೀರ'. ಈ ಸಿನಿಮಾ ಒಂದು ಭಾವನಾತ್ಮಕ ಆ್ಯಕ್ಷನ್ ಥ್ರಿಲ್ಲರ್. ಸದ್ಯ ಅ.31ರಂದು ಕನ್ನಡ ಮತ್ತು ತೆಲುಗಿನಲ್ಲಷ್ಟೇ ಸಿನಿಮಾ ಬಿಡುಗಡೆಯಾಗುತ್ತಿದ್ದು, ಚಿತ್ರ ಯಶಸ್ಸು ಕಂಡರೆ ಇತರೆ ಭಾಷೆಗಳಲ್ಲೂ ಬಿಡುಗಡೆಯಾಗಲಿದೆ' ಎಂದರು. ❖


ರುಕ್ಮಿಣಿ ವಸಂತ್, ಶ್ರೀಮುರಳಿ

ಮೂರು ಸಿನಿಮಾಗಳು ತೆರೆಗೆ

ಕೋಮಲ್ ನಟನೆಯ 'ಯಲಾಕುನ್ನಿ' ಸೇರಿದಂತೆ ಮೂರು ಸಿನಿಮಾಗಳು ಇಂದು (ಅ.25) ತೆರೆ ಕಾಣುತ್ತಿವೆ.


ಕೋಮಲ್


ಯಲಾಕುನ್ನಿ

ಸೌಂದರ್ಯ ಸಿನಿ ಕಂಬೈನ್ಸ್ ಹಾಗೂ ನರಸಿಂಹ ಸಿನಿಮಾಸ್ ಲಾಂಛನದಲ್ಲಿ ಅನುಸೂಯ ಕೋಮಲ್ ಕುಮಾರ್, ಸಹನಾಮೂರ್ತಿ ನಿರ್ಮಿಸಿರುವ ಚಿತ್ರ ಇದಾಗಿದೆ. ನಟ ಕೋಮಲ್ ಕುಮಾರ್ ದ್ವಿಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ.

ಎನ್.ಆರ್. ಪ್ರದೀಪ್ ಕಥೆ, ಚಿತ್ರಕಥೆ, ಸಂಭಾಷಣೆ ಬರೆದು ಆ್ಯಕ್ಷನ್ ಕಟ್ ಹೇಳಿದ್ದಾರೆ. ಕೋಮಲ್, ನಟ ದಿವಂಗತ ವಜ್ರಮುನಿ ಗೆಟಪ್‌ನಲ್ಲಿ ಕಾಣಿಸಿಕೊಂಡಿದ್ದು, 'ಕೆ.ಡಿ.ನಾಗಪ್ಪ' ಅವರ ಪಾತ್ರದ ಹೆಸರು. ದತ್ತಣ್ಣ, ಸಾಧು ಕೋಕಿಲ, ಮಿತ್ರ, ಸುಚೇಂದ್ರಪ್ರಸಾದ್, ಶಿವರಾಜ್ ಕೆ.ಆರ್. ಪೇಟೆ, ತಬಲಾ ನಾಣಿ, ರಾಜು ತಾಳಿಕೋಟೆ, ಯತಿರಾಜ್ ಜಗ್ಗೇಶ್, ಜಯಸಿಂಹ ಮುಸುರಿ ಮುಂತಾದವರು ತಾರಾಬಳಗದಲ್ಲಿದ್ದಾರೆ. ಚಿತ್ರದ ನಾಯಕಿಯರಾಗಿ ನಿಸರ್ಗ ಅಪ್ಪಣ್ಣ ಮತ್ತು 'ಗಿಚ್ಚಿಗಿಲಿಗಿಲಿ'ಯ ಅಮೃತಾ ಬಣ್ಣಹಚ್ಚಿದ್ದಾರೆ. ವಜ್ರಮುನಿಯವರ ಮೊಮ್ಮಗ ಆಕರ್ಷ್ ಈ ಚಿತ್ರದ ಮೂಲಕ ಬಣ್ಣದ ಲೋಕ ಪ್ರವೇಶಿಸುತ್ತಿದ್ದಾರೆ.

ಎಲ್ಲಿಗೆ ಪಯಣ ಯಾವುದೋ ದಾರಿ

ನಟ ದಿವಂಗತ ಕಾಶಿನಾಥ್ ಅವರ ಪುತ್ರ ಅಭಿಮನ್ಯು ನಟಿಸಿರುವ ಚಿತ್ರವಿದು. ಸಿನಿಮಾವನ್ನು ಕಿರಣ್ ಎಸ್. ಸೂರ್ಯ ನಿರ್ದೇಶನ ಮಾಡಿದ್ದಾರೆ. ಕಥೆ, ಚಿತ್ರಕಥೆ ಮತ್ತು ಸಂಭಾಷಣೆಯೂ ಅವರದ್ದೆ. ಚಿತ್ರದ ಪ್ರಧಾನ ಪಾತ್ರದಲ್ಲಿ ವಿಜಯಶ್ರೀ ಕಲಬುರ್ಗಿ ನಟಿಸಿದ್ದು, ಅಭಿಮನ್ಯು ಕಾಶಿನಾಥ್ ಅವರಿಗೆ ಸ್ಫೂರ್ತಿ ಉಡಿಮನೆ ಜೋಡಿಯಾಗಿದ್ದಾರೆ. ಬಲ ರಾಜವಾಡಿ, ಶೋಭನ್, ಅಯಾಂಕ್, ರಿನಿ ಬೋಪಣ್ಣ, ಪ್ರದೀಪ್, ರವಿತೇಜ, ಕಿಶೋರ್, ಅಶ್ವಿನಿ ರಾವ್, ಪ್ರಿಯಾ ಮುಂತಾದವರ ತಾರಾಗಣವಿದೆ. ಪ್ರಣವ್ ರಾವ್ ಸಂಗೀತ ನಿರ್ದೇಶನ, ಸತ್ಯ ರಾಮ್ ಛಾಯಾಚಿತ್ರಗ್ರಹಣ ಚಿತ್ರಕ್ಕಿದೆ. ಪ್ರಮೋದ್ ಮರವಂತೆ ಸಾಹಿತ್ಯವಿದೆ.



ಅಭಿಮನ್ಯು

ಮೂಕ ಜೀವ

ಇದು ಜೆ.ಎಂ.ಪ್ರಹ್ಲಾದ್ ಅವರ ಕಾದಂಬರಿ ಆಧಾರಿತ ಚಿತ್ರ. ಹಳ್ಳಿಯಲ್ಲಿ ಜೀವಿಸುತ್ತಿರುವ ಒಂದು ಬಡ ಕುಟುಂಬದ ಕಥೆಯೇ ಈ 'ಮೂಕ ಜೀವ'.

ಅಂಗವಿಕಲರು ಅಂಗವಿಕಲತೆಯನ್ನು ನ್ಯೂನತೆ ಎಂದು ಭಾವಿಸದೆ ಅದರ ಜೊತೆಗೆ ಸಮಾಜದಲ್ಲಿ ಎಲ್ಲರಂತೆ ಬದುಕಬಹುದು ಎಂಬ ಆತ್ಮಸ್ಥೈರ್ಯ ತುಂಬುವ ಕಥಾಹಂದರವನ್ನು ಈ ಚಿತ್ರ ಹೊಂದಿದೆ ಎಂದಿದೆ ಚಿತ್ರತಂಡ. ಎ.ವಿ.ಎಂ ಎಂಟರ್‌ಟೈನರ್ಸ್ ಮೂಲಕ ಎಂ.ವೆಂಕಟೇಶ ಮತ್ತು ಮಂಜುಳಾ ಅವರು ಈ ಸಿನಿಮಾ ನಿರ್ಮಾಣ ಮಾಡಿದ್ದಾರೆ. ಶ್ರೀನಾಥ್ ವಸಿಷ್ಠ ಚಿತ್ರದ ನಿರ್ದೇಶಕರು. 'ಬಿಗ್‌ಬಾಸ್' ಖ್ಯಾತಿಯ ಕಾರ್ತಿಕ್ ಮಹೇಶ್, ಶ್ರೀಹರ್ಷ, ಅಪೂರ್ವಶ್ರೀ, ಮೇಘಶ್ರೀ, ಗಿರೀಶ್ ವೈದ್ಯನಾಥನ್, ರಮೇಶ್ ಪಂಡಿತ್, ವೆಂಕಟಾಚಲ ಮುಂತಾದವರು ತಾರಾಬಳಗದಲ್ಲಿದ್ದಾರೆ. ❖

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	24,435
ಇಂದಿನ ಅಂತ್ಯ	24,399
▼	36
ದಿನದ ಕನಿಷ್ಠ	24,341

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು 100ಕ್ಕೆ	₹570
12 ಕ್ಕೆ	₹75
ಮೈಸೂರು 100ಕ್ಕೆ	₹575

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ)	₹132-472
ದ್ವಿತಳಿ (ಬಿ.ವಿ)	₹211-635

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹177
ಆರ್‌ಎಸ್‌ಎಸ್-5	₹172
ಗುಡ್ ಲಾಟ್	₹168

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1510 (1520)
ಸೋಯಾ (ರಿಫೈನ್ಡ್)	₹1285 (1275)
ಸೂರ್ಯಕಾಂತಿ (ರಿಫೈನ್ಡ್)	₹1305 (1295)
ಪಾಮೋಲಿನ್	₹1295 (1290)

ಮುದ್ರಮನೆ ಕಾಫಿ (50 ಕೆಜಿಗೆ)

ಎಪಿ	₹18000
ಎಸಿ	₹11500
ಆರ್‌ಪಿ	₹20000
ಆರ್‌ಸಿ	₹10090

ವಿನಿಮಯ ದರ

$ ಡಾಲರ್	84.07
£ ಪೌಂಡ್	109.01
€ ಯುರೊ	90.79
¥ ಯೆನ್ (100ಕ್ಕೆ)	55

104 ಕೆ.ಜಿ ಅಕ್ರಮ ಚಿನ್ನ ವಶ

ತ್ರಿಶ್ಶೂರ್: ಆಭರಣ ತಯಾರಿಕಾ ಘಟಕಗಳ ಮೇಲೆ ದಾಳಿ

ತ್ರಿಶ್ಶೂರ್ (ಕೇರಳ) (ಪಿಟಿಐ): ಇಲ್ಲಿನ ಚಿನ್ನಾಭರಣ ತಯಾರಿಕಾ ಘಟಕಗಳ ಮೇಲೆ ಸರಕು ಮತ್ತು ಸೇವಾ ತೆರಿಗೆ (ಜಿಎಸ್‌ಟಿ) ಅಧಿಕಾರಿಗಳು ಶೋಧ ನಡೆಸಿದ್ದು, ಅಕ್ರಮವಾಗಿ ಸಂಗ್ರಹಿಸಿಟ್ಟಿದ್ದ ₹75 ಕೋಟಿ ಮೌಲ್ಯದ 104 ಕೆಜಿ ಚಿನ್ನವನ್ನು ವಶಕ್ಕೆ ಪಡೆದಿದ್ದಾರೆ.

ಚಿನ್ನದ ಅಕ್ರಮ ವ್ಯಾಪಾರದ ಮೂಲಕ ತೆರಿಗೆ ವಂಚಿಸಲಾಗುತ್ತಿದೆ ಎಂಬ ಆರೋಪದ ಮೇರೆಗೆ ಬುಧವಾರ ಸಂಜೆ ಕಾರ್ಯಾಚರಣೆ ಆರಂಭಿಸಲಾಗಿತ್ತು. ಗುರುವಾರ ಮುಕ್ತಾಯಗೊಂಡಿದೆ.

ಕೇರಳದಲ್ಲಿ ನಡೆದ ಅತಿದೊಡ್ಡ ಕಾರ್ಯಾಚರಣೆಗಳ ಪೈಕಿ ಇದು ಒಂದಾಗಿದ್ದು, 700ಕ್ಕೂ ಹೆಚ್ಚು ಅಧಿಕಾರಿಗಳು ಪಾಲ್ಗೊಂಡಿದ್ದರು. ತಯಾರಿಕಾ ಘಟಕಗಳು ಮತ್ತು ಅಭರಣ ಮಾಲೀಕರ ಮನೆಗಳು ಸೇರಿ 78 ಸ್ಥಳಗಳಲ್ಲಿ ದಾಳಿ ನಡೆದಿದೆ.

ತೆರಿಗೆ ಮತ್ತು ಶುಲ್ಕ ಪಾವತಿ ಪ್ರಕ್ರಿಯೆಯಲ್ಲಿ ಭಾರಿ ಅಕ್ರಮ ಎಸಗಿರುವುದು ಪತ್ತೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜಿಎಸ್‌ಟಿ ವಿಶೇಷ ಆಯುಕ್ತ ಅಬ್ರಹಾಂ ರೆನ್ ಎಸ್. ಅವರು ಈ ರಹಸ್ಯ ಕಾರ್ಯಾಚರಣೆಯ ನೇತೃತ್ವವಹಿಸಿದ್ದರು. ತ್ರಿಶ್ಶೂರ್‌ನಲ್ಲಿ ತರಬೇತಿ ಕಾರ್ಯಕ್ರಮವಿದೆ. ಎಲ್ಲರೂ ಇದರಲ್ಲಿ ಭಾಗವಹಿಸಬೇಕು ಎಂದು ಅಧಿಕಾರಿಗಳಿಗೆ ಸಂದೇಶ ರವಾನಿಸಲಾಗಿತ್ತು. ದಾಳಿ ಬಗ್ಗೆ ಅಂತಿಮ ಕ್ಷಣದವರೆಗೂ ಹಿರಿಯ ಅಧಿಕಾರಿಗಳು ಗುಟ್ಟು ಬಿಟ್ಟುಕೊಟ್ಟಿರಲಿಲ್ಲ ಎಂದು ಹೇಳಲಾಗಿದೆ.

ರಾಜ್ಯದ ವಿವಿಧೆಡೆಯಿಂದ ಬಸ್‌ಗಳ ಮೂಲಕ ಅಧಿಕಾರಿಗಳು ಆಗಮಿಸಿದ್ದರು. ಈ ಬಸ್‌ಗಳಿಗೆ 'ಅಧ್ಯಯನ ಪ್ರವಾಸ' ಎಂದು ಬ್ಯಾನರ್ ಅಳವಡಿಸಲಾಗಿತ್ತು.

ಕಾರ್ಯಾಚರಣೆಗೆ 'ಟೊರೆ ಡೆಲ್ ಓರೊ' ಎಂದು ಹೆಸರಿಸಲಾಗಿತ್ತು. ಇದು ಸ್ಪ್ಯಾನಿಷ್ ಪದವಾಗಿದ್ದು, 'ಗೋಲ್ಡನ್ ಟವರ್' ಎಂದರ್ಥ.

ತ್ರಿಶ್ಶೂರ್ ಕೇರಳದ ಚಿನ್ನಾಭರಣದ ರಾಜಧಾನಿ ಎಂದು ಪ್ರಸಿದ್ಧಿ ಪಡೆದಿದೆ. ರಾಜ್ಯದ ಶೇ 70ರಷ್ಟು ಚಿನ್ನಾಭರಣದ ವಹಿವಾಟು ಇಲ್ಲಿ ನಡೆಯುತ್ತದೆ. ಸುದ್ದಿಗಾರರೊಂದಿಗೆ ಮಾತನಾಡಿದ ಜಿಎಸ್‌ಟಿ ಗುಪ್ತಚರ ವಿಭಾಗದ ಉಪ ಆಯುಕ್ತ ದಿನೇಶ್ ಕುಮಾರ್, 'ಅಕ್ರಮ ಚಟುವಟಿಕೆ ಮೇಲೆ ಕಾರ್ಯಾಚರಣೆಯನ್ನು ಮುಂದುವರಿಸಲಾಗುತ್ತದೆ' ಎಂದು ತಿಳಿಸಿದ್ದಾರೆ.

'ಕೆಲವು ಸ್ಥಳಗಳಲ್ಲಿ ದಾಳಿಗೆ ಹೆದರಿ ಕೆಲಸಗಾರರು ಚಿನ್ನದೊಟ್ಟಿಗೆ ಓಡಿ ಹೋಗುತ್ತಿದ್ದರು. ಅವರನ್ನು ಬೆನ್ನಟ್ಟಿ ಹಿಡಿದು ವಶಕ್ಕೆ ಪಡೆಯಲಾಗಿದೆ' ಎಂದು ಹೇಳಿದ್ದಾರೆ.

ಚಿನ್ನ, ಬೆಳ್ಳಿ ಧಾರಣೆ ಇಳಿಕೆ

ನವದೆಹಲಿ (ಪಿಟಿಐ): ಸ್ಥಳೀಯ ಮಾರುಕಟ್ಟೆಯಲ್ಲಿ ಆಭರಣ ತಯಾರಕರು ಮತ್ತು ಚಿಲ್ಲರೆ ವ್ಯಾಪಾರಿಗಳಿಂದ ಬೇಡಿಕೆ ಕಡಿಮೆಯಾಗಿದ್ದರಿಂದ ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ ಚಿನ್ನ ಮತ್ತು ಬೆಳ್ಳಿ ಧಾರಣೆಯಲ್ಲಿ ಇಳಿಕೆಯಾಗಿದೆ.

ಚಿನ್ನದ ದರವು 10 ಗ್ರಾಂಗೆ ₹300 ಇಳಿಕೆಯಾಗಿ, ₹81,200ರಂತೆ ಮಾರಾಟವಾಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹1 ಸಾವಿರ ಕಡಿಮೆಯಾಗಿ ₹1.01 ಲಕ್ಷ ಆಗಿದೆ. ಆರು ದಿನದ ವಹಿವಾಟಿನ ಬಳಿಕ ಬೆಲೆಯು ಇಳಿಕೆಯಾಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಜೊಮಾಟೊ, ಸ್ವಿಗ್ಗಿ ಆರ್ಡರ್ ಶುಲ್ಕ ಏರಿಕೆ

ನವದೆಹಲಿ (ಪಿಟಿಐ): ಆನ್‌ಲೈನ್ ಮೂಲಕ ಆಹಾರ ಪದಾರ್ಥ ಪೂರೈಸುವ ಜೊಮಾಟೊ ಮತ್ತು ಸ್ವಿಗ್ಗಿ ಕಂಪನಿಯು ಪ್ರತಿ ಆರ್ಡರ್ ಮೇಲೆ ವಿಧಿಸುವ ಶುಲ್ಕವನ್ನು (ಪ್ಲಾಟ್‌ಫಾರ್ಮ್ ಫೀ) ಏರಿಕೆ ಮಾಡಿವೆ.

ಈ ಮೊದಲು ದೆಹಲಿಯಲ್ಲಿ ಪ್ರತಿ ಆರ್ಡರ್‌ಗೆ ₹6 ಶುಲ್ಕ ವಿಧಿಸಲಾಗುತ್ತಿತ್ತು. ಸದ್ಯ ಹಬ್ಬದ ಋತುವಿನ ಮಧ್ಯದಲ್ಲಿ ಇದನ್ನು ₹10ಕ್ಕೆ ಹೆಚ್ಚಿಸಿವೆ.

ಹಬ್ಬದ ಋತುವಿನಲ್ಲಿ ಆಹಾರ ವಿತರಣೆಗೆ ವಿಪರೀತ ಬೇಡಿಕೆ ಹೆಚ್ಚಿದೆ. ಶುಲ್ಕ ಏರಿಕೆಯು ನಗರದಿಂದ ನಗರಕ್ಕೆ ವ್ಯತ್ಯಾಸ ಇರುತ್ತದೆ. ಇದು ವಹಿವಾಟಿನ ಭಾಗವಾಗಿದ್ದು, ಕಾಲಕಾಲಕ್ಕೆ ಏರಿಕೆ ಮಾಡಲಾಗುತ್ತಿದೆ ಎಂದು ಜೊಮಾಟೊ ಕಂಪನಿ ತಿಳಿಸಿದೆ.


ಸ್ವಿಗ್ಗಿ ಕಂಪನಿಯು ₹5 ಇದ್ದ ಆರ್ಡರ್ ಶುಲ್ಕವನ್ನು ಜೂನ್‌ನಲ್ಲಿ ₹6ಕ್ಕೆ ಹೆಚ್ಚಿಸಿತ್ತು.

ರಸ್ತೆ ಸುರಕ್ಷತೆಗೆ ತಾಂತ್ರಿಕ ಪರಿಹಾರ ನೀಡಲು ಸಮಿತಿ ರಚನೆ: ಸಚಿವ ಗಡ್ಕರಿ

ಸಂಚಾರ ಉಲ್ಲಂಘನೆ ತಡೆಗೆ ಎ.ಐ

ನವದೆಹಲಿ (ಪಿಟಿಐ): 'ರಸ್ತೆ ಸಂಚಾರ ನಿಯಮಗಳ ಉಲ್ಲಂಘನೆಯನ್ನು ಪತ್ತೆ ಹಚ್ಚಿ ನಿಖರವಾಗಿ ದಂಡ ವಿಧಿಸುವ ಸಂಬಂಧ ಕೃತಕ ಬುದ್ಧಿಮತ್ತೆ (ಎ.ಐ) ಸೇರಿ ಹೊಸ ವಿಧಾನಗಳ ಬಳಕೆಗೆ ಸರ್ಕಾರ ಚಿಂತನೆ ನಡೆಸಿದೆ' ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಗುರುವಾರ ನಡೆದ 12ನೇ ಆವೃತ್ತಿಯ ಟ್ರಾಫಿಕ್ ಇನ್ಫ್ರಾಟೆಕ್ ಎಕ್ಸ್‌ಪೊದಲ್ಲಿ ಮಾತನಾಡಿದ ಅವರು, 'ಉಪಗ್ರಹ ಆಧಾರಿತ ಟೋಲ್ ಸಂಗ್ರಹ ವ್ಯವಸ್ಥೆ ಸೇರಿ ಟೋಲ್ ಸಂಗ್ರಹ ಹೆಚ್ಚಳಕ್ಕೆ ಹಲವು ಯೋಜನೆಗಳನ್ನು ರೂಪಿಸಲಾಗಿದೆ. ಇದರಿಂದ ಹೆದ್ದಾರಿಗಳ ಟೋಲ್ ಸಂಗ್ರಹದಲ್ಲಿ ಪರಿಣಾಮಕಾರಿಯಾದ ಸುಧಾರಣೆ ಹಾಗೂ ಪಾರದರ್ಶಕತೆ ಕಾಯ್ದುಕೊಳ್ಳಲು ಸಾಧ್ಯವಾಗಲಿದೆ' ಎಂದು ಹೇಳಿದರು.



ಕಾನೂನು ಕಟ್ಟುನಿಟ್ಟು ಜಾರಿ ಹಾಗೂ ಕೃತಕ ಬುದ್ಧಿಮತ್ತೆಯಂತಹ ತಂತ್ರಜ್ಞಾನ ಬಳಸಿಕೊಳ್ಳದೆ ರಸ್ತೆ ಸುರಕ್ಷತೆ ಕಾಪಾಡುವುದು ಕಷ್ಟಸಾಧ್ಯ

ನಿತಿನ್ ಗಡ್ಕರಿ, ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವ

ರಸ್ತೆ ಸುರಕ್ಷತೆಗೆ ಸಂಬಂಧಿಸಿದಂತೆ ತಾಂತ್ರಿಕ ಪರಿಹಾರೋಪಾಯ ರೂಪಿಸಲು ಖಾಸಗಿ ವಲಯದ ಪರಿಣತರನ್ನು ಒಳಗೊಂಡ ಸಮಿತಿ ರಚಿಸಲು ನಿರ್ಧರಿಸಲಾಗಿದೆ. ಈ ಸಮಿತಿಯು ನವೋದ್ಯಮ ಮತ್ತು ಸಾರಿಗೆ ವಲಯದಿಂದ ಬರುವ ಪ್ರಸ್ತಾವಗಳನ್ನು ಪರಿಶೀಲಿಸಿ ಉತ್ತಮ ವಿಧಾನಗಳನ್ನು ಅನುಷ್ಠಾನಗೊಳಿಸಲು ಶಿಫಾರಸು ಮಾಡಲಿದೆ ಎಂದು ಹೇಳಿದರು.

ಸಾರಿಗೆ ವಲಯದಲ್ಲಿ ತ್ವರಿತ ಸುಧಾರಣೆಗೆ ಸಂಬಂಧಿಸಿದಂತೆ ಮೂರು ತಿಂಗಳೊಳಗೆ ವರದಿ ಸಲ್ಲಿಸಲು ಈ ಸಮಿತಿಗೆ ಸೂಚಿಸಲಾಗುವುದು ಎಂದರು.

ರಸ್ತೆ ಸುರಕ್ಷತೆಯ ಕಣ್ಗಾವಲು ವ್ಯವಸ್ಥೆಗೆ ಬಳಸುವ ಕ್ಯಾಮೆರಾ ಸೇರಿ ಇತರೆ ಪರಿಕರಗಳ ಬಳಕೆಯಲ್ಲಿ ಗುಣಮಟ್ಟ ಕಾಯ್ದುಕೊಳ್ಳಲು ಸರ್ಕಾರ ಬದ್ಧವಿದೆ. ಇದರಲ್ಲಿ ಯಾವುದೇ ರಾಜಿಯ ಪ್ರಶ್ನೆ ಇಲ್ಲ. ದೊಡ್ಡ ಅಥವಾ ಸಣ್ಣ ಕಂಪನಿಗಳಿಂದ ಬರುವ ಎಲ್ಲಾ ಸಲಹೆಗಳನ್ನು ಪರಿಗಣಿಸಲಾಗುವುದು ಎಂದು ತಿಳಿಸಿದರು.

ಸಾರ್ವಜನಿಕ, ಖಾಸಗಿ ಮತ್ತು ನವೋದ್ಯಮ ವಲಯದ ಎಲ್ಲಾ ಮಧ್ಯಸ್ಥಿಕೆದಾರರು ರಸ್ತೆ ಸುರಕ್ಷತೆಗೆ ಸಂಬಂಧಿಸಿದಂತೆ ಅಭಿಪ್ರಾಯ ತಿಳಿಸಬೇಕಿದೆ ಎಂದರು.

ದೇಶದಾದ್ಯಂತ ಪ್ರತಿ ವರ್ಷ ರಸ್ತೆ ಅವಘಡಗಳಿಂದ 5 ಲಕ್ಷ ಜನರು ಮೃತಪಡುತ್ತಿದ್ದಾರೆ. ಈ ಪೈಕಿ 18ರಿಂದ 36 ವಯೋಮಾನದವರ ಸಂಖ್ಯೆ ಹೆಚ್ಚಿದೆ. ಅಪಘಾತಗಳಿಂದ ದೇಶದ ಒಟ್ಟು ಆಂತರಿಕ ಉತ್ಪನ್ನಕ್ಕೆ (ಜಿಡಿಪಿ) ಶೇ 3ರಷ್ಟು ನಷ್ಟವಾಗುತ್ತಿದೆ ಎಂದು ಹೇಳಿದರು.

'50 ವಿಮಾನ ನಿಲ್ದಾಣ ಸ್ಥಾಪನೆ'

ನವದೆಹಲಿ (ಪಿಟಿಐ): 'ದೇಶದಲ್ಲಿ ಮುಂದಿನ ಐದು ವರ್ಷದಲ್ಲಿ ಹೊಸದಾಗಿ 50ಕ್ಕೂ ಹೆಚ್ಚು ವಿಮಾನ ನಿಲ್ದಾಣಗಳನ್ನು ಅಭಿವೃದ್ಧಿಪಡಿಸಲಾಗುವುದು' ಎಂದು ಕೇಂದ್ರ ನಾಗರಿಕ ವಿಮಾನಯಾನ ಸಚಿವ ಕೆ. ರಾಮ್‌ಮೋಹನ್ ನಾಯ್ಡು ತಿಳಿಸಿದ್ದಾರೆ.

ಸುದ್ದಿಗಾರರೊಂದಿಗೆ ಗುರುವಾರ ಮಾತನಾಡಿದ ಅವರು, ದೇಶೀಯ ವಿಮಾನಯಾನ ವ್ಯವಸ್ಥೆಯ ಅಭಿವೃದ್ಧಿಗೆ ಸರ್ಕಾರ ಬದ್ಧವಾಗಿದೆ. ಇದರಿಂದ ಹೊಸದಾಗಿ ಉದ್ಯೋಗಗಳು ಸೃಷ್ಟಿಯಾಗಲಿವೆ ಎಂದರು. ಮುಂದಿನ 20 ವರ್ಷದಲ್ಲಿ 200ಕ್ಕೂ ಹೆಚ್ಚು ವಿಮಾನ ನಿಲ್ದಾಣಗಳನ್ನು ನಿರ್ಮಿಸಲಾಗುವುದು ಎಂದರು.

ನಾಗರಿಕ ವಿಮಾನಯಾನ ಸಚಿವಾಲಯದ ಕಾರ್ಯದರ್ಶಿ ವುಮ್ಲುನ್ಮಾಂಗ್ ವುಲ್ನಮ್ ಮಾತನಾಡಿ, 'ಪ್ರಸ್ತುತ ದೇಶದಲ್ಲಿ ವಿಮಾನ ಪ್ರಯಾಣಿಕರ ಸಂಖ್ಯೆ 22 ಕೋಟಿ ಇದೆ. ಮುಂದಿನ ಐದು ವರ್ಷದಲ್ಲಿ ಇದು ದ್ವಿಗುಣಗೊಳ್ಳಲಿದೆ' ಎಂದು ವಿವರಿಸಿದರು.

ದೇಶದಲ್ಲಿ ಕಳೆದ ಹತ್ತು ವರ್ಷದಲ್ಲಿ ವಿಮಾನ ನಿಲ್ದಾಣಗಳ ಸಂಖ್ಯೆ ದ್ವಿಗುಣಗೊಂಡಿದೆ. ಒಟ್ಟು 157 ವಿಮಾನ ನಿಲ್ದಾಣಗಳಿವೆ.

ಅಡಿಕೆ ಧಾರಣೆ (₹ಗಳಲ್ಲಿ)

ಮಾರುಕಟ್ಟೆ	ತಳಿ	ಧಾರಣೆ
ಬಂಟ್ವಾಳ	ಕೋಕ	19000-27000
	ಹಳತು	40000-49000
ಚಿತ್ರದುರ್ಗ	ಅಪಿ	48719-49169
	ಬೆಟ್ಟೆ	32629-33059
	ಕೆಂಪುಗೋಟು	27109-27510
	ರಾಶಿ	48239-48689
ಕುಮಟ	ಚಿಪ್ಪು	13209-28269
	ಕೋಕ	6617-25075
	ಹಳೆಚಾಲಿ	37899-38999
	ಹೊಸಚಾಲಿ	30869-34811
ಸಾಗರ	ಬಿಳಿಗೋಟು	10199-24089
	ಚಾಲಿ	18699-32899
	ಕೋಕ	7699-22214
	ಕೆಂಪುಗೋಟು	15099-31509
	ರಾಶಿ	26509-50001
	ಸಿಪ್ಪೆಗೋಟು	8009-15960
ಪುತ್ತೂರು	ಹೊಸತು	26500-32500
	ಹಳತು	32000-49000
ಶಿವಮೊಗ್ಗ	ಬೆಟ್ಟೆ	43290-56099
	ಗೊರಬಲು	17209-33109
	ಹೊಸತು	38089-48399
	ರಾಶಿ	40009-50589
	ಸರಕು	52300-83000
ಸಿದ್ದಾಪುರ	ಬಿಳಿಗೋಟು	23899-27009
	ಚಾಲಿ	31209-34109
	ಕೋಕ	21109-22809
	ಕೆಂಪುಗೋಟು	20709-25209
	ರಾಶಿ	40099-44099
	ತಟ್ಟಿಬೆಟ್ಟೆ	27319-36099
ಶಿರಸಿ	ಬೆಟ್ಟೆ	19199-38349
	ಬಿಳಿಗೋಟು	21111-30208
	ಚಾಲಿ	32499-35412
	ಕೆಂಪುಗೋಟು	13899-18699
	ರಾಶಿ	41099-44099
ಯಲ್ಲಾಪುರ	ಅಪಿ	56128-56128
	ಬಿಳಿಗೋಟು	17699-28500
	ಚಾಲಿ	28899-35101
	ಕೋಕ	4020-15100
	ಕೆಂಪುಗೋಟು	16909-22619
	ರಾಶಿ	38009-55699
	ತಟ್ಟಿಬೆಟ್ಟೆ	27016-33719

'ಕರ್ನಾಟಕದಲ್ಲಿ ವಹಿವಾಟಿದ್ದಾಗ ಕನ್ನಡದಲ್ಲೇ ಫಲಕ ಪ್ರದರ್ಶಿಸಿ'

ಬೃಹತ್ ಕಂಪನಿಗಳಿಗೆ ಹೈಕೋರ್ಟ್‌ನಿಂದ ಮೌಖಿಕ ತಾಕೀತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಾಣಿಜ್ಯ, ವ್ಯವಹಾರ ನಡೆಸುವ ಅಂಗಡಿಗಳ ನಾಮಫಲಕಗಳಲ್ಲಿ ಶೇ 60ರಷ್ಟು ಕನ್ನಡವನ್ನು ಕಡ್ಡಾಯವಾಗಿ ಮಾಡಬೇಕೆಂಬ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯ (ಬಿಬಿಎಂಪಿ) ಸುತ್ತೋಲೆ ಪ್ರಶ್ನಿಸಲಾದ ಅರ್ಜಿ ವಿಚಾರಣೆ ವೇಳೆ ಹೈಕೋರ್ಟ್, 'ನೀವು ಕರ್ನಾಟಕದಲ್ಲಿದ್ದ ಮೇಲೆ ಸೂಚನಾ ಫಲಕಗಳನ್ನು ಕನ್ನಡದಲ್ಲಿಯೇ ಪ್ರದರ್ಶಿಸಲೇಬೇಕು' ಎಂದು ಅರ್ಜಿದಾರರಿಗೆ ಮೌಖಿಕವಾಗಿ ತಾಕೀತು ಮಾಡಿದೆ.

ಈ ಸಂಬಂಧ ರಿಟೇಲರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ, ಆದಿತ್ಯ ಬಿರ್ಲಾ ಫ್ಯಾಷನ್ ಆ್ಯಂಡ್ ರಿಟೇಲ್ ಲಿಮಿಟೆಡ್, ಟೈಟನ್ ಕಂಪನಿ ಲಿಮಿಟೆಡ್, ಅಡಿಡಾಸ್ ಇಂಡಿಯಾ ಮಾರ್ಕೆಟಿಂಗ್ ಪ್ರೈವೇಟ್ ಲಿಮಿಟೆಡ್ ಸೇರಿ 24 ಖಾಸಗಿ ಸಂಸ್ಥೆಗಳು ಸಲ್ಲಿಸಿರುವ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಹೇಮಂತ ಚಂದನಗೌಡರ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿದೆ.



'ನೀವು (ವಾಣಿಜ್ಯ ಸಂಸ್ಥೆಗಳು) ಕರ್ನಾಟಕದಲ್ಲಿ ವಹಿವಾಟು ನಡೆಸುತ್ತಿದ್ದೀರಿ ಎಂದಾದ ಮೇಲೆ ನಿಮ್ಮ ಸೂಚನಾ ಫಲಕಗಳನ್ನು ಕನ್ನಡದಲ್ಲೇ ಪ್ರದರ್ಶಿಸಬೇಕು. ಅದಕ್ಕೆ ಯಾವುದೇ ವಿನಾಯಿತಿ ನೀಡಲಾಗದು' ಎಂದು ಮೌಖಿಕವಾಗಿ ಹೇಳಿದ ನ್ಯಾಯಮೂರ್ತಿ ಅವರು, ಕನ್ನಡ ಭಾಷಾ ರಕ್ಷಣೆಗೆ ಸಂಬಂಧಿಸಿದಂತೆ ಶ್ರಮಿಸುತ್ತಿರುವ ಕನ್ನಡ ರಕ್ಷಣಾ ವೇದಿಕೆಗಳ ಹೋರಾಟವನ್ನು ಪ್ರಸ್ತಾಪಿಸಿದರು.

ಪ್ರಕರಣವನ್ನು ತುರ್ತು ವಿಚಾರಣೆ ನಡೆಸುವಂತೆ ಕೋರಿದ ಅರ್ಜಿದಾರರ ಪರ ವಕೀಲರ ಮನವಿಯನ್ನು ತಳ್ಳಿಹಾಕಿದ ಅವರು, ಈ ಮೊದಲು ಇದೇ ಹೈಕೋರ್ಟ್‌ನ ಮತ್ತೊಂದು ಏಕಸದಸ್ಯ ನ್ಯಾಯಪೀಠ ಮಾರ್ಚ್ 18ರಂದು ನೀಡಿದ್ದ; 'ಅರ್ಜಿದಾರರ ವಿರುದ್ಧ ಯಾವುದೇ ಬಲವಂತದ ಕ್ರಮ ಕೈಗೊಳ್ಳಬಾರದು ಎಂಬ' ಮಧ್ಯಂತರ ಆದೇಶವನ್ನು ವಿಸ್ತರಿಸಿ ವಿಚಾರಣೆಯನ್ನು ಮುಂದೂಡಿದರು.

'ನಾಮಫಲಕ ಅವಳಡಿಕೆ ಕುರಿತು 2019ರ ಅಕ್ಟೋಬರ್ 19 ರಂದು ಹೊರಡಿಸಿರುವ ಆದೇಶ ಹಾಗೂ ಅಕ್ಟೋಬರ್ 31ರಂದು ನೀಡಿರುವ ನೋಟಿಸ್ ಅನುಸಾರ ಅರ್ಜಿದಾರರ ವಿರುದ್ಧ ಯಾವುದೇ ಕ್ರಮಕ್ಕೆ ಮುಂದಾಗಬಾರದು' ಎಂದು ನ್ಯಾಯಪೀಠ ಬಿಬಿಎಂಪಿಗೆ ತಾಕೀತು ಮಾಡಿತ್ತು. 'ಈ ಮಧ್ಯಂತರ ಆದೇಶ ಅರ್ಜಿದಾರ ಸಂಸ್ಥೆಗಳಿಗೆ ಮಾತ್ರ ಅನ್ವಯಿಸಲಿದೆ' ಎಂದು ನ್ಯಾಯಪೀಠ ಸ್ಪಷ್ಟಪಡಿಸಿತ್ತು.

ಜಾನುವಾರು ಗಣತಿ ಇಂದಿನಿಂದ



ನವದೆಹಲಿ (ಪಿಟಿಐ): ಕೇಂದ್ರ ಮೀನುಗಾರಿಕೆ, ಪಶುಸಂಗೋಪನೆ ಮತ್ತು ಹೈನುಗಾರಿಕೆ ಸಚಿವ ರಾಜೀವ್ ರಂಜನ್ ಸಿಂಗ್ ಅವರು, ದೆಹಲಿಯಲ್ಲಿ ಶುಕ್ರವಾರ 21ನೇ ರಾಷ್ಟ್ರೀಯ ಸಮಗ್ರ ಜಾನುವಾರು ಗಣತಿಗೆ ಚಾಲನೆ ನೀಡಲಿದ್ದಾರೆ.

ಪಶುಸಂಗೋಪನೆಯಲ್ಲಿ ತೊಡಗಿರುವ ಪಶುಪಾಲಕ ಸಮುದಾಯಗಳು, ಪುರುಷರು ಮತ್ತು ಮಹಿಳೆಯರ ಬಗ್ಗೆಯೂ ಮೊದಲ ಬಾರಿಗೆ ದತ್ತಾಂಶ ಸಂಗ್ರಹಿಸಲಾಗುತ್ತದೆ ಎಂದು ಕೇಂದ್ರ ಗುರುವಾರ ತಿಳಿಸಿದೆ.

ಗಣತಿಯು 2025ರ ಫೆಬ್ರುವರಿ ವರೆಗೆ ನಡೆಯಲಿದೆ. ಈ ಗಣತಿಗಾಗಿ 1 ಲಕ್ಷ ಕ್ಷೇತ್ರಾಧಿಕಾರಿಗಳು, ಪಶುವೈದ್ಯರು, ಅರೆ ಪಶುವೈದ್ಯರನ್ನು ನಿಯೋಜಿಸಲಾಗಿದೆ. ಹಳ್ಳಿಗಳು, ನಗರ ಪ್ರದೇಶಗಳಲ್ಲಿ ಮನೆ ಮನೆಗೆ ತೆರಳಿ ಗಣತಿ ಕಾರ್ಯ ನಡೆಸಲಿದ್ದಾರೆ.

ಮೊಬೈಲ್ ಮೂಲಕ ನಿಖರ ಮಾಹಿತಿಯನ್ನು ಸಂಗ್ರಹಿಸಲಾಗುತ್ತದೆ. ಹಸು, ಎಮ್ಮೆ, ಕುರಿ, ಮೇಕೆ, ಹಂದಿ, ಕುದುರೆ, ಹೇಸರಗತ್ತೆ, ಕತ್ತೆ, ಒಂಟೆ, ನಾಯಿ, ಮೊಲ, ಸಾಕಾನೆಗಳ ಎಣಿಕೆ ನಡೆಯಲಿದೆ. ಕೋಳಿ, ಬಾತುಕೋಳಿ ಸೇರಿ ಕುಕ್ಕುಟ ವಿಭಾಗದಲ್ಲಿರುವ ಪಕ್ಷಿಗಳ ಎಣಿಕೆ ಮಾಡಲಾಗುತ್ತದೆ. ಜಾನುವಾರು ಮತ್ತು ಪಕ್ಷಿಗಳ ತಳಿ, ಲಿಂಗ ಮತ್ತು ವಯಸ್ಸನ್ನು ದಾಖಲಿಸಲಾಗುತ್ತದೆ.

ಪ್ರತಿ ಐದು ವರ್ಷಗಳಿಗೊಮ್ಮೆ ಜಾನುವಾರು ಗಣತಿ ನಡೆಸಲಾಗುತ್ತದೆ. ದೇಶದ ಮೊದಲ ಗಣತಿಯು 1919ರಲ್ಲಿ ನಡೆದಿತ್ತು. ಕೊನೆಯ ಗಣತಿ 2019ರಲ್ಲಿ ಆಗಿತ್ತು. ಪಶು ಸಂಗೋಪನೆ ವಲಯದಲ್ಲಿ ಪ್ರಮುಖ ನಿರ್ಧಾರ ಕೈಗೊಳ್ಳಲು ಈ ಗಣತಿ ನೆರವಾಗಲಿದೆ.

ಮುಂಬೈ ಧಾರಣೆ (ಶೇಂಗಾ)

24-10-2024

ಜಾವಾ 70/80(ಹೊಸ)	10900-11000
ಜಾವಾ 80/90(ಹೊಸ)	10400-10500
ದಪ್ಪ ಮಧ್ಯಪ್ರದೇಶ(ಹೊಸ)	9000-9100
ದಪ್ಪ ಗುಜರಾತ್(ಹೊಸ)	9800-9900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1520 (1530)
ಒಂದು ವಾರದ ಡೆಲಿವರಿ	1515 (1525)
ಪಾಮ್ ವಾರದ ಡೆಲಿವರಿ	1293 (1288)
ಸೂರ್ಯಕಾಂತಿ ಎಣ್ಣೆ ಕಚ್ಚಾ	1240 (1240)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಚಿನ್ನ 10ಗ್ರಾಂ ₹78,000 (78,000)

ಬೆಳ್ಳಿ ಕೆ.ಜಿ ₹97,500 (98,000)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೊಬ್ಬರಿ ಧಾರಣೆ

(ಕ್ವಿಂಟಲ್‌ಗೆ)

ಅರಸೀಕೆರೆ	₹12500-14000
ತಿಪಟೂರು	₹12500-13500

ಮೂರು ಲಕ್ಷ ಜನರ ಸ್ಥಳಾಂತರ

'ಡಾನಾ': ತೀವ್ರ ವೇಗದಲ್ಲಿ ಬೀಸುತ್ತಿರುವ ಗಾಳಿ, ಭಾರಿ ಮಳೆ

ಭುವನೇಶ್ವರ/ಕೋಲ್ಕತ್ತ/ರಾಂಚಿ (ಪಿಟಿಐ): ಒಡಿಶಾದ ಕರಾವಳಿಯಿಂದ 'ಡಾನಾ' ಚಂಡಮಾರುತವು 200 ಕಿ.ಮೀ ದೂರದಲ್ಲಿದೆ. ಪರಿಣಾಮ ಒಡಿಶಾ, ಪಶ್ಚಿಮ ಬಂಗಾಳದಲ್ಲಿ ವೇಗವಾಗಿ ಗಾಳಿ ಬೀಸುತ್ತಿದ್ದು, ಭಾರಿ ಮಳೆಯಾಗುತ್ತಿದೆ. ಗುರುವಾರ ರಾತ್ರಿ ಜಾರ್ಖಂಡ್‌ನ ದಕ್ಷಿಣ ಭಾಗದ ಜಿಲ್ಲೆಗಳಲ್ಲಿ ಮಳೆ ಆರಂಭವಾಗಲಿದೆ ಎಂದು ಭಾರತೀಯ ಹವಾಮಾನ ಇಲಾಖೆ ಹೇಳಿದೆ.

ಒಡಿಶಾದಲ್ಲಿ ಜನರನ್ನು ಸ್ಥಳಾಂತರಿಸುವ ಕಾರ್ಯ ತೀವ್ರಗತಿಯಿಂದ ಸಾಗಿದೆ. ಬುಧವಾರ ರಾತ್ರಿವರೆಗೂ ಸುಮಾರು 3 ಲಕ್ಷ ಜನರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿದೆ. ತೀವ್ರ ವೇಗದಲ್ಲಿ ಗಾಳಿ ಬೀಸುತ್ತಿರುವುದರಿಂದ ಮರಗಳು ರಸ್ತೆ ಮೇಲೆ ಬಿದ್ದಿವೆ. ಎನ್‌ಡಿಆರ್‌ಎಫ್, ಒಡಿಆರ್‌ಎಫ್ ಹಾಗೂ ಅಗ್ನಿಶಾಮಕ ಸಿಬ್ಬಂದಿ ಜನರನ್ನು ಸ್ಥಳಾಂತರಿಸುವ ಕಾರ್ಯದಲ್ಲಿ ತೊಡಗಿದ್ದಾರೆ.

ರಾಜ್ಯದ ಕೆಲವು ಜಿಲ್ಲೆಗಳಲ್ಲಿ 6.2 ಸೆಂ.ಮೀನಷ್ಟು ಮಳೆಯಾದರೆ, ಕೆಲವೆಡೆ 2.4 ಸೆಂ.ಮೀನಷ್ಟು ಮಳೆಯಾಗಿದೆ. 'ಅ.26ರವರೆಗೂ ರಾಜ್ಯದಲ್ಲಿ ಮಳೆಯಾಗುವ ಸಂಭವವಿದೆ' ಎಂದು ಇಲ್ಲಿನ ಪ್ರಾದೇಶಿಕ ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.



ಒಡಿಶಾದ ಬಾಲೇಶ್ವರ ಜಿಲ್ಲೆಯ ನಿರಾಶ್ರಿತ ಶಿಬಿರವೊಂದರಲ್ಲಿ ಮಹಿಳೆಯರು ಆಶ್ರಯ ಪಡೆದಿದ್ದಾರೆ — ಎಎಫ್‌ಪಿ ಚಿತ್ರ

ಪ್ರವಾಸಿತಾಣಗಳಲ್ಲಿ ಸುರಕ್ಷತಾ ಕ್ರಮ

ಪ್ರಸಿದ್ಧ ಪುರಿ ಜಗನ್ನಾಥ ದೇವಾಲಯ ಹಾಗೂ ಕೊಣಾರ್ಕ್‌ನ ಸೂರ್ಯ ದೇವಾಲಯಗಳ ಸುರಕ್ಷತೆ ಕುರಿತು ಆಯಾ ಜಿಲ್ಲಾಡಳಿತವು ಹಲವು ಕ್ರಮಗಳನ್ನು ಕೈಗೊಂಡಿವೆ. ಪುರಿ ನಗರವನ್ನು ತೊರೆಯಲು ಭಕ್ತರಿಗೆ ಈಗಾಗಲೇ ಸೂಚಿಸಲಾಗಿದೆ.

ಸೂರ್ಯ ದೇವಾಲಯದಲ್ಲಿ ಎರಡು ದಿನಗಳವರೆಗೆ ಭಕ್ತರ ಭೇಟಿಗೆ ನಿರ್ಬಂಧ ಹೇರಲಾಗಿದೆ. ಜೊತೆಗೆ, ಒಡಿಶಾದ ಕಡಲಕಿನಾರೆ ಪ್ರವೇಶಕ್ಕೂ ಪ್ರವಾಸಿಗರನ್ನು ನಿರ್ಬಂಧಿಸಲಾಗಿದೆ.

ಸಂಜೀವ್ ಖನ್ನಾ ನೂತನ ಸಿಜೆಐ

ನ.11ರಂದು ಪ್ರಮಾಣ ಸ್ವೀಕಾರ

ನವದೆಹಲಿ: ಸುಪ್ರೀಂ ಕೋರ್ಟ್‌ನ 51ನೇ ಮುಖ್ಯ ನ್ಯಾಯಮೂರ್ತಿ ಆಗಿ ಸಂಜೀವ್ ಖನ್ನಾ ಅವರನ್ನು ಗುರುವಾರ ನೇಮಕ ಮಾಡಲಾಗಿದೆ. ಅವರು ನವೆಂಬರ್ 11ರಂದು ಪ್ರಮಾಣ ವಚನ ಸ್ವೀಕರಿಸಲಿದ್ದಾರೆ.



ಸಂಜೀವ್ ಖನ್ನಾ

ಹಾಲಿ ಮುಖ್ಯ ನ್ಯಾಯಮೂರ್ತಿ, 65ರ ಹರೆಯದ ಡಿ.ವೈ. ಚಂದ್ರಚೂಡ್ ಅವರ ಕೆಲಸದ ಅವಧಿ ನ.11ರಂದು ಕೊನೆಯಾಗಲಿದೆ.

ಮುಂದಿನ ಸಿಜೆಐ ಸ್ಥಾನಕ್ಕೆ ಖನ್ನಾ ಅವರ ಹೆಸರು ಶಿಫಾರಸು ಮಾಡಿ ಚಂದ್ರಚೂಡ್ ಅವರು ಕೇಂದ್ರ ಕಾನೂನು ಸಚಿವಾಲಯಕ್ಕೆ ಕಳೆದ ವಾರ ಪತ್ರ ಬರೆದಿದ್ದರು.

ಖನ್ನಾ ಅವರು ಮುಂದಿನ ವರ್ಷ ಮೇ 13ರಂದು ನಿವೃತ್ತಿ ಹೊಂದಲಿದ್ದಾರೆ. ಸಿಜೆಐ ಆಗಿ ಅವರ ಅಧಿಕಾರಾವಧಿಯು 6 ತಿಂಗಳು ಇರಲಿದೆ.

'ಭಾರತದ ಸಂವಿಧಾನವು ನೀಡಿರುವ ಅಧಿಕಾರವನ್ನು ಚಲಾಯಿಸಿ, ರಾಷ್ಟ್ರಪತಿ, ಮುಖ್ಯ ನ್ಯಾಯಮೂರ್ತಿಗಳೊಂದಿಗೆ ಸಮಾಲೋಚನೆ ನಡೆಸಿದ ನಂತರ, ಜಸ್ಟೀಸ್ ಸಂಜೀವ್ ಖನ್ನಾ ಅವರನ್ನು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯಾಗಿ ನೇಮಕ ಮಾಡಲು ಸಂತೋಷವಾಗಿದೆ. ನೂತನ ಸಿಜೆಐ ನೇಮಕ ನವೆಂಬರ್ 11ರಿಂದ ಜಾರಿಗೆ ಬರಲಿದೆ' ಎಂದು ಕೇಂದ್ರ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

1960ರ ಮೇ 14ರಂದು ಜನಿಸಿರುವ ಸಂಜೀವ್ ಖನ್ನಾ ಅವರು ದೆಹಲಿ ವಿಶ್ವವಿದ್ಯಾಲಯದಿಂದ ಕಾನೂನು ಪದವಿ ಪಡೆದಿದ್ದಾರೆ. 2005ರಲ್ಲಿ ಅವರು ದೆಹಲಿ ಹೈಕೋರ್ಟ್‌ನ ಹೆಚ್ಚುವರಿ ನ್ಯಾಯಮೂರ್ತಿಯಾಗಿ ಪದೋನ್ನತಿ ಹೊಂದಿದ್ದರು. ನಂತರ, 2006ರಲ್ಲಿ ಹೈಕೋರ್ಟ್‌ನ ಕಾಯಂ ನ್ಯಾಯಮೂರ್ತಿಯಾಗಿ ನೇಮಕಗೊಂಡರು. 2019ರ ಜನವರಿ 18ರಂದು ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಯಾಗಿ ಬಡ್ತಿ ಪಡೆದರು.

'ಜೈ ಶ್ರೀ ರಾಮ್' ಕೂಗುವಂತೆ ಒತ್ತಾಯ ಯುವಕನ ಬಂಧನ

ಗಾಜಿಯಾಬಾದ್ (ಪಿಟಿಐ): ಖಾಸಗಿಯಾಗಿ ಟ್ಯೂಷನ್ ಹೇಳಿಕೊಡಲು ಹೌಸಿಂಗ್ ಸೊಸೈಟಿಗೆ ತೆರಳಿದ್ದ ಉರ್ದು ಶಿಕ್ಷಕನನ್ನು ಸುತ್ತುವರಿದ ಯುವಕರ ಗುಂಪೊಂದು ಬಲವಂತವಾಗಿ ಜೈ ಶ್ರೀ ರಾಮ್ ಘೋಷಣೆ ಕೂಗುವಂತೆ ಒತ್ತಾಯಿಸಿದೆ.

'ರಿಪಬ್ಲಿಕ್ ಟೌನ್‌ಶಿಪ್‌ನಲ್ಲಿರುವ ಸೊಸೈಟಿಯಲ್ಲಿ ನೆಲೆಸಿದ್ದ ಮನೋಜ್ ಕುಮಾರ್ ಮುಖ್ಯ ಆರೋಪಿಯಾಗಿದ್ದು, ಆತನನ್ನು ಬಂಧಿಸಲಾಗಿದೆ' ಎಂದು ಎಸಿಪಿ ಲಿಪಿ ನಾಗಾಇಚ್ ತಿಳಿಸಿದ್ದಾರೆ.

ಮೊಹಮ್ಮದ್ ಆಲಂಗೀರ್ ನಿತ್ಯ ಸೊಸೈಟಿಗೆ ಭೇಟಿ ನೀಡಿ, 16ನೇ ಮಹಡಿಯಲ್ಲಿ ಮಕ್ಕಳಿಗೆ ಟ್ಯೂಷನ್ ಹೇಳಿಕೊಡುತ್ತಿದ್ದರು. ಮಂಗಳವಾರ ಎಂದಿನಂತೆ ಭೇಟಿ ನೀಡಿದ್ದ ವೇಳೆ ಕುಮಾರ್ ಹಾಗೂ ಕೆಲವು ನಿವಾಸಿಗಳು ತಡೆಯೊಡ್ಡಿ 'ಜೈ ಶ್ರೀ ರಾಮ್' ಘೋಷಣೆ ಕೂಗಿ ಪುನರಾವರ್ತಿಸುವಂತೆ ಆಲಂಗೀರ್‌ಗೆ ಒತ್ತಾಯಿಸಿದ್ದಾರೆ. ಇದಕ್ಕೆ ನಿರಾಕರಿಸಿದಾಗ, ಲಿಫ್ಟ್ ಹತ್ತದಂತೆ ತಡೆಯೊಡ್ಡಿದ್ದಾರೆ. ಪರಿಸ್ಥಿತಿ ಕೈ ಮೀರಿರುವುದನ್ನು ಅರಿತ, ಭದ್ರತಾ ಸಿಬ್ಬಂದಿ ಮತ್ತು ಇತರರು ಅಲ್ಲಿಂದ ಹೊರಕಳುಹಿಸಿದರು' ಎಂದು ಅಧಿಕಾರಿಗಳು ತಿಳಿಸಿದರು.

ಇದಾದ ಬಳಿಕ ಆಲಂಗೀರ್ ದೂರು ದಾಖಲಿಸಿದ್ದಾರೆ.

ಆಂಧ್ರ, ಬಿಹಾರಕ್ಕೆ ಎರಡು ರೈಲು ಯೋಜನೆ: ಸಂಪುಟ ಅಸ್ತು

ಪ್ರಜಾವಾಣಿ ವಾರ್ತೆ

ನವದೆಹಲಿ: ಅಮರಾವತಿಗೆ ರೈಲು ಸಂಪರ್ಕ ಒದಗಿಸುವುದು ಸೇರಿದಂತೆ ಎನ್‌ಡಿಎ ಪಾಲುದಾರ ಪಕ್ಷಗಳ ಆಡಳಿತವಿರುವ ಆಂಧ್ರಪ್ರದೇಶ ಮತ್ತು ಬಿಹಾರಕ್ಕೆ ₹6,798 ಕೋಟಿ ಮೊತ್ತದ ಎರಡು ರೈಲು ಯೋಜನೆಗಳಿಗೆ ಕೇಂದ್ರ ಸಚಿವ ಸಂಪುಟ ಗುರುವಾರ ಅನುಮೋದನೆ ನೀಡಿದೆ.

ಆಂಧ್ರಪ್ರದೇಶದ ಹೊಸ ರಾಜಧಾನಿ ಅಮರಾವತಿಗೆ ಸಂಪರ್ಕ ಕಲ್ಪಿಸಲು ₹2,245 ಕೋಟಿ ವೆಚ್ಚದಲ್ಲಿ 57 ಕಿ.ಮೀ ಉದ್ದದ ಹೊಸ ಮಾರ್ಗ ನಿರ್ಮಿಸಲಾಗುವುದು. ಇದಕ್ಕಾಗಿ ಕೃಷ್ಣಾ ನದಿಗೆ 3.2 ಕಿ.ಮೀ ಉದ್ದದ ಹೊಸ ಸೇತುವೆ ನಿರ್ಮಿಸಲಾಗುವುದು. ಯೋಜನೆ ಪೂರ್ಣಗೊಂಡ ನಂತರ, ಇದು ಭಾರತೀಯ ರೈಲ್ವೆ ಜಾಲದಲ್ಲಿಯೇ ಅತಿ ಉದ್ದದ ಸೇತುವೆಯಾಗಲಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಇಲ್ಲಿ ಸುದ್ದಿಗಾರರಿಗೆ ತಿಳಿಸಿದರು.

ಈ ಯೋಜನೆಯು ಅಮರಾವತಿಯಿಂದ ಹೈದರಾಬಾದ್, ಚೆನ್ನೈ ಮತ್ತು ಕೋಲ್ಕತ್ತ ಸೇರಿದಂತೆ ಎಲ್ಲ ಮಹಾನಗರಗಳಿಗೆ ಸಂಪರ್ಕ ಒದಗಿಸುತ್ತದೆ ಎಂದು ಅವರು ಹೇಳಿದರು.

ಬಿಹಾರದ ನರ್ಕಟಿಯಾಗಂಜ್-ರಕ್ಸಾಲ್- ಸಿತಾಮರ್ಹಿ- ದರ್ಭಾಂಗಾ ಮತ್ತು ಸಿತಾಮರ್ಹಿ-ಮುಜಾಫರ್‌ಪುರ ನಡುವಿನ 256 ಕಿ.ಮೀ ಮಾರ್ಗವನ್ನು ಜೋಡಿ ಹಳಿಯನ್ನಾಗಿ ಮೇಲ್ದರ್ಜೆಗೆ ಏರಿಸಲು ಒಪ್ಪಿಗೆ ನೀಡಲಾಗಿದೆ ಎಂದು ಸಚಿವರು ಮಾಹಿತಿ ನೀಡಿದರು.

ಭಾರತೀಯ ಬಾಹ್ಯಾಕಾಶ ಕ್ಷೇತ್ರದಲ್ಲಿ ನವೋದ್ಯಮಗಳಿಗೆ ₹1000 ಕೋಟಿ ಬಂಡವಾಳ ಹೂಡಿಕೆ (ವೆಂಚರ್ ಕ್ಯಾಪಿಟಲ್ ಫಂಡ್) ಸ್ಥಾಪಿಸಲು ಸಂಪುಟ ಒಪ್ಪಿಗೆ ನೀಡಿದೆ. ಈ ಕ್ರಮವು ದೇಶದಲ್ಲಿ ಖಾಸಗಿ ಬಾಹ್ಯಾಕಾಶ ಕ್ಷೇತ್ರದ ಬೆಳವಣಿಗೆಯನ್ನು ವೇಗಗೊಳಿಸುತ್ತದೆ ಎಂದು ನಿರೀಕ್ಷಿಸಲಾಗಿದೆ.

ಹಬ್ಬಗಳ ಪ್ರಯುಕ್ತ 7,000 ಹೆಚ್ಚುವರಿ ರೈಲು

ನವದೆಹಲಿ (ಪಿಟಿಐ): ದೀಪಾವಳಿ ಹಾಗೂ ಛತ್ ಹಬ್ಬಗಳ ಸಂದರ್ಭದಲ್ಲಿ ಜನದಟ್ಟಣೆ ಉಂಟಾಗುವ ಸಾಧ್ಯತೆ ಇರುವ ಕಾರಣ ದೇಶದಾದ್ಯಂತ ಒಟ್ಟು ಏಳು ಸಾವಿರ ವಿಶೇಷ ರೈಲುಗಳ ಸಂಚಾರಕ್ಕೆ ಭಾರತೀಯ ರೈಲ್ವೆ ವ್ಯವಸ್ಥೆ ಮಾಡಿದೆ.

ಇದರಿಂದ ಪ್ರತಿ ದಿನ ಹೆಚ್ಚುವರಿಯಾಗಿ 2 ಲಕ್ಷ ಪ್ರಯಾಣಿಕರಿಗೆ ಅನುಕೂಲವಾಗಲಿದೆ ಎಂದು ರೈಲ್ವೆ ಸಚಿವ ಅಶ್ವಿನಿ ವೈಷ್ಣವ್ ಗುರುವಾರ ತಿಳಿಸಿದ್ದಾರೆ.

ಜನ್ಮದಿನಾಂಕ: ಆಧಾರ್ ಕಾರ್ಡ್ ಅಧಿಕೃತ ಪುರಾವೆಯಲ್ಲ– 'ಸುಪ್ರೀಂ'

ಪ್ರಜಾವಾಣಿ ವಾರ್ತೆ

ನವದೆಹಲಿ: ಜನ್ಮದಿನಾಂಕ ನಿರ್ಧರಿಸುವುದಕ್ಕೆ ಸಂಬಂಧಿಸಿ ಆಧಾರ್ ಕಾರ್ಡ್ ಅಧಿಕೃತ ಪುರಾವೆಯಲ್ಲ ಎಂದು ಸುಪ್ರೀಂ ಕೋರ್ಟ್ ಗುರುವಾರ ಹೇಳಿದೆ.

ಜನ್ಮ ದಿನಾಂಕದ ಪುರಾವೆಗೆ ಸಂಬಂಧಿಸಿ ಭಾರತೀಯ ವಿಶಿಷ್ಟ ಗುರುತಿನ ಚೀಟಿ ಪ್ರಾಧಿಕಾರ (ಯುಐಡಿಎಐ) ಹೊರಡಿಸಿರುವ ಸುತ್ತೋಲೆ ಹಾಗೂ ಸಂಬಂಧಪಟ್ಟ ಕಾಯ್ದೆಯಲ್ಲಿನ ಅವಕಾಶಗಳನ್ನು ಸುಪ್ರೀಂ ಕೋರ್ಟ್ ಉಲ್ಲೇಖಿಸಿದೆ.

ಆಧಾರ್ ಕಾರ್ಡ್ ಅನ್ನು ಗುರುತಿನ ಪುರಾವೆಯಾಗಿ ಬಳಸಬಹುದು. ಇದು ಜನ್ಮದಿನಾಂಕದ ಅಧಿಕೃತ ಪುರಾವೆಯಲ್ಲ ಎಂದು ಯುಐಡಿಎಐ ತನ್ನ ಸುತ್ತೋಲೆಯಲ್ಲಿ ಸ್ಪಷ್ಟಪಡಿಸಿದೆ.

ನ್ಯಾಯಮೂರ್ತಿಗಳಾದ ಸಂಜಯ್ ಕರೋಲ್ ಹಾಗೂ ಉಜ್ಜಲ್ ಭುಯಾಂನ್ ಅವರು ಇದ್ದ ನ್ಯಾಯಪೀಠ ಈ ಕುರಿತ ಅರ್ಜಿ ವಿಚಾರಣೆ ನಡೆಸಿತು.

ರಸ್ತೆ ಅಪಘಾತದಲ್ಲಿ ಸಂಭವಿಸಿದ ಸಾವಿಗೆ ಸಂಬಂಧಿಸಿ ಆಧಾರ್ ಕಾರ್ಡ್‌ನಲ್ಲಿ ನಮೂದಿಸಿದ್ದ ಜನ್ಮ ದಿನಾಂಕವನ್ನು ಆಧಾರವನ್ನಾಗಿ ಪರಿಗಣಿಸಿ ಪರಿಹಾರ ಮೊತ್ತವನ್ನು ಕಡಿತ ಮಾಡಿ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ತೀರ್ಪು ನೀಡಿತ್ತು. ಈ ತೀರ್ಪು ಪ್ರಶ್ನಿಸಿ ಸರೋಜ್ ಮತ್ತು ಇತರರು ಸುಪ್ರೀಂ ಕೋರ್ಟ್‌ಗೆ ಮೇಲ್ಮನವಿ ಸಲ್ಲಿಸಿದ್ದರು.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಪೀಠ, ಅಪಘಾತದಲ್ಲಿ ಸಂಭವಿಸಿದ ಸಾವಿಗೆ ಸಂಬಂಧಿಸಿ ಪರಿಹಾರ ಮೊತ್ತ ನಿಗದಿ ಮಾಡಲು ವರ್ಗಾವಣೆ ಪ್ರಮಾಣಪತ್ರವನ್ನೇ ಜನ್ಮದಿನಾಂಕ ದೃಢೀಕರಣಕ್ಕೆ ಆಧಾರವನ್ನಾಗಿ ಪರಿಗಣಿಸಿ ಮೋಟಾರು ಅಪಘಾತ ಕ್ಲೇಮುಗಳ ನ್ಯಾಯಮಂಡಳಿ ಹೊರಡಿಸಿದ್ದ ಆದೇಶವನ್ನು ಎತ್ತಿ ಹಿಡಿದಿದೆ.

ಪರಿಹಾರ ಮೊತ್ತವನ್ನು ₹9,22,336ರಿಂದ ₹15 ಲಕ್ಷಕ್ಕೆ ಹೆಚ್ಚಿಸಿ ಹಾಗೂ ಬಡ್ಡಿದರವನ್ನು ಶೇ8ರಷ್ಟು ಎಂದು ನಿಗದಿ ಮಾಡಿ ಆದೇಶಿಸಿದೆ.

'ತೊಂದರೆಗೆ ಒಳಗಾದವರು ನ್ಯಾಯಾಲಯದ ಮುಂದೆ ಬರಲಿ'

ಕಟ್ಟಡ ಧ್ವಂಸ: ಅರ್ಜಿ ವಿಚಾರಣೆಗೆ ನಕಾರ

ನವದೆಹಲಿ (ಪಿಟಿಐ): ಕಟ್ಟಡಗಳ ಧ್ವಂಸ ಕಾರ್ಯಾಚರಣೆಗೆ ಸಂಬಂಧಿಸಿದಂತೆ ನೀಡಿದ್ದ ಸೂಚನೆಗಳನ್ನು ಉತ್ತರಾಖಂಡ, ರಾಜಸ್ಥಾನ ಮತ್ತು ಉತ್ತರ ಪ್ರದೇಶದ ಅಧಿಕಾರಿಗಳಲು ಉಲ್ಲಂಘಿಸಿದ್ದಾರೆ ಎಂಬ ದೂರು ಇರುವ ಅರ್ಜಿಯೊಂದನ್ನು ವಿಚಾರಣೆಗೆ ಎತ್ತಿಕೊಳ್ಳಲು ಸುಪ್ರೀಂ ಕೋರ್ಟ್ ಗುರುವಾರ ನಿರಾಕರಿಸಿತು.



ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಪಿ.ಕೆ. ಮಿಶ್ರಾ ಮತ್ತು ಕೆ.ವಿ. ವಿಶ್ವನಾಥನ್ ಅವರು ಇದ್ದ ತ್ರಿಸದಸ್ಯ ಪೀಠವು, ಅಧಿಕಾರಿಗಳಿಂದ ನಡೆದಿದೆ ಎನ್ನಲಾದ ಕೃತ್ಯಕ್ಕೆ ನೇರವಾಗಿ ಸಂಬಂಧಿಸಿಲ್ಲದ ವ್ಯಕ್ತಿ ಸಲ್ಲಿಸಿರುವ ಅರ್ಜಿಯನ್ನು ಮಾನ್ಯ ಮಾಡಲಾಗದು ಎಂದು ಹೇಳಿತು.

'ಧ್ವಂಸ ಕಾರ್ಯಾಚರಣೆಯಿಂದ ತೊಂದರೆಗೆ ಒಳಗಾದವರು ನ್ಯಾಯಾಲಯದ ಮುಂದೆ ಬರಲಿ' ಎಂದು ಪೀಠ ಹೇಳಿತು.

ತನ್ನ ಅನುಮತಿ ಇಲ್ಲದೆ ಕಟ್ಟಡ ಧ್ವಂಸ ಕಾರ್ಯಾಚರಣೆ ನಡೆಸುವಂತಿಲ್ಲ ಎಂದು ಸುಪ್ರೀಂ ಕೋರ್ಟ್ ಸೂಚನೆ ನೀಡಿತ್ತು. ಆದರೆ ಹರಿದ್ವಾರ, ಜೈಪುರ ಮತ್ತು ಕಾನ್ಪುರದಲ್ಲಿ ಅಧಿಕಾರಿಗಳು ನ್ಯಾಯಾಲಯದ ಸೂಚನೆ ಮೀರಿ ಧ್ವಂಸ ಕಾರ್ಯಾಚರಣೆ ನಡೆಸಿದ್ದಾರೆ ಎಂದು ಅರ್ಜಿದಾರರ ಪರ ವಕೀಲರು ತಿಳಿಸಿದರು.

ಒಂದು ಪ್ರಕರಣದಲ್ಲಿ ಎಫ್‌ಐಆರ್ ದಾಖಲಾಗುತ್ತಿದ್ದಂತೆಯೇ ಕಟ್ಟಡವನ್ನು ಧ್ವಂಸಗೊಳಿಸಲಾಗಿದೆ ಎಂದು ವಕೀಲರು ಆರೋಪಿಸಿದರು.

ಉತ್ತರ ಪ್ರದೇಶ ಸರ್ಕಾರದ ಪರವಾಗಿ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಕೆ.ಎಂ. ನಟರಾಜ್, ಪಾದಚಾರಿ ರಸ್ತೆಯ ಅತಿಕ್ರಮಣವನ್ನು ಮಾತ್ರ ತೆರವು ಮಾಡಲಾಗಿದೆ ಎಂದು ತಿಳಿಸಿದರು. ಅರ್ಜಿದಾರರು ಮೂರನೆಯ ವ್ಯಕ್ತಿ, ಅವರಿಗೆ ವಾಸ್ತವ ಗೊತ್ತಿಲ್ಲ ಎಂದು ಹೇಳಿದರು. ಮಾಧ್ಯಮ ವರದಿಗಳನ್ನು ಆಧರಿಸಿ ಅರ್ಜಿ ಸಲ್ಲಿಸಲಾಗಿದೆ ಎಂದು ನಟರಾಜ್ ಹೇಳಿದರು.

'ಪತ್ರಕರ್ತೆ ಮಮತಾ ವಿರುದ್ಧ ಬಲವಂತದ ಕ್ರಮ ಬೇಡ'

ನವದೆಹಲಿ (ಪಿಟಿಐ): ಪತ್ರಕರ್ತೆ ಮಮತಾ ತ್ರಿಪಾಠಿ ಅವರ ವಿರುದ್ಧ ಉತ್ತರ ಪ್ರದೇಶದಲ್ಲಿ ದಾಖಲಾಗಿರುವ ನಾಲ್ಕು ಎಫ್‌ಐಆರ್‌ಗಳಿಗೆ ಸಂಬಂಧಿಸಿದಂತೆ ಬಲವಂತದಿಂದ ಯಾವುದೇ ಕ್ರಮ ಜರುಗಿಸಬಾರದು ಎಂದು ಸುಪ್ರೀಂ ಕೋರ್ಟ್ ಗುರುವಾರ ಸೂಚನೆ ನೀಡಿದೆ.

ನಾಲ್ಕು ಎಫ್‌ಐಆರ್‌ಗಳನ್ನು ರದ್ದುಪಡಿಸಬೇಕು ಎಂದು ಕೋರಿ ಮಮತಾ ಅವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ಪಿ.ಕೆ. ಮಿಶ್ರಾ ಮತ್ತು ಕೆ.ವಿ. ವಿಶ್ವನಾಥನ್ ಅವರು ಇರುವ ತ್ರಿಸದಸ್ಯ ಪೀಠವು ನಡೆಸಿತು. ಅರ್ಜಿಗೆ ಪ್ರತಿಕ್ರಿಯೆ ಸಲ್ಲಿಸುವಂತೆ ಉತ್ತರ ಪ್ರದೇಶ ಸರ್ಕಾರಕ್ಕೆ ನೋಟಿಸ್ ಜಾರಿಗೆ ಆದೇಶಿಸಿತು.

ಪತ್ರಿಕಾ ಸ್ವಾತಂತ್ರ್ಯವನ್ನು ಹತ್ತಿಕ್ಕುವ ಉದ್ದೇಶದಿಂದ ಎಫ್‌ಐಆರ್‌ಗಳನ್ನು ರಾಜಕೀಯಪ್ರೇರಿತವಾಗಿ ದಾಖಲು ಮಾಡಲಾಗಿದೆ ಎಂದು ಮಮತಾ ಅವರು ದೂರಿದ್ದಾರೆ. ತಾವು 'ಎಕ್ಸ್' ವೇದಿಕೆಯಲ್ಲಿ ಮಾಡಿರುವ ಕೆಲವು ಪೋಸ್ಟ್‌ಗಳಿಗೆ ಸಂಬಂಧಿಸಿದಂತೆ ಎಫ್‌ಐಆರ್ ದಾಖಲಾಗಿದೆ ಎಂದು ಅವರು ಹೇಳಿದ್ದಾರೆ.

ಪತ್ರಕರ್ತರ ಬರಹವು ಸರ್ಕಾರದ ಕುರಿತ ಟೀಕೆ ಎಂದು ಅನಿಸಿದ ಮಾತ್ರಕ್ಕೇ ಅವರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲು ಮಾಡಬಾರದು ಎಂದು ಸುಪ್ರೀಂ ಕೋರ್ಟ್ ಅಭಿಷೇಕ್ ಉಪಾಧ್ಯಾಯ ಎನ್ನುವವರ ಪ್ರಕರಣದಲ್ಲಿ ಈಚೆಗೆ ಹೇಳಿತ್ತು.

ಮಮತಾ ವಿರುದ್ಧ ದಾಖಲಾಗಿರುವ ಪ್ರಕರಣಗಳು ಶುದ್ಧ ಕಿರುಕುಳ ಎಂದು ಅವರ ವಕೀಲರು ದೂರಿದರು.

ರಾಜ್ಯದಲ್ಲಿ ನಡೆದಿರುವ ವಿದ್ಯಮಾನವನ್ನು ಮಮತಾ ಅವರು ತಮ್ಮ ವರದಿಗಳ ಮೂಲಕ ಹೇಳುವ ಕೆಲಸ ಮಾಡಿದ್ದಾರೆ, ಸತ್ಯದ ಕಡೆ ಬೊಟ್ಟು ಮಾಡಿ ತೋರಿಸಲು ಯತ್ನಿಸಿದ್ದಾರೆ. ಆದರೆ ಇದು ಆಡಳಿತದ ಶಕ್ತಿಸೌಧಕ್ಕೆ ಸರಿಕಂಡಿಲ್ಲ, ಅವರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ ಎಂದು ಅರ್ಜಿಯಲ್ಲಿ ವಿವರಿಸಲಾಗಿದೆ.

ಉಗ್ರರ ದಾಳಿ; ಇಬ್ಬರು ಯೋಧರು ಹುತಾತ್ಮ, ಕಾರ್ಮಿಕರ ಸಾವು

ಶ್ರೀನಗರ: ಉತ್ತರ ಕಾಶ್ಮೀರದ ಬಾರಾಮುಲ್ಲಾ ಜಿಲ್ಲೆಯಲ್ಲಿ ಗುರುವಾರ ಉಗ್ರರು ಸೇನಾ ವಾಹನದ ಮೇಲೆ ಹೊಂಚುದಾಳಿ ನಡೆಸಿದ್ದು, ಇಬ್ಬರು ಯೋಧರು ಮತ್ತು ಇಬ್ಬರು ಕಾರ್ಮಿಕರು ಮೃತಪಟ್ಟಿದ್ದಾರೆ. ಮೂವರು ಸೈನಿಕರು ಗಾಯಗೊಂಡಿದ್ದಾರೆ.

ಜಿಲ್ಲೆಯ ಗುಲ್ಮಾರ್ಗ್‌ನ ಪ್ರಸಿದ್ಧ ಸ್ಕೀ-ರೆಸಾರ್ಟ್ ಬಳಿಯ ಬೋಟಪಾತ್ರ ಪ್ರದೇಶದಲ್ಲಿ ಭಾರಿ ಶಸ್ತ್ರಸಜ್ಜಿತ ಭಯೋತ್ಪಾದಕರು, 18ನೇ ರಾಷ್ಟ್ರೀಯ ರೈಫಲ್ಸ್‌ನ (ಆರ್‌ಆರ್) ಸೇನಾ ವಾಹನದ ಮೇಲೆ ಬೋಟಪಾತ್ರದ ನಾಗಿನ್ ಧೋಕ್ ಪ್ರದೇಶದಲ್ಲಿ ಹಠಾತ್ ಗುಂಡು ಹಾರಿಸಿದ್ದಾರೆ. ನಾಗರಿಕ ಸಂಚಾರಕ್ಕೆ ನಿರ್ಬಂಧವಿರುವ ಈ ಪ್ರದೇಶವು ಗುಲ್ಮಾರ್ಗ್ ಸ್ಕೀ-ರೆಸಾರ್ಟ್‌ನಿಂದ ಸುಮಾರು ಏಳು ಕಿಲೋಮೀಟರ್ ದೂರದಲ್ಲಿದ್ದು, ಗಡಿ ನಿಯಂತ್ರಣ ರೇಖೆಗೆ (ಎಲ್‌ಒಸಿ) ಹತ್ತಿರದಲ್ಲಿದೆ.

'ಇಬ್ಬರು ಸೈನಿಕರು ಮತ್ತು ಸೇನೆಗಾಗಿ ಕೆಲಸ ಮಾಡುತ್ತಿದ್ದ ಇಬ್ಬರು ಕಾರ್ಮಿಕರು ಈ ದಾಳಿಯಲ್ಲಿ ಮೃತಪಟ್ಟಿದ್ದಾರೆ. ಮೂವರು ಸೈನಿಕರು ಗಾಯಗೊಂಡಿದ್ದಾರೆ. ಉಗ್ರರು ದಟ್ಟ ಅರಣ್ಯ ಪ್ರದೇಶಕ್ಕೆ ಪರಾರಿಯಾಗುವುದನ್ನು ತಡೆಯಲು ಇಡೀ ಪ್ರದೇಶವನ್ನು ಸೇನೆ ಸುತ್ತುವರಿದಿದೆ. ದಾಳಿ ನಡೆದಿರುವ ಪ್ರದೇಶಕ್ಕೆ ಹೆಚ್ಚಿನ ಸೇನೆಯನ್ನು ನಿಯೋಜಿಸಲಾಗಿದೆ' ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.



ಜಮ್ಮು–ಕಾಶ್ಮೀರದಲ್ಲಿ ಉಗ್ರರ ದಾಳಿ ಹೆಚ್ಚಳವಾಗಿದ್ದು, ಭದ್ರತಾ ತಪಾಸಣೆ ಹೆಚ್ಚಿಸಲಾಗಿದೆ —ಪಿಟಿಐ ಚಿತ್ರ

'ನಾಗಿನ್ ಪೋಸ್ಟ್ ಸುತ್ತಮುತ್ತ ಬಾರಾಮುಲ್ಲಾ ಜಿಲ್ಲೆಯ ಬೋಟಪತ್ರ್ ವಲಯದಲ್ಲಿ ಸೇನೆ ಮತ್ತು ಭಯೋತ್ಪಾದಕರ ನಡುವೆ ಗುಂಡಿನ ಚಕಮಕಿ ನಡೆದಿದೆ' ಎಂದು ಇದಕ್ಕೂ ಮೊದಲು, ಬಾರಾಮುಲ್ಲಾ ಪೊಲೀಸರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದರು.

ಉಗ್ರರ ದಾಳಿ ನಡೆದಿರುವ ಈ ಪ್ರದೇಶ ಸಾಮಾನ್ಯವಾಗಿ, ಭಯೋತ್ಪಾದಕ ಮುಕ್ತ ಪ್ರದೇಶವೆನಿಸಿತ್ತು. ಗುಲ್ಮಾರ್ಗ್ ಮತ್ತು ಅದರ ಮೇಲ್ಭಾಗದ ಬೋಟಪತ್ರಿ ಸದಾ ಪ್ರವಾಸಿಗರಿಂದ ತುಂಬಿ ತುಳುಕುತ್ತದೆ. ಈ ಸ್ಥಳವು ಪ್ರಕೃತಿ ಪ್ರಿಯರಿಗೆ ನೆಚ್ಚಿನ ತಾಣವಾಗಿದೆ.

ವಾಷಿಂಗ್ಟನ್ 'ಸೂಪರ್ ಸೆವೆನ್'

ಪುಣೆ ಟೆಸ್ಟ್: ಡೆವೊನ್ ಕಾನ್ವೆ, ರಚಿನ್ ರವೀಂದ್ರ ಅರ್ಧಶತಕ; ಅಶ್ವಿನ್‌ಗೆ ಮೂರು ವಿಕೆಟ್



ವಿಕೆಟ್ ಪಡೆದ ವಾಷಿಂಗ್ಟನ್ ಸುಂದರ್ (ಬಲ) ಅವರನ್ನು ಅಭಿನಂದಿಸಿದ ನಾಯಕ ರೋಹಿತ್ ಶರ್ಮಾ –ಪಿಟಿಐ ಚಿತ್ರ

ಪ್ರಜಾವಾಣಿ ವಾರ್ತೆ

ಪುಣೆ: ಗುರುವಾರ ಮಧ್ಯಾಹ್ನ ಚಹಾ ವಿರಾಮಕ್ಕೆ ಇನ್ನೂ ಮೂರು ಓವರ್‌ಗಳು ಬಾಕಿಯಿದ್ದಾಗ ವಾಷಿಂಗ್ಟನ್ ಸುಂದರ್ ಅವರು ರಚಿನ್ ರವೀಂದ್ರ ಮತ್ತು ಡ್ಯಾರಿಲ್ ಮಿಚೆಲ್ ಜೊತೆಯಾಟ ಮುರಿದರು. ನ್ಯೂಜಿಲೆಂಡ್ ತಂಡದ ಜೊತೆಯಾಟ ನಾಲ್ಕನೇ ವಿಕೆಟ್‌ಗೆ 59 ರನ್ ಗಳಿಸಿತ್ತು.

ಆಗ ತಂಡದ ಮೊತ್ತ 3 ವಿಕೆಟ್‌ಗಳಿಗೆ 197 ರನ್ ಗಳಾಗಿದ್ದವು. ಇನ್ನೂ ಕಿವೀಸ್ ಪಡೆಯ ಹಿಡಿತದಲ್ಲಿತ್ತು. ಅಲ್ಲಿಯವರೆಗೂ ವಾಷಿಂಗ್ಟನ್ 13 ಓವರ್ ಹಾಕಿದ್ದರು. ಈ ಓವರ್‌ಗಳಲ್ಲಿ ಬ್ಯಾಟರ್‌ಗಳಿಗೆ ಆತಂಕ ಮೂಡಿಸುವಂತಹ ಎಸೆತಗಳು ಹೆಚ್ಚೇನೂ ಇರಲಿಲ್ಲ. ಆದರ ಅನುಭವಿ ಆಫ್‌ಸ್ಪಿನ್ನರ್ ಆರ್. ಅಶ್ವಿನ್ ಮಾತ್ರ ಈ ಅವಧಿಯಲ್ಲಿ 3 ವಿಕೆಟ್ ಗಳಿಸಿ ತಮ್ಮ ಕೈಚಳಕ ತೋರಿದ್ದರು.

ಆದರೆ ನಾಟಕೀಯ ತಿರುವು ಪಡೆದ ಇನಿಂಗ್ಸ್‌ನಲ್ಲಿ ವಾಷಿಂಗ್ಟನ್ ತಮ್ಮ ಜೀವನಶ್ರೇಷ್ಠ (23.1–4–59–7) ಬೌಲಿಂಗ್ ಸಾಧನೆ ದಾಖಲಿಸಿದರು. ಉಳಿದಿದ್ದ ಎಲ್ಲ ವಿಕೆಟ್‌ಗಳನ್ನೂ ಕಬಳಿಸಿ ಕಿವೀಸ್ ಇನಿಂಗ್ಸ್‌ಗೆ ತೆರೆಯೆಳೆದರು. ಫೀಲ್ಡಿಂಗ್ ಮಾಡುತ್ತಿದ್ದ ಅಶ್ವಿನ್ ಚಪ್ಪಾಳೆ ತಟ್ಟಿ ಮೆಚ್ಚುಗೆ ವ್ಯಕ್ತಪಡಿಸಿದರು. ತಮಿಳುನಾಡಿನ ಈ ಜೋಡಿಯು (ಅಶ್ವಿನ್–ವಾಷಿಂಗ್ಟನ್) ಕಿವೀಸ್ ತಂಡದ ಎಲ್ಲ ವಿಕೆಟ್‌ಗಳನ್ನೂ ತಮ್ಮಲ್ಲಿ ಹಂಚಿಕೊಂಡಿತು. ಪ್ರವಾಸಿ ಬಳಗವು 79.1 ಓವರ್‌ಗಳಲ್ಲಿ 259 ರನ್ ಗಳಿಸಿ ಇನಿಂಗ್ಸ್ ಮುಗಿಸಿತು. ಇದು ಟೆಸ್ಟ್ ಕ್ರಿಕೆಟ್‌ನಲ್ಲಿ ಅದೃಷ್ಟ ವೇಗ ಅದಲು–ಬದಲಾಗುತ್ತದೆ ಎಂಬುದಕ್ಕೆ ಸಾಕ್ಷಿಯಾಯಿತು.

ಈ ಮುಂಚೆ ಕಿವೀಸ್ ಎದುರಿನ ಟೆಸ್ಟ್ ಸರಣಿಗೆ ಆಯ್ಕೆ ಮಾಡಿದ್ದ ತಂಡದಲ್ಲಿ ವಾಷಿಂಗ್ಟನ್ ಇರಲೇ ಇಲ್ಲ. ಅವರು ತಮಿಳುನಾಡು ತಂಡದಲ್ಲಿ ರಣಜಿ ಟ್ರೋಫಿ ಟೂರ್ನಿಯಲ್ಲಿ ಆಡುತ್ತಿದ್ದರು. ಬೆಂಗಳೂರು ಟೆಸ್ಟ್ ನಂತರ ವಾಷಿಂಗ್ಟನ್ ಅವರನ್ನು ಭಾರತ ತಂಡಕ್ಕೆ ಸೇರಿಸಿಕೊಳ್ಳಲಾಯಿತು. ಆದರೆ ಗುರುವಾರ ಬೆಳಿಗ್ಗೆ ಅವರು ಎಡಗೈ ಸ್ಪಿನ್ನರ್ ಕುಲದೀಪ್ ಯಾದವ್ ಅವರ ಬದಲಿಗೆ ಸ್ಥಾನ ಪಡೆಯುವ ಬಗ್ಗೆ ಯಾರೂ ಯೋಚಿಸಿರಲಿಲ್ಲ. ಅಕ್ಷರ್ ಪಟೇಲ್ ಅವರನ್ನು ಪರಿಗಣಿಸದೇ ತಂಡದ ಮ್ಯಾನೇಜ್‌ಮೆಂಟ್ ಮೂರನೇ ಸ್ಪಿನ್ನರ್ ಸ್ಥಾನಕ್ಕೆ ವಾಷಿಂಗ್ಟನ್ ಅವರನ್ನು ಆರಿಸಿತು. ಇದು ಉತ್ತಮ ನಡೆಯಾಗಿ ಸಾಬೀತಾಯಿತು.

ಇನಿಂಗ್ಸ್‌ನ ಎಂಟನೇ ಓವರ್‌ನಲ್ಲಿ ನಾಯಕ ರೋಹಿತ್ ಅವರು ವಾಷಿಂಗ್ಟನ್‌ಗೆ ಚೆಂಡು ನೀಡಿದರು. ರವೀಂದ್ರ ಜಡೇಜ ಮತ್ತು ಆರ್. ಅಶ್ವಿನ್ ಅವರೊಡಗೂಡಿ ವಾಷಿಂಗ್ಟನ್ ಬ್ಯಾಟರ್‌ಗಳನ್ನು ನಿಯಂತ್ರಿಸಲು ಪ್ರಯತ್ನಿಸಿದರು.

ಆದರೆ ಅರ್ಧಶತಕ ಗಳಿಸಿದ್ದ 'ಬೆಂಗಳೂರು ಮೂಲದ ಹುಡುಗ' ರಚಿನ್ ರವೀಂದ್ರ (65; 105ಎ, 4X5, 6X1) ಅವರನ್ನು ಕ್ಲೀನ್‌ಬೌಲ್ಡ್ ಮಾಡಿದ ವಾಷಿಂಗ್ಟನ್ ಬೇಟೆ ಆರಂಭಿಸಿದರು. ಅವರು ಹಾಕಿದ ಆಫ್‌ಬ್ರೇಕ್ ಎಸೆತವು ಮಧ್ಯದ ಸ್ಟಂಪ್ ಲೈನ್‌ನಲ್ಲಿ ಪುಟಿದು ತಿರುವು ಪಡೆಯಿತು. ರಚಿನ್ ಬ್ಯಾಟ್ ಮುಂದೆ ತರುವಷ್ಟರಲ್ಲಿಯೇ ಚೆಂಡು ಆಫ್‌ಸ್ಟಂಪ್‌ಗೆ ಬಡಿಯಿತು.

ಇಲ್ಲಿಂದ ವಾಷಿಂಗ್ಟನ್ ಬೇಟೆ ಆರಂಭವಾಯಿತು. ನಂತರ ಅವರು ಹತ್ತು ಓವರ್‌ಗಳಲ್ಲಿ ಉಳಿದ 6 ವಿಕೆಟ್‌ಗಳನ್ನು ತಮ್ಮ ಬುಟ್ಟಿಗೆ ಹಾಕಿಕೊಂಡರು. ಅದರಲ್ಲಿ ಮಿಚೆಲ್ ಸ್ಯಾಂಟನರ್ ಮಾತ್ರ 33 ರನ್ ಗಳಿಸಿದರು. ಉಳಿದವರು ಎರಡಂಕಿ ಮುಟ್ಟಲಿಲ್ಲ. ವಾಷಿಂಗ್ಟನ್ ಅವರು ಇನಿಂಗ್ಸ್ ಶ್ರೇಷ್ಠ ವಿಕೆಟ್ ಗಳಿಕೆ ಸಾಧನೆಯನ್ನು ಅಶ್ವಿನ್ ಅವರನ್ನು ಸರಿಗಟ್ಟಿದರು.

ರೋಹಿತ್ ಶೂನ್ಯ: ಆತಿಥೇಯ ತಂಡವು ಮೊದಲ ಇನಿಂಗ್ಸ್‌ನ ಆರಂಭದಲ್ಲಿಯೇ ಆಘಾತ ಅನುಭವಿಸಿತು.

3ನೇ ಓವರ್‌ನಲ್ಲಿ ಟಿಮ್ ಸೌಥಿ ಎಸೆತದಲ್ಲಿ ರೋಹಿತ್ ಶರ್ಮಾ ಕ್ಲೀನ್ ಬೌಲ್ಡ್ ಆದರು. ಇನ್ನೊಂದು ಬದಿಯಲ್ಲಿದ್ದ ಯಶಸ್ವಿ ಜೈಸ್ವಾಲ್ (ಬ್ಯಾಟಿಂಗ್ 6) ಮತ್ತು ಶುಭಮನ್ ಗಿಲ್ (ಬ್ಯಾಟಿಂಗ್ 10) ಅವರ ತಾಳ್ಮೆಯ ಆಟದಿಂದ ತಂಡವು ದಿನದಾಟದ ಅಂತ್ಯಕ್ಕೆ 11 ಓವರ್‌ಗಳಲ್ಲಿ 1 ವಿಕೆಟ್‌ಗೆ 16 ರನ್ ಗಳಿಸಿತು.

ಐದು ಕ್ಲೀನ್‌ಬೌಲ್ಡ್...!

ವಾಷಿಂಗ್ಟನ್ ಸುಂದರ್ ಅವರ ಬೌಲಿಂಗ್‌ನಲ್ಲಿ ಔಟಾದ ಏಳು ಮಂದಿಯಲ್ಲಿ ಐವರು ಕ್ಲೀನ್ ಬೌಲ್ಡ್ ಆದರು. ಉಳಿದಂತೆ ಡ್ಯಾರಿಲ್ ಮಿಚೆಲ್ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಗ್ಲೆನ್ ಫಿಲಿಪ್ಸ್ ಅವರ ಕ್ಯಾಚ್ ಪಡೆಯುವಲ್ಲಿ ಅಶ್ವಿನ್ ಯಶಸ್ವಿಯಾದರು.

ಅಶ್ವಿನ್ ಪಡೆದ ಮೂರು ವಿಕೆಟ್‌ಗಳಲ್ಲಿ ಟಾಮ್ ಲೇಥಮ್ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಡೆವೊನ್ ಕಾನ್ವೆ (76; 141ಎ) ಮತ್ತು ವಿಲ್ ಯಂಗ್ ಕ್ಯಾಚ್‌ಗಳನ್ನು ವಿಕೆಟ್‌ಕೀಪರ್ ರಿಷಭ್ ಪಂತ್ ಪಡೆದರು. ಪಂತ್ ಅವರು ಯಂಗ್ ಕ್ಯಾಚ್ ಪಡೆದಾಗ ಅಂಪೈರ್ ಔಟ್ ನೀಡಿರಲಿಲ್ಲ. ಆದರೆ ಶಾರ್ಟ್ ಲೆಗ್‌ನಲ್ಲಿದ್ದ ಸರ್ಫರಾಜ್ ಖಾನ್ ಅವರ ಸಲಹೆಯಂತೆ ಅಪೀಲ್ ಮಾಡಿದರು. ನಾಯಕ ರೋಹಿತ್ ಅವರನ್ನು ಯುಡಿಆರ್‌ಎಸ್ (ಅಂಪೈರ್ ತೀರ್ಪು ಮರುಪರಿಶೀಲನಾ ವ್ಯವಸ್ಥೆ) ಅವಕಾಶ ಪಡೆಯಲು ಒತ್ತಾಯಿಸಿದರು. ರೋಹಿತ್ ಕೂಡಲೇ ಒಪ್ಪಿ ಅವಕಾಶ ಬಳಸಿಕೊಂಡರು. ಫಲ ಲಭಿಸಿತು.

ರಾಹುಲ್, ಸಿರಾಜ್‌ಗೆ ವಿಶ್ರಾಂತಿ: ಕನ್ನಡಿಗ ಕೆ.ಎಲ್. ರಾಹುಲ್ ಮತ್ತು ವೇಗಿ ಮೊಹಮ್ಮದ್ ಸಿರಾಜ್ ಅವರಿಗೆ ವಿಶ್ರಾಂತಿ ನೀಡಲಾಯಿತು. ಶುಭಮನ್ ಗಿಲ್ ಮತ್ತು ಆಕಾಶ್ ದೀಪ್ ಅವರನ್ನು ಕಣಕ್ಕಿಳಿಸಲಾಯಿತು.

ರಾಹುಲ್ ಅವರು ಕಳೆದ ಟೆಸ್ಟ್ ಪಂದ್ಯದ ಎರಡೂ ಇನಿಂಗ್ಸ್‌ಗಳಲ್ಲಿ ವೈಫಲ್ಯ ಅನುಭವಿಸಿದ್ದರು. ಮೊದಲ ಪಂದ್ಯದಲ್ಲಿ ಗಿಲ್ ಗಾಯದ ಕಾರಣ ಆಡಿರಲಿಲ್ಲ. ಅವರು ಚೇತರಿಸಿಕೊಂಡಿದ್ದು ಮೂರನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡುತ್ತಿದ್ದಾರೆ.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ನ್ಯೂಜಿಲೆಂಡ್: 259 (79.1 ಓವರ್‌ಗಳಲ್ಲಿ)
ಟಾಮ್ ಲೇಥಮ್ ಎಲ್‌ಬಿಡಬ್ಲ್ಯು ಬಿ ಅಶ್ವಿನ್ 15 (22ಎ, 4x2)
ಡೆವೊನ್ ಕಾನ್ವೆ ಸಿ ಪಂತ್ ಬಿ ಅಶ್ವಿನ್ 76 (141ಎ, 4x11)
ವಿಲ್ ಯಂಗ್ ಸಿ ಪಂತ್ ಬಿ ಅಶ್ವಿನ್ 18 (45ಎ, 4x2)
ರಚಿನ್ ಬಿ ವಾಷಿಂಗ್ಟನ್ 65 (105ಎ, 4x5, 6x1)
ಡ್ಯಾರಿಲ್ ಮಿಚೆಲ್ ಎಲ್‌ಬಿಡಬ್ಲ್ಯು ಬಿ ವಾಷಿಂಗ್ಟನ್ 18 (54ಎ)
ಬ್ಲಂಡೆಲ್ ಬಿ ವಾಷಿಂಗ್ಟನ್ 3 (12ಎ)
ಫಿಲಿಪ್ಸ್ ಸಿ ಅಶ್ವಿನ್ ಬಿ ವಾಷಿಂಗ್ಟನ್ 9 (31ಎ)
ಸ್ಯಾಂಟನರ್ ಬಿ ವಾಷಿಂಗ್ಟನ್ 33 (51ಎ, 4x3, 6x2)
ಸೌಥಿ ಬಿ ವಾಷಿಂಗ್ಟನ್ 5 (8ಎ, 4x1)
ಎಜಾಜ್ ಬಿ ವಾಷಿಂಗ್ಟನ್ 4 (9ಎ, 4x1)
ವಿಲಿಯಂ ಔಟಾಗದೇ 0 (0ಎ)
ಇತರೆ: 13 (ಬೈ 8, ಲೆಗ್‌ಬೈ 2, ನೋಬಾಲ್ 3)
ವಿಕೆಟ್ ಪತನ: 1-32 (ಟಾಮ್ ಲೇಥಮ್, 7.5), 2-76 (ವಿಲ್ ಯಂಗ್, 23.6), 3-138 (ಡೆವೊನ್ ಕಾನ್ವೆ, 43.2), 4-197 (ರಚಿನ್ ರವೀಂದ್ರ, 59.1), 5-201 (ಟಾಮ್ ಬ್ಲಂಡೆಲ್, 61.6), 6-204 (ಡ್ಯಾರಿಲ್ ಮಿಚೆಲ್, 63.3), 7-236 (ಗ್ಲೆನ್ ಫಿಲಿಪ್ಸ್, 73.4), 8-242 (ಟಿಮ್ ಸೌಥಿ, 75.1), 9-252 (ಎಜಾಜ್ ಪಟೇಲ್, 77.06), 10-259 (ಮಿಚೆಲ್ ಸ್ಯಾಂಟನರ್, 79.1)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 8-2-32-0, ಆಕಾಶ್ ದೀಪ್ 6-0-41-0, ರವಿಚಂದ್ರನ್ ಅಶ್ವಿನ್ 24-2-64-3, ವಾಷಿಂಗ್ಟನ್ ಸುಂದರ್ 23.1-4-59-7, ರವೀಂದ್ರ ಜಡೇಜ 18-0-53-0
ಭಾರತ: 1ಕ್ಕೆ 16 (11 ಓವರ್‌ಗಳಲ್ಲಿ)
ಯಶಸ್ವಿ ಜೈಸ್ವಾಲ್ ಔಟಾಗದೇ 6 (25ಎ, 4x1)
ರೋಹಿತ್ ಬಿ ಸೌಥಿ 0 (9ಎ)
ಶುಭಮನ್ ಗಿಲ್ ಔಟಾಗದೇ 10 (32ಎ, 4x1)
ವಿಕೆಟ್ ಪತನ: 1-1 (ರೋಹಿತ್ ಶರ್ಮಾ 2.6)
ಬೌಲಿಂಗ್: ಟಿಮ್ ಸೌಥಿ 3-1-4-1, ವಿಲಿಯಂ ಓ ರೂರ್ಕಿ 3-2-5-0, ಎಜಾಜ್ ಪಟೇಲ್ 3-1-5-0, ಮಿಚೆಲ್ ಸ್ಯಾಂಟನರ್ 2-0-2-0

ಕಿವೀಸ್ ವಿರುದ್ಧ 59 ರನ್ ಜಯ
ಭಾರತದ ಗೆಲುವಿನಲ್ಲಿ ಮಿಂಚಿದ ರಾಧಾ


ವಿಕೆಟ್ ಪಡೆದ ಸಂಭ್ರಮದಲ್ಲಿ ರಾಧಾ ಯಾದವ್ –ಎಕ್ಸ್ ಚಿತ್ರ

ಅಹಮದಾಬಾದ್ (ಪಿಟಿಐ): ಎಡಗೈ ಸ್ಪಿನ್ನರ್ ರಾಧಾ ಯಾದವ್ ನೇತೃತ್ವದಲ್ಲಿ ಬೌಲರ್‌ಗಳ ಕರಾರುವಾಕ್ ದಾಳಿಯಿಂದ ಭಾರತ ತಂಡ, ಗುರುವಾರ ನಡೆದ ಏಕದಿನ ಸರಣಿಯ ಮೊದಲ ಪಂದ್ಯದಲ್ಲಿ 59 ರನ್‌ಗಳಿಂದ ನ್ಯೂಜಿಲೆಂಡ್ ಮೇಲೆ ಸುಲಭ ಗೆಲುವು ಪಡೆಯಿತು.

228 ರನ್‌ಗಳ ಗುರಿಯೆದುರಿಸಿದ ನ್ಯೂಜಿಲೆಂಡ್ ತಂಡ 41ನೇ ಓವರಿನಲ್ಲಿ 168 ರನ್‌ಗಳಿಗೆ ಆಲೌಟ್ ಆಯಿತು. ರಾಧಾ ಯಾದವ್ (35ಕ್ಕೆ3) ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು. ನಾಯಕಿ ಸೋಫಿ ಡಿವೈನ್ ಸೇರಿದಂತೆ ಮೂವರು ಆಟಗಾರ್ತಿಯರು ರನೌಟ್ ಆದರು.

ಭಾರತ ತಂಡಕ್ಕೆ ಪದಾರ್ಪಣೆ ಮಾಡಿದ ವೇಗದ ಬೌಲರ್ ಸೈಮಾ ಠಾಕೂರ್ (26ಕ್ಕೆ2) ತಮ್ಮ ಮೂರನೇ ಎಸೆತದಲ್ಲೇ ಅನುಭವಿ ಸೂಝಿ ಬೇಟ್ಸ್ (1) ವಿಕೆಟ್ ಪಡೆದರು. 12ನೇ ಓವರಿನ ಕೊನೆಯ ಎಸೆತದಲ್ಲಿ ನಾಯಕಿ ಸೋಫಿ ಡಿವೈನ್ ರನೌಟ್ ಆಗಿದ್ದು ನ್ಯೂಜಿಲೆಂಡ್ ಮೇಲಿನ ಒತ್ತಡ ಹೆಚ್ಚಿಸಿತು. ಫೀಲ್ಡರ್ ಕಡೆಯಿಂದ ಬೌಲರ್ ಚೆಂಡು ಪಡೆದು ಬೇಲ್ಸ್ ಉರುಳಿಸಿದಾಗ ತಮ್ಮ ಕಾಲು ಕ್ರೀಸಿನಿಂದ ಆಚೆಯಿದ್ದುದನ್ನು ಸೋಫಿ ಗಮನಿಸದೇ ದಂಡ ತೆತ್ತರು.

ಬ್ರೂಕ್ ಹ್ಯಾಲಿಡೆ (39) ಮತ್ತು ಮ್ಯಾಡಿ ಗ್ರೀನ್ (31) ಐದನೇ ವಿಕೆಟ್‌ಗೆ 49 ರನ್ ಸೇರಿಸಿ ಸ್ವಲ್ಪಕಾಲ ಪ್ರತಿರೋಧ ಪ್ರದರ್ಶಿಸಿದರು. ಸೈಮಾ ಈ ಹಂತದಲ್ಲಿ ಹ್ಯಾಲಿಡೇ ವಿಕೆಟ್ ಪಡೆದರು.

ಇದಕ್ಕೆ ಮೊದಲು, ಟಾಸ್ ಗೆದ್ದು ಬ್ಯಾಟಿಂಗ್ ಮಾಡಿದ ಭಾರತ ತಂಡ 45ನೇ ಓವರಿನಲ್ಲಿ 227 ರನ್‌ಗಳಿಗೆ ಆಟ ಮುಗಿಸಿತು. ಪದಾರ್ಪಣೆಗೈದ ತೇಜಲ್ ಹಸಬ್ನಿಸ್ (42, 64 ಎ) ಮತ್ತು ದೀಪ್ತಿ ಶರ್ಮಾ (41, 51ಎ) ಮಧ್ಯಮ ಕ್ರಮಾಂಕದಲ್ಲಿ ಉಪಯುಕ್ತ ಕೊಡುಗೆಯೊಡನೆ ತಂಡಕ್ಕೆ ಆಧಾರವಾದರು. ಲೆಗ್ ಸ್ಪಿನ್ನರ್ ಅಮೇಲಿಯಾ ಕೆರ್ (42ಕ್ಕೆ4) ಪ್ರವಾಸಿ ತಂಡದ ಪರ ಯಶಸ್ವಿ ಬೌಲರ್ ಎನಿಸಿದರು.

ಸ್ಕೋರುಗಳು: ಭಾರತ: 44.3 ಓವರುಗಳಲ್ಲಿ 227 (ಶಫಾಲಿ ವರ್ಮಾ 33, ಯಷ್ಟಿಕಾ ಭಾಟಿಯಾ 37, ಜೆಮಿಮಾ ರಾಡ್ರಿಗಸ್ 35, ತೇಜಲ್ ಹಸಬ್ನಿಸ್ 42, ದೀಪ್ತಿ ಶರ್ಮಾ 41; ಜೆಸ್ ಕೆರ್ 49ಕ್ಕೆ3, ಈಡನ್ ಕಾರ್ಸನ್ 42ಕ್ಕೆ2, ಅಮೇಲಿಯಾ ಕೆರ್ 42ಕ್ಕೆ 4); ನ್ಯೂಜಿಲೆಂಡ್: 40.4 ಓವರುಗಳಲ್ಲಿ 168 (ಜಾರ್ಜಿಯಾ ಪ್ಲಿಮ್ಮರ್ 25, ಲಾರೆನ್ ಡೌನ್ 26, ಬ್ರೂಕ್ ಹ್ಯಾಲಿಡೆ 39, ಮ್ಯಾಡಿ ಗ್ರೀನ್ 31, ಅಮೇಲಿಯಾ ಕೆರ್ ಔಟಾಗದೇ 25; ಸೈಮಾ ಠಾಕೂರ್ 26ಕ್ಕೆ2, ರಾಧಾ ಯಾದವ್ 35ಕ್ಕೆ3). ಪಂದ್ಯದ ಆಟಗಾರ್ತಿ: ದೀಪ್ತಿ ಶರ್ಮಾ (41 ಮತ್ತು 35ಕ್ಕೆ1).

ಮೊದಲ ಟೆಸ್ಟ್: ದಕ್ಷಿಣ ಆಫ್ರಿಕಾಕ್ಕೆ ಜಯ

ಮೀರಪುರ (ಬಾಂಗ್ಲಾದೇಶ), (ಎಪಿ): ವೇಗದ ಬೌಲರ್ ಕಗಿಸೊ ರಬಾಡ (46ಕ್ಕೆ6) ಅವರ ಅಮೋಘ ಬೌಲಿಂಗ್ ಪ್ರದರ್ಶನದಿಂದ ದಕ್ಷಿಣ ಆಫ್ರಿಕಾ, ಮೊದಲ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಬಾಂಗ್ಲಾದೇಶ ತಂಡವನ್ನು ಏಳು ವಿಕೆಟ್‌ಗಳಿಂದ ಸೋಲಿಸಿತು. ಇದು ಹತ್ತು ವರ್ಷಗಳ ಅವಧಿಯಲ್ಲಿ ದಕ್ಷಿಣ ಆಫ್ರಿಕಾ ತಂಡ ಏಷ್ಯಾ ಖಂಡದಲ್ಲಿ ದಾಖಲಿಸಿದ ಮೊದಲ ಜಯ ಎನಿಸಿತು.

ಪಂದ್ಯದ ನಾಲ್ಕನೇ ದಿನವಾದ ಗುರುವಾರ ಬೆಳಿಗ್ಗೆ ಬಾಂಗ್ಲಾದೇಶ (3ನೇ ದಿನದಾಟದ ಕೊನೆಗೆ 7 ವಿಕೆಟ್‌ಗೆ 283) ತನ್ನ ಎರಡನೇ ಇನಿಂಗ್ಸ್‌ನಲ್ಲಿ 307 ರನ್‌ಗಳಿಗೆ ಆಲೌಟ್ ಆಯಿತು. ಗೆಲುವಿಗೆ ಬೇಕಾದ 106 ರನ್‌ಗಳ ಗುರಿಯನ್ನು 22 ಓವರುಗಳಲ್ಲಿ 3 ವಿಕೆಟ್ ನಷ್ಟದಲ್ಲಿ ತಲುಪಿತು.

ದಕ್ಷಿಣ ಆಫ್ರಿಕಾ ಏಷ್ಯಾದಲ್ಲಿ ಈ ಹಿಂದೆ 2014ರಲ್ಲಿ ಕೊನೆಯ ಬಾರಿ ಟೆಸ್ಟ್ ಪಂದ್ಯವೊಂದರಲ್ಲಿ (ಶ್ರೀಲಂಕಾ ವಿರುದ್ಧ ಗಾಲೆಯಲ್ಲಿ) ಜಯಗಳಿಸಿತ್ತು.

ಸ್ಕೋರುಗಳು: ಬಾಂಗ್ಲಾದೇಶ: 106 ಮತ್ತ 307 (ಮೆಹಿದಿ ಹಸನ್ ಮಿರಾಜ್ 97; ಕಗಿಸೊ ರಬಾಡ 46ಕ್ಕೆ6, ಕೇಶವ ಮಹಾರಾಜ್ 105ಕ್ಕೆ3); ದಕ್ಷಿಣ ಆಫ್ರಿಕಾ: 308 ಮತ್ತು 22 ಓವರುಗಳಲ್ಲಿ 3 ವಿಕೆಟ್‌ಗೆ 106 (ಟೋನಿ ಡಿ ಝೋರ್ಜಿ 41, ಟ್ರಿಸ್ಟನ್ ಸ್ಟಬ್ಸ್ ಔಟಾಗದೇ 30; ತೈಜುಲ್ ಇಸ್ಲಾಂ 43ಕ್ಕೆ3). ಪಂದ್ಯದ ಆಟಗಾರ: ಕೈಲ್ ವರೇಯ್ನ್ (ದಕ್ಷಿಣ ಆಫ್ರಿಕಾ ವಿಕೆಟ್ ಕೀಪರ್).

ನೀರು ಸಿಗದೇ ಸುಸ್ತಾದ ಪ್ರೇಕ್ಷಕರು

ಪುಣೆ: ಮಹಾರಾಷ್ಟ್ರ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯವನ್ನು ವೀಕ್ಷಿಸಲು ಬಂದಿದ್ದ ಪ್ರೇಕ್ಷಕರಿಗೆ ಕುಡಿಯುವ ನೀರು ಲಭಿಸದೇ ಅಸ್ವಸ್ಥರಾದ ಘಟನೆ ನಡೆದಿದೆ.


ಕ್ರೀಡಾಂಗಣದಲ್ಲಿ ಡಿಪಿಯು ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯು ಏಳು ಪ್ರಥಮ ಚಿಕಿತ್ಸೆ ಕೌಂಟರ್‌ಗಳನ್ನು ಹಾಕಿದೆ. ನಿರ್ಜಲೀಕರಣದಿಂದ ಸುಸ್ತಾದ ಸುಮಾರು 150 ಮಂದಿಯು ಈ ಚಿಕಿತ್ಸಾ ಕೇಂದ್ರಗಳಲ್ಲಿ ಆರೈಕೆ ಪಡೆದರು ಎಂದು ಆಸ್ಪತ್ರೆಯ ಸಿಬ್ಬಂದಿಯೊಬ್ಬರು ತಿಳಿಸಿದ್ದಾರೆ.

ಪಂದ್ಯ ಆರಂಭವಾದ ನಂತರ ನಾಲ್ಕು ತಾಸುಗಳವರೆಗೆ ಕುಡಿಯುವ ನೀರು ಲಭ್ಯವಾಗಿರಲಿಲ್ಲ. ಪುಣೆಯಲ್ಲಿ ಗುರುವಾರ 31 ಡಿಗ್ರಿ ಸೆಲ್ಸಿಯಸ್ ತಾಪಮಾನ ಇತ್ತು. ಕ್ರೀಡಾಂಗಣದ ಪ್ರೇಕ್ಷಕರ ಗ್ಯಾಲರಿಯ ಮೂರನೇ ಒಂದರಷ್ಟು ಭಾಗ ಮಾತ್ರ ಮೇಲ್ಚಾವಣಿ ಹೊಂದಿದೆ. ಇದರಿಂದಾಗಿ ಬಹುತೇಕ ಪ್ರೇಕ್ಷಕರು ಬಿಸಿಲಿನಲ್ಲಿ ಕುಳಿತು ಪಂದ್ಯ ವೀಕ್ಷಿಸಬೇಕಾಯಿತು.

'ಜನರಿಗೆ ನಾವು ಉಚಿತವಾಗಿ ತಂಪು ನೀರು ನೀಡಲು ನಲ್ಲಿಗಳ ವ್ಯವಸ್ಥೆ ಮಾಡಲು ಯೋಜಿಸಿದ್ದೆವು. ಆದರೆ 15 ಜಾಗಗಳಲ್ಲಿ ಇಂತಹ ವ್ಯವಸ್ಥೆ ಮಾಡಲು ನೀರಿನ ಟ್ಯಾಂಕ್ ಸಾಮರ್ಥ್ಯ ಕಡಿಮೆಯಿತ್ತು. ಆದ್ದರಿಂದ ಬಾಟಲ್‌ಗಳನ್ನು ಹಂಚಲು ನಿರ್ಧರಿಸಿದ್ದೆವು. ಇಲ್ಲಿಗೆ ನೀರು ತರಬೇಕಿದ್ದ ಕೆಲವು ಟ್ಯಾಂಕರ್‌ಗಳು ಟ್ರಾಫಿಕ್ ನಲ್ಲಿ ಸಿಲುಕಿಕೊಂಡ ಕಾರಣ ವಿಳಂಬವಾಗಿದೆ. ದುಡ್ಡು ತೆಗೆದುಕೊಂಡು ನೀರು ಕೊಡುತ್ತಿಲ್ಲ. ಈ ದೂರಿನ ಬಗ್ಗೆ ವಿಚಾರಣೆ ನಡೆಸುತ್ತೇವೆ' ಎಂದು ಎಂ.ಸಿ.ಎ. ಕಾರ್ಯದರ್ಶಿ ಕಮಲೇಶ್ ಪಿಸಾಳ್ ತಿಳಿಸಿದ್ದಾರೆ.



ಬ್ರಿಕ್ಸ್: ರಷ್ಯಾ ಏಕಾಂಗಿಯಾಗಿಸುವ ಅಮೆರಿಕದ ಯತ್ನ ವಿಫಲ
ಪಶ್ಚಿಮದ ವಿರುದ್ಧ ಪುಟಿನ್ ಕಿಡಿ


ಬ್ರಿಕ್ಸ್ ಶೃಂಗಸಭೆಯಲ್ಲಿ ಭಾಗಿಯಾಗಿದ್ದ ವಿವಿಧ ದೇಶಗಳ ಪ್ರತಿನಿಧಿಗಳ ಜೊತೆ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಎಎಫ್‌ಪಿ ಚಿತ್ರ

ಕಜಾನ್ (ಎಪಿ): ಬ್ರಿಕ್ಸ್ ದೇಶಗಳ ಶೃಂಗಸಭೆಯ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡ ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು, ಪಾಶ್ಚಿಮಾತ್ಯ ದೇಶಗಳ 'ಅಡ್ಡದಾರಿಯ ಕೆಲಸ'ಗಳಿಗೆ ಈ ಸಂಘಟನೆಯು ಪ್ರತಿಕ್ರಿಯೆಯಂತಿದೆ ಎಂದು ಶ್ಲಾಘಿಸಿದರು.

ಒಟ್ಟು 36 ದೇಶಗಳ ಪ್ರತಿನಿಧಿಗಳು, ನಾಯಕರು ಈ ಶೃಂಗಸಭೆಯಲ್ಲಿ ಭಾಗಿಯಾಗಿದ್ದರು. ಇದು ಉಕ್ರೇನ್ ಮೇಲಿನ ದಾಳಿಯ ಕಾರಣಕ್ಕೆ ರಷ್ಯಾವನ್ನು ಏಕಾಂಗಿಯಾಗಿಸಲು ಅಮೆರಿಕದ ನೇತೃತ್ವದಲ್ಲಿ ನಡೆದ ಪ್ರಯತ್ನ ವಿಫಲವಾಗಿರುವುದನ್ನು ತೋರಿಸುತ್ತಿದೆ. ವಿದೇಶಾಂಗ ನೀತಿಯ ವಿಚಾರವಾಗಿ ತಾನು ಇದುವರೆಗೆ ಆಯೋಜಿಸಿರುವ ಅತಿದೊಡ್ಡ ಸಮಾವೇಶ ಇದು ಎಂದು ರಷ್ಯಾ ಹೇಳಿಕೊಂಡಿದೆ.

ಬ್ರಿಕ್ಸ್ ಒಕ್ಕೂಟವನ್ನು ಸೇರಲು ಆಸಕ್ತಿ ತೋರಿಸಿರುವ ದೇಶಗಳ ಪ್ರತಿನಿಧಿಗಳೂ ಭಾಗಿಯಾಗಿದ್ದ ಸಮಾರಂಭವನ್ನು ಉದ್ದೇಶಿಸಿ ಮಾತನಾಡಿದ ಪುಟಿನ್, 'ಪಾಶ್ಚಿಮಾತ್ಯ ದೇಶಗಳು ಅಕ್ರಮ ಹಾಗೂ ಏಕಪಕ್ಷೀಯವಾದ ದಿಗ್ಬಂಧನಗಳು, ಸ್ವರಕ್ಷಣಾ ಕ್ರಮಗಳು, ಕರೆನ್ಸಿ ಮತ್ತು ಷೇರುಪೇಟೆ ಮೇಲೆ ಪ್ರಭಾವ ಬೀರುವ ಕೆಲಸಗಳು, ಪ್ರಜಾತಂತ್ರ ಮತ್ತು ಮಾನವ ಹಕ್ಕುಗಳ ಪರ ಇರುವ ಸೋಗಿನಲ್ಲಿ ಅತಿಯಾಗಿ ಪ್ರಭಾವ ಬೀರುವ ಮೂಲಕ ಜಾಗತಿಕ ದಕ್ಷಿಣದ ದೇಶಗಳ ಬಲವನ್ನು ಕುಗ್ಗಿಸಲು ಯತ್ನಿಸುತ್ತಿವೆ' ಎಂದು ದೂರಿದರು.

'ಇಂತಹ ಅಡ್ಡದಾರಿಯ ಮಾರ್ಗಗಳು ಹೊಸ ಸಂಘರ್ಷಗಳು ಉಂಟಾಗಲು ಕಾರಣವಾಗಿವೆ, ಹಳೆಯ ಭಿನ್ನಾಭಿಪ್ರಾಯಗಳು ತೀವ್ರಗೊಳ್ಳಲು ಕಾರಣವಾಗಿವೆ' ಎಂದರು.

ಉಕ್ರೇನ್ ಸಂಘರ್ಷಕ್ಕೆ ಸಂಬಂಧಿಸಿದಂತೆ ಶಾಂತಿ ಸೂತ್ರವೊಂದನ್ನು ಚೀನಾ ಮತ್ತು ಬ್ರೆಜಿಲ್ ರೂಪಿಸಿವೆ ಎಂದು ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಹೇಳಿದ್ದಾರೆ. ಆದರೆ, ಈ ಶಾಂತಿ ಸೂತ್ರವನ್ನು ಉಕ್ರೇನ್ ಒಪ್ಪಿಲ್ಲ.

'ಸಭೆಗೆ ಹೆಚ್ಚು ಮಹತ್ವ'

ಬೀಜಿಂಗ್ (ಪಿಟಿಐ): ಬ್ರಿಕ್ಸ್ ಶೃಂಗಸಭೆ ಸಂದರ್ಭದಲ್ಲಿ ಅಧ್ಯಕ್ಷ ಷಿ ಜಿನ್‌ಪಿಂಗ್ ಮತ್ತು ಪ್ರಧಾನಿ ನರೇಂದ್ರ ಮೋದಿ ನಡುವಿನ ಸಭೆಗೆ 'ಹೆಚ್ಚು ಮಹತ್ವ' ದೊರೆತಿದೆ ಎಂದು ಚೀನಾ ಗುರುವಾರ ಹೇಳಿದೆ. ಎರಡೂ ದೇಶಗಳ ನಡುವಿನ ದ್ವಿಪಕ್ಷೀಯ ಸಂಬಂಧ ವೃದ್ಧಿಗೆ ಸಂಬಂಧಿಸಿ ಸಾಮಾನ್ಯ ವಿಚಾರಗಳ ಕುರಿತು ಉಭಯ ನಾಯಕರು ಒಪ್ಪಂದಕ್ಕೆ ಬಂದಿರುವ ಕಾರಣ ಈ ಸಭೆಗೆ ಮಹತ್ವ ಬಂದಿದೆ ಎಂದು ಚೀನಾ ಹೇಳಿದೆ.

'ಮಾತುಕತೆಯೊಂದೇ ಮಾರ್ಗ'

ಕಜಾನ್ (ಪಿಟಿಐ): ಸಂಘರ್ಷಗಳನ್ನು ಪರಿಣಾಮಕಾರಿಯಾಗಿ ಬಗೆಹರಿಸಿಕೊಳ್ಳುವುದು ಈ ಹೊತ್ತಿನ ವಿಶೇಷ ಅಗತ್ಯ ಎಂದು ಗುರುವಾರ ಹೇಳಿರುವ ವಿದೇಶಾಂಗ ಸಚಿವ ಎಸ್. ಜೈಶಂಕರ್, ವಿವಾದಗಳನ್ನು ಹಾಗೂ ಭಿನ್ನಾಭಿಪ್ರಾಯಗಳನ್ನು ಮಾತುಕತೆ ಮತ್ತು ರಾಜತಾಂತ್ರಿಕ ಮಾರ್ಗದ ಮೂಲಕವೇ ಬಗೆಹರಿಸಿಕೊಳ್ಳಬೇಕು ಎಂದು ಕರೆ ನೀಡಿದರು.

ಹೆಚ್ಚು ನ್ಯಾಯಸಮ್ಮತವಾದ ಜಾಗತಿಕ ವ್ಯವಸ್ಥೆಯನ್ನು ರೂಪಿಸಲು ಐದು ಅಂಶಗಳನ್ನು ಪ್ರಸ್ತಾಪಿಸಿದ ಜೈಶಂಕರ್, ವಸಾಹತು ಕಾಲದಿಂದ ಉಳಿದುಕೊಂಡು ಬಂದಿರುವ ಜಾಗತಿಕ ಮೂಲಸೌಕರ್ಯದಲ್ಲಿನ ವಿರೂಪಗಳನ್ನು ಸರಿಪಡಿಸುವ ಕೆಲಸವನ್ನು ಭೌಗೋಳಿಕ ಸಮಗ್ರತೆಯನ್ನು ಗೌರವದಿಂದ ಕಾಣುತ್ತಲೇ ಮಾಡಬೇಕಿದೆ ಎಂದು ಹೇಳಿದರು.

'ಕ್ರಿಕೆಟ್ ಆಡುತ್ತಿದ್ದ ವೈದ್ಯರು ಚಿಕಿತ್ಸೆ ಸಿಗದೆ ಬಾಲಕಿ ಸಾವು'

ಬದಾಯು (ಉತ್ತರ ಪ್ರದೇಶ) (ಪಿಟಿಐ): ಜ್ವರದಿಂದ ಬಳಲುತ್ತಿದ್ದ ಐದು ವರ್ಷದ ಬಾಲಕಿ ಇಲ್ಲಿನ ಸರ್ಕಾರಿ ವೈದ್ಯಕೀಯ ಕಾಲೇಜಿನಲ್ಲಿ ಸೂಕ್ತ ಚಿಕಿತ್ಸೆ ದೊರೆಯದೆ ಮೃತಪಟ್ಟಿದ್ದಾಳೆ. ಚಿಕಿತ್ಸೆ ನೀಡಬೇಕಾದ ವೈದ್ಯರು ಮತ್ತು ಸಿಬ್ಬಂದಿ ಕ್ರಿಕೆಟ್ ಆಡುವುದರಲ್ಲಿ ತಲ್ಲೀನರಾಗಿದ್ದ ಕಾರಣ ಮಗಳು ಅಸುನೀಗಿದ್ದಾಳೆ ಎಂದು ಬಾಲಕಿಯ ಪೋಷಕರು ಆರೋಪಿಸಿದ್ದಾರೆ.

ಈ ಆರೋಪಗಳ ಸಂಬಂಧ ತನಿಖೆ ನಡೆಸಲು ಮೂವರು ಸದಸ್ಯರ ಸಮಿತಿ ರಚಿಸಲಾಗಿದ್ದು, ಸಮಿತಿ ನೀಡುವ ವರದಿಯನ್ನು ಆಧರಿಸಿ ಕ್ರಮ ತೆಗೆದುಕೊಳ್ಳಲಾಗುವುದು ಎಂದು ಕಾಲೇಜಿನ ಪ್ರಾಚಾರ್ಯ ಪ್ರೊ. ಅರುಣ್ ಕುಮಾರ್ ತಿಳಿಸಿದ್ದಾರೆ.

ಮೃತ ಬಾಲಕಿಯನ್ನು ಸೋಫಿಯಾ ಎಂದು ಗುರುತಿಸಲಾಗಿದೆ. ಮಗಳಿಗೆ ಚಿಕಿತ್ಸೆ ಕೊಡಿಸಲು ಆಕೆಯ ತಂದೆ ನಜೀಂ ವೈದ್ಯಕೀಯ ಕಾಲೇಜಿಗೆ ಕರೆತಂದಿದ್ದರು. ಆ ವೇಳೆ ಆಸ್ಪತ್ರೆಯಲ್ಲಿ ಮಕ್ಕಳ ತಜ್ಞರು ಇರಲಿಲ್ಲ.'ಕೆಲ ಸಿಬ್ಬಂದಿ ಸೂಚನೆ ಮೇರೆಗೆ ವಿವಿಧ ಕೊಠಡಿಗಳಲ್ಲಿ ವೈದ್ಯರಿಗಾಗಿ ಅಲೆದಾಡಿದೆ. ಅದರೆ ಕೆಲ ಹೊತ್ತಿನಲ್ಲಿಯೇ ಮಗಳು ಕೊನೆಯುಸಿರೆಳೆದಳು' ಎಂದು ನಜೀಂ ದೂರಿದ್ದಾರೆ.

ಜಸ್ಟಿನ್ ಟ್ರೂಡೊಗೆ ಪಕ್ಷದ ಸಂಸದರಿಂದಲೇ ಆಗ್ರಹ
'ಪ್ರಧಾನಿ ಹುದ್ದೆಯಿಂದ ಕೆಳಗಿಳಿಯಿರಿ'


ಜಸ್ಟಿನ್ ಟ್ರೂಡೊ

ಒಟ್ಟಾವ, ಒಂಟಾರಿಯೊ (ನ್ಯೂಯಾರ್ಕ್ ಟೈಮ್ಸ್): ಕೆನಡಾ ಪ್ರಧಾನಿ ಜಸ್ಟಿನ್ ಟ್ರೂಡೊ ನಾಯಕತ್ವದ ಕುರಿತು ಪಕ್ಷದೊಳಗೆ ಸೃಷ್ಟಿಯಾಗಿರುವ ಅಸಮಾಧಾನ ಬಹಿರಂಗಗೊಂಡಿದೆ.

ಮುಂದಿನ ವರ್ಷ ಚುನಾವಣೆ ನಡೆಯಲಿದ್ದು, ಪಕ್ಷಕ್ಕೆ ಸೋಲುಂಟಾಗುವ ಆತಂಕವಿದೆ. ಹೀಗಾಗಿ ತಮ್ಮ ಹುದ್ದೆಗೆ ಕೂಡಲೇ ರಾಜೀನಾಮೆ ಸಲ್ಲಿಸಬೇಕು ಎಂದು ಬುಧವಾರ ಗೋಪ್ಯ ಸಭೆ ನಡೆಸಿದ್ದ ಪಕ್ಷದ (ಲಿಬರಲ್) ಸಂಸದರೇ ಟ್ರೂಡೊ ಅವರನ್ನು ಒತ್ತಾಯಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮುಂದಿನ ವರ್ಷ ಅಕ್ಟೋಬರ್ ತಿಂಗಳಲ್ಲಿ ಕೆನಡಾ ಸಂಸತ್ತಿಗೆ ಚುನಾವಣೆ ನಡೆಯಲಿದೆ. ಟ್ರೂಡೊ ನೇತೃತ್ವದಲ್ಲಿ ಚುನಾವಣೆ ಎದುರಿಸಿದರೆ, ಕನ್ಸರ್ವೇಟಿವ್ ಪಕ್ಷದ ಮುಂದೆ ಹೀನಾಯವಾಗಿ ಸೋಲು ಕಾಣಬೇಕಾಗುತ್ತದೆ ಎಂದು ಹಲವು ಸಮೀಕ್ಷೆಗಳು ತಿಳಿಸಿವೆ. ಲಿಬರಲ್ ಪಕ್ಷದ ಭದ್ರಕೋಟೆಯೆಂದೇ ಬಿಂಬಿತವಾಗಿದ್ದ ಎರಡು ಕ್ಷೇತ್ರಗಳಲ್ಲಿ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಸೋಲುಂಡಿರುವುದು ಕೂಡ ಪಕ್ಷದಲ್ಲಿ ಟ್ರೂಡೊ ವಿರುದ್ಧ ಅಸಮಾಧಾನ ಭುಗಿಲೇಳಲು ಕಾರಣವಾಗಿದೆ.

'ಟ್ರೂಡೊ ನಾಯಕತ್ವದ ಕುರಿತು ಲಿಬರಲ್ ಪಕ್ಷದ 20 ಸಂಸದರು ಟೀಕೆ ವ್ಯಕ್ತಪಡಿಸಿ, ಸಭೆಯಲ್ಲಿಯೇ ಪತ್ರವನ್ನು ಜೋರು ಧ್ವನಿಯಲ್ಲಿ ಓದಿ ಹೇಳಿದರು. 3 ಗಂಟೆ 17 ನಿಮಿಷ ಸಭೆ ನಡೆದಿದೆ' ಎಂದು ಸುದ್ದಿಸಂಸ್ಥೆ ಉಲ್ಲೇಖಿಸಿದೆ.

'ನಿಮ್ಮ ಕಳವಳ ನನಗೆ ಅರ್ಥವಾಗಿದೆ ಎಂದು ಸಭೆಯಲ್ಲಿ ಹಾಜರಿದ್ದ ಟ್ರೂಡೊ ಹೇಳಿದರು' ಎಂದು 'ಸಿಬಿಸಿ ನ್ಯೂಸ್' ವರದಿ ಮಾಡಿದೆ.

'ಪ್ರಧಾನಿ ಅವರು ಹುದ್ದೆ ತ್ಯಜಿಸಬೇಕು ಎಂಬುದನ್ನು ನಾನು ಅಪೇಕ್ಷಿಸುತ್ತಿಲ್ಲ' ಎಂದು ವಲಸೆ ಖಾತೆ ಸಚಿವ ಮಾರ್ಕ್ ಮಿಲ್ಲರ್ ಸಭೆಯ ಬಳಿಕ ಹೇಳಿದರು. ಮಿಲ್ಲರ್ ಅವರು ಟ್ರೂಡೊ ಅವರ ಬಾಲ್ಯಸ್ನೇಹಿತ.

'ಟ್ರೂಡೊ ಅವರು ಬುಧವಾರದ ಸಭೆಯಲ್ಲಿ ಏನು ಹೇಳಿದ್ದಾರೆ ಎಂಬುದು ಖಚಿತವಾಗಿಲ್ಲ. ಆದರೆ ಅವರ ನಾಯಕತ್ವವು ಮತ್ತಷ್ಟು ಸಡಿಲವಾಗಿದೆ' ಎಂದು ಕೆಲವು ವಿಶ್ಲೇಷಕರು ಅಭಿಪ್ರಾಯಪಟ್ಟಿದ್ದಾರೆ.

'ಖಾಲಿಸ್ತಾನಿ ಉಗ್ರವಾದ– ಗಂಭೀರವಾಗಿ ಪರಿಗಣಿಸಿ'


ಚಂದ್ರ ಆರ್ಯ

ಒಟ್ಟಾವ (ಪಿಟಿಐ): 'ಖಾಲಿಸ್ತಾನಿ ಉಗ್ರವಾದವು ಕೆನಡಾದ ಆಂತರಿಕ ಸಮಸ್ಯೆಯಾಗಿದೆ. ಕಾನೂನು ಜಾರಿ ಸಂಸ್ಥೆಗಳು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕು' ಎಂದು ಕರ್ನಾಟಕ ಮೂಲದ ಕೆನಡಾ ಸಂಸದ ಚಂದ್ರ ಆರ್ಯ ಅವರು ಒತ್ತಾಯಿಸಿದ್ದಾರೆ.

ಕೆನಡಾ ಸಂಸತ್ತಿನ ಕೆಳಮನೆ 'ಹೌಸ್ ಆಫ್ ಕಾಮನ್ಸ್'ಗೆ 'ನೆಪಿಯಾನ್' ಕ್ಷೇತ್ರದಿಂದ ಆಯ್ಕೆಯಾಗಿರುವ ಇವರು, ಬುಧವಾರ ಅಧಿವೇಶನದಲ್ಲಿಯೇ ಈ ವಿಷಯ ಪ್ರಸ್ತಾಪಿಸಿದ್ದಾರೆ.

'ಖಾಲಿಸ್ತಾನಿ ಉಗ್ರವಾದವನ್ನು ದೀರ್ಘಕಾಲದಿಂದಲೂ ನೋಡುತ್ತಿದ್ದು, ಅನುಭವಿಸುತ್ತಿದ್ದೇವೆ. ಉಗ್ರವಾದ– ಭಯೋತ್ಪಾದನೆಗೆ ಯಾವುದೇ ಕಾರಣಕ್ಕೂ ಮಾನ್ಯತೆ ನೀಡಬಾರದು. ಇದು ಯಾವುದೇ ದೇಶಕ್ಕೆ ಸೀಮಿತವಲ್ಲ. ನಮ್ಮ ತನಿಖಾ ಸಂಸ್ಥೆಗಳು ಈ ವಿಚಾರವನ್ನು ಗಂಭೀರವಾಗಿ ಪರಿಗಣಿಸಬೇಕು' ಎಂದು ಈ ವೇಳೆ ಆಗ್ರಹಿಸಿದರು.

'ಖಾಲಿಸ್ತಾನಿಗಳಿಗೆ ಟ್ರೂಡೊ ಉತ್ತೇಜನ'


ಸಂಜಯ್ ವರ್ಮಾ

ನವದೆಹಲಿ (ಪಿಟಿಐ): ಕೆನಡಾದಲ್ಲಿ ಭಾರತದ ರಾಯಭಾರಿಯಾಗಿದ್ದ ಸಂಜಯ್ ವರ್ಮಾ ಅವರು ಅಲ್ಲಿನ ಪ್ರಧಾನಿ ಜಸ್ಟಿನ್ ಟ್ರೂಡೊ ವಿರುದ್ಧ ನೇರ ವಾಗ್ದಾಳಿ ನಡೆಸಿದ್ದು, ಖಾಲಿಸ್ತಾನಿ ಪ್ರತ್ಯೇಕತಾವಾದಿ ಕ್ರಿಮಿನಲ್‌ಗಳ ವಿರುದ್ಧ ಕ್ರಮ ಕೈಗೊಳ್ಳದೆ ಇರುವುದು ಅವರನ್ನು ಪ್ರೋತ್ಸಾಹಿಸುವುದಕ್ಕೆ ಸಮ ಎಂದು ಹೇಳಿದ್ದಾರೆ.

ಭಾರತ ಮತ್ತು ಕೆನಡಾ ರಾಜತಾಂತ್ರಿಕ ಸಂಬಂಧವು ಹದಗೆಟ್ಟ ಪರಿಣಾಮವಾಗಿ, ವರ್ಮಾ ಅವರನ್ನು ಸ್ವದೇಶಕ್ಕೆ ಕರೆಸಿಕೊಳ್ಳಲಾಗಿದೆ. ರಾಜಕೀಯ ಲಾಭಕ್ಕಾಗಿ ಟ್ರೂಡೊ ಅವರು ಖಾಲಿಸ್ತಾನಿಗಳಿಗೆ ಉತ್ತೇಜನ ನೀಡುವ ಕೆಲಸ ಮಾಡುತ್ತಿದ್ದಾರೆ ಎಂದು ವರ್ಮಾ ಅವರು ಸುದ್ದಿಸಂಸ್ಥೆಗೆ ನೀಡಿರುವ ಸಂದರ್ಶನದಲ್ಲಿ ಆರೋಪಿಸಿದ್ದಾರೆ.

'ಉತ್ತೇಜನವನ್ನು ಎರಡು ಬಗೆಗಳಲ್ಲಿ ನೀಡಬಹುದು. ಏನಾದರೂ ಮಾಡುವಂತೆ ಅವರಿಗೆ ಹೇಳುವುದು ಒಂದು ಬಗೆ. ಎರಡನೆಯದು, ಮೌನವಾಗಿ ಇದ್ದುಬಿಡುವುದು. ಕ್ರಿಮಿನಲ್‌ಗಳು, ಭಯೋತ್ಪಾದಕರು, ತೀವ್ರಗಾಮಿಗಳ ವಿರುದ್ಧ ಯಾವುದೇ ಕ್ರಮ ಜರುಗಿಸದೆ ಇದ್ದರೆ, ಅದು ಉತ್ತೇಜನವೇ ಆಗು ತ್ತದೆ' ಎಂದು ವರ್ಮಾ ಹೇಳಿದ್ದಾರೆ.

'ಅಲ್ಲಿ ಇಂತಹ ಉತ್ತೇಜನ ಬಹಳ ಇದೆ. ಅದು ಮತಬ್ಯಾಂಕ್‌ಗಾಗಿ ಆಗಿರಬಹುದು ಅಥವಾ ಇತರ ರಾಜಕೀಯ ಕಾರಣಗಳಿಗಾಗಿ ಆಗಿರಬಹುದು. ಈ ಉತ್ತೇಜನದ ಕಾರಣದಿಂದಾಗಿ, ಖಾಲಿಸ್ತಾನಿಗಳು ಭಾರತದ ಹಿತಾಸಕ್ತಿಗಳ ಮೇಲೆ ದಾಳಿ ನಡೆಸುತ್ತಾರೆ, ನಮಗೆ ಹಾನಿ ಉಂಟುಮಾಡಲು ಯತ್ನಿಸುತ್ತಾರೆ' ಎಂದು ಅವರು ಹೇಳಿದ್ದಾರೆ.

ಕೆನಡಾದಲ್ಲಿ ಮುಂದಿನ ವರ್ಷ ಚುನಾವಣೆ ನಡೆಯಲಿದ್ದು, ತಮ್ಮ ಜನಪ್ರಿಯತೆ ತಗ್ಗುತ್ತಿರುವ ಕಾರಣ ಜನರ ಗಮನವನ್ನು ಬೇರೆಡೆ ಸೆಳೆಯಲು ಟ್ರೂಡೊ ಅವರು ಭಾರತದ ವಿರುದ್ಧವಾಗಿ ನಡೆದುಕೊಳ್ಳುತ್ತಿದ್ದಾರೆಯೇ ಎಂಬ ಪ್ರಶ್ನೆಗೆ ವರ್ಮಾ, 'ಕೆನಡಾ ಮಾಧ್ಯಮಗಳಲ್ಲಿ ಪ್ರಕಟವಾಗಿರುವ, ನಾನು ನೋಡಿರುವ ಸಮೀಕ್ಷೆಗಳು ಟ್ರೂಡೊ ಅವರ ಜನಪ್ರಿಯತೆ ಕಡಿಮೆ ಆಗುತ್ತಿದೆ ಎಂದು ಹೇಳಿವೆ' ಎಂದರು.

ಕೆನಡಾದಲ್ಲಿ ನಡೆಯುತ್ತಿರುವ ಭಾರತ ವಿರೋಧಿ ಕೃತ್ಯಗಳಲ್ಲಿ ಹೆಚ್ಚಿನವು ರಾಜಕೀಯ ಲಾಭದ ಉದ್ದೇಶ ಹೊಂದಿರುವಂಥವು ಎಂದು ವರ್ಮಾ ಹೇಳಿದ್ದಾರೆ. ಆದರೆ, ತೀವ್ರವಾದಿಗಳು ಮತ್ತು ಅವರಿಗೆ ರಾಜಕೀಯ ಬೆಂಬಲ ಒದಗಿಸುವವರ ಬಗ್ಗೆ ಇದೇ ಮಾತು ಹೇಳಲು ಆಗುವುದಿಲ್ಲ ಎಂದಿದ್ದಾರೆ.

ಖಾಲಿಸ್ತಾನಿ ಉಗ್ರ ಅರ್ಶದೀಪ್ ಸಹಚರನ ಬಂಧಿಸಿದ ಎನ್‌ಐಎ

ನವದೆಹಲಿ(ಪಿಟಿಐ): ಖಾಲಿಸ್ತಾನಿ ಉಗ್ರ ಅರ್ಶದೀಪ್ ಸಿಂಗ್ ಡಾಲಾ ಅಲಿಯಾಸ್ ಅರ್ಶ್ ಡಾಲಾ ಸಹಚರನೊಬ್ಬನನ್ನು ಎನ್‌ಐಎ ಅಧಿಕಾರಿಗಳು ದೆಹಲಿ ವಿಮಾನನಿಲ್ದಾಣದಲ್ಲಿ ಗುರುವಾರ ಬಂಧಿಸಿದ್ದಾರೆ.

ಬಲ್ಜೀತ್ ಸಿಂಗ್ ಅಲಿಯಾಸ್ ಬಲ್ಜೀತ್ ಮೌರ್ ಬಂಧಿತ. ಈತ ಪಂಜಾಬ್‌ನ ಬಠಿಂಡಾ ನಿವಾಸಿ.

ಯುಎಇಯಿಂದ ಇಲ್ಲಿನ ಇಂದಿರಾಗಾಂಧಿ ಅಂತರರಾಷ್ಟ್ರೀಯ ವಿಮಾನನಿಲ್ದಾಣದಲ್ಲಿ ಬಂದಿಳಿದ ಬಲ್ಜೀತ್ ಸಿಂಗ್‌ನನ್ನು ಎನ್‌ಐಎ ವಶಕ್ಕೆ ಪಡೆಯಿತು ಎಂದು ಅಧಿಕೃತ ಪ್ರಕಟಣೆ ತಿಳಿಸಿದೆ.

ಅರ್ಶ್ ಡಾಲಾ ನೇತೃತ್ವದ, ನಿಷೇಧಿತ ಖಾಲಿಸ್ತಾನಿ ಭಯೋತ್ಪಾದಕ ಪಡೆಗೆ (ಕೆಟಿಎಫ್) ಸಾಗಣೆ ಸೌಕರ್ಯ, ಸುಲಿಗೆ ಮಾಡುವುದಕ್ಕಾಗಿ ವ್ಯಕ್ತಿಗಳನ್ನು ಗುರುತಿಸುವುದು ಹಾಗೂ ಕಾರ್ಯಕರ್ತರ ನೇಮಕ ಹಾಗೂ ಸಂಘಟನೆಯ ಸದಸ್ಯರಿಗೆ ಹಣಕಾಸು ನೆರವು ಒದಗಿಸುವಲ್ಲಿ ಬಲ್ಜೀತ್ ನಿರತನಾಗಿದ್ದ ಎಂಬುದು ತನಿಖೆಯಿಂದ ತಿಳಿದು ಬಂದಿದೆ ಎಂದು ಪ್ರಕಟಣೆ ತಿಳಿಸಿದೆ.

ಅರ್ಶ್ ವಿರುದ್ಧ ಫೆಬ್ರುವರಿಯಲ್ಲಿ ಲುಕ್‌ಔಟ್ ನೋಟಿಸ್, ಜೂನ್‌ನಲ್ಲಿ ಜಾಮೀನು ರಹಿತ ಬಂಧನ ವಾರಂಟ್ ಹೊರಡಿಸಲಾಗಿತ್ತು.

ಭಾರತ ಮಹಿಳಾ ಹಾಕಿ ಕ್ರೀಡೆಯ ‘ರಾಣಿ’

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ತಂಡ ಮುನ್ನಡೆಸಿದ್ದ ಆಟಗಾರ್ತಿ ವಿದಾಯ • ಬಡತನದ ಬೇಗೆ ದಾಟಿ ಬೆಳೆದ ಛಲಗಾತಿ

ನವದೆಹಲಿ (ಪಿಟಿಐ): ಕಡುಬಡತನ ಮತ್ತು ಸಮಾಜದ ಕಟ್ಟುಪಾಡುಗಳನ್ನು ಎದುರಿಸಿ ಭಾರತದ ಮಹಿಳಾ ಹಾಕಿ ಕ್ರೀಡೆಯ ದಂತಕಥೆಯಾಗಿ ಬೆಳೆದವರು ರಾಣಿ ರಾಂಪಾಲ್.

ಭಾರತ ತಂಡದ ಮಾಜಿ ನಾಯಕಿ ರಾಣಿ ಅವರು ತಮ್ಮ 16 ವರ್ಷಗಳ ಕ್ರೀಡಾ ಜೀವನಕ್ಕೆ ಗುರುವಾರ ನಿವೃತ್ತಿ ಘೋಷಿಸಿದರು. ಕುದುರೆ ಬಂಡಿಯಲ್ಲಿ ಸರಂಜಾಮು ಸಾಗಣೆ ಮಾಡುತ್ತಿದ್ದ ತಂದೆ ದಿನವೊಂದಕ್ಕೆ ₹ 80 ಮಾತ್ರ ಗಳಿಸುತ್ತಿದ್ದರು. ಹಾಕಿ ಸ್ಟಿಕ್ ಖರೀದಿಸಲೂ ದುಡ್ಡಿಲ್ಲದ ಕುಟುಂಬ ಅದು. ಆದರೆ ಛಲ ಮತ್ತು ಆತ್ಮ ವಿಶ್ವಾಸದಿಂದ ರಾಣಿ ಅತ್ಯುನ್ನತ ಸಾಧನೆ ಮಾಡಿದರು. 2020ರ ಟೋಕಿಯೊ ಒಲಿಂಪಿಕ್ ಕೂಟದಲ್ಲಿ ಆಡಿದ್ದ ಭಾರತ ಮಹಿಳಾ ತಂಡದ ನಾಯಕಿಯಾಗಿದ್ದರು. ತಂಡವು ಅಲ್ಪ ಅಂತರದಲ್ಲಿ ಕಂಚಿನ ಪದಕ ತಪ್ಪಿಸಿಕೊಂಡು ನಾಲ್ಕನೇ ಸ್ಥಾನ ಪಡೆದಿತ್ತು.

‘ಇದೊಂದು ಅಪೂರ್ವವಾದ ಪಯಣವಾಗಿದೆ. ಭಾರತ ತಂಡವನ್ನು ಇಷ್ಟು ದೀರ್ಘ ಸಮಯದವರೆಗೆ ಪ್ರತಿನಿಧಿಸುವ ಅವಕಾಶ ಪಡೆಯುತ್ತೇನೆ ಎಂದುಕೊಂಡಿರಲಿಲ್ಲ. ಬಾಲ್ಯದಲ್ಲಿ ಬಹಳ ಬಡತನ ಅನುಭವಿಸಿದ್ದೇನೆ.



ಹಾಕಿ ಕ್ರೀಡೆಗೆ ನಿವೃತ್ತಿ ಘೋಷಿಸಿದ ಭಾರತ ಮಹಿಳಾ ತಂಡದ ಮಾಜಿ ನಾಯಕಿ ರಾಣಿ ರಾಂಪಾಲ್ ಅವರನ್ನು ಗುರುವಾರ ನವದೆಹಲಿಯ ಮೇಜರ್ ಧ್ಯಾನ್‌ಚಂದ್ ಕ್ರೀಡಾಂಗಣದಲ್ಲಿ ಕೇಂದ್ರ ಕ್ರೀಡಾ ಸಚಿವ ಮನ್ಸುಕ್ ಮಾಂಡವೀಯ ಮತ್ತು ಜರ್ಮನಿಯ ಸಚಿವ ರಾಬರ್ಟ್ ಹಬೆಕ್ ಅವರು ಸನ್ಮಾನಿಸಿದರು –ಪಿಟಿಐ ಚಿತ್ರ

ಆದರೆ ಭಾರತ ತಂಡವನ್ನು ಪ್ರತಿನಿಧಿಸುವ ಕನಸು ಮಾತ್ರ ಬಿಟ್ಟುಕೊಡಲಿಲ್ಲ’ ಎಂದು 29 ವರ್ಷ ವಯಸ್ಸಿನ ರಾಣಿ ಹೇಳಿದ್ದಾರೆ.

ರಾಣಿ ಅವರು ಧರಿಸುತ್ತಿದ್ದ ಪೋಷಾಕಿನ 28 ಸಂಖ್ಯೆಗೆ ನಿವೃತ್ತಿ ಗೌರವ ನೀಡಲು ಹಾಕಿ ಇಂಡಿಯಾ ನಿರ್ಧರಿಸಿದೆ. ಅವರ ಸಾಧನೆಗೆ ಲಭಿಸಿದ ಗೌರವ ಇದಾಗಿದೆ. ಅವರಿಗೆ ₹ 10 ಲಕ್ಷ ಪುರಸ್ಕಾರ ಕೂಡ ನೀಡಲಿದೆ.

ಚುರುಕಾದ ಫಾರ್ವರ್ಡ್ ಆಟಗಾರ್ತಿ ರಾಣಿ 2008ರಲ್ಲಿ ಅಂತರರಾಷ್ಟ್ರೀಯ ಹಾಕಿಗೆ ಪದಾರ್ಪಣೆ ಮಾಡಿದರು. ಆ ವರ್ಷ ನಡೆದ ಒಲಿಂಪಿಕ್ ಕ್ವಾಲಿಫೈಯರ್ ಟೂರ್ನಿಯಲ್ಲಿ ಆಡಿದ ರಾಣಿ ಅವರಿಗೆ ಆಗ 14 ವರ್ಷ ವಯಸ್ಸು ಆಗಿತ್ತು. ಅಲ್ಲಿಂದ ಇಲ್ಲಿಯವರೆಗೆ ಅವರು ಮಾಡಿದ ಸಾಧನೆಗಳು ಹಲವಾರು.

ಹರಿಯಾಣದ ಶಹಬಾದ್ ಎಂದರೆ ಹಾಕಿ ಕಣಜವೆಂದೇ ಪ್ರಸಿದ್ಧವಾಗಿದೆ. ತಮ್ಮ ತಂದೆ ಗಳಿಸುತ್ತಿದ್ದ ಆದಾಯದಲ್ಲಿ ಕುಟುಂಬದ ಆಹಾರ, ಅಗತ್ಯಗಳನ್ನು ಪೂರೈಸಲು ಪರದಾಡಬೇಕಿತ್ತು. ಆದರೆ ರಾಣಿ ಮೈದಾನದ ಬಳಿ ಮುರಿದು ಬಿದ್ದ ಹಾಕಿ ಸ್ಟಿಕ್‌ಗಳನ್ನು ಸಂಗ್ರಹಿಸಿಟ್ಟುಕೊಳ್ಳುತ್ತಿದ್ದರು. ಅಂತಹ ಸ್ಟಿಕ್‌ಗಳಲ್ಲಿಯೇ ಆಟದ ಅಭ್ಯಾಸ ಮಾಡುತ್ತಿದ್ದರು. ಇಷ್ಟೇ ಅಲ್ಲ. ಹೆಣ್ಣುಮಕ್ಕಳಿಗೇಕೆ ಆಟೋಟ ಎಂಬ ಟೀಕೆಗಳೂ ಕೇಳಿಬಂದಿದ್ದವು. ಇವುಗಳಿಗೆ ಕಿವಿಗೊಡದ ರಾಣಿ ತಮ್ಮ ಆರನೇ ವಯಸ್ಸಿನಲ್ಲಿಯೇ ಸ್ಥಳೀಯ ತಂಡದಲ್ಲಿ ಆಡತೊಡಗಿದರು. ಆದರೆ ಅವರು ಅಪೌಷ್ಟಿಕತೆಯಿಂದಾಗಿ ಕೃಶವಾಗಿದ್ದರು. ಅದರಿಂದಾಗಿ ಅವರಿಗೆ ಜಿಲ್ಲಾಮಟ್ಟದಲ್ಲಿ ತರಬೇತಿ ನೀಡಲು ಕೋಚ್ ನಿರಾಕರಿಸಿದ್ದರು. ಈ ಅಡೆತಡೆಗಳನ್ನು ದಾಟಿದ ಅವರು ಬೆಳೆದ ಪರಿ ಅಸಾಧಾರಣ.

‘ದೇಶದ ತಂಡದಲ್ಲಿ 15–16 ವರ್ಷ ಆಡಿದ ನಂತರ ಇಂತಹ ನಿರ್ಧಾರ ತೆಗೆದುಕೊಳ್ಳುವುದು ಭಾವನಾತ್ಮಕವಾಗಿ ಬಹಳ ಕಷ್ಟವಾಗುತ್ತದೆ. ಆದರೂ ಇದು ನಿವೃತ್ತಿಗೆ ಸಕಾಲ’ ಎಂದೂ ರಾಣಿ ಹೇಳಿದರು.

ರಾಣಿ ನಾಯಕತ್ವದಲ್ಲಿ ಭಾರತ ತಂಡವು 2018ರ ವಿಶ್ವಕಪ್ ಹಾಕಿ ಟೂರ್ನಿಗೆ ಅರ್ಹತೆ ಗಿಟ್ಟಿಸಿತ್ತು. ಅದೇ ವರ್ಷದ ಏಷ್ಯನ್ ಗೇಮ್ಸ್‌ನಲ್ಲಿ ಬೆಳ್ಳಿ ಜಯಿಸಿತ್ತು. ತಂಡವು 2019ರ ಎಫ್‌ಐಎಚ್ ಸಿರೀಸ್ ಫೈನಲ್ಸ್ ಮತ್ತು 2020ರ ಒಲಿಂಪಿಕ್ಸ್‌ನಲ್ಲಿ ಉತ್ತಮ ಸಾಧನೆ ಮಾಡಿತ್ತು.

‘ನನ್ನ ಯಶಸ್ಸಿನಲ್ಲಿ ಕೋಚ್ ಬಲದೇವ್ (ಸಿಂಗ್) ಸರ್ ಅವರ ಪಾತ್ರ ಬಹಳ ದೊಡ್ಡದು. ನಾನು ಅದೃಷ್ಟವಂತೆ. ಅವರು ಹಾಕಿ ಕ್ರೀಡೆ ಅಷ್ಟೇ ಅಲ್ಲ ಜೀವನದ ಪಾಠಗಳನ್ನು ಕಲಿಸಿದರು’ ಎಂದು ಹೇಳಿದರು.

ಒಲಿಂಪಿಕ್ಸ್‌ನಲ್ಲಿ ಭಾರತಕ್ಕೆ ಪದಕ ಜಯಿಸುವ ಆಸೆ ಮಾತ್ರ ಹಾಗೆಯೇ ಉಳಿಯಿತು ಎಂದಿದ್ದಾರೆ.

ರಾಣಿ ಅವರನ್ನು ಈಚೆಗೆ ರಾಷ್ಟ್ರೀಯ ಸಬ್ ಜೂನಿಯರ್ ಮಹಿಳೆಯರ ತಂಡದ ಕೋಚ್ ಆಗಿ ನೇಮಕ ಮಾಡಲಾಗಿದೆ. ಅವರು ಹಾಕಿ ಇಂಡಿಯಾ ಲೀಗ್ ನಲ್ಲಿ ಸೂರ್ಮಾ ಹಾಕಿ ಕ್ಲಬ್‌ಗೆ ಮೆಂಟರ್ ಆಗಿದ್ದಾರೆ.

ಅಂತರರಾಷ್ಟ್ರೀಯ ಪದಾರ್ಪಣೆ
2008
ಒಟ್ಟು ಪಂದ್ಯಗಳು
254
ಗೋಲು ಗಳಿಕೆ
205
ಪ್ರಶಸ್ತಿಗಳು: ಮೇಜರ್ ಧ್ಯಾನಚಂದ್ ಖೇಲ್ ರತ್ನ (2020), ಪದ್ಮಶ್ರೀ (2020)

ನೆಟ್‌ಬಾಲ್: ಚೀನಾ ತೈಪೆಗೆ ಜಯ

ಬೆಂಗಳೂರು: ಚೀನಾ ತೈಪೆ, ಇಲ್ಲಿನ ಕೋರಮಂಗಲ ಒಳಾಂಗಣ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಏಷ್ಯನ್ ನೆಟ್‌ಬಾಲ್ ಮಹಿಳೆಯರ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಗುರುವಾರ 54–13ರಿಂದ ಇರಾಕ್ ತಂಡವನ್ನು ಸೋಲಿಸಿತು. ದಿನದ ಮತ್ತೊಂದು ಪಂದ್ಯದಲ್ಲಿ ಫಿಲಿಪೀನ್ಸ್ ತಂಡವು 51–31ರಿಂದ ಜಪಾನ್ ತಂಡವನ್ನು ಮಣಿಸಿತು.

ಪೆನಾಲ್ಟಿ ಶೂಟೌಟ್‌ನಲ್ಲಿ ಸರಣಿ ವಶ ಪಡೆದ ಜರ್ಮನಿ

ಹಾಕಿ ಟೆಸ್ಟ್: ಭಾರತಕ್ಕೆ ಜಯ

ನವದೆಹಲಿ (ಪಿಟಿಐ): ನಾಯಕ ಹರ್ಮನ್‌ಪ್ರೀತ್ ಸಿಂಗ್ ಮತ್ತು ಸುಖ್‌ಜೀತ್ ಸಿಂಗ್ ಅವರ ಅಮೋಘ ಆಟದ ಬಲದಿಂದ ಭಾರತ ತಂಡವು ಎರಡು ಟೆಸ್ಟ್‌ಗಳ ಹಾಕಿ ಸರಣಿಯ ಎರಡನೇ ಪಂದ್ಯದಲ್ಲಿ ವಿಶ್ವ ಚಾಂಪಿಯನ್ ಜರ್ಮನಿ ತಂಡವನ್ನು 5–3 ಗೋಲುಗಳಿಂದ ಗುರುವಾರ ಸೋಲಿಸಿತು. ಆದರೆ, ಸರಣಿ ಪ್ರವಾಸಿ ತಂಡದ ಪಾಲಾಯಿತು.

ಉಭಯ ತಂಡಗಳು ತಲಾ ಒಂದೊಂದು ಪಂದ್ಯದಲ್ಲಿ ಗೆಲುವು ಸಾಧಿಸಿದ್ದರಿಂದ ಸರಣಿಯ ನಿರ್ಣಯಕ್ಕೆ ಪೆನಾಲ್ಟಿ ಶೂಟೌಟ್ ಮೊರೆ ಹೋಗಲಾಯಿತು. ಅದರಲ್ಲಿ ಆತಿಥೇಯ ತಂಡ 1–3ರಿಂದ ನಿರಾಸೆ ಅನುಭವಿಸಿತು.

ಮೊದಲ ಪಂದ್ಯದಲ್ಲಿ 0–2 ಗೋಲುಗಳಿಂದ ಪರಾಭವಗೊಂಡಿದ್ದ ಭಾರತ ತಂಡವು ಇಲ್ಲಿನ ಮೇಜರ್ ಧ್ಯಾನ್‌ಚಂದ್ ಕ್ರೀಡಾಂಗಣದಲ್ಲಿ ನಡೆದ ಎರಡನೇ ಪಂದ್ಯದಲ್ಲಿ ಸಾಂಘಿಕ ಆಟ ಪ್ರದರ್ಶಿಸಿತು. ಆರಂಭದಲ್ಲಿ ಹಿನ್ನಡೆ ಅನುಭವಿಸಿದರೂ ನಂತರ ಚುರುಕಿನ ಆಟ ಪ್ರದರ್ಶಿಸಿತು.

ಭಾರತದ ಪರ ಸುಖಜೀತ್ (34ನೇ, 48ನೇ ನಿಮಿಷ), ಹರ್ಮನ್‌ಪ್ರೀತ್ ಸಿಂಗ್ (42ನೇ, 43ನೇ), ಅಭಿಷೇಕ್ (45ನೇ ನಿಮಿಷ) ಗೋಲು ಗಳಿಸಿದರು. ಜರ್ಮನಿ ಪರ ಎಲಿಯನ್ ಮಜ್ಕೂರ್ (7ನೇ, 57ನೇ), ಹೆನ್ರಿಕ್ ಮೆರ್ಟ್‌ಜೆನ್ಸ್ (60ನೇ ನಿಮಿಷ) ಚೆಂಡನ್ನು ಗುರಿ ಸೇರಿಸಿದರು.



ಗೋಲು ಗಳಿಸಿದ ಸಂಭ್ರಮದಲ್ಲಿ ಭಾರತ ತಂಡದ ಆಟಗಾರರು –ಪಿಟಿಐ ಚಿತ್ರ

ಕ್ರೀಡೆಯಲ್ಲಿ ಜೀವಮಾನ ಸಾಧನೆ ಪ್ರಶಸ್ತಿಗೆ ಧ್ಯಾನ್‌ಚಂದ್ ಬದಲು ಅರ್ಜುನ ಹೆಸರು

ನವದೆಹಲಿ (ಪಿಟಿಐ): ಧ್ಯಾನ್‌ಚಂದ್ ಜೀವಮಾನದ ಸಾಧನೆ ಪ್ರಶಸ್ತಿಯನ್ನು ಈ ವರ್ಷದಿಂದ ಮುಂದುವರಿಸದಿರಲು ಕ್ರೀಡಾ ಸಚಿವಾಲಯ ನಿರ್ಧರಿಸಿದೆ. ದೇಶದ ವಿವಿಧ ಕ್ರೀಡಾ ಪ್ರಶಸ್ತಿಗಳ ನೀಡುವಿಕೆಯನ್ನು ಶಿಸ್ತುಬದ್ಧಗೊಳಿಸುವ ಭಾಗವಾಗಿ ಧ್ಯಾನ್‌ಚಂದ್ ಪ್ರಶಸ್ತಿ ಬದಲು ಅರ್ಜುನ ಪ್ರಶಸ್ತಿ (ಜೀವಮಾನ) ಆರಂಭಿಸಲು ನಿರ್ಧರಿಸಲಾಗಿದೆ.

ಹಾಕಿ ದಂತಕಥೆ ಧ್ಯಾನ್‌ಚಂದ್ ಹೆಸರಿನಲ್ಲಿ 2002ರಲ್ಲಿ ಧ್ಯಾನ್‌ಚಂದ್ ಜೀವಮಾನದ ಸಾಧನೆ ಪ್ರಶಸ್ತಿ ನೀಡುವ ಪರಿಪಾಠ ಆರಂಭಿಸಲಾಗಿತ್ತು. ಒಲಿಂಪಿಕ್ಸ್, ಪ್ಯಾರಾಲಿಂಪಿಕ್ಸ್, ಏಷ್ಯನ್ ಮತ್ತು ಕಾಮನ್‌ವೆಲ್ತ್ ಕ್ರೀಡೆಗಳ ಭಾಗವಾಗಿರುವ ಸ್ಪರ್ಧೆಗಳಲ್ಲಿ ಸಾಧನೆಗೈದ ಕ್ರೀಡಾಪಟುಗಳಿಗೆ ಈ ಪ್ರಶಸ್ತಿ ನೀಡುತ್ತ ಬರಲಾಗಿದೆ.

2023ರಲ್ಲಿ ಈ ಪ್ರಶಸ್ತಿಯನ್ನು ಬ್ಯಾಡ್ಮಿಂಟನ್ ಆಟಗಾರ್ತಿ ಮಂಜುಷಾ ಕನ್ವರ್, ಮಾಜಿ ಹಾಕಿ ತಾರೆ ವಿನೀತ್ ಕುಮಾರ್ ಮತ್ತು ಕಬಡ್ಡಿ ಆಟಗಾರ್ತಿ ಕವಿತಾ ಸೆಲ್ವರಾಜ್ ಅವರಿಗೆ ನೀಡಲಾಗಿತ್ತು.

‘ಕ್ರೀಡಾ ಪ್ರಶಸ್ತಿಗಳ ನೀಡುವಿಕೆಯಲ್ಲಿ ದಕ್ಷತೆ ತರಲು, ಧ್ಯಾನ್‌ಚಂದ್ ಪ್ರಶಸ್ತಿ ಬದಲು ಅರ್ಜುನ (ಜೀವಮಾನ) ಪ್ರಶಸ್ತಿ ನೀಡಲು ನಿರ್ಧರಿಸಲಾಗಿದೆ. ತಳಮಟ್ಟದಲ್ಲಿ ಕ್ರೀಡಾಪಟುಗಳನ್ನು ಗುರುತಿಸಿ, ಬೆಳವಣಿಗೆಗೆ ಕಾರಣರಾದ ತರಬೇತುದಾರರು ದ್ರೋಣಾಚಾರ್ಯ ಪ್ರಶಸ್ತಿಗೆ ಅರ್ಹರಾಗಿರುತ್ತಾರೆ’ ಎಂದು ಸಚಿವಾಲಯದ ಹೇಳಿಕೆ ತಿಳಿಸಿದೆ.

ಖಾತೆ ತೆರೆದ ವಾರಿಯರ್ಸ್

ಹೈದರಾಬಾದ್: ಪಂದ್ಯದ ಕೊನೆಯ ಹಂತದಲ್ಲಿ ಗಳಿಸಿದ ಮುನ್ನಡೆಯನ್ನು ಉಳಿಸಿಕೊಳ್ಳುವಲ್ಲಿ ಯಶಸ್ವಿಯಾದ ಬೆಂಗಾಲ್ ವಾರಿಯರ್ಸ್ ತಂಡ ಪ್ರೊ ಕಬಡ್ಡಿ ಲೀಗ್ 11ನೇ ಆವೃತ್ತಿಯಲ್ಲಿ ಯು.ಪಿ. ಯೋಧಾಸ್ ತಂಡವನ್ನು ಗುರುವಾರ ಮೂರು ಅಂಕಗಳಿಂದ ಮಣಿಸಿ ಗೆಲುವಿನ ಖಾತೆ ತೆರೆಯಿತು.

ಗಚ್ಚಿಬೌಲಿ ಒಳಾಂಗಣ ಕ್ರೀಡಾಂಗಣದಲ್ಲಿ ನಡೆದ ದಿನದ ಮೊದಲ ಪಂದ್ಯದಲ್ಲಿ ಫಜ್ಲ್ ಅತ್ರಾಚಲಿ ಬಳಗ ಸಾಂಘಿಕ ಪ್ರಯತ್ನದಿಂದ 32- 29 ಅಂಕಗಳಿಂದ ಜಯಗಳಿಸಿತು. ಸತತ ಎರಡು ಗೆಲುವುಗಳಿಂದ ಬೀಗಿದ್ದ ಯೋಧಾಸ್ ಮೊದಲ ಸೋಲು ಕಂಡಿತು.

ಬೆಂಗಾಲ್ ತಂಡದ ಪರ ಸ್ಟಾರ್ ರೇಡರ್ ಮಣಿಂದರ್ (8 ಅಂಕ), ಸುಶೀಲ್ (7 ಅಂಕ) ಮತ್ತು ನಿತಿನ್ ಧಂಕರ್ (7 ಅಂಕ) ಉತ್ತಮ ಪ್ರದರ್ಶನ ನೀಡಿದರು. ಯೋಧಾಸ್ ಪರ ಭರತ್ (13 ಅಂಕ) ಏಕಾಂಗಿಯಾಗಿ ಹೋರಾಟ ನಡೆಸಿದರೂ ತಂಡವನ್ನು ಸೋಲಿನಿಂದ ಪಾರುಮಾಡಲು ಸಾಧ್ಯವಾಗಲಿಲ್ಲ.

ವಿರಾಮದ ವೇಳೆಗೆ ಬೆಂಗಾಲ್ 12–11ರಲ್ಲಿ ಒಂದು ಪಾಯಿಂಟ್ ಮುನ್ನಡೆ ಪಡೆದಿತ್ತು. ಆದರೆ ನಂತರ ಮುನ್ನಡೆ ಅದಲು ಬದಲಾಗುತ್ತ ಹೋಯಿತು.

ದಿನದ ಮತ್ತೊಂದು ಪಂದ್ಯದಲ್ಲಿ ಹರಿಯಾಣ ಸ್ಟೀಲರ್ಸ್ 37–25ರಿಂದ ಜೈಪುರ ಪಿಂಕ್ ಪ್ಯಾಂಥರ್ಸ್ ತಂಡವನ್ನು ಸೋಲಿಸಿತು.

ಶುಕ್ರವಾರದ ಪಂದ್ಯಗಳು: ಪಟ್ನಾ ಪೈರೇಟ್ಸ್– ತಮಿಳ್ ತಲೈವಾಸ್ (ರಾತ್ರಿ 8)
ಬೆಂಗಳೂರು ಬುಲ್ಸ್– ಪುಣೇರಿ ಪಲ್ಟನ್ (9.00)

ವಿಶ್ವ ಕುಸ್ತಿ: ತಂಡ ಕಳುಹಿಸುವುದರಿಂದ ಹಿಂದೆ ಸರಿದ ಫೆಡರೇಷನ್

ನವದೆಹಲಿ (ಪಿಟಿಐ): ತನ್ನ ಸ್ವಾಯತ್ತತೆಯಲ್ಲಿ ಕ್ರೀಡಾ ಸಚಿವಾಲಯ ಹಸ್ತಕ್ಷೇಪ ನಡೆಸುತ್ತಿದೆ ಎಂದು ವಿಶ್ವ ಕುಸ್ತಿ ಸಂಸ್ಥೆ– ಯುಡಬ್ಲ್ಯುಡಬ್ಲ್ಯುಗೆ ತಿಳಿಸಿರುವ ಭಾರತ ಕುಸ್ತಿ ಫೆಡರೇಷನ್, ವಿಶ್ವ ಚಾಂಪಿಯನ್‌ಷಿಪ್‌ಗೆ ತಂಡಗಳನ್ನು ಕಳುಹಿಸುವುದರಿಂದ ಹಿಂದೆಸರಿದಿದೆ.

ಅಲ್ಬೇನಿಯಾದ ಟಿರಾನಾದಲ್ಲಿ ಅಕ್ಟೋಬರ್ 28ರಿಂದ ಸೀನಿಯರ್ ವಿಶ್ವ ಚಾಂಪಿಯನ್‌ಷಿಪ್ ನಿಗದಿಯಾಗಿದೆ. ಈ ಚಾಂಪಿಯನ್‌ಷಿಪ್‌ನಲ್ಲಿ ಒಲಿಂಪಿಕ್ಸ್‌ನಲ್ಲಿ ಇಲ್ಲದ 12 ತೂಕ ವಿಭಾಗಗಳಲ್ಲಿ ಸ್ಪರ್ಧೆಗಳನ್ನು ನಡೆಸಲಾಗುತ್ತದೆ.

ಕುಸ್ತಿ ಫೆಡರೇಷನ್, ಇತ್ತೀಚೆಗೆ ವಿಶ್ವ 23 ವರ್ಷದೊಳಗಿನವರ ತಂಡಕ್ಕೆ ಮತ್ತು ವಿಶ್ವ ಚಾಂಪಿ ಯನ್‌ಷಿಪ್‌ಗೆ ಆಯ್ಕೆ ಟ್ರಯಲ್ಸ್ ನಡೆಸುವುದಾಗಿ ಘೋಷಿಸಿತ್ತು. ಆದರೆ ಪ್ರತಿಭಟನೆನಿರತ ಕುಸ್ತಿಪಟುಗಳು, ಅಮಾನತು ಗೊಂಡಿರುವ ಫೆಡರೇಷನ್‌ಗೆ ಟ್ರಯಲ್ಸ್ ನಡೆಸುವ ಅಧಿಕಾರವನ್ನು ನ್ಯಾಯಾಲಯದಲ್ಲಿ ಪ್ರಶ್ನಿಸಿ, ಇದು ನ್ಯಾಯಾಂಗ ನಿಂದನೆಯಾಗುತ್ತದೆ ಎಂದಿದ್ದರು.

ಇದರಿಂದಾಗಿ ಫೆಡರೇಷನ್, ಆಯ್ಕೆ ಟ್ರಯಲ್ಸ್ ಸೂಚನೆಯನ್ನು ಹಿಂಪಡೆದಿತ್ತು. ನ್ಯಾಯಾಲಯವು ನ್ಯಾಯಾಂಗನಿಂದನೆ ಅರ್ಜಿಯ ವಿಚಾರಣೆ ನಡೆಸದಿರಲು ಅಕ್ಟೋಬರ್ 4ರಂದು ನಿರ್ಧರಿಸಿತ್ತು.

ಬಿಎಫ್‌ಸಿಗೆ ಇಂದು ಕೇರಳ ಸವಾಲು

ಕೊಚ್ಚಿ (ಪಿಟಿಐ): ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ಟೂರ್ನಿಯ ಪ್ರಸ್ತುತ ಆವೃತ್ತಿಯಲ್ಲಿ ಅಜೇಯವಾಗಿರುವ ಬಿಎಫ್‌ಸಿ ತಂಡವು ಶುಕ್ರವಾರ ಕೇರಳ ಬ್ಲಾಸ್ಟರ್ಸ್ ತಂಡವನ್ನು ಎದುರಿಸಲಿದೆ.

ಇಲ್ಲಿನ ಜವಾಹರಲಾಲ್ ನೆಹರೂ ಅಂತರರಾಷ್ಟ್ರೀಯ ಕ್ರೀಡಾಂಗಣದಲ್ಲಿ ಪಂದ್ಯ ನಡೆಯಲಿದೆ. ಟೂರ್ನಿಯಲ್ಲಿ ಆಡಿರುವ ಐದು ಪಂದ್ಯಗಳ ಪೈಕಿ ನಾಲ್ಕನ್ನು ಗೆದ್ದು, ಒಂದರಲ್ಲಿ ಡ್ರಾ ಸಾಧಿಸಿರುವ ಸುನಿಲ್ ಚೆಟ್ರಿ ನಾಯಕತ್ವದ ಬಿಎಫ್‌ಸಿ ತಂಡವು 14 ಅಂಕಗಳೊಂದಿಗೆ ಪಾಯಿಂಟ್ಸ್ ಪಟ್ಟಿಯಲ್ಲಿ ಅಗ್ರಸ್ಥಾನದಲ್ಲಿದೆ.

ಆತಿಥೇಯ ಬ್ಲಾಸ್ಟರ್ಸ್ ತಂಡವು ಎರಡು ಗೆಲುವು, ಎರಡು ಸೋಲು ಮತ್ತು ಒಂದು ಡ್ರಾ ಸಾಧಿಸಿ 8 ಪಾಯಿಂಟ್ಸ್‌ಗಳೊಂದಿಗೆ ಪಟ್ಟಿಯಲ್ಲಿ ಐದನೇ ಸ್ಥಾನದಲ್ಲಿದೆ.

ಬೆಂಗಳೂರು ಎಫ್‌ಸಿಗೆ ಗೆಲುವು

ಬೆಂಗಳೂರು: ಸಾಂಘಿಕ ಆಟ ಪ್ರದರ್ಶಿಸಿದ ಬಿಎಫ್‌ಸಿ ತಂಡವು ಬಿಡಿಎಫ್‌ಎ ಸೂಪರ್ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯ ಪಂದ್ಯದಲ್ಲಿ ಗುರುವಾರ 5–0ಯಿಂದ ಬೆಂಗಳೂರು ಇಂಡಿಪೆಂಡೆಂಟ್ಸ್ ಎಫ್‌ಸಿ ತಂಡವನ್ನು ಮಣಿಸಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ದಿನದ ಮತ್ತೊಂದು ಪಂದ್ಯದಲ್ಲಿ ಸೌತ್ ಯುನೈಟೆಡ್ ತಂಡವು 1–0 ಗೋಲಿನಿಂದ ಕೊಡಗು ಎಫ್‌ಸಿ ತಂಡವನ್ನು ಸೋಲಿಸಿತು.